ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕ್ಷೇಮ ಕುಶಲ

ನಿದ್ರೆಯ ಪ್ರಮಾಣ ಕಡಿಮೆಯಾದರೆ ಮೆದುಳಿನ ಚೇತರಿಕೆ ಪೂರ್ಣವಾಗುವುದಿಲ್ಲ; ಅದರ ಕಾರ್ಯಕ್ಷಮತೆ ಕುಂಠಿತವಾಗುತ್ತದೆ; ನೆನಪುಗಳ ಮರುಕಳಿಕೆ ಕ್ಷೀಣಿಸುತ್ತದೆ.



ಎಲ್ಲರನ್ನೂ ಒಳಗೊಳ್ಳದ ತಾಲಿಬಾನ್ 6

ಆಳ-ಅಗಲ
ಮುಖ್ಯಮಂತ್ರಿ ತಲೆದಂಡ ಬಿಜೆಪಿಯ ಹೊಸ ಕಾರ್ಯತಂತ್ರ

ಬಿಎಸ್‌ವೈ ಕುಟುಂಬದ ವಿರುದ್ಧ ಎಸಿಬಿಗೆ ದೂರು 3B

ಸೆನ್ಸೆಕ್ಸ್	ನಿಫ್ಟಿ	₹/$
58,178 ▼	17,355 ▼	73.68 ▼

ಎತ್ತಿನ ಬಂಡಿಯೇರಿದ ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್

ಅಧಿವೇಶನಕ್ಕೆ ಪ್ರತಿಭಟನೆ ಬಿಸಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಸವರಾಜ ಬೊಮ್ಮಾಯಿ ಮುಖ್ಯಮಂತ್ರಿಯಾದ ಬಳಿಕ ನಡೆಯುತ್ತಿರುವ ವಿಧಾನಮಂಡಲದ ಮೊದಲ ಅಧಿವೇಶನದ ಆರಂಭಿಕ ದಿನವಾದ ಸೋಮವಾರ ಸರ್ಕಾರ ಪ್ರತಿಭಟನೆಗಳ ಬಿಸಿ ಅನುಭವಿಸಿತು.

ಬೆಲೆ ಏರಿಕೆ ವಿರುದ್ಧ ಕಾಂಗ್ರೆಸ್ ನಾಯಕರು ಎತ್ತಿನಬಂಡಿ ಪಯಣದ ಮೂಲಕ ಪ್ರತಿಭಟನೆಯ ಧ್ವನಿ ಮೊಳಗಿಸಿದರೆ, ಕೃಷಿ ಸಂಬಂಧಿ ಕಾಯ್ದೆಗಳ ತಿದ್ದುಪಡಿಗೆ ಆಗ್ರಹಿಸಿ ರೈತ ಸಂಘದ ಕಾರ್ಯಕರ್ತರು ಚಳವಳಿ ನಡೆಸಿದರು.

ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಮತ್ತು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ನೇತೃತ್ವದಲ್ಲಿ ಎತ್ತಿನಬಂಡಿಯಲ್ಲಿ ವಿಧಾನಸೌಧದ ಆವರಣದವರೆಗೂ ಸಾಗಿಬಂದ ಕಾಂಗ್ರೆಸ್ ಶಾಸಕರು, ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ವಿರುದ್ಧ ಪ್ರತಿಭಟಿಸಿದರು.

ಕೃಷಿ ಉತ್ಪನ್ನ ಮಾರುಕಟ್ಟೆ ನಿಯಂತ್ರಣ ಕಾಯ್ದೆ, ಭೂ ಸುಧಾರಣಾ ಕಾಯ್ದೆ ಹಾಗೂ ಭೂ ಕಂದಾಯ ಕಾಯ್ದೆಗಳಿಗೆ ವಿಧಾನಮಂಡಲದ ಕಳೆದ ಅಧಿವೇಶನದಲ್ಲಿ ತಂದಿರುವ ತಿದ್ದುಪಡಿಗಳನ್ನು ವಾಪಸ್ ಪಡೆಯುವಂತೆ ರಾಜ್ಯ ರೈತ ಸಂಘದ ಕಾರ್ಯಕರ್ತರು ವಿಧಾನಸೌಧಕ್ಕೆ ಮುತ್ತಿಗೆ ಹಾಕಲು ಯತ್ನಿಸಿದರು.

ಬೇಡಿಕೆಗಳ ಕುರಿತು ಮುಖ್ಯಮಂತ್ರಿ ಜತೆ ಮಾತುಕತೆಗೆ ವ್ಯವಸ್ಥೆ ಮಾಡುವುದಾಗಿ ಸಹಕಾರ ಸಚಿವ ಎಸ್.ಟಿ. ಸೋಮಶೇಖರ್ ನೀಡಿದ ಭರವಸೆಯನ್ನು ಆಧರಿಸಿ, ರೈತ ನಾಯಕರು ಹೋರಾಟವನ್ನು ತಾತ್ಕಾಲಿಕವಾಗಿ ಹಿಂಪಡೆದರು.


ಪೂರ್ವನಿಗದಿಯಂತೆ ಸಿದ್ದರಾಮಯ್ಯ ಮತ್ತು ಡಿ.ಕೆ. ಶಿವಕುಮಾರ್ ಮನೆಗಳ ಬಳಿ ಎರಡು ಎತ್ತಿನ ಬಂಡಿಗಳನ್ನು ಪ್ರತಿಭಟನೆಗಾಗಿ ಸಜ್ಜುಗೊಳಿಸಲಾಗಿತ್ತು. ಶಾಸಕರು ಸೇರಿದಂತೆ ಕೆಲವು ಮುಖಂಡರು ಬಂಡಿ ಏರಿದರೆ, ನೂರಾರು ಮಂದಿ ಕಾರ್ಯಕರ್ತರು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ವಿರುದ್ಧ ಘೋಷಣೆ ಕೂಗುತ್ತಾ ಹೆಜ್ಜೆ ಹಾಕಿದರು.

4ನೇ ಪುಟ ನೋಡಿ



ಬೆಲೆ ಏರಿಕೆ ವಿರುದ್ಧ ಪ್ರತಿಭಟನೆಯ ಪ್ರಯುಕ್ತ ಎತ್ತಿನ ಬಂಡಿ ಏರಿ ವಿಧಾನಮಂಡಲ ಅಧಿವೇಶನಕ್ಕೆ ಬಂದ ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಮತ್ತು ಕಾಂಗ್ರೆಸ್ ಶಾಸಕರು ವಿಧಾನಸೌಧದ ಆವರಣ ಪ್ರವೇಶಿಸುವುದನ್ನು ಪೊಲೀಸರು ತಡೆದು ನಿಲ್ಲಿಸಿದ್ದ ಸಂದರ್ಭ — ಪ್ರಜಾವಾಣಿ ಚಿತ್ರ

‘ಸದನದಲ್ಲೇ ಉತ್ತರಿಸುವೆ’



‘ಬೆಲೆ ಏರಿಕೆಗೆ ಸಂಬಂಧಿಸಿದಂತೆ ಕಾಂಗ್ರೆಸ್ ಎತ್ತುವ ಎಲ್ಲ ಪ್ರಶ್ನೆಗಳಿಗೂ ಸದನದಲ್ಲೇ ಅಂಕಿಅಂಶಗಳ ಸಮೇತ ತಕ್ಕ ಉತ್ತರ ನೀಡುತ್ತೇನೆ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಕಾಂಗ್ರೆಸ್‌ನ ಪ್ರತಿಭಟನೆ ಕುರಿತು ಪ್ರತಿಕ್ರಿಯಿಸಿದ ಅವರು, ‘ಕೇಂದ್ರದಲ್ಲಿ ಯುಪಿಎ ಸರ್ಕಾರ ಇದ್ದಾಗಲೂ ಪೆಟ್ರೋಲ್, ಡೀಸೆಲ್ ಬೆಲೆ ಏರಿಕೆಯಾಗಿತ್ತು. ಆಗ ಏಕೆ ಧರಣಿ ನಡೆಸಿರಲಿಲ್ಲ. ಆಗಲೂ ಇವರು ಪ್ರತಿಭಟನೆ ಮಾಡಬೇಕಿತ್ತಲ್ಲವೆ’ ಎಂದು ಪ್ರಶ್ನಿಸಿದರು.

ಕೇಂದ್ರದ ನಡೆಗೆ ‘ಸುಪ್ರೀಂ’ ಅತೃಪ್ತಿ

ಪೆಗಾಸಸ್ ಬೇಹುಗಾರಿಕೆ ಪ್ರಕರಣ: ಪ್ರಮಾಣಪತ್ರ ಸಲ್ಲಿಕೆಗೆ ಸರ್ಕಾರ ಹಿಂದೇಟು

ಪ್ರಜಾವಾಣಿ ವಾರ್ತೆ

ನವದೆಹಲಿ: ಪೆಗಾಸಸ್ ಕುತಂತ್ರಾಂಶ ಬಳಸಿ ಗೂಢಚರ್ಯೆ ನಡೆಸಲಾಗಿದೆ ಎಂಬ ಪ್ರಕರಣಕ್ಕೆ ಸಂಬಂಧಿಸಿ ವಿವರವಾದ ಪ್ರಮಾಣಪತ್ರ ಸಲ್ಲಿಸಲು ನಿರಾಕರಿಸಿರುವ ಕೇಂದ್ರ ಸರ್ಕಾರದ ವಿರುದ್ಧ ಸುಪ್ರೀಂ ಕೋರ್ಟ್ ತೀವ್ರ ಅಸಮಾಧಾನ ವ್ಯಕ್ತಪಡಿಸಿದೆ.

ಸರ್ಕಾರದ ಸಂಸ್ಥೆಗಳು ವಿವಿಧ ವರ್ಗಗಳ ಜನರ ಮೇಲೆ ಇಸ್ರೇಲ್ ನಿರ್ಮಿತ ಕುತಂತ್ರಾಂಶ ಬಳಸಿ ಬೇಹುಗಾರಿಕೆ ನಡೆಸಿದೆಯೇ ಇಲ್ಲವೇ ಎಂಬುದನ್ನು ಬಹಿರಂಗಪಡಿಸುವ ವಿಚಾರದಲ್ಲಿ ಮೀನ ಮೇಷ ಎಣಿಸುವುದರಿಂದ ಯಾವುದೇ ಪ್ರಯೋಜನ ಇಲ್ಲ ಎಂದು ಕೋರ್ಟ್ ಹೇಳಿದೆ.

ಕುತಂತ್ರಾಂಶ ಬಳಸಿ ಬೇಹುಗಾರಿಕೆ ಆರೋಪದ ಬಗ್ಗೆ ಸ್ವತಂತ್ರ ತನಿಖೆಗೆ ಕೋರಿ ಸಲ್ಲಿಕೆಯಾಗಿರುವ ಹಲವು ಅರ್ಜಿಗಳ ವಿಚಾರಣೆಯನ್ನು ಮುಖ್ಯ ನ್ಯಾಯಮೂರ್ತಿ ಎನ್.ವಿ. ರಮಣ ನೇತೃತ್ವದ ಪೀಠವು ಸೋಮವಾರ ನಡೆಸಿದೆ. ಪ್ರಕರಣಕ್ಕೆ ಸಂಬಂಧಿಸಿದ ಮಧ್ಯಂತರ ಆದೇಶವನ್ನು ಕಾಯ್ದಿರಿಸಿತು.

ಕೇಂದ್ರ ಸರ್ಕಾರವು ತಳೆದಿರುವ ನಿಲುವಿನ ಬಗ್ಗೆ ಮರು ಚಿಂತನೆ ನಡೆಸಲು ಇನ್ನೂ ಎರಡು–ಮೂರು ದಿನಗಳ ಸಮಯ ಇದೆ ಎಂದು ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರಿಗೆ ಪೀಠವು ತಿಳಿಸಿತು.

‘ಪ್ರಮಾಣಪತ್ರದಿಂದ ರಾಷ್ಟ್ರೀಯ ಭದ್ರತೆಗೆ ಧಕ್ಕೆ’

ಬೇಹುಗಾರಿಕೆಯು ರಾಷ್ಟ್ರೀಯ ಭದ್ರತೆಗೆ ಸಂಬಂಧಿಸಿದ ವಿಚಾರ. ಹಾಗಾಗಿ, ನಿರ್ದಿಷ್ಟ ಕುತಂತ್ರಾಂಶ ಬಳಕೆಯ ಬಗ್ಗೆ ಪ್ರಮಾಣಪತ್ರ ಸಲ್ಲಿಸಿ ಮಾಹಿತಿ ಬಹಿರಂಗಪಡಿಸಲು ಸಾಧ್ಯವಿಲ್ಲ. ಹಾಗೆ ಮಾಡಿದರೆ, ಭಯೋತ್ಪಾದಕರು ಅಥವಾ ಭಯೋತ್ಪಾದನಾ ಸಂಘಟನೆಗಳು ಬೇಹುಗಾರಿಕೆಯಿಂದ ತಪ್ಪಿಸಿಕೊಳ್ಳುವ ಮಾರ್ಗ ಕಂಡುಕೊಳ್ಳಬಹುದು ಎಂದು ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಹೇಳಿದರು.

ಸರ್ಕಾರಕ್ಕೆ ಅಡಗಿಸಲು ಏನೂ ಇಲ್ಲ. ಸರ್ಕಾರದ ಜತೆಗೆ ಸಂಪರ್ಕ ಇಲ್ಲದ, ವಿಷಯ ಪರಿಣತರ ಸಮಿತಿಯಿಂದ ತನಿಖೆ ನಡೆಸಲು ಸರ್ಕಾರ ಸಿದ್ಧ ಎಂಬ ಹಳೆಯ ನಿಲುವನ್ನು ಅವರು ಪುನರುಚ್ಚರಿಸಿದರು.

‘ಪ್ರಮಾಣಪತ್ರ ಸಲ್ಲಿಕೆಯು ರಾಷ್ಟ್ರೀಯ ಭದ್ರತೆಗೆ ಮಾರಕ ಎಂದು ಸರ್ಕಾರ ಹೇಳುತ್ತಿದೆ. ಆದರೆ, ಪ್ರಮಾಣಪತ್ರ ಸಲ್ಲಿಸದೇ ಇರುವುದು ನ್ಯಾಯಾಂಗ ಪ್ರಕ್ರಿಯೆಗೆ ಮಾರಕ. ಗೂಢಚರ್ಯೆ ತಂತ್ರಾಂಶ ಬಳಸುತ್ತಿರುವುದಾಗಿ ಸರ್ಕಾರವು ಸಂಸತ್ತಿಗೆ ಈಗಾಗಲೇ ಮಾಹಿತಿ ನೀಡಿದೆ’ ಎಂದು ಅರ್ಜಿದಾರರ ಪರ ವಾದಿಸಿದ ಹಿರಿಯ ವಕೀಲ ಕಪಿಲ್ ಸಿಬಲ್ ಹೇಳಿದರು.

ರಾಷ್ಟ್ರೀಯ ಭದ್ರತೆಗೆ ಧಕ್ಕೆ ಆಗುವಂತಹ ಏನನ್ನೂ ಸರ್ಕಾರವು ಬಹಿರಂಗಪಡಿಸಬೇಕಿಲ್ಲ ಎಂಬುದನ್ನು ಆಗಸ್ಟ್ 17ರಂದೇ ಸ್ಪಷ್ಟಪಡಿಸಲಾಗಿದೆ ಎಂಬುದನ್ನು ಪೀಠವು ನೆನಪಿಸಿತು.

‘ಸೀಮಿತವಾದ ಪ್ರಮಾಣಪತ್ರವನ್ನೇ ನಾವು ನಿರೀಕ್ಷೆ ಮಾಡಿದ್ದೆವು. ತಮ್ಮ ಹಕ್ಕುಗಳ ಉಲ್ಲಂಘನೆ ಆಗಿದೆ ಎಂದು ದೂರುದಾರರು ಹೇಳಿದ್ದಾರೆ. ಹಾಗಾಗಿ, (ಬೇಹುಗಾರಿಕೆಯನ್ನು) ಕಾನೂನುಬದ್ಧವಾಗಿ ಮಾಡಲಾಗಿದೆಯೇ ಅಥವಾ ಕಾನೂನು ಉಲ್ಲಂಘಿಸಿ ಮಾಡಲಾಗಿದೆಯೇ ಎಂಬುದನ್ನು ತಿಳಿಸಬೇಕು’ ಎಂದು ಪೀಠವು ಹೇಳಿತು.

ಇಸ್ರೇಲ್‌ನ ಪೆಗಾಸಸ್ ಕುತಂತ್ರಾಂಶವನ್ನು ಬಳಸಿಕೊಂಡು ಬೇಹುಗಾರಿಕೆಗೆ ಒಳಗಾದ ಸುಮಾರು 50 ಸಾವಿರ ಜನರಲ್ಲಿ ಭಾರತದ ಕೆಲವು ಸಚಿವರು, ರಾಜಕಾರಣಿಗಳು, ಸಾಮಾಜಿಕ ಹೋರಾಟಗಾರರು, ಪತ್ರಕರ್ತರು ಮತ್ತು ಉದ್ಯಮಿಗಳು ಇದ್ದಾರೆ ಎಂದು ಅಂತರರಾಷ್ಟ್ರೀಯ ತನಿಖಾ ಪತ್ರಿಕೋದ್ಯಮ ಗುಂಪು ಜುಲೈ 18ರಂದು ವರದಿ ಮಾಡಿತ್ತು. ಈ ಪ್ರಕರಣದ ಕುರಿತು ಸ್ವತಂತ್ರ ತನಿಖೆಗೆ ಕೋರಿ ಹಲವು ಅರ್ಜಿಗಳು ಸುಪ್ರೀಂ ಕೋರ್ಟ್‌ಗೆ ಸಲ್ಲಿಕೆ ಆಗಿವೆ.

ಕೋವಿಡ್ ಕಾಲದಲ್ಲಿ ಮನೆ ತೆರವು

ನವದೆಹಲಿ: ಕೋವಿಡ್ 19 ಸಾಂಕ್ರಾಮಿಕ ತೀವ್ರವಾಗಿದ್ದ 2020ರ ಮಾರ್ಚ್ ಹಾಗೂ 2021ರ ಜುಲೈ ನಡುವೆ ದೇಶಾದ್ಯಂತ 43,600 ಮನೆಗಳನ್ನು ತೆರವು ಮಾಡಲಾಗಿದೆ. 2.57 ಲಕ್ಷ ಜನರನ್ನು ಇದರಿಂದಾಗಿ ಆಶ್ರಯ ಕಳೆದುಕೊಂಡಿದ್ದಾರೆ. 6

ಕಾಂಗ್ರೆಸ್‌ನ ರಾಜ್ಯಸಭಾ ಸದಸ್ಯ ಆಸ್ಕರ್ ಫರ್ನಾಂಡಿಸ್ ನಿಧನ



ಮಂಗಳೂರು: ಕಾಂಗ್ರೆಸ್ ಮುಖಂಡ, ರಾಜ್ಯಸಭಾ ಸದಸ್ಯ ಆಸ್ಕರ್ ಫರ್ನಾಂಡಿಸ್ (80) ಅವರು ಸೋಮವಾರ ನಗರದ ಯೇನೆಪೋಯ ಆಸ್ಪತ್ರೆಯಲ್ಲಿ ನಿಧನರಾದರು.

ಜುಲೈ 18ರಂದು ನಗರದ ಅತ್ತಾವರದ ಮನೆಯಲ್ಲಿ ಯೋಗ ಮಾಡುವಾಗ ಬಿದ್ದು, ಅವರ ತಲೆ ಗೆ ಪೆಟ್ಟಾಗಿತ್ತು. ಮಿದುಳಿನಲ್ಲಿ ರಕ್ತಸ್ರಾವವಾಗಿರುವುದು ಆಸ್ಪತ್ರೆಯಲ್ಲಿ ತಪಾಸಣೆ ನಡೆಸಿದಾಗ ತಿಳಿದು ಬಂದಿತ್ತು. ಜು. 19ರಿಂದ ಅವರು ಪ್ರಜ್ಞಾಹೀನ ಸ್ಥಿತಿಯಲ್ಲಿದ್ದರು. ವೈದ್ಯರು ಜುಲೈ 27ರಂದು ಯಶಸ್ವಿ ಶಸ್ತ್ರಚಿಕಿತ್ಸೆ ನಡೆಸಿದ್ದು, ತೀವ್ರ ನಿಗಾ ಘಟಕದಲ್ಲಿ ಇರಿಸಲಾಗಿತ್ತು. ಚಿಕಿತ್ಸೆಗೆ ಸ್ಪಂದಿಸದೇ ಮಧ್ಯಾಹ್ನ ನಿಧನರಾದರು ಎಂದು ಆಸ್ಪತ್ರೆ ಮೂಲಗಳು ತಿಳಿಸಿವೆ.

ಬೆಂಗಳೂರಿನಲ್ಲಿ ಅಂತ್ಯಸಂಸ್ಕಾರ: ಆಸ್ಕರ್ ಅವರ ಪಾರ್ಥಿವ ಶರೀರವನ್ನು ನಗರದ ಫಾದರ್ ಮುಲ್ಲರ್ ಆಸ್ಪತ್ರೆ ಶವಾಗಾರದಲ್ಲಿ ಇರಿಸಲಾಗಿದ್ದು, ಮಂಗಳವಾರ ಬೆಳಿಗ್ಗೆ 9.30ಕ್ಕೆ ಉಡುಪಿ ಚರ್ಚ್‌ಗೆ ಕೊಂಡೊಯ್ದು, ಪ್ರಾರ್ಥನೆ ಸಲ್ಲಿಸಲಾಗುವುದು.

ಬಳಿಕ ಉಡುಪಿ ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ಸಾರ್ವಜನಿಕರ ಅಂತಿಮ ದರ್ಶನಕ್ಕೆ ಅವಕಾಶ ನೀಡಲಾಗುವುದು. ಮತ್ತೆ ಮಂಗಳೂರಿಗೆ ತಂದು ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ಮಧ್ಯಾಹ್ನ 3.30ರಿಂದ 5.30ರವರೆಗೆ ಸಾರ್ವಜನಿಕರ ಅಂತಿಮ ದರ್ಶನಕ್ಕೆ ಅವಕಾಶ ನೀಡಲಾಗುವುದು. ನಂತರ ನಗರದ ಫಾದರ್ ಮುಲ್ಲರ್ ಆಸ್ಪತ್ರೆ ಶವಾಗಾರಕ್ಕೆ ರವಾನಿಸಲಾಗುವುದು. ಸೆ.15ರಂದು ಬೆಳಿಗ್ಗೆ 10.30ಕ್ಕೆ ನಗರದ ಮಿಲಾಗ್ರಿಸ್ ಚರ್ಚ್‌ನಲ್ಲಿ ಪ್ರಾರ್ಥನೆ ಸಲ್ಲಿಸಿದ ಬಳಿಕ ಬೆಂಗಳೂರಿಗೆ ಕೊಂಡೊಯ್ದು, ಕೆಪಿಸಿಸಿ ಕಚೇರಿಯಲ್ಲಿ ಅಂತಿಮ ದರ್ಶನಕ್ಕೆ ಅವಕಾಶ ಕಲ್ಪಿಸಲಾಗುವುದು.

ಬೆಂಗಳೂರಿನ ಸೇಂಟ್ ಪ್ಯಾಟ್ರಿಕ್ ಚರ್ಚ್‌ನ ಸ್ಮಶಾನದಲ್ಲಿ ಅಂತ್ಯಸಂಸ್ಕಾರ ನಡೆಸಲಾಗುವುದು ಎಂದು ಕಾಂಗ್ರೆಸ್ ಮುಖಂಡರಾದ ವಿನಯ್ ಕುಮಾರ್ ಸೊರಕೆ, ರಮಾನಾಥ ರೈ ಮಾಹಿತಿ ನೀಡಿದ್ದಾರೆ.

ಸೋನಿಯಾ ಸಾಂತ್ವನ: ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಅವರು ಆಸ್ಕರ್ ಫರ್ನಾಂಡಿಸ್ ಅವರ ಪತ್ನಿ ಬ್ಲಾಸಂ ಫರ್ನಾಂಡಿಸ್ ಅವರಿಗೆ ಕರೆ ಮಾಡಿ ಸಾಂತ್ವನ ಹೇಳಿದರು.

ಈ ವೇಳೆ ಬ್ಲಾಸಂ ಫರ್ನಾಂಡಿಸ್, ‘ಎರಡು ದಿನಗಳ ಬಳಿಕ ಬೆಂಗಳೂರಿನ ಕೆಪಿಸಿಸಿ ಕಚೇರಿಯಲ್ಲಿ ಅಂತಿಮ ದರ್ಶನಕ್ಕೆ ವ್ಯವಸ್ಥೆ ಮಾಡಲು ಮಗಳು ನಿರ್ಧರಿಸಿದ್ದಾಳೆ. ಅಲ್ಲಿಗೆ ತಾವು ಹಾಗೂ ರಾಹುಲ್ ಗಾಂಧಿ ಭೇಟಿ ನೀಡಬೇಕು’ ಎಂದು ಮನವಿ ಮಾಡಿದರು.

ಎಲ್ಲಾ ಸಂದರ್ಭಕ್ಕೆ ಸಲ್ಲುವ ನಾಯಕ 5





ಹೆದ್ದಾರಿ ಬದಿ ಕಟ್ಟಡಗಳಿಗೆ ಅನುಮತಿ: ಹೈಕೋರ್ಟ್ ಗರಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಷ್ಟ್ರೀಯ ಹೆದ್ದಾರಿಯಿಂದ ನಿಗದಿತ ದೂರದ ತನಕ ಯಾವುದೇ ಕಟ್ಟಡ ನಿರ್ಮಾಣಕ್ಕೆ ಅನುಮತಿ ನೀಡದಿರುವುದನ್ನು ಖಚಿತಪಡಿಸಿಕೊಳ್ಳುವಂತೆ ರಾಷ್ಟ್ರೀಯ ಹೆದ್ದಾರಿ ಅಭಿವೃದ್ಧಿ ಪ್ರಾಧಿಕಾರಕ್ಕೆ (ಎನ್‌ಎಚ್‌ಎಐ) ಹೈಕೋರ್ಟ್ ನಿರ್ದೇಶನ ನೀಡಿದೆ. ಅನುಮತಿ ನೀಡಿದ್ದರೆ ಅಂತಹ ಅಧಿಕಾರಿಗಳ ವಿರುದ್ಧ ಕಾನೂನು ಕ್ರಮ ಜರುಗಿಸಬೇಕು ಎಂದು ತಿಳಿಸಿದೆ.

ಕರ್ನಾಟಕ ಹೆದ್ದಾರಿ ಕಾಯ್ದೆ ಮತ್ತು 2005ರಲ್ಲಿ ಹೊರಡಿಸಿರುವ ಸುತ್ತೋಲೆ ಪ್ರಕಾರ, ರಾಷ್ಟ್ರೀಯ ಮತ್ತು ರಾಜ್ಯ ಹೆದ್ದಾರಿಯ ಮಧ್ಯಭಾಗದಿಂದ ಎರಡೂ ಕಡೆಗೆ 40 ಮೀಟರ್, ಜಿಲ್ಲಾ ಮುಖ್ಯ ರಸ್ತೆಗಳ ಮಧ್ಯದಿಂದ 25 ಮೀಟರ್ ತನಕ ಯಾವುದೇ ಕಟ್ಟಡ ನಿರ್ಮಾಣಕ್ಕೆ ಅವಕಾಶ ಇಲ್ಲ.



ಈ ನಿಯಮ ಉಲ್ಲಂಘಿಸಿ ಉಡುಪಿ ಜಿಲ್ಲೆಯ ಕಾಪು ಪಟ್ಟಣದಲ್ಲಿ ರಾಷ್ಟ್ರೀಯ ಹೆದ್ದಾರಿ ಬದಿ ನಿರ್ಮಿಸಿದ್ದ ಕಟ್ಟಡ ನೆಲಸಮಕ್ಕೆ ನ್ಯಾಯಮೂರ್ತಿ ಸತೀಶ್‌ಚಂದ್ರ ಶರ್ಮ ನೇತೃತ್ವದ ವಿಭಾಗೀಯ ಪೀಠ ಇತ್ತೀಚೆಗೆ ಆದೇಶ ಹೊರಡಿಸಿತ್ತು. 1999ರ ಡಿಸೆಂಬರ್‌ನಲ್ಲಿ ಹೈಕೋರ್ಟ್ ಹೊರಡಿಸಿದ್ದ ಆದೇಶವನ್ನು ಪೀಠ ಉಲ್ಲೇಖಿಸಿತ್ತು. ಈ ಆದೇಶವನ್ನು ಸಂಬಂಧಿಸಿದ ಎಲ್ಲಾ ಇಲಾಖೆಗಳಿಗೆ ರವಾನಿಸುವಂತೆ ಸರ್ಕಾರದ ಪರ ವಕೀಲರಿಗೆ ಪೀಠ ಸೋಮವಾರ ಸೂಚಿಸಿತು.

‘ಈ ಪ್ರಕರಣದಲ್ಲಿ ಅನುಮತಿ ನೀಡಿರುವ ಅಧಿಕಾರಿಗಳ ಮೇಲೆ ಹೊಣೆಗಾರಿಕೆ ನಿಗದಿ ಮಾಡಲು ಸತ್ಯ ಶೋಧನಾ ಸಮಿತಿಯನ್ನು ಸರ್ಕಾರದ ಮುಖ್ಯ ಕಾರ್ಯದರ್ಶಿ ರಚಿಸಬೇಕು. ಅನುಮತಿ ನೀಡಿದವರ ವಿರುದ್ಧ ಎರಡು ತಿಂಗಳಲ್ಲಿ ಇಲಾಖಾ ತನಿಖೆ ನಡೆಸಬೇಕು. ಕಾನೂನಿನಲ್ಲಿ ಅವಕಾಶ ಇದ್ದರೆ ಕ್ರಿಮಿನಲ್ ಪ್ರಕ್ರಿಯೆಯನ್ನೂ ಆರಂಭಿಸಬೇಕು’ ಎಂದು ಪೀಠ ತಿಳಿಸಿತು.


ಓಲಾ: ಮಹಿಳೆಯರದ್ದೇ ಆಧಿಪತ್ಯ

ನವದೆಹಲಿ (ಪಿಟಿಐ): ಓಲಾ ಕಂಪನಿಯ ವಿದ್ಯುತ್ ಚಾಲಿತ ಸ್ಕೂಟರ್ ಕಾರ್ಖಾನೆಯನ್ನು ಮಹಿಳೆಯರೇ ಸಂಪೂರ್ಣವಾಗಿ ಮುನ್ನಡೆಸಲಿದ್ದಾರೆ. ಕಾರ್ಖಾನೆಯು ಪೂರ್ಣ ಪ್ರಮಾಣದಲ್ಲಿ ಕೆಲಸ ಆರಂಭಿಸಿದಾಗ ಹತ್ತು ಸಾವಿರಕ್ಕಿಂತ ಹೆಚ್ಚಿನ ಸಂಖ್ಯೆಯ ಮಹಿಳೆಯರಿಗೆ ಉದ್ಯೋಗ ನೀಡಲಿದೆ. ಓಲಾ ಕಂಪನಿಯ ಸಹ ಸಂಸ್ಥಾಪಕ ಭವೀಶ್ ಅಗರ್ವಾಲ್ ಅವರು ಈ ವಿಷಯ ತಿಳಿಸಿದ್ದಾರೆ. 12

ಮಹಿಳೆ ನಗ್ನಗೊಳಿಸಿ ಹಲ್ಲೆ: ನಾಲ್ವರ ಸೆರೆ

ಯಾದಗಿರಿ: ಮಹಿಳೆಯನ್ನು ನಗ್ನಗೊಳಿಸಿ ಹಲ್ಲೆ ಮಾಡಿದ ಕೃತ್ಯ ಜಿಲ್ಲೆಯ ಶಹಾಪುರ ನಗರದ ಹೊರವಲಯದಲ್ಲಿ ನಡೆದಿದ್ದು, ಈಗ ವಿಡಿಯೊ ವೈರಲ್ ಆಗಿದೆ. ಪ್ರಕರಣಕ್ಕೆ ಸಂಬಂಧಿಸಿದಂತೆ ನಾಲ್ವರು ಆರೋಪಿಗಳನ್ನು ಶಹಾಪುರ ಪೊಲೀಸರು ಬಂಧಿಸಿದ್ದಾರೆ. 12

ಗುಜರಾತ್ ಸಿ.ಎಂ ಆಗಿ ಭೂಪೇಂದ್ರ ಪ್ರಮಾಣ



ಗಾಂಧಿನಗರ (ಪಿಟಿಐ): ಮೊದಲ ಬಾರಿಗೆ ಶಾಸಕರಾಗಿರುವ ಭೂಪೇಂದ್ರ ಪಟೇಲ್ ಗುಜರಾತ್‌ನ ನೂತನ ಮುಖ್ಯಮಂತ್ರಿಯಾಗಿ ಸೋಮವಾರ ಅಧಿಕಾರ ಸ್ವೀಕರಿಸಿದರು.

ಗುಜರಾತ್ ವಿಧಾನಸಭಾ ಚುನಾವಣೆಗೆ ಇನ್ನೂ 15 ತಿಂಗಳು ಬಾಕಿ ಇರುವಾಗಲೇ, ಮುಖ್ಯಮಂತ್ರಿ ಸ್ಥಾನದಿಂದ ವಿಜಯ ರೂಪಾಣಿ ಶನಿವಾರ ನಿರ್ಗಮಿಸಿದ್ದರು.

ಬಿಜೆಪಿ ಶಾಸಕಾಂಗ ಪಕ್ಷವು ಭೂಪೇಂದ್ರ ಅವರನ್ನು ಸರ್ವಾನುಮತದಿಂದ ಭಾನುವಾರ ಆಯ್ಕೆ ಮಾಡಿತು. 59 ವರ್ಷದ ಭೂಪೇಂದ್ರ ಪಟೇಲ್ ರಾಜ್ಯದ 17ನೇ ಮುಖ್ಯಮಂತ್ರಿಯಾಗಿ ರಾಜ್ಯಪಾಲ ಆಚಾರ್ಯ ದೇವವ್ರತ ಅವರಿಂದ ಪ್ರಮಾಣವಚನ ಸ್ವೀಕರಿಸಿದರು.

ಕೇಂದ್ರ ಗೃಹ ಸಚಿವ ಅಮಿತ್ ಶಾ, ಬಿಜೆಪಿ ಮುಖಂಡರು, ಕರ್ನಾಟಕ, ಗೋವಾ, ಮಧ್ಯಪ್ರದೇಶ ಹಾಗೂ ಹರಿಯಾಣದ ಮುಖ್ಯಮಂತ್ರಿಗಳು ರಾಜಭವನದಲ್ಲಿ ನಡೆದ ಸರಳ ಸಮಾರಂಭದಲ್ಲಿ ಭಾಗವಹಿಸಿದ್ದರು.

ನಿರ್ಗಮಿತ ಮುಖ್ಯಮಂತ್ರಿ ವಿಜಯ ರೂಪಾಣಿ, ಮಾಜಿ ಉಪಮುಖ್ಯಮಂತ್ರಿ ನಿತಿನ್ ಪಟೇಲ್, ರಾಜ್ಯ ಬಿಜೆಪಿ ಅಧ್ಯಕ್ಷ ಸಿ.ಆರ್. ಪಾಟೀಲ್ ಅವರ ನಿವಾಸಕ್ಕೆ ಭೂಪೇಂದ್ರ ಅವರು ಪ್ರಮಾಣವಚನಕ್ಕೂ ಮುನ್ನ ಭೇಟಿ ಕೊಟ್ಟಿದ್ದರು. ಅಹಮದಾಬಾದ್‌ನ ಸ್ವಾಮಿ ನಾರಾಯಣ ದೇವಸ್ಥಾನದಲ್ಲಿ ಗೋಪೂಜೆ ಮಾಡಿದರು. ಅಲ್ಲದೇ ಅಲ್ಲಿನ ಜಗನ್ನಾಥ ದೇವಾಲಯಕ್ಕೂ ಭೇಟಿ ನೀಡಿದರು.

ಅಮೆರಿಕ ಓಪನ್: ಪ್ರಶಸ್ತಿ ಗೆದ್ದ ಮೆಡ್ವೆಡೇವ್



ನ್ಯೂಯಾರ್ಕ್ (ಎಎಫ್‌ಪಿ): ರಷ್ಯಾದ ಡ್ಯಾನಿಯಲ್ ಮೆಡ್ವೆಡೆವ್ ಅವರು ಅಮೆರಿಕ ಓಪನ್ ಟೆನಿಸ್ ಟೂರ್ನಿಯ ಪುರುಷರ ವಿಭಾಗದ ಪ್ರಶಸ್ತಿ ಗೆದ್ದುಕೊಂಡರು. ಭಾನುವಾರ ರಾತ್ರಿ ನಡೆದ ಫೈನಲ್ ಪಂದ್ಯದಲ್ಲಿ ಅವರು ಸರ್ಬಿಯಾದ ನೊವಾಕ್ ಜೊಕೊವಿಚ್ ಎದುರು 6-4, 6-4, 6-4ರಲ್ಲಿ ಜಯ ಗಳಿಸಿದರು. ಈ ಮೂಲಕ ಮೊದಲ ಗ್ರ್ಯಾನ್‌ಸ್ಲಾಂ ಪ್ರಶಸ್ತಿ ಮುಡಿಗೇರಿಸಿಕೊಂಡರು. ದಾಖಲೆಯ 21ನೇ ಗ್ರ್ಯಾನ್‌ಸ್ಲಾಂ ಪ್ರಶಸ್ತಿ ಗೆಲ್ಲುವ ಕನಸಿನೊಂದಿಗೆ ಕಣಕ್ಕೆ ಇಳಿದಿದ್ದ ಜೊಕೊವಿಚ್ ನಿರಾಸೆ ಅನುಭವಿಸಿದರು. 12

ಸಿ.ಎ ಪರೀಕ್ಷೆ: ಮಂಗಳೂರಿನ ರುತ್ ರಾಷ್ಟ್ರಕ್ಕೆ ಪ್ರಥಮ

ಮಂಗಳೂರು: ಇನ್‌ಸ್ಟಿಟ್ಯೂಟ್ ಆಫ್ ಚಾರ್ಟರ್ಡ್ ಅಕೌಂಟೆಂಟ್ಸ್ ಆಫ್ ಇಂಡಿಯಾ (ಐಸಿಎಐ) ನಡೆಸಿದ (ಚಾರ್ಟರ್ಡ್ ಅಕೌಂಟೆಂಟ್) ಪರೀಕ್ಷೆಯಲ್ಲಿ ಮಂಗಳೂರಿನ ರುತ್ ಕ್ಲಾರ್ ಡಿಸಿಲ್ವ ಪ್ರಥಮ ರ‍್ಯಾಂಕ್ ಪಡೆದಿದ್ದಾರೆ. ಸೋಮವಾರ ಫಲಿತಾಂಶ ಪ್ರಕಟಗೊಂಡಿದೆ.



ರುತ್ ಡಿಸಿಲ್ವ

‘ಈ ಬಾರಿಯ ಪರೀಕ್ಷೆ ಕಠಿಣವಾಗಿತ್ತು. ನಾನು ಉತ್ತಮವಾಗಿ ಪರೀಕ್ಷೆ ಎದುರಿಸಿದ್ದೆ. ಪ್ರಥಮ ರ‍್ಯಾಂಕ್ ನಿರೀಕ್ಷಿಸಿರಲಿಲ್ಲ. ಸಿ.ಎ. ಪರೀಕ್ಷೆ ತೇರ್ಗಡೆಯಾಗುವುದೇ ಅದ್ಭುತ’ ಎಂದು ರುತ್ ಡಿಸಿಲ್ವ ಪ್ರತಿಕ್ರಿಯಿಸಿದರು.

ಇವರು ಮಂಗಳೂರಿನ ರಫರ್ಟ್ ಡಿಸಿಲ್ವ ಮತ್ತು ರೋಸಿ ಮಾರಿಯಾ ಡಿಸಿಲ್ವ ದಂಪತಿ ಪುತ್ರಿ. ‘ಸಿ.ಎ. ಪರೀಕ್ಷೆಯಲ್ಲಿ ದೇಶಕ್ಕೆ ಪ್ರಥಮ ರ‍್ಯಾಂಕ್ ಪಡೆದು ರುತ್ ಇತಿಹಾಸ ಸೃಷ್ಟಿಸಿದ್ದಾರೆ. ಆಕೆ ಛಲದಿಂದ ಅಧ್ಯಯನ ಮಾಡಿ, ಸಾಧನೆ ಮಾಡಿದ್ದಾರೆ’ ಎಂದು ಮಾರ್ಗದರ್ಶಕ ನಂದಗೋಪಾಲ್ ತಿಳಿಸಿದರು.

ಚಿನಕುರುಳಿ

ಪ್ರಕಾಶ್ ಶೆಟ್ಟಿ





ಎಂಜಿನಿಯರಿಂಗ್ ಸೇವಾ ಸಂಘದ ಶತಮಾನೋತ್ಸವ ನಾಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಎಂಜಿನಿಯರಿಂಗ್ ಸೇವಾ ಸಂಘದ ಶತಮಾನೋತ್ಸವ ಸಮಾರಂಭ ಮತ್ತು ಎಂಜಿನಿಯರ್ ಭವನದ ಕಟ್ಟಡ ಉದ್ಘಾಟನೆ ಇದೇ 15ರಂದು ನಡೆಯಲಿದೆ ಎಂದು ಸಂಘದ ಅಧ್ಯಕ್ಷ ಬಿ. ಪೀತಾಂಬರಸ್ವಾಮಿ ತಿಳಿಸಿದ್ದಾರೆ.

'ನಗರದ ಕೆ.ಆರ್. ವೃತ್ತದಲ್ಲಿರುವ ಮುಖ್ಯ ಎಂಜಿನಿಯರ್ ಸಂಪರ್ಕ ಮತ್ತು ಕಟ್ಟಡ (ದಕ್ಷಿಣ) ಕಚೇರಿ ಆವರಣದಲ್ಲಿ ಬೆಳಿಗ್ಗೆ 10 ಗಂಟೆಗೆ ನಡೆಯಲಿರುವ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಬೊಮ್ಮಾಯಿ, ಲೋಕೋಪಯೋಗಿ ಸಚಿವ ಸಿ.ಸಿ. ಪಾಟೀಲ, ಜಲ ಸಂಪನ್ಮೂಲ ಸಚಿವ ಗೋವಿಂದ ಕಾರಜೋಳ ಭಾಗವಹಿಸಲಿದ್ದಾರೆ' ಎಂದಿದ್ದಾರೆ.

'ರಾಜ್ಯದಾದ್ಯಂತ ಲೋಕೋಪಯೋಗಿ, ಜಲ ಸಂಪನ್ಮೂಲ ಮತ್ತು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಹಾಗೂ ಇತರ ಇಲಾಖೆಗಳಲ್ಲಿ ಕೆಲಸ ಮಾಡುತ್ತಿರುವ ಸುಮಾರು 4,500 ಡಿಪ್ಲೊಮಾ ಎಂಜಿನಿಯರ್‌ಗಳನ್ನು ಸಂಘ ಪ್ರತಿನಿಧಿಸುತ್ತಿದೆ. 1918ರಲ್ಲಿ ಆರಂಭಗೊಂಡಿರುವ ಸಂಘಕ್ಕೆ 2018ರಲ್ಲಿ 100 ವರ್ಷ ತುಂಬಿದ್ದರೂ 2018ರ ಕೊಡಗು ಅತಿವೃಷ್ಟಿ, 2019ರ ಉತ್ತರ ಕರ್ನಾಟಕದ ಅತಿವೃಷ್ಟಿ, 2020ರಲ್ಲಿ ಕೊರೊನಾದಿಂದ ಶತಮಾನೋತ್ಸವ ಆಚರಿಸಲು ಸಾಧ್ಯ ಆಗಿಲ್ಲ' ಎಂದು ಅವರು ತಿಳಿಸಿದ್ದಾರೆ.

ಉತ್ತರಹಳ್ಳಿ: ಕೊಳವೆ ಬಾವಿಗಳ ನೀರು ಬಳಸಿ ಅಸ್ವಸ್ಥಗೊಂಡಿದ್ದ ನಿವಾಸಿಗಳು

ನೀರು ಕಲುಷಿತ: 'ನೈರ್ಮಲ್ಯ ಪ್ಯಾಡ್' ಕಾರಣ!

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಉತ್ತರಹಳ್ಳಿ ವಾರ್ಡ್ ಸಂಖ್ಯೆ 184ರ ರಾಮಾಂಜನೇಯ ನಗರ ವ್ಯಾಪ್ತಿಯಲ್ಲಿ ಕೊಳವೆ ಬಾವಿಗಳ ನೀರು ಕಲುಷಿತಗೊಳ್ಳಲು 'ನೈರ್ಮಲ್ಯ ಪ್ಯಾಡ್' (ಸ್ಯಾನಿಟರಿ ಪ್ಯಾಡ್) ಕಾರಣ ಎಂಬುದು ಗೊತ್ತಾಗಿದೆ.

ಕೊಳವೆ ಬಾವಿಗಳಿಂದ ಬಂದ ಕಲುಷಿತ ನೀರು ಬಳಸಿದ ಏಳು ಅಪಾರ್ಟ್‌ಮೆಂಟ್ಸ್ ಸಮುಚ್ಚಯ ನಿವಾಸಿಗಳು ಆಸ್ಪತ್ರೆ ಸೇರಿದ್ದರು. ತಲೆನೋವು, ವಾಂತಿ–ಭೇದಿಯಿಂದ ನರಳಿದ್ದರು. ಈ ಬಗ್ಗೆ 'ಪ್ರಜಾವಾಣಿ'ಯಲ್ಲಿ ವಿಸ್ತೃತ ವರದಿ ಪ್ರಕಟವಾಗಿತ್ತು.

ಕ್ಷೇತ್ರದ ಶಾಸಕ ಎಂ. ಕೃಷ್ಣಪ್ಪ ಹಾಗೂ ಬಿಬಿಎಂಪಿ ಮತ್ತು ಜಲಮಂಡಳಿ ಅಧಿಕಾರಿಗಳು ಸೋಮವಾರ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು.

ಈ ವಾರ್ಡ್‌ನ ಆನಂದ ವಾಣಿಜ್ಯ ಸಂಕೀರ್ಣದಲ್ಲಿ ಶಾರದಾ ನರ್ಸಿಂಗ್ ಕಾಲೇಜು ವಿದ್ಯಾರ್ಥಿಗಳ ಪಿ.ಜಿ ಇದೆ. ಇಲ್ಲಿನ ಮಹಿಳೆಯರು ಬಳಸಿದ ನ್ಯಾಪ್‌ಕಿನ್‌ಗಳು ಖಾಲಿ ಬಿದ್ದಿದ್ದ ಕೊಳವೆಬಾವಿಯಲ್ಲಿ ತುರುಕಿಸಿ ವಿಲೇ ಮಾಡಿದ್ದರು. ಇದರಿಂದಾಗಿ ಸಮಸ್ಯೆ ಸೃಷ್ಟಿಯಾಗಿದೆ ಎಂಬುದು ಪರಿಶೀಲನೆಯಿಂದ ಪತ್ತೆಯಾಗಿದೆ.

'ಒಳಚರಂಡಿ ಕೊಳವೆ ಕಟ್ಟಿಕೊಂಡಿತ್ತು. ಪಿ.ಜಿಯ ನಿವಾಸಿಗಳು ಬೇರೆ ದಾರಿ ಕಾಣದೇ, ಕೆಟ್ಟುಹೋಗಿದ್ದ ಕೊಳವೆಬಾವಿಯೊಳಗೆ ನೈರ್ಮಲ್ಯ ಪ್ಯಾಡ್‌ಗಳನ್ನು ತುರುಕಿದ್ದಾರೆ. ಪ್ಯಾಡ್‌ಗಳಲ್ಲಿನ ರಕ್ತದ ಅಂಶ ಮಳೆ ನೀರಿನೊಂದಿಗೆ ಮಣ್ಣನ್ನು ಸೇರಿದೆ. 100 ಅಡಿಗಳಿಂದ 200 ಅಡಿಯ ಆಳದವರಿಗೂ ಇದು ಪಸರಿಸಿದೆ. ಇದರಿಂದ ಕೊಳವೆಬಾವಿಗಳ ನೀರು ಕಲುಷಿತಗೊಂಡಿದೆ' ಎಂದು ಅಧಿಕಾರಿಯೊಬ್ಬರು ವಿವರಿಸಿದರು.

'ಇನ್ನು 10 ದಿನಗಳ ನಂತರ ಕೊಳವೆ ಬಾವಿಯ ನೀರನ್ನು ಬಳಸಬಹುದು' ಎಂದು ಅವರು ತಿಳಿಸಿದರು.

ಆನಂದ ವಾಣಿಜ್ಯ ಸಂಕೀರ್ಣದ ಮಾಲೀಕ ಆನಂದ ನಾಯ್ಡು, 'ಶಾರದಾ ನರ್ಸಿಂಗ್ ಕಾಲೇಜಿನವರಿಗೆ ಕಟ್ಟಡವನ್ನು ಬಾಡಿಗೆಗೆ ನೀಡಿದ್ದೇವೆ. ಅವರು ಈ ಬಗ್ಗೆ ಗಮನ ಹರಿಸಬೇಕಾಗಿತ್ತು. ಕಾಲೇಜಿನ ಮುಖ್ಯಸ್ಥರೊಂದಿಗೆ ಈ ಬಗ್ಗೆ ಚರ್ಚೆ ನಡೆಸಿದ್ದೇವೆ. ಸಾರ್ವಜನಿಕರಿಗೆ ಆಗಿರುವ ತೊಂದರೆಯ ಬಗ್ಗೆ ನಮಗೂ ಬೇಸರವಿದೆ. ಇದು ನಮ್ಮ ಗಮನಕ್ಕೆ ಬಾರದೆ ಆಗಿರುವ ಅಚಾತುರ್ಯ. ಮುಂದೆ ಹೀಗಾಗದಂತೆ ಎಚ್ಚರ ವಹಿಸುತ್ತೇವೆ' ಎಂದರು.

ಪ್ಯಾಡ್ ವಿಲೇವಾರಿ: ಇರಲಿ ಎಚ್ಚರ

ನೈರ್ಮಲ್ಯ ಪ್ಯಾಡ್‌ಗಳ ಅಸಮರ್ಪಕ ನಿರ್ವಹಣೆ ಮತ್ತು ಅವೈಜ್ಞಾನಿಕ ವಿಲೇವಾರಿಯು ಅನೇಕ ಸಮಸ್ಯೆಗಳಿಗೆ ಕಾರಣವಾಗುತ್ತಿದೆ. ಮಹಿಳೆಯರ ಆರೋಗ್ಯದ ಮೇಲೆ ಮಾತ್ರವಲ್ಲದೆ, ಪರಿಸರದ ಮೇಲೆಯೂ ಇದರಿಂದ ಹಾನಿಯಾಗುತ್ತಿದೆ.

'ಈಗ ಹೆಚ್ಚಾಗಿ ಬಳಕೆಯಾಗುತ್ತಿರುವ ಪ್ಯಾಡ್‌ಗಳು ರಾಸಾಯನಿಕ ಅಂಶಗಳೇ ಹೆಚ್ಚಾಗಿರುವುದರಿಂದ ಆರೋಗ್ಯದ ಮೇಲೆ ದುಷ್ಪರಿಣಾಮವಾಗುತ್ತದೆ. ಅವುಗಳ ಬದಲು ಬಟ್ಟೆಯ ಪ್ಯಾಡ್ ಬಳಸುವುದು ಸೂಕ್ತ. ಬಟ್ಟೆಯ ಪ್ಯಾಡ್‌ಗಳನ್ನು ವೈದ್ಯಕೀಯ ದರ್ಜೆಯ ಸಿಲಿಕೋನ್‌ನಿಂದ ತಯಾರಿಸಿರುತ್ತಾರೆ. ಇದರಿಂದ ದೇಹಕ್ಕೆ ಯಾವುದೇ ಅಡ್ಡ ಪರಿಣಾಮ ಉಂಟಾಗದು' ಎಂದು ಸಾಮಾಜಿಕ ಕಾರ್ಯಕರ್ತರಾದ ಚೈತನ್ಯಾ ಸುಬ್ರಹ್ಮಣ್ಯ ಹೇಳಿದರು.

'ಬಟ್ಟೆಯ ಪ್ಯಾಡ್‌ಗಳನ್ನು ಆನ್‌ಲೈನ್ ಮೂಲಕವೂ ಖರೀದಿಸಬಹುದು. ಇವುಗಳನ್ನು ಕುದಿಸಿ, ಮತ್ತೆ ಬಳಸಬಹುದು' ಎಂದರು.

'ಮನೆ ಮನೆಯಿಂದ ಕಸ ಒಯ್ಯುವ ಬಿಬಿಎಂಪಿ ಸಿಬ್ಬಂದಿ ನೈರ್ಮಲ್ಯ ಪ್ಯಾಡ್‌ಗಳನ್ನು ಪ್ರತ್ಯೇಕವಾಗಿ ಸಂಗ್ರಹಿಸುತ್ತಾರೆ. ಕಸ ಸಂಗ್ರಹಿಸುವ ವಾಹನಗಳಲ್ಲಿ ನೈರ್ಮಲ್ಯ ಪ್ಯಾಡ್‌ಗಳನ್ನು ಹಾಕಲೆಂದೇ ಪ್ರತ್ಯೇಕ ಚೀಲ ಇರುತ್ತದೆ. ಅದಕ್ಕೆ ಹಾಕಬಹುದು. ಕೆಲವು ಎನ್‌ಜಿಒಗಳೂ ಬಳಸಿದ ಪ್ಯಾಡ್‌ಗಳನ್ನು ಸಂಗ್ರಹಿಸುತ್ತವೆ.



ಇದಕ್ಕೆ ಅವರು ಶುಲ್ಕ ಪಡೆಯುತ್ತಾರೆ' ಎಂದರು.

'ಬಿಬಿಎಂಪಿ ಸಿಬ್ಬಂದಿಗೆ ನೈರ್ಮಲ್ಯ ಪ್ಯಾಡ್ ನೀಡಲು ಮುಜುಗರವಾಗುತ್ತದೆ ಎಂದು ಕೆಲವು ಮಹಿಳೆಯರು ಹೇಳುತ್ತಾರೆ. ಕಾಗದದಲ್ಲಿ ಪ್ಯಾಡ್‌ಗಳನ್ನು ಸುತ್ತಿ, ಅದರ ಮೇಲೆ ಕೆಂಪು ಇಂಕಿನಿಂದ 'X' ಗುರುತು ಮಾಡಿದರೆ ಅವರು ಅದನ್ನು ಪ್ರತ್ಯೇಕವಾಗಿ ಸಂಗ್ರಹಿಸುತ್ತಾರೆ' ಎಂದೂ ಚೈತನ್ಯ ತಿಳಿಸಿದರು.

'ಚಿಕಿತ್ಸಾ ವೆಚ್ಚ ಭರಿಸುವವರು ಯಾರು'

'ನೀರು ಕಲುಷಿತಗೊಳ್ಳಲು ಹಾಗೂ ಸುಮಾರು 60ಕ್ಕೂ ಹೆಚ್ಚು ಮಂದಿ ಅಸ್ವಸ್ಥಗೊಳ್ಳಲು ಕಾರಣ ಏನು ಎಂಬುದು ಈಗ ಪತ್ತೆಯಾಗಿದೆ. ಅಸ್ವಸ್ಥಗೊಂಡು ಆಸ್ಪತ್ರೆ ಸೇರಿದ್ದ ಮಕ್ಕಳು ಈಗಲೂ ಗುಣಮುಖರಾಗಿಲ್ಲ. ಮಗುವೊಂದರ ಚಿಕಿತ್ಸೆಗೆ ₹60 ಸಾವಿರ ವೆಚ್ಚವಾಗಿದೆ. ಇದನ್ನು ಭರಿಸುವವರು ಯಾರು' ಎಂದು ಸ್ಥಳೀಯ ನಿವಾಸಿ ಸಂದೇಶ್ ಪ್ರಶ್ನಿಸಿದರು.

'ನಿರ್ಲಕ್ಷ್ಯಕ್ಕೆ ಕಾರಣರಾದವರ ವಿರುದ್ಧ ಕ್ರಮ ಕೈಗೊಳ್ಳಬೇಕು' ಎಂದು ಅವರು ಒತ್ತಾಯಿಸಿದರು.

ಮೆಟ್ರೊ ರೈಲು ಸಂಚಾರ ಸಮಯ ವಿಸ್ತರಣೆಗೆ ನಾಗರಿಕರ ಆಗ್ರಹ

'ಸಾರ್ವಜನಿಕರ ಸಮಸ್ಯೆಗೆ ಸ್ಪಂದನೆ ಇಲ್ಲವೇ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಮೆಟ್ರೊ ರೈಲು ಸಂಚಾರ ಸಮಯವನ್ನು ವಿಸ್ತರಿಸಬೇಕು ಎಂಬ ಒತ್ತಡ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ. ಮನವಿಗೆ ಸ್ಪಂದಿಸದ ಬೆಂಗಳೂರು ಮೆಟ್ರೊ ರೈಲು ನಿಗಮ ಮತ್ತು ರಾಜ್ಯ ಸರ್ಕಾರದ ವಿರುದ್ಧ ಸಾರ್ವಜನಿಕರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಸದ್ಯ, ನಿತ್ಯ ಎರಡು ಲಕ್ಷಕ್ಕೂ ಹೆಚ್ಚು ಜನ ಮೆಟ್ರೊ ರೈಲಿನಲ್ಲಿ ಪ್ರಯಾಣಿಸುತ್ತಿದ್ದಾರೆ. ನಿಂತುಕೊಂಡು ಹೋಗುವಷ್ಟು ದಟ್ಟಣೆ ಉಂಟಾಗುತ್ತಿದೆ. ಆದರೂ, ಕರ್ಫ್ಯೂ ನೆಪದಲ್ಲಿ 8 ಗಂಟೆಗೇ ಮೆಟ್ರೊ ಸೇವೆ ಸ್ಥಗಿತಗೊಳಿಸುತ್ತಿರುವುದು ಸರಿಯಲ್ಲ ಎಂಬುದು ಬಳಕೆದಾರರ ದೂರು.


'ಶಾಲಾ–ಕಾಲೇಜು, ಸರ್ಕಾರಿ ಮತ್ತು ಖಾಸಗಿ ಕಚೇರಿಗಳು ಸೇರಿದಂತೆ ಎಲ್ಲವೂ ಕಾರ್ಯಾರಂಭ ಮಾಡಿವೆ. ಆರ್ಥಿಕ ಚಟುವಟಿಕೆಗಳೂ ಸರಾಗವಾಗಿಯೇ ನಡೆಯುತ್ತಿವೆ. ರೈಲು, ಬಸ್‌ಗಳು ಎಂದಿನಂತೆ ಸಂಚರಿಸುತ್ತಿರುವಾಗ ಮೆಟ್ರೊ ರೈಲು ಸಂಚಾರ ಸಮಯ ಮಾತ್ರ ಕಡಿತಗೊಳಿಸಿರುವುದಕ್ಕೆ ಅರ್ಥವಿದೆಯೇ' ಎಂದು ಪ್ರಯಾಣಿಕ ಡಾ. ಎ. ಭಾನು ಪ್ರಶ್ನಿಸಿದರು.

ಹಾಗೇ ಇವೆ ಸ್ಟಿಕ್ಕರ್: ಎಲ್ಲವೂ ಸಹಜ ಸ್ಥಿತಿಗೆ ಬಂದಿದ್ದರೂ, ಕೆಲವೊಂದು ನಿಯಮಗಳನ್ನು ಬಿಎಂಆರ್‌ಸಿಎಲ್ ಇನ್ನೂ ಸಡಿಲಿಸಿಲ್ಲ. ಶೇ 100ರಷ್ಟು ಆಸನ ಸಾಮರ್ಥ್ಯದೊಂದಿಗೆ ಪ್ರಯಾಣಿಸಲು ಅವಕಾಶ ನೀಡಲಾಗಿದೆ. ಆದರೂ, ಅಂತರ ಕಾಪಾಡಿಕೊಳ್ಳುವ ಉದ್ದೇಶದಿಂದ ರೈಲಿನ ಸೀಟುಗಳ ಮೇಲೆ ಅಂಟಿಸಿದ್ದ 'ಕುಳಿತುಕೊಳ್ಳುವಂತಿಲ್ಲ' (ಡು ನಾಟ್ ಸಿಟ್) ಸ್ಟಿಕ್ಕರ್‌ಗಳನ್ನು ಇನ್ನೂ ತೆಗೆದು ಹಾಕಿಲ್ಲ.

'ಯಾವುದೇ ಆಸನದಲ್ಲಿ ಕುಳಿತುಕೊಳ್ಳಲು ಅವಕಾಶವಿದೆ ಎಂದು ಮೆಟ್ರೊ ರೈಲಿನೊಳಗೆ ಉದ್ಘೋಷಣೆ ಮಾಡಲಾಗುತ್ತದೆ. ಆದರೆ, ಸೀಟುಗಳ ಮೇಲೆ ಈ ರೀತಿ ಸ್ಟಿಕ್ಕರ್‌ಗಳನ್ನು ಅಂಟಿಸಲಾಗಿದೆ. ಇದರಿಂದ ಗೊಂದಲ ಉಂಟಾಗುತ್ತಿದೆ' ಎಂದು ಪ್ರಯಾಣಿಕರಾದ ಕೆ.ಪಿ. ನಾಗವೇಣಿ ಹೇಳಿದರು.

'ಒಂದು ಆಸನ ಬಿಟ್ಟು ಮತ್ತೊಂದು ಆಸನದಲ್ಲಿ ಈ ರೀತಿಯ ಸ್ಟಿಕ್ಕರ್‌ಗಳನ್ನು ಅಂಟಿಸಲಾಗಿದೆ. ಹೀಗೆ ಸ್ಟಿಕ್ಕರ್ ಅಂಟಿಸಲಾಗಿರುವ ಸೀಟುಗಳ ಮೇಲೆ ಕೆಲವರು ಬ್ಯಾಗ್‌ಗಳನ್ನು ಇಟ್ಟಿರುತ್ತಾರೆ. ಅಂತಹ ಸೀಟುಗಳಲ್ಲಿ ಕುಳಿತುಕೊಳ್ಳಬಹುದೇ, ಇಲ್ಲವೇ ಎಂಬ ಗೊಂದಲ ಉಂಟಾಗುತ್ತಿದೆ. ಪರಿಸ್ಥಿತಿಗೆ ತಕ್ಕಂತೆ ಅಥವಾ ಪ್ರಯಾಣಿಕರ ಅನುಕೂಲಕ್ಕೆ ತಕ್ಕಂತೆ ವ್ಯವಸ್ಥೆಯಲ್ಲಿ ಬದಲಾವಣೆ ಮಾಡಿಕೊಳ್ಳುವ ಯೋಚನೆಯನ್ನೇ ನಿಗಮದ ಅಧಿಕಾರಿಗಳು ಮಾಡುವುದಿಲ್ಲ' ಎಂದು ಅವರು ಅಸಮಾಧಾನ ವ್ಯಕ್ತಪಡಿಸಿದರು.

ಪರಿಸ್ಥಿತಿಗೆ ತಕ್ಕಂತೆ ಬದಲಾಗಿ !



ಕೋವಿಡ್ ಪ್ರಕರಣಗಳ ಸಂಖ್ಯೆ ಹೆಚ್ಚಿದ್ದಾಗ ಸರ್ಕಾರ ಕೆಲವೊಂದು ನಿರ್ಬಂಧಗಳನ್ನು ಹೇರಿತ್ತು. ಈಗ ಎಲ್ಲವೂ ಸಹಜ ಸ್ಥಿತಿಗೆ ಬಂದಿದೆ. ಈಗಲೂ ಮೆಟ್ರೊ ರೈಲು ಸಂಚಾರ ಸಮಯವನ್ನು ವಿಸ್ತರಿಸದೇ ಇರುವುದನ್ನು ನೋಡಿದರೆ ಅಚ್ಚರಿಯಾಗುತ್ತದೆ. ಪರಿಸ್ಥಿತಿಗೆ ತಕ್ಕಂತೆ ನಿಯಮಗಳಲ್ಲಿ ಬದಲಾವಣೆ ಮಾಡಿಕೊಳ್ಳಬೇಕು. ಸಾರ್ವಜನಿಕರಿಗೆ ಸೇವೆ ನೀಡಲೆಂದೇ ನಿಗಮ ಇರುವುದು. ಅಗತ್ಯವಿರುವ ಸಂದರ್ಭದಲ್ಲಿಯೇ ಸೇವೆ ಸಿಗದಿದ್ದರೆ ಹೇಗೆ ?

ಶ್ರೀಲಕ್ಷ್ಮಿ, ಸಿವಿಲ್ ಎಂಜಿನಿಯರ್

ರೈಲು, ಬಸ್‌ಗಳ ಸಂಚಾರಕ್ಕೆ ಕೋವಿಡ್ ಅಡ್ಡಿ ಇಲ್ಲವೇ?



ಮೆಟ್ರೊ ರೈಲು ಸಂಚಾರದ ಸಮಯವನ್ನು ಕಡಿತಗೊಳಿಸಿರುವ ನಿಗಮದ ತರ್ಕವೇ ಅರ್ಥವಾಗುತ್ತಿಲ್ಲ. ಬಸ್ ಮತ್ತು ರೈಲುಗಳಿಗಿಂತ ಮೆಟ್ರೊ ರೈಲುಗಳಲ್ಲಿ ಪ್ರಯಾಣಿಕರು ಹೆಚ್ಚು ಅಂತರ ಕಾಪಾಡಿಕೊಳ್ಳಲು ಸಾಧ್ಯವಿದೆ. ಆದರೆ, ಆ ಎರಡು ಸಾರಿಗೆಗಳಲ್ಲಿ ರಾತ್ರಿ ವೇಳೆ ಪ್ರಯಾಣಕ್ಕೆ ಅವಕಾಶ ನೀಡಿ, ಮೆಟ್ರೊ ರೈಲಿನಲ್ಲಿ ಸಂಚಾರ ಕಡಿತಗೊಳಿಸಿರುವುದು ಮೂರ್ಖತನದ ನಿರ್ಧಾರ.

ಸುಪ್ರಜಾ, ಖಾಸಗಿ ಕಂಪನಿ ಉದ್ಯೋಗಿ

ಪ್ರಯಾಣಿಕರ ಕೂಗಿಗೆ ಸ್ಪಂದನೆ ಇಲ್ಲ



ಬಿಎಂಆರ್‌ಸಿಎಲ್‌ನವರಿಗೆ ಎಲ್ಲವನ್ನೂ ಹತ್ತು–ಹನ್ನೊಂದು ಸಲ ಹೇಳಿದರೆ ಮಾತ್ರ ಅರ್ಥವಾಗುತ್ತದೆ. ಸಾರ್ವಜನಿಕರಿಗೆ ತೊಂದರೆಯಾಗುತ್ತಿದೆ ಎಂಬುದು ಗೊತ್ತಿದ್ದರೂ ಸಂಚಾರ ಸಮಯವನ್ನು ವಿಸ್ತರಿಸದಿರುವುದು ನೋಡಿದರೆ ಪ್ರಯಾಣಿಕರ ಬಗ್ಗೆ ಅವರ ಕಾಳಜಿ ಎಂಥದ್ದು ಎಂಬುದು ಅರ್ಥವಾಗುತ್ತದೆ.

ಆರ್. ಎಸ್. ವರುಣ್‌ಕುಮಾರ್, ಟೆಕ್ಕಿ

ಹಣ, ಸಮಯ ವ್ಯರ್ಥ



ನಾನು ರಾಜಾಜಿನಗರದಿಂದ ಬನಶಂಕರಿ ಪ್ರಯಾಣಿಸುತ್ತಿರುತ್ತೇನೆ. ಎಂಟು ಗಂಟೆಯೊಳಗೆ ಕಚೇರಿ ಕೆಲಸ ಮುಗಿಯುವುದಿಲ್ಲ. ಮೆಟ್ರೊ ರೈಲು ಸಂಚಾರ ಇರದ ಕಾರಣ ಈ ಮಾರ್ಗದಲ್ಲಿ ರಾತ್ರಿ 8ರ ನಂತರ ಸಂಚಾರ ದಟ್ಟಣೆಯೂ ಹೆಚ್ಚಾಗಿರುತ್ತದೆ. ಪರಿಸ್ಥಿತಿಯ ಲಾಭ ಪಡೆಯುವ ಆಟೊ ಮತ್ತು ಟ್ಯಾಕ್ಸಿ ಚಾಲಕರು ದುಪ್ಪಟ್ಟು ಹಣ ಕೇಳುತ್ತಾರೆ. ಮೆಟ್ರೊ ರೈಲು ಸೇವೆ ಇಲ್ಲದೆ ಹಣ ಮತ್ತು ಸಮಯ ವ್ಯರ್ಥವಾಗುತ್ತಿದೆ.

ಎಸ್. ವಿನಯ್‌ಕುಮಾರ್, ಎಂಜಿನಿಯರ್

ಇಎಸ್ಐ ಆಸ್ಪತ್ರೆಯಿಂದ ಹೃದ್ರೋಗ ಘಟಕ ಸ್ಥಳಾಂತರ: ಖಂಡನೆ

ಬೆಂಗಳೂರು: 'ರಾಜಾಜಿನಗರದ ಇಎಸ್ಐ ಆಸ್ಪತ್ರೆಯಲ್ಲಿರುವ ಜಯದೇವ ಹೃದ್ರೋಗ ಸಂಸ್ಥೆಯ ಹೃದ್ರೋಗ ಘಟಕವನ್ನು ಬನ್ನೇರುಘಟ್ಟಕ್ಕೆ ಸ್ಥಳಾಂತರ ಮಾಡುವ ನಿರ್ಧಾರವನ್ನು ಕೈಬಿಡಬೇಕು' ಎಂದು ಆಮ್ ಆದ್ಮಿ ಪಾರ್ಟಿಯ ಬೆಂಗಳೂರು ನಗರ ಘಟಕದ ಉಪಾಧ್ಯಕ್ಷ ಬಿ.ಟಿ.ನಾಗಣ್ಣ ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಸೋಮವಾರ ಇಲ್ಲಿ ಮಾತನಾಡಿದ ಅವರು, '2011-12ರಲ್ಲಿ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯು ಇಎಸ್ಐ ಆಸ್ಪತ್ರೆಯೊಂದಿಗೆ ಒಪ್ಪಂದ ಮಾಡಿಕೊಂಡಿತ್ತು. ಅದರ ಪ್ರಕಾರ ಆಸ್ಪತ್ರೆಯಲ್ಲಿ ವಾರ್ಷಿಕ ₹ 15 ಕೋಟಿ ವಹಿವಾಟು ನಡೆಯಬೇಕಿತ್ತು. ಪ್ರಚಾರಕೊರತೆಯಿಂದಾಗಿ ಕೆಲವು ವರ್ಷಗಳಲ್ಲಿ ಗುರಿ ತಲುಪಲು ಸಾಧ್ಯವಾಗುತ್ತಿಲ್ಲ. ಇದನ್ನೇ ನೆಪವಾಗಿಟ್ಟುಕೊಂಡು ಹೃದ್ರೋಗ ಘಟಕ ಸ್ಥಳಾಂತರಿಸಲು ನಿರ್ಧರಿಸಲಾಗಿದೆ. ಇದು ಸರಿಯಲ್ಲ' ಎಂದರು.

'ಇಎಸ್ಐ ಆಸ್ಪತ್ರೆಯ ಸೌಲಭ್ಯಗಳು ಕಾರ್ಮಿಕರಿಗೆ ಸೀಮಿತವಾಗಿದೆ. ಇದನ್ನು ಸಾರ್ವಜನಿಕರಿಗೂ ವಿಸ್ತರಿಸಬೇಕು. ರಾಜಾಜಿನಗರ, ಮಲ್ಲೇಶ್ವರ ಹಾಗೂ ಸುತ್ತಮುತ್ತಲಿನ ಜನರಿಗೆ ಇದರಿಂದ ಉಪಯೋಗವಾಗುತ್ತದೆ. ಆಸ್ಪತ್ರೆಯಲ್ಲಿರುವ ಸೌಲಭ್ಯಗಳ ಬಗ್ಗೆ ರೋಗಿಗಳಿಗೆ ತಿಳಿಸುವ ಕೆಲಸ ಆಗಬೇಕು. ಕೋವಿಡ್ ಸಮಯದಲ್ಲಿ ಆಸ್ಪತ್ರೆಗಳ ಬಲವರ್ಧನೆಗೆ ಮುಂದಾಗುವ ಬದಲು ಇರುವ ಸೌಲಭ್ಯಗಳನ್ನೂ ಕಿತ್ತುಕೊಳ್ಳಲು ಮುಂದಾಗಿರುವುದು ಎಷ್ಟು ಸರಿ' ಎಂದು ಪ್ರಶ್ನಿಸಿದರು.

'ಸ್ಥಳಾಂತರ ನಿರ್ಧಾರ ಕೈಬಿಡುವಂತೆ ಒತ್ತಾಯಿಸಿ ಇದೇ 15ರಂದು ಆಸ್ಪತ್ರೆ ಎದುರು ಪ್ರತಿಭಟನೆ ನಡೆಸಲು ನಿರ್ಧರಿಸಲಾಗಿದೆ' ಎಂದರು.



ಸಂಜಯನಗರ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ರೋಟರಿ ರಾಜ್ ಮಹಲ್ ವಿಲಾಸ್ ಕ್ಲಬ್ ವತಿಯಿಂದ ವಿದ್ಯುತ್ ಚಾಲಿತ ದ್ವಿಚಕ್ರ ವಾಹನವನ್ನು ಸೋಮವಾರ ಹಸ್ತಾಂತರಿಸಲಾಯಿತು. ಡಾ.ಫರ್ಘುಲ್ ಮಹಮೂದ್, ಮನೋಜ್ ಜೈನ್, ಬೈರತಿ ಸುರೇಶ್, ಗೌರವ್ ಗುಪ್ತ ಹಾಗೂ ಪಿಎಚ್‌ಸಿಯ ಸಿಬ್ಬಂದಿ ಇದ್ದರು –ಪ್ರಜಾವಾಣಿ ಚಿತ್ರ

ಸಂಜಯ್ ನಗರ ಪಿಎಚ್‌ಸಿಗೆ 'ಇ ಸಂಜೀವಿನಿ' ದ್ವಿಚಕ್ರ ವಾಹನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೈದ್ಯಕೀಯ ಸೇವೆಯನ್ನು ತ್ವರಿತವಾಗಿ ತಲುಪಿಸಲು ನೆರವಾಗುವ ಉದ್ದೇಶದಿಂದ ನಗರ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಆರೋಗ್ಯ ಸಿಬ್ಬಂದಿಗೆ ವಿದ್ಯುತ್ ಚಾಲಿತ ದ್ವಿಚಕ್ರ ವಾಹನ ಒದಗಿಸುವ 'ಇ-ಸಂಜೀವಿನಿ' ಕಾರ್ಯಕ್ರಮವನ್ನು ಬಿಬಿಎಂಪಿ ಹಮ್ಮಿಕೊಂಡಿದೆ.

ಸಂಜಯ್ ನಗರ ವಾರ್ಡ್‌ನ ನಗರ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ರೋಟರಿ ರಾಜ್ ಮಹಲ್ ವಿಲಾಸ್ ಕ್ಲಬ್ ಎರಡು ಪರಿಸರ ಸ್ನೇಹಿ ದ್ವಿಚಕ್ರ ವಾಹನಗಳನ್ನು ಕೊಡುಗೆ ನೀಡಿದೆ.

ವಾಹನಗಳನ್ನು ಸ್ವೀಕರಿಸಿದ ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ, 'ವೈದ್ಯಕೀಯ ಸೇವೆಯನ್ನು ಮನೆ ಬಾಗಿಲಿಗೆ ತಲುಪಿಸಲು ಇ–ವಾಹನಗಳು ನೆರವಾಗಲಿವೆ' ಎಂದರು.

'ಪಿಎಚ್‌ಸಿಯ ಸಿಬ್ಬಂದಿ, ಕಿರಿಯ ಆರೋಗ್ಯ ಸಹಾಯಕಿಯರು, ಅರೆ ವೈದ್ಯಕೀಯ ಸಿಬ್ಬಂದಿ ಹಾಗೂ ಆಶಾ ಕಾರ್ಯಕರ್ತೆಯರು ಲಸಿಕೆ ಕಾರ್ಯಕ್ರಮ, ವಿಶೇಷ ಆರೋಗ್ಯ ಶಿಬಿರ, ಪೌಷ್ಟಿಕ ಕಾರ್ಯಕ್ರಮ, ಅಂಗನವಾಡಿ ತಪಾಸಣೆ, ಲಸಿಕೆ ಹಾಕುವುದು, ಕೊಳಗೇರಿ ಪ್ರದೇಶಗಳ ಭೇಟಿ, ಸಮೀಕ್ಷೆ ನಡೆಸಲು ಈ ದ್ವಿಚಕ್ರ ವಾಹನಗಳನ್ನು ಬಳಸಲಿದ್ದಾರೆ. ಈ ಯೋಜನೆ ಯಶಸ್ವಿಯಾದರೆ ಇತರ ವಾರ್ಡ್‌ಗಳಿಗೂ ವಿಸ್ತರಿಸಲಾಗುವುದು' ಎಂದರು.

ವಿಶೇಷ ಆಯುಕ್ತ (ಆರೋಗ್ಯ) ಡಿ.ರಂದೀಪ್, 'ವಿದ್ಯುತ್ ಚಾಲಿತ ವಾಹನಗಳ ನಿರ್ವಹಣೆಗೆ ಹೆಚ್ಚು ವೆಚ್ಚವಾಗುವುದಿಲ್ಲ. ಈ ವಾಹನಗಳನ್ನು ಪಿಎಚ್‌ಸಿಗಳಲ್ಲೇ ಚಾರ್ಜ್ ಮಾಡಬಹುದು. ಇಂತಹ ವಾಹನಗಳನ್ನು ಬಿಬಿಎಂಪಿ ಖರೀದಿ ಮಾಡಿ ಪಿಎಚ್‌ಸಿಗಳಿಗೆ ವಿತರಿಸುವ ಚಿಂತನೆ ಇದೆ' ಎಂದರು. ಶಾಸಕ ಭೈರತಿ ಸುರೇಶ್ ಮಾತನಾಡಿದರು.


ವಿದ್ಯುತ್ ವ್ಯತ್ಯಯ ಇಂದು

ಬೆಂಗಳೂರು: ಭೂಗತ ಕೇಬಲ್ ಅಳವಡಿಕೆ ಕಾರ್ಯ ಕೈಗೆತ್ತಿಕೊಂಡಿರುವುದರಿಂದ ನಗರದ ವಿವಿಧ ಪ್ರದೇಶಗಳಲ್ಲಿ ಇದೇ 14ರಂದು ಬೆಳಿಗ್ಗೆ 10ರಿಂದ ಸಂಜೆ 5ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ಹೇಳಿದೆ.

ಹೊಸಕೆರೆಹಳ್ಳಿ ಮುಖ್ಯರಸ್ತೆ, ಬ್ಯಾಟರಾಯನಪುರ, ಸರ್ಕಾರಿ ಶಾಲೆ, ಎಂ.ಎಂ. ರಸ್ತೆ, ಸ್ಯಾಟಲೈಟ್ ಬಸ್ ನಿಲ್ದಾಣ, ದುಬಾಸಿಪಾಳ್ಯ, ಮೆಡ್‌ಸೋಲ್ ಆಸ್ಪತ್ರೆ ರಸ್ತೆ, ಎಂಪಿಎಂ ಬಡಾವಣೆ, ರಾಜೀವ್ ಗಾಂಧಿ ನಗರ, ಭೈರವೇಶ್ವರ ನಗರ, ಕೆಬ್ಬೆಹಳ್ಳ, ಹನುಮಂತರಾಯನಪಾಳ್ಯ, ಅಂದ್ರಹಳ್ಳಿ, ರಾಘವೇಂದ್ರ ಬಡಾವಣೆ, ಮಾಳಗಾಳ, ಜನತಾ ಕಾಲೊನಿ ಹಾಗೂ ಸುತ್ತ–ಮುತ್ತಲಿನ ಪ್ರದೇಶ.

ನಿಧನ ವಾರ್ತೆ

ಬಿ.ಜಿ. ಕುಸುಮಾ



ಬೆಂಗಳೂರು: ನಗರದ ಎನ್. ಆರ್. ಕಾಲೊನಿಯಲ್ಲಿರುವ ಆಚಾರ್ಯ ಪಾಠ ಶಾಲೆಯ ನಿವೃತ್ತ ಶಿಕ್ಷಕಿ ಬಿ.ಜಿ. ಕುಸುಮಾ (89) ಅವರು ಭಾನುವಾರ ನಿಧನರಾದರು.

ಕುಸುಮಾ ಅವರ ಇಚ್ಛೆಯಂತೆ ನೇತ್ರದಾನ ಮತ್ತು ದೇಹದಾನ ಮಾಡಲಾಗಿದೆ.

ವಿಜ್ಞಾನ ಮತ್ತು ಮಕ್ಕಳ ಸಾಹಿತ್ಯದಲ್ಲಿ ಗುರುತಿಸಿಕೊಂಡಿದ್ದ ಅವರು, ಶಾಲಾ ವಿದ್ಯಾರ್ಥಿಗಳಿಗೆ 'ಬೇಸಿಗೆ ವಿಜ್ಞಾನ ಶಿಬಿರ' ಹಮ್ಮಿಕೊಳ್ಳುತ್ತಿದ್ದರು.

ಪಾಲಿಕೆಗೆ ಹೊಸ ಗ್ರಾಮಗಳ ಸೇರ್ಪಡೆ: 11 ತಿಂಗಳಲ್ಲಿ ಒಮ್ಮೆ ಮಾತ್ರ ಸಭೆ ನಡೆಸಿರುವ ಸಮಿತಿ

ವಾರ್ಡ್ ಮರುವಿಂಗಡಣೆ ಪ್ರಕ್ರಿಯೆ ಆಮೆಗತಿ

• ಪ್ರವೀಣ್ ಕುಮಾರ್ ಪಿ.ವಿ.

ಪ್ರಜಾವಾಣಿ ವಿಶೇಷ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಗೆ ಗಡಿ ಪ್ರದೇಶದ ಹೊಸ ಗ್ರಾಮಗಳನ್ನು ಸೇರ್ಪಡೆ ಮಾಡಿ ವಾರ್ಡ್‌ಗಳ ಸಂಖ್ಯೆಯನ್ನು 243ಕ್ಕೆ ಹೆಚ್ಚಿಸುವ ಪ್ರಕ್ರಿಯೆ ಆಮೆಗತಿಯಲ್ಲಿ ಸಾಗುತ್ತಿದೆ. ಯಾವೆಲ್ಲ ಗ್ರಾಮಗಳನ್ನು ಬಿಬಿಎಂಪಿಗೆ ಸೇರಿಸಬೇಕು ಎಂದು ಶಿಫಾರಸು ಮಾಡಲು ಸರ್ಕಾರ ಅಧಿಕಾರಿಗಳ ಸಮಿತಿಯನ್ನು ರಚಿಸಿದೆ. ಈ ಸಮಿತಿ ರಚನೆಯಾಗಿ 11 ತಿಂಗಳಾಗಿದ್ದು, ಇದುವರೆಗೆ ಒಮ್ಮೆ ಮಾತ್ರ ಸಭೆ ನಡೆಸಿದೆ.

ಬಿಬಿಎಂಪಿ ವ್ಯಾಪ್ತಿಯನ್ನು ಈಗಿರುವಷ್ಟೇ ಉಳಿಸಿಕೊಂಡು ವಾರ್ಡ್‌ಗಳ ಸಂಖ್ಯೆಯನ್ನು ಮಾತ್ರ 198ರಿಂದ 243ಕ್ಕೆ ಹೆಚ್ಚಿಸಲು ಸರ್ಕಾರ ಆರಂಭದಲ್ಲಿ ಚಿಂತನೆ ನಡೆಸಿತ್ತು. ಬಳಿಕ ಗಡಿ ಪ್ರದೇಶದಲ್ಲಿ 1 ಕಿ.ಮೀ ವ್ಯಾಪ್ತಿಯ ಗ್ರಾಮಗಳನ್ನು ತೆಕ್ಕೆಗೆ ಸೇರಿಸಿಕೊಂಡು ಬಿಬಿಎಂಪಿಯ ವಾರ್ಡ್‌ಗಳ ಸಂಖ್ಯೆಯನ್ನು 243ಕ್ಕೆ ಹೆಚ್ಚಿಸುವ ಬಗ್ಗೆ ನಗರಾಭಿವೃದ್ಧಿ ಇಲಾಖೆಯು 2020ರ ಅ. 14ರಂದು ಅಧಿಸೂಚನೆಯನ್ನೂ ಹೊರಡಿಸಿತ್ತು. ಹೊಸದಾಗಿ ಸೇರ್ಪಡೆ ಮಾಡಬೇಕಾದ ಗ್ರಾಮಗಳ ಬಗ್ಗೆ ಶಿಫಾರಸು ಮಾಡಲು ಬಿಬಿಎಂಪಿ ಆಯುಕ್ತರ ಅಧ್ಯಕ್ಷತೆಯಲ್ಲಿ ಆರು ಜನ ಸಮಿತಿ ರಚಿಸಲಾಗಿದ್ದು, ಬೆಂಗಳೂರು ನಗರ ಜಿಲ್ಲೆಯ ಜಿಲ್ಲಾಧಿಕಾರಿ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಆಯುಕ್ತರು, ಬಿಬಿಎಂಪಿ ವಿಶೇಷ ಆಯುಕ್ತರು (ಕಂದಾಯ) ಸದಸ್ಯರಾಗಿದ್ದಾರೆ.

ಆ ಬಳಿಕ 2020ರ ಬಿಬಿಎಂಪಿ ಕಾಯ್ದೆಯೂ ಪಾಲಿಕೆಯ ಒಟ್ಟು ಸದಸ್ಯರ ಸಂಖ್ಯೆಯನ್ನು 243ಕ್ಕೆ ನಿಗದಿಪಡಿಸಲಾಗಿದೆ. ಈ ಕಾಯ್ದೆಯ ಸೆಕ್ಷನ್ 365 ಪಂಚಾಯಿತಿ ಪ್ರದೇಶಗಳನ್ನು ಪಾಲಿಕೆಗೆ ಸೇರ್ಪಡೆಗೊಳಿಸುವ ಬಗ್ಗೆ ವಿವರಿಸುತ್ತದೆ. ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯ್ದೆ 1993ರನ್ವಯ ಆಡಳಿತ ವ್ಯವಸ್ಥೆ ಹೊಂದಿರುವ ಪ್ರದೇಶಗಳನ್ನು ಸರ್ಕಾರವು ಬಿಬಿಎಂಪಿ ಕಾಯ್ದೆಯ ಸೆಕ್ಷನ್ 4ಎ ಉಪವಿಧಿ 1ರಡಿ ಅಧಿಸೂಚನೆ ಹೊರಡಿಸಿ ಪಾಲಿಕೆಗೆ ಸೇರ್ಪಡೆಗೊಳಿಸಬಹುದು.

ಬಿಬಿಎಂಪಿ ಕಾಯ್ದೆ ಜಾರಿಗೆ ಅಧಿಸೂಚನೆ ಹೊರಡಿಸಿ ಎಂಟು ತಿಂಗಳುಗಳು ಉರುಳಿವೆ. ಈ ಕಾಯ್ದೆ ಜಾರಿಯಾದ ಬಳಿಕವೂ ಗ್ರಾಮಗಳ ಸೇರ್ಪಡೆ ಕುರಿತು ಶಿಫಾರಸು ಮಾಡಲು ಹಳೆ ಸಮಿತಿಯನ್ನೇ ಉಳಿಸಿಕೊಳ್ಳಲಾಗಿದೆ. ಹೊಸ ಗ್ರಾಮಗಳ ಸೇರ್ಪಡೆ ಪ್ರಕ್ರಿಯೆಯಲ್ಲಿ ಯಾವುದೇ ಮಹತ್ವದ ಪ್ರಗತಿ ಆಗಿಲ್ಲ. ಈ ಸಲುವಾಗಿ ಬಿಬಿಎಂಪಿ ಮುಖ್ಯ ಆಯುಕ್ತರ ಅಧ್ಯಕ್ಷತೆಯಲ್ಲಿ ರಚಿಸಲಾದ ಸಮಿತಿ 2021ರ ಜುಲೈನಲ್ಲಿ ಒಮ್ಮೆ ಸಭೆ ಸೇರಿತ್ತು.

'ಗ್ರಾಮಗಳನ್ನು ಬಿಬಿಎಂಪಿಗೆ ಸೇರ್ಪಡೆಗೊಳಿಸುವ ಬಗ್ಗೆ ನಗರಾಭಿವೃದ್ಧಿ ಇಲಾಖೆಗೆ ನೇರವಾಗಿ ಮನವಿಗಳು ಸಲ್ಲಿಕೆ ಆಗಿವೆ. ಕೆಲವು ಮನವಿಗಳು ಜಿಲ್ಲಾಧಿಕಾರಿಗೆ ಸಲ್ಲಿಕೆ ಆಗಿವೆ. ಇವುಗಳಲ್ಲಿ ಪಾಲಿಕೆ ಗಡಿಯಿಂದ 1 ಕಿ.ಮೀ ವ್ಯಾಪ್ತಿಯಲ್ಲಿ ಯಾವೆಲ್ಲ ಗ್ರಾಮಗಳನ್ನು ಸೇರ್ಪಡೆ ಮಾಡಿಕೊಳ್ಳಬಹುದು ಎಂಬ ಬಗ್ಗೆ ಆಳವಾಗಿ ಚರ್ಚೆ ನಡೆಸಬೇಕಿದೆ' ಎಂದು ಸಮಿತಿಯ ಮೂಲಗಳು ತಿಳಿಸಿವೆ.

'ಬಿಬಿಎಂಪಿ ವಾರ್ಡ್‌ಗಳ ಸಂಖ್ಯೆಯನ್ನು 243ಕ್ಕೆ ವಿಸ್ತರಿಸುವ ಬಗ್ಗೆ ಸಮಿತಿ ಒಂದು ಬಾರಿ ಸಭೆ ನಡೆಸಿ ಚರ್ಚಿಸಿದೆ. ಈ ಬಗ್ಗೆ ಸಮಗ್ರವಾಗಿ ಚರ್ಚಿಸುವ ಬಗ್ಗೆ ಈ ವಾರ ಮತ್ತೆ ಸಭೆ ಕರೆಯಲಿದ್ದೇವೆ' ಎಂದು ಸಮಿತಿಯ ಅಧ್ಯಕ್ಷ ಗೌರವ ಗುಪ್ತ 'ಪ್ರಜಾವಾಣಿ'ಗೆ ತಿಳಿಸಿದರು.

ಸೇರ್ಪಡೆಗೆ ಮುನ್ನವೇ ಕಾಣಿಸಿತು ಫಲಕ

ಯಲಹಂಕ ವಲಯದ ಗಡಿ ಪ್ರದೇಶದ ಕೆಲವು ಗ್ರಾಮಗಳನ್ನು ಬಿಬಿಎಂಪಿಗೆ ಸೇರ್ಪಡೆಗೊಳಿಸಬೇಕು ಎಂಬ ಪ್ರಸ್ತಾವನೆಗಳಿವೆ. ಇವುಗಳ ಸೇರ್ಪಡೆ ಪ್ರಕ್ರಿಯೆ ಅಧಿಕೃತವಾಗಿ ಪೂರ್ಣಗೊಳ್ಳುವ ಮುನ್ನವೇ ಕೆಲವು ಗ್ರಾಮಗಳಲ್ಲಿ ಬಿಬಿಎಂಪಿ ವ್ಯಾಪ್ತಿ ಪ್ರದೇಶ ಎಂದು ಬಿಂಬಿಸುವ ಫಲಕಗಳು ಕಾಣಿಸಿಕೊಂಡಿವೆ.

ವಾರ್ಡ್‌ಗಳ ಗಡಿ ಮತ್ತೆ ಮಾರ್ಪಾಡು

ಬಿಬಿಎಂಪಿ ವಾರ್ಡ್‌ಗಳ ಸಂಖ್ಯೆ 243ಕ್ಕೆ ಹೆಚ್ಚಳವಾದ ಬಳಿಕ ಬಹುತೇಕ ಎಲ್ಲ ವಾರ್ಡ್‌ಗಳ ಗಡಿಗಳು ಮತ್ತೆ ಬದಲಾಗಲಿವೆ.

2020ರಲ್ಲಿ ಸರಾಸರಿ 42,645 ಜನಸಂಖ್ಯೆಯ ಆಧಾರದಲ್ಲಿ 198 ವಾರ್ಡ್‌ಗಳನ್ನು ಮರುವಿಂಗಡಣೆ ಮಾಡಲಾಗಿತ್ತು. ಈಗ ವಾರ್ಡ್‌ಗಳ ಸಂಖ್ಯೆ 243ಕ್ಕೆ ಹೆಚ್ಚಳವಾದ ಬಳಿಕ ವಾರ್ಡ್‌ವಾರು ಸರಾಸರಿ ಜನಸಂಖ್ಯೆ ಮತ್ತಷ್ಟು ಕಡಿಮೆ ಆಗಲಿದೆ. ವಾರ್ಡ್‌ಗಳ ಸರಾಸರಿ ಜನಸಂಖ್ಯೆ 35 ಸಾವಿರ ಮೀರಬಾರದು ಎಂಬ ಮಾನದಂಡ ಇಟ್ಟುಕೊಂಡು ಮರುವಿಂಗಡಣೆ ನಡೆಸಲು ಸಿದ್ಧತೆ ನಡೆದಿದೆ ಎಂದು ಮೂಲಗಳು ಹೇಳಿವೆ.

'ಹೊಸ ಗ್ರಾಮಗಳ ಸೇರ್ಪಡೆಯಾದ ಬಳಿಕ ಬಿಬಿಎಂಪಿ ವ್ಯಾಪ್ತಿಯಲ್ಲಿ 2021ರ ಜನಗಣತಿ ಅಂದಾಜು ಜನಸಂಖ್ಯೆ ಆಧಾರದಲ್ಲಿ ವಾರ್ಡ್‌ವಾರು ಜನಸಂಖ್ಯೆಯ ಸರಾಸರಿಯನ್ನು ನಿರ್ಧರಿಸಿ ಅದರ ಆಧಾರದಲ್ಲಿ ವಾರ್ಡ್‌ಗಳ ಮರುವಿಂಗಡಣೆ ನಡೆಸಲಾಗುತ್ತದೆ' ಎಂದು ಸಮಿತಿಯ ಸದಸ್ಯರಾಗಿರುವ ಬಿಬಿಎಂಪಿ ವಿಶೇಷ ಆಯುಕ್ತ ಎಸ್. ಬಸವರಾಜು 'ಪ್ರಜಾವಾಣಿ'ಗೆ ತಿಳಿಸಿದರು.

ವರ್ಷದ ಹಿಂದಷ್ಟೇ ನಡೆದಿತ್ತು ಮರುವಿಂಗಡಣೆ

2011ರ ಜನಗಣತಿ ಆಧಾರದಲ್ಲಿ ಬಿಬಿಎಂಪಿ ವಾರ್ಡ್‌ಗಳ ವಾರ್ಡ್ ಮರುವಿಂಗಡಣೆ ನಡೆಸಲು ಸರ್ಕಾರ 2020ರ ಮಾರ್ಚ್ 2ರಂದು ಕರಡು ಅಧಿಸೂಚನೆ ಪ್ರಕಟಿಸಿತ್ತು. ಈ ಕುರಿತು ಸಾರ್ವಜನಿಕರಿಂದ ಆಕ್ಷೇಪಣೆ, ಸಲಹೆ ಸೂಚನೆಗಳನ್ನು ಆಹ್ವಾನಿಸಿದ ಬಳಿಕ 2020ರ ಜೂನ್ 23ರಂದು ರಾಜ್ಯಪತ್ರದಲ್ಲಿ ಅಂತಿಮ ಅಧಿಸೂಚನೆಯನ್ನೂ ಪ್ರಕಟಿಸಲಾಗಿತ್ತು. ಮರುವಿಂಗಡಣೆಗೊಂಡ ವಾರ್ಡ್‌ಗಳ ಮತದಾರರ ಪಟ್ಟಿಯನ್ನು ರಾಜ್ಯ ಚುನಾವಣಾ ಆಯೋಗದ ಸೂಚನೆಯಂತೆ ಪರಿಷ್ಕರಿಸಲಾಗಿತ್ತು. ವಾರ್ಡ್‌ಗಳ ಮರುವಿಂಗಡಣೆ ನಡೆದು ವರ್ಷ ಕಳೆಯುವಷ್ಟರಲ್ಲೇ ಬಿಬಿಎಂಪಿ ವಾರ್ಡ್‌ಗಳನ್ನು ಮತ್ತೆ ಮರುವಿಂಗಡಣೆ ಮಾಡುವ ಪ್ರಕ್ರಿಯೆ ನಡೆಯುತ್ತಿದೆ. ಈ ಹಿಂದೆ ಅಧಿಕಾರಿಗಳು ನಡೆಸಿದ ಅಷ್ಟೂ ಕಸರತ್ತು ವ್ಯರ್ಥವಾಗಿದೆ.

ಸುದ್ದಿ 2 ನಿಮಿಷ

'2ಎ ಮೀಸಲಾತಿ ಸಿಗದಿದ್ದರೆ ಅಕ್ಟೋಬರ್ 1ರಿಂದ ಧರಣಿ'

ಕಲಬುರ್ಗಿ: 'ರಾಜ್ಯದಲ್ಲಿ ಆರ್ಥಿಕ, ಶೈಕ್ಷಣಿಕವಾಗಿ ಹಿಂದುಳಿದ ಪಂಚಮಸಾಲಿ ಸಮುದಾಯಕ್ಕೆ 2ಎ ಮೀಸಲಾತಿಯನ್ನು ಕಲ್ಪಿಸುವ ಬಗ್ಗೆ ಸೆಪ್ಟೆಂಬರ್ 15ರೊಳಗೆ ಭರವಸೆ ನೀಡದಿದ್ದರೆ, ಅಕ್ಟೋಬರ್ 1ರಿಂದ ಧರಣಿ ಸತ್ಯಾಗ್ರಹ ನಡೆಸಲಾಗುವುದು' ಎಂದು ಕೂಡಲಸಂಗಮ ಲಿಂಗಾಯತ ಪಂಚಮಸಾಲಿ ಪೀಠದ ಪೀಠಾಧಿಪತಿ ಬಸವ ಜಯಮೃತ್ಯುಂಜಯ ಸ್ವಾಮೀಜಿ ಎಚ್ಚರಿಕೆ ನೀಡಿದರು.

'ಧರ್ಮಗುರುಗಳು ಈವರೆಗೆ ಧಾರ್ಮಿಕ ಉದ್ದೇಶಕ್ಕಾಗಿ ವಿವಿಧ ಜಿಲ್ಲೆಗಳಿಗೆ ಭೇಟಿ ನೀಡುತ್ತಿದ್ದರು. ಆದರೆ, ಇದೇ ಮೊದಲಿಗೆ ಸಾಮಾಜಿಕ ನ್ಯಾಯಕ್ಕಾಗಿ ಆಗ್ರಹಿಸಿ ಸಮುದಾಯದ ಮುಖಂಡರೊಂದಿಗೆ ಪಾದಯಾತ್ರೆ, ಅಭಿಯಾನದಲ್ಲಿ ಪಾಲ್ಗೊಳ್ಳುತ್ತಿದ್ದೇವೆ' ಎಂದು ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

'ರಾಜ್ಯದಲ್ಲಿ ದೀಕ್ಷ ಪಂಚಮಸಾಲಿ, ಲಿಂಗಾಯತ ಪಂಚಮಸಾಲಿ, ಗೌಡ ಲಿಂಗಾಯತ, ಮಲೆಗೌಡ ಹೆಸರಿನಲ್ಲಿ ಕರೆಸಿಕೊಳ್ಳುವ ಪಂಚಮಸಾಲಿ ಸಮಾಜವನ್ನು 2ಎ ಮೀಸಲಾತಿ ನೀಡಬೇಕೆಂದು ಆಗ್ರಹಿಸಿ ವಿರಮಿಸುವುದಿಲ್ಲ, ವಿವಿಧ ಹಂತದ ಹೋರಾಟಗಳು ನಡೆಯುತ್ತಲೇ ಇರುತ್ತವೆ' ಎಂದರು.

'ಮುಖ್ಯಮಂತ್ರಿಯಾಗಿದ್ದ ಬಿ.ಎಸ್. ಯಡಿಯೂರಪ್ಪ ಅವರು ನಮ್ಮ ಹೋರಾಟಕ್ಕೆ ಮಣಿದು ಸದನದಲ್ಲೇ ಹೇಳಿಕೆ ನೀಡಿ 6 ತಿಂಗಳೊಳಗೆ ಮೀಸಲಾತಿ ನೀಡುವ ಭರವಸೆ ನೀಡಿದ್ದರು. ಸೆಪ್ಟೆಂಬರ್ 15ಕ್ಕೆ 6 ತಿಂಗಳು ಮುಗಿಯಲಿದೆ. ಭರವಸೆ ಈಡೇರಿಸಲು ಕೋರಿ ಅಂದು ಎಲ್ಲ ಜಿಲ್ಲಾ ಹಾಗೂ ತಾಲ್ಲೂಕು ಕೇಂದ್ರಗಳಲ್ಲಿ ಸಮಾಜದವರು ಎತ್ತಿನ ಬಂಡಿಯಲ್ಲಿ ಜಿಲ್ಲಾಧಿಕಾರಿ, ತಹಶೀಲ್ದಾರ್ ಕಚೇರಿಗೆ ತೆರಳಿ ಮನವಿ ಸಲ್ಲಿಸಿ ಅರ್ಧಗಂಟೆ ಶಾಂತಿಯುತ ಧರಣಿ ನಡೆಸುವರು' ಎಂದರು.

'ಪಂಚಮಸಾಲಿಗಳನ್ನು 2ಎ ಮೀಸಲಾತಿ ಪಟ್ಟಿಗೆ ಸೇರಿಸುವುದು ಸರ್ಕಾರದ ಜವಾಬ್ದಾರಿ. ನಾವು ಹೋರಾಟ ಹಿಂಪಡೆಯುವ ಪ್ರಶ್ನೆಯೇ ಇಲ್ಲ. ಮೀಸಲಾತಿ ಕಲ್ಪಿಸದಿದ್ದರೆ, ನಾವು ಅಹೋರಾತ್ರಿ ಹೋರಾಡುವುದು ಅನಿವಾರ್ಯವಾಗುತ್ತದೆ' ಎಂದರು.



ನಿವೇಶನ ಸ್ವಾಧೀನಕ್ಕೆ ನೀಡದ ಬಿಬಿಎಂಪಿ: ತರಾಟೆ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಆಶ್ರಯ ಯೋಜನೆಯಡಿ ಅಂಗವಿಕಲರೊಬ್ಬರಿಗೆ 10 ವರ್ಷಗಳ ಹಿಂದೆಯೇ ಮಂಜೂರು ಮಾಡಿದ ನಿವೇಶನವನ್ನು ಸ್ವಾಧೀನಕ್ಕೆ ನೀಡದೆ ಸತಾಯಿಸುತ್ತಿರುವ ಬಿಬಿಎಂಪಿ ಮುಖ್ಯ ಆಯುಕ್ತರನ್ನು ಹೈಕೋರ್ಟ್ ತರಾಟೆಗೆ ತೆಗೆದುಕೊಂಡಿದೆ.

ಈ ಸಂಬಂಧ ಹೈಕೋರ್ಟ್ ಆದೇಶ ನೀಡಿ ಮೂರು ವರ್ಷಗಳು ಕಳೆದಿವೆ. ಆದರೂ, ಸ್ವಾಧೀನಕ್ಕೆ ನೀಡದ ಬಿಬಿಎಂಪಿ ವಿರುದ್ಧ ನ್ಯಾಯಾಂಗ ನಿಂದನೆ ಅರ್ಜಿಯನ್ನು ಅಂಗವಿಕಲರಾದ ಅರ್ಜುನ್ ಸಾ ಸಲ್ಲಿಸಿದ್ದರು. ವಿಚಾರಣೆ ನಡೆಸಿದ ನ್ಯಾಯಮೂರ್ತಿ ಬಿ. ವೀರಪ್ಪ ನೇತೃತ್ವದ ವಿಭಾಗೀಯ ಪೀಠ, ವಿಚಾರಣೆಗೆ ಖುದ್ದು ಹಾಜರಾಗುವಂತೆ ಮುಖ್ಯ ಆಯುಕ್ತರಿಗೆ ನಿರ್ದೇಶನ ನೀಡಿತ್ತು. ಅದರಂತೆ ಗೌರವ್ ಗುಪ್ತ ವಿಚಾರಣೆಗೆ ಹಾಜರಾಗಿದ್ದರು.

'ಅರ್ಜಿದಾರರು ಶೇ 90ರಷ್ಟು ಅಂಗವಿಕಲತೆಯಿಂದ ನರಳುತ್ತಿದ್ದಾರೆ. 2011ರಲ್ಲಿಯೇ ನಿವೇಶನ ಮಂಜೂರು ಮಾಡಿದ್ದರೂ ಈವರೆಗೆ ಸ್ವಾಧೀನಕ್ಕೆ ನೀಡಿಲ್ಲ. ಹೈಕೋರ್ಟ್ ಆದೇಶಕ್ಕೂ ಬೆಲೆ ಇಲ್ಲವೇ' ಎಂದು ಪೀಠ ಪ್ರಶ್ನಿಸಿತು.

ಕ್ಷಮೆಯಾಚಿಸಿದ ಬಿಬಿಎಂಪಿ ಮುಖ್ಯ ಆಯುಕ್ತ, 'ಅರ್ಜಿದಾರರಿಗೆ ನಿವೇಶನ ಹಸ್ತಾಂತರಿಸಲು ಕೂಡಲೇ ಕ್ರಮ ಕೈಗೊಳ್ಳಲಾಗುವುದು' ಎಂದು ಭರವಸೆ ನೀಡಿದರು. 'ನ್ಯಾಯಾಲಯದ ಆದೇಶ ಪಾಲಿಸದೆ ಇರುವುದು ಸರಿಯಲ್ಲ. ಒಂದೊಮ್ಮೆ ಪಾಲಿಸದಿದ್ದರೆ ನ್ಯಾಯಾಲಯ ಏನೆಂಬುದನ್ನು ತೋರಿಸಬೇಕಾಗುತ್ತದೆ' ಎಂದು ಎಚ್ಚರಿಸಿತು.

ಆಶ್ರಯ ಯೋಜನೆಯಡಿ ನಿವೇಶನ ಕೋರಿ ಅರ್ಜುನ್ ಸಾ 2003ರಲ್ಲಿ ಅರ್ಜಿ ಸಲ್ಲಿಸಿದ್ದರು. ಉತ್ತರ ತಾಲ್ಲೂಕಿನ ಸಿಂಗಾಪುರ ಗ್ರಾಮದಲ್ಲಿ ನಿವೇಶನ ಮಂಜೂರು ಮಾಡಿದ್ದ ಬಿಬಿಎಂಪಿ, ಸ್ವಾಧೀನಕ್ಕೆ ನೀಡಿರಲಿಲ್ಲ. ಇದನ್ನು ಪ್ರಶ್ನಿಸಿ ರಾಜ್ಯ ಅಂಗವಿಕಲರ ಆಯುಕ್ತರ ಮುಂದೆ ಅರ್ಜುನ್‌ಸಾ ಅರ್ಜಿ ಸಲ್ಲಿಸಿದ್ದರು. ಆಯುಕ್ತರ ಆದೇಶವನ್ನು ಬಿಬಿಎಂಪಿ ಪಾಲಿಸಿರಲಿಲ್ಲ. ಬಳಿಕ ಅವರು ಹೈಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದ್ದರು. ಕೂಡಲೇ ನಿವೇಶನ ಹಸ್ತಾಂತರಿಸುವಂತೆ 2018ರಲ್ಲಿ ಹೈಕೋರ್ಟ್ ಆದೇಶಿಸಿತ್ತು.

ರೌಡಿ ಅರವಿಂದ್ ಹತ್ಯೆ; ಶ್ವಾನದಳದಿಂದ ತಪಾಸಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ರಾಜ್ಯ ಫುಟ್‌ಬಾಲ್ ಸಂಸ್ಥೆಯ (ಕೆಎಸ್‌ಎಫ್‌ಎ) ಕ್ರೀಡಾಂಗಣದಲ್ಲಿ ನಡೆದಿರುವ ರೌಡಿ ಅರವಿಂದ್ (27) ಹತ್ಯೆ ಪ್ರಕರಣದ ತನಿಖೆ ಚುರುಕುಗೊಳಿಸಿರುವ ಅಶೋಕನಗರ ಪೊಲೀಸರು, ಕೆಲವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿದ್ದಾರೆ.

ಕ್ರೀಡಾಂಗಣದ ಎದುರಿನಲ್ಲಿರುವ ಬಿಬಿಎಂಪಿ ಮೈದಾನದಲ್ಲಿ ಭಾನುವಾರ ಆಯೋಜಿಸಿದ್ದ ಫುಟ್‌ಬಾಲ್ ಪಂದ್ಯಾವಳಿಯಲ್ಲಿ ಭಾಗವಹಿಸಿದ್ದ ಅರವಿಂದ್ ಮೇಲೆ ನಾಲ್ವರು ದುಷ್ಕರ್ಮಿಗಳು ದಾಳಿ ಮಾಡಿದ್ದರು. ತಪ್ಪಿಸಿಕೊಂಡಿದ್ದ ಅರವಿಂದ್, ಕೆಎಸ್‌ಎಫ್‌ಎ ಕ್ರೀಡಾಂಗಣದೊಳಗೆ ಹೋಗಿದ್ದ. ಬೆನ್ನಟ್ಟಿದ್ದ ದುಷ್ಕರ್ಮಿಗಳು, ಕ್ರೀಡಾಂಗಣದ ಕೊಠಡಿಯಲ್ಲೇ ಆತನನ್ನು ಮಾರಕಾಸ್ತ್ರಗಳಿಂದ ಕೊಚ್ಚಿ ಹತ್ಯೆ ಮಾಡಿದ್ದರು.

ಘಟನಾ ಸ್ಥಳದಲ್ಲಿ ಶ್ವಾನದಳ ಸಿಬ್ಬಂದಿ ಸೋಮವಾರ ತಪಾಸಣೆ ನಡೆಸಿದರು. ಮೈದಾನ ಹಾಗೂ ಕ್ರೀಡಾಂಗಣದ ಹಲವೆಡೆ ಶ್ವಾನ ಓಡಾಡಿತು. ಅದನ್ನು ಪೊಲೀಸರು ಚಿತ್ರೀಕರಿಸಿಕೊಂಡರು.

'ಹಳೇ ವೈಷಮ್ಯದಿಂದಾಗಿ ಕೊಲೆ ನಡೆದಿರುವ ಅನುಮಾನವಿದೆ. ಆದರೆ, ಆರೋಪಿಗಳು ಯಾರು ಎಂಬುದಕ್ಕೆ ನಿಖರ ಪುರಾವೆಗಳು ಸಿಕ್ಕಿಲ್ಲ. ಕೆಲವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ' ಎಂದು ಪೊಲೀಸರು ಹೇಳಿದರು.

'ಘಟನಾ ಸ್ಥಳ ಹಾಗೂ ಸುತ್ತಮುತ್ತಲ ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾಗಿರುವ ದೃಶ್ಯಗಳನ್ನು ಸಂಗ್ರಹಿಸಲಾಗಿದೆ. ಆರೋಪಿಗಳು ಮಾರಕಾಸ್ತ್ರ ಹಿಡಿದು, ಅರವಿಂದ್‌ನನ್ನು ಬೆನ್ನಟ್ಟಿದ್ದ ದೃಶ್ಯ ಕ್ಯಾಮೆರಾದಲ್ಲಿ ಸೆರೆಯಾಗಿದೆ. ಆದರೆ, ಆರೋಪಿಗಳ ಮುಖ ಸ್ಪಷ್ಟವಾಗಿಲ್ಲ. ಅವರು ಯಾರು ಎಂಬುದನ್ನು ಪತ್ತೆ ಮಾಡಲಾಗುತ್ತಿದೆ' ಎಂದೂ ಪೊಲೀಸರು ತಿಳಿಸಿದರು.

ಅಪಾಯಕಾರಿ ಚಾಲನೆ ಉದ್ಯಮಿಗೆ ನೋಟಿಸ್

ಬೆಂಗಳೂರು: ಮರ್ಸಿಡಿಸ್ ಬೆನ್ಜ್ ಕಾರನ್ನು ಅಪಾಯಕಾರಿ ರೀತಿಯಲ್ಲಿ ಚಲಾಯಿಸಿದ್ದ ಪ್ರಕರಣದಲ್ಲಿ ಉದ್ಯಮಿ ಸಂಚಿತ್ ಶೆಟ್ಟಿ ಎಂಬುವರಿಗೆ ಸದಾಶಿವನಗರ ಸಂಚಾರ ಠಾಣೆ ಪೊಲೀಸರು ನೋಟಿಸ್ ನೀಡಿದ್ದಾರೆ.

ಠಾಣೆ ವ್ಯಾಪ್ತಿಯ ರಸ್ತೆಯಲ್ಲಿ ಸೆ. 11ರಂದು ರಾತ್ರಿ ಅಪಾಯಕಾರಿ ರೀತಿಯಲ್ಲಿ ಕಾರು ಚಲಾಯಿಸಲಾಗಿತ್ತು. ಕಾರಿನ ಸನ್ ರೂಫ್‌ನಲ್ಲಿ ನಿಂತುಕೊಂಡು ಕೂಗಾಡಿದ್ದ ಯುವಕರು, ಮೋಜು– ಮಸ್ತಿ ಮಾಡಿದ್ದರು. ಇದರ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿತ್ತು. ಅದನ್ನು ಆಧರಿಸಿ ಪೊಲೀಸರು ಸ್ವಯಂಪ್ರೇರಿತ ದೂರು ದಾಖಲಿಸಿಕೊಂಡಿದ್ದರು.

'ಅಪಘಾತ ಸಂಭವಿಸುವ ರೀತಿಯಲ್ಲಿ ಕಾರು ಚಲಾಯಿಸಲಾಗಿತ್ತು. ಸಾರ್ವಜನಿಕರ ಜೀವಕ್ಕೂ ಅಪಾಯ ಉಂಟಾಗುವ ಸಾಧ್ಯತೆ ಇತ್ತು. ಹೀಗಾಗಿ, ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ. ಉದ್ಯಮಿ ಸಂಚಿತ್ ಶೆಟ್ಟಿ ಹೆಸರಿನಲ್ಲಿ ಕಾರು ನೋಂದಣಿ ಆಗಿದೆ. ಪ್ರಕರಣ ದಾಖಲಾದ ಹಾಗೂ ಕಾರು ಜಪ್ತಿ ಮಾಡಿದ ಬಗ್ಗೆ ಉಲ್ಲೇಖಿಸಿ ಅವರಿಗೆ ನೋಟಿಸ್ ನೀಡಿ ವಿಚಾರಣೆಗೆ ಬರುವಂತೆ ಸೂಚಿಸಲಾಗಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಮೂರು ದಿನಗಳಲ್ಲಿ 1.87 ಲಕ್ಷ ಗಣೇಶ ವಿಸರ್ಜನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಸಾರ್ವಜನಿಕ ಗಣೇಶೋತ್ಸವವನ್ನು ಮೂರು ದಿನಗಳಿಗೆ ಸೀಮಿತವಾಗಿ ಮಾತ್ರ ಆಚರಿಸಬಹುದು ಎಂದು ಬಿಬಿಎಂಪಿಯು ಆದೇಶ ಮಾಡಿದ್ದರೂ, ಕೆಲವೆಡೆ ಅದರ ನಂತರವೂ ಗಣೇಶೋತ್ಸವ ಮುಂದುವರಿದಿದೆ.

ಸಾರ್ವಜನಿಕ ಗಣೇಶೋತ್ಸವಕ್ಕೆ ನಿರ್ಬಂಧ ಹೇರಬಾರದು ಎಂದು ಬೆಂಗಳೂರು ಮಹಾನಗರ ಗಣೇಶ ಉತ್ಸವ ಸಮಿತಿಯು ಪಾಲಿಕೆ ಕಚೇರಿ ಆವರಣದಲ್ಲಿ ಪ್ರತಿಭಟನೆ ನಡೆಸಿತ್ತು. ಸ್ಥಳೀಯ ಮಟ್ಟದ ಅಧಿಕಾರಿಗಳು ಸಾರ್ವಜನಿಕ ಗಣೇಶೋತ್ಸವಕ್ಕೆ ಐದು ದಿನ ಅವಕಾಶ ನೀಡುವ ಬಗ್ಗೆ ತೀರ್ಮಾನ ಕೈಗೊಳ್ಳಬಹುದು ಎಂದು ಬಿಬಿಎಂಪಿ ನಿಲುವು ಬದಲಾಯಿಸಿತ್ತು. ವಾರ್ಡ್‌ಗೆ ಒಂದೇ ಗಣೇಶ ಪ್ರತಿಷ್ಠಾಪನೆಗೆ ಅವಕಾಶ ನೀಡುವ ನಿರ್ಬಂಧವನ್ನೂ ಸಡಿಲಿಸಿತ್ತು.

ಗಣೇಶ ವಿಸರ್ಜನೆ: ವಲಯವಾರು ವಿವರ		
ವಲಯ	ಭಾನುವಾರ	ಒಟ್ಟು
ಪೂರ್ವ	24,725	47,158
ಪಶ್ಚಿಮ	20,283	55,407
ದಕ್ಷಿಣ	16,895	59,105
ದಾಸರಹಳ್ಳಿ	144	953
ಮಹದೇವಪುರ	2,419	6,183
ಬೊಮ್ಮನಹಳ್ಳಿ	1,653	4,503
ಯಲಹಂಕ	4,244	7,429
ಆರ್.ಆರ್.ನಗರ	1705	6,940

ನಗರದಲ್ಲಿ ಭಾನುವಾರ 72,068 ವಿಗ್ರಹಗಳನ್ನು ವಿಸರ್ಜಿಸಲಾಗಿದೆ. ಮೂರು ದಿನಗಳಲ್ಲಿ ಒಟ್ಟು 1.87 ಲಕ್ಷ ಗಣೇಶ ವಿಗ್ರಹಗಳನ್ನು ಬಿಬಿಎಂಪಿ ನಿರ್ಮಿಸಿದ ಕಲ್ಯಾಣಿಗಳಲ್ಲಿ ವಿಸರ್ಜನೆ ಮಾಡಲಾಗಿದೆ.

ಈ ಹಿಂದೆ 40ಕ್ಕೂ ಅಧಿಕ ಕೆರೆಗಳಲ್ಲಿ ಗಣೇಶ ವಿಸರ್ಜನೆಗೆ ಅನುಮತಿ ನೀಡಲಾಗುತ್ತಿತ್ತು. ಆದರೆ, ಈ ಬಾರಿ 12 ಕೆರೆಗಳ ಕಲ್ಯಾಣಿಗಳಲ್ಲಿ ಮಾತ್ರ ಸಾರ್ವಜನಿಕ ಗಣೇಶ ವಿಸರ್ಜನೆಗೆ ಅವಕಾಶ ಕಲ್ಪಿಸಲಾಗಿದೆ.

'ಈ ಹಿಂದಿನ ವರ್ಷಗಳಿಗೆ ಹೋಲಿಸಿದರೆ ಕೆರೆಯ ಕಲ್ಯಾಣಿಗಳಲ್ಲಿ ಗಣೇಶ ವಿಗ್ರಹಗಳ ವಿಸರ್ಜನೆ ಪ್ರಮಾಣ ತುಂಬಾ ಕಡಿಮೆ ಇದೆ. ಕೆರೆಗಳ ಮಾಲಿನ್ಯದ ಪ್ರಮಾಣವೂ ಕಡಿಮೆಯಾಗಿದೆಯೇ ಎಂಬ ಬಗ್ಗೆ ಇನ್ನೂ ವಿಶ್ಲೇಷಣೆ ನಡೆಸಿಲ್ಲ' ಎಂದು ಬಿಬಿಎಂಪಿ ವಿಶೇಷ ಆಯುಕ್ತ (ಆರೋಗ್ಯ) ಡಿ.ರಂದೀಪ್ ತಿಳಿಸಿದರು.

'ಬಹುತೇಕ ವಾರ್ಡ್‌ಗಳಲ್ಲಿ ಸಾರ್ವಜನಿಕ ಗಣೇಶೋತ್ಸವ ಭಾನುವಾರವೇ ಪೂರ್ಣಗೊಂಡಿದೆ. ಒಳಾಂಗಣದಲ್ಲಿ ಕೆಲವು ಕಡೆ 11 ದಿನಗಳವರೆಗೂ ಗಣೇಶೋತ್ಸವ ಆಚರಿಸಲಾಗುತ್ತಿದೆ. ಕೆಲವು ಸಮಿತಿಗಳು ಮೂರು ದಿನಗಳ ನಂತರವೂ ಗಣೇಶ ಪ್ರತಿಷ್ಠಾಪನೆ ನಡೆಸಿ ಉತ್ಸವ ಆಚರಿಸುತ್ತಿವೆ' ಎಂದು ಬೆಂಗಳೂರು ಮಹಾನಗರ ಗಣೇಶ ಉತ್ಸವ ಸಮಿತಿಯ ಪ್ರಧಾನ ಕಾರ್ಯದರ್ಶಿ ಪ್ರಕಾಶ ರಾಜು ತಿಳಿಸಿದರು.

ಯುವತಿ ಅಂಗಾಂಗ ಮುಟ್ಟಿ ಹಲ್ಲೆ

ಬೆಂಗಳೂರು: ಲ್ಯಾಂಗ್‌ಫೋರ್ಡ್ ರಸ್ತೆಯಲ್ಲಿ ನಡೆದುಕೊಂಡು ಹೊರಟಿದ್ದ ಯುವತಿಯೊಬ್ಬರ ಅಂಗಾಂಗಗಳನ್ನು ಮುಟ್ಟಿ ಹಲ್ಲೆ ಮಾಡಲಾಗಿದ್ದು, ಈ ಬಗ್ಗೆ ಅಶೋಕನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಶಾಂತಿನಗರದ ನಿವಾಸಿ 22 ವರ್ಷದ ಯುವತಿ ದೂರು ನೀಡಿದ್ದಾರೆ. ಅಪರಿಚಿತ ಯುವಕನ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದ್ದು, ಆತ ತಲೆಮರೆಸಿಕೊಂಡಿದ್ದಾನೆ' ಎಂದು ಪೊಲೀಸರು ಹೇಳಿದರು.

'ಜಯನಗರದ ಕಂಪನಿಯೊಂದರ ಉದ್ಯೋಗಿ ಆಗಿರುವ ಯುವತಿ, ಭಾನುವಾರ ಬೆಳಿಗ್ಗೆ 8.10ರ ಸುಮಾರಿಗೆ ಲ್ಯಾಂಗ್‌ಫೋರ್ಡ್ ರಸ್ತೆಯಲ್ಲಿ ನಡೆದುಕೊಂಡು ಹೊರಟಿದ್ದರು. ಅವರನ್ನು ಹಿಂಬಾಲಿಸಿದ್ದ ಯುವಕ, ತಬ್ಬಿಕೊಂಡು ಅಂಗಾಂಗಗಳನ್ನು ಮುಟ್ಟಿ ಲೈಂಗಿಕ ಕಿರುಕುಳ ನೀಡಿದ್ದ. ಅದನ್ನು ಪ್ರಶ್ನಿಸಿದ್ದಕ್ಕೆ, ಹಲ್ಲೆ ಮಾಡಿದ್ದ.'

'ಯುವತಿ ರಕ್ಷಣೆಗಾಗಿ ಕೂಗಾಡಿದ್ದರು. ಸ್ಥಳೀಯರು ಬರುತ್ತಿದ್ದಂತೆ ಆರೋಪಿ ಪರಾರಿಯಾಗಿದ್ದಾನೆ. ಘಟನಾ ಸ್ಥಳ ಸಮೀಪದ ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯಗಳನ್ನು ಸಂಗ್ರಹಿಸಿ ಪರಿಶೀಲಿಸಲಾಗುತ್ತಿದೆ' ಎಂದೂ ಪೊಲೀಸರು ತಿಳಿಸಿದರು.



ಗಂಗಾಧರ ಚೆಟ್ಟಿ ರಸ್ತೆ ಹಾಳಾಗಿರುವುದರಿಂದ ಈ ಮಾರ್ಗದಲ್ಲಿ ಸಾಗಲು ವಾಹನ ಸವಾರರು ಸಮಸ್ಯೆ ಎದುರಿಸುವ ಪರಿಸ್ಥಿತಿ ನಿರ್ಮಾಣವಾಗಿದೆ ಪ್ರಜಾವಾಣಿ ಚಿತ್ರ

ಕೆನಡಾದಲ್ಲಿ ಕೆಲಸದ ಆಮಿಷ; ₹ 18.41 ಲಕ್ಷ ವಂಚನೆ

ಬೆಂಗಳೂರು: ಕೆನಡಾದ ಟೊರಾಂಟೊ ಜನರಲ್ ಆಸ್ಪತ್ರೆಯಲ್ಲಿ ಕೆಲಸ ಕೊಡಿಸುವ ಆಮಿಷವೊಡ್ಡಿ ನಗರದ ಮಹಿಳೆಯೊಬ್ಬರಿಂದ ₹ 18.41 ಲಕ್ಷ ಪಡೆದು ವಂಚಿಸಲಾಗಿದೆ. ಈ ಬಗ್ಗೆ ಉತ್ತರ ವಿಭಾಗದ ಸೈಬರ್ ಕ್ರೈಂ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ರಾಜಾಜಿನಗರದ 8ನೇ ಅಡ್ಡರಸ್ತೆ ನಿವಾಸಿಯಾದ 44 ವರ್ಷದ ಮಹಿಳೆ ದೂರು ನೀಡಿದ್ದಾರೆ. ಅಪರಿಚಿತ ವ್ಯಕ್ತಿ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸರು ಹೇಳಿದರು.

'ಎಚ್‌ಡಿಎಫ್‌ಸಿ ಹಾಗೂ ಐಸಿಐಸಿಐ ಬ್ಯಾಂಕ್‌ನಲ್ಲಿ ಮಹಿಳೆ ಖಾತೆ ಹೊಂದಿದ್ದಾರೆ. ಅವರಿಗೆ ವಾಟ್ಸ್ ಆ್ಯಪ್‌ನಲ್ಲಿ ಸಂದೇಶ ಕಳುಹಿಸಿದ್ದ ಆರೋಪಿ, 'ನಾನು ಕೆನಡಾದ ಟೊರಾಂಟೊ ಜನರಲ್ ಆಸ್ಪತ್ರೆಯ ವ್ಯವಸ್ಥಾಪಕ. ನಮ್ಮ ಆಸ್ಪತ್ರೆಯಲ್ಲಿ ಕೆಲಸಗಳು ಖಾಲಿ ಇವೆ. ನೀವು ಒಪ್ಪಿದರೆ, ಕೆಲಸ ಕೊಡಿಸುತ್ತೇನೆ' ಎಂದಿದ್ದ' ಎಂದೂ ಪೊಲೀಸರು ತಿಳಿಸಿದ್ದಾರೆ.

ಸಂಗೀತ ವಿ.ವಿಯಲ್ಲಿ ಅಕ್ರಮ: ಮರು ತನಿಖೆಗೆ ರಾಜೀವ್ ತಾರಾನಾಥ್ ಆಗ್ರಹ

ಪ್ರಜಾವಾಣಿ ವಾರ್ತೆ

ಮೈಸೂರು: ಕರ್ನಾಟಕ ರಾಜ್ಯ ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯದಲ್ಲಿ ನಡೆದಿದೆ ಎನ್ನಲಾದ ಹಣ ದುರುಪಯೋಗ, ಆರ್ಥಿಕ ಅಶಿಸ್ತಿಗೆ ಸಂಬಂಧಿಸಿದಂತೆ ಮರು ತನಿಖೆ ನಡೆಸಬೇಕು ಎಂದು ಸರೋದ್ ವಾದಕ ಪಂಡಿತ್ ರಾಜೀವ್ ತಾರಾನಾಥ್ ಒತ್ತಾಯಿಸಿದ್ದಾರೆ.

'12 ವರ್ಷಗಳಲ್ಲಿ ವಿಶ್ವವಿದ್ಯಾಲಯಕ್ಕೆ ಬಂದ ಅನುದಾನವೆಷ್ಟು, ಖರ್ಚಾದ ಹಣ ಎಷ್ಟು ಎಂಬ ಮಾಹಿತಿ ಇಲ್ಲ. ಕುಲಸಚಿವರೂ ಸೇರಿದಂತೆ ಪ್ರಮುಖ ಸ್ಥಾನಗಳಿಗೆ ನೇಮಕಾತಿ ನಡೆದಿಲ್ಲ. ಯಾರನ್ನೋ ಕರೆದು ಅಧ್ಯಾಪಕರನ್ನಾಗಿ ನೇಮಕ ಮಾಡಲಾಗಿದೆ. ಸಂಬಳವೂ ಬೇಕಾಬಿಟ್ಟಿಯಾಗಿದೆ' ಎಂದು ಆರೋಪಿಸಿದ್ದಾರೆ.



ರಾಜೀವ್ ತಾರಾನಾಥ್

'ಕುಲಪತಿ ನಾಗೇಶ್ ವಿ.ಬೆಟ್ಟಕೋಟೆ ಅವರೇ ಹಲವು ಕಾಲ ಕುಲಸಚಿವ, ಪ್ರಭಾರ ಮೌಲ್ಯಮಾಪನ ಕುಲಸಚಿವ, ಪ್ರಭಾರ ಹಣಕಾಸು ಅಧಿಕಾರಿಯಾಗಿಯೂ ಏಕವ್ಯಕ್ತಿಯಿಂದ ಏಕ ತೀರ್ಮಾನದಂತೆ ಆಡಳಿತ ನಿರ್ವಹಿಸಿದ್ದಾರೆ' ಎಂದು ದೂರಿದ್ದಾರೆ.

'ಸಿಬ್ಬಂದಿಗೆ ನೋಟಿಸ್ ನೀಡಿ, ಭಯ ಉಂಟು ಮಾಡಿದ್ದಾರೆ. ನಿಯಮಾನುಸಾರ ಕರ್ತವ್ಯ ನಿರ್ವಹಿಸಲು ಬಿಡುತ್ತಿಲ್ಲ' ಎಂದು ಆರೋಪಿಸಿದ್ದಾರೆ.

'ಸಂಗೀತ ಮತ್ತು ಪ್ರದರ್ಶಕ ಕಲೆಗಳನ್ನು ಕಲಿಸಲು ಆರಂಭವಾದ ವಿಶ್ವವಿದ್ಯಾಲಯದಲ್ಲಿ ಪತ್ರಿಕೋದ್ಯಮ, ಪ್ರವಾಸೋದ್ಯಮ ಸೇರಿದಂತೆ ವಿವಿಧ ಕೋರ್ಸ್‌ಗಳನ್ನು ಆರಂಭಿಸಲು ನಿರ್ಧರಿಸಿರುವುದು ವಿಶ್ವವಿದ್ಯಾಲಯದ ಧ್ಯೇಯೋದ್ದೇಶಗಳನ್ನು ಗಾಳಿಗೆ ತೂರಿದಂತಾಗುತ್ತದೆ' ಎಂದಿದ್ದಾರೆ.

ಆಡಳಿತಾತ್ಮಕ ಹಾಗೂ ಶೈಕ್ಷಣಿಕ ಗುಣಮಟ್ಟದ ಚೇತರಿಕೆಗೆ ಉನ್ನತಮಟ್ಟದ ಸಮಿತಿಯ ಮಾರ್ಗದರ್ಶನದಲ್ಲಿ ವಿಶ್ವವಿದ್ಯಾಲಯವನ್ನು ಮುನ್ನಡೆಸಬೇಕು ಎಂದು ಸಲಹೆ ನೀಡಿದ್ದಾರೆ.

ಹಾದಿ ತಪ್ಪಿಸಲಾಗುತ್ತಿದೆ: 'ಆರೋಪಗಳೆಲ್ಲವೂ ಸತ್ಯಕ್ಕೆ ದೂರ. ಸರ್ಕಾರದ ಆದೇಶದನ್ವಯ ವೇತನ ಸ್ಥಗಿತಗೊಂಡಿರುವ ಕೆಲವು ನೌಕರರು ರಾಜೀವ್ ತಾರಾನಾಥ್ ಅವರಿಗೆ ಸುಳ್ಳು ಮಾಹಿತಿ ನೀಡಿದ್ದಾರೆ. ಹಣಕಾಸಿನ ದುರುಪಯೋಗ ನಡೆದಿಲ್ಲ. ಅಕಾಡೆಮಿಕ್ ಕೌನ್ಸಿಲ್ ಹಾಗೂ ಸಿಂಡಿಕೇಟ್ ಸಮಿತಿ ಇರುವಾಗ ಏಕತೀರ್ಮಾನ ಕೈಗೊಳ್ಳಲು ಸಾಧ್ಯವಿಲ್ಲ' ಎಂದು ಕುಲಪತಿ ನಾಗೇಶ್ ವಿ.ಬೆಟ್ಟಕೋಟೆ ಪ್ರತಿಕ್ರಿಯಿಸಿದರು.

'ರಾಷ್ಟ್ರೀಯ ಶಿಕ್ಷಣ ನೀತಿ ಅನ್ವಯವೇ ಹೊಸಕೋರ್ಸ್ ಆರಂಭಿಸಲು ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಲಾಗಿದೆ. ಎಲ್ಲವೂ ನಿಯಮಬದ್ಧವಾಗಿದೆ' ಎಂದು ಹೇಳಿದರು.

ಕೆಎಸ್‌ಆರ್ ರೈಲು ನಿಲ್ದಾಣದ ಹೊರಾಂಗಣದಲ್ಲಿ ತಲೆ ಎತ್ತಲಿವೆ 17 ಡೇರೆಗಳು • ಸಂಚಾರಕ್ಕೆ 25 ಅಡಿ ರಸ್ತೆ ಮಾತ್ರ

ರೈಲ್ ಆರ್ಕೇಡ್‌ನಿಂದ ಸಂಚಾರ ಸಮಸ್ಯೆ?

• ವಿಜಯಕುಮಾರ್ ಎಸ್.ಕೆ.

ಬೆಂಗಳೂರು: ಎಲ್ಲವೂ ಅಂದುಕೊಂಡಂತೆ ನಡೆದರೆ ನಗರದ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲು ನಿಲ್ದಾಣ ಹೊರಾಂಗಣದಲ್ಲಿ 'ರೈಲ್ ಆರ್ಕೇಡ್' ನಿರ್ಮಾಣವಾಗಲಿದೆ. 15 ಸಾವಿರಕ್ಕೂ ಹೆಚ್ಚು ಚದರ ಅಡಿ ಜಾಗದಲ್ಲಿ ತಲೆ ಎತ್ತಲಿರುವ ಈ ಆರ್ಕೇಡ್ ವಾಹನ ಮತ್ತು ಪ್ರಯಾಣಿಕರ ಸಂಚಾರಕ್ಕೆ ಅಡಚಣೆ ಉಂಟುಮಾಡುವ ಆತಂಕ ವ್ಯಕ್ತವಾಗಿದೆ.

ರೈಲು ನಿಲ್ದಾಣ ನಿರ್ವಹಣೆ ಹೊಣೆ ಹೊತ್ತಿರುವ ಭಾರತೀಯ ರೈಲು ನಿಲ್ದಾಣಗಳ ಅಭಿವೃದ್ಧಿ ನಿಗಮವೇ (ಐಆರ್‌ಎಸ್‌ಡಿಸಿ) ಈ ಆರ್ಕೇಡ್ ಅನ್ನು ನಿರ್ಮಾಣ ಮಾಡಲಿದೆ. ಅದರ ಟೆಂಡರ್ ಪ್ರಕ್ರಿಯೆಯನ್ನೂ ನಿಗಮ ಆರಂಭಿಸಿದೆ. ಟೆಂಡರ್ ದಾಖಲೆಗಳ ಪ್ರಕಾರ 17 ಡೇರೆ ರೂಪದ ಮಳಿಗೆಗಳು (ರೆಸ್ಟೋರೆಂಟ್‌ಗಳು, ಕರಕುಶಲ ವಸ್ತುಗಳ ಮಳಿಗೆಗಳು, ಉಡುಗೊರೆ ಅಂಗಡಿಗಳು ಸೇರಿದಂತೆ ವಿವಿಧ ಮಳಿಗೆಗಳು ಹಾಗೂ ವಿಶ್ರಾಂತಿ ಕೊಠಡಿಗಳು) ನಿರ್ಮಾಣವಾಗಲಿವೆ.

'ಎ' ವಲಯದಲ್ಲಿ (ನಿರ್ಗಮನ ರಸ್ತೆ ಕಡೆಗೆ) 8,614 ಚದರ ಅಡಿ ವಿಸ್ತೀರ್ಣದಲ್ಲಿ 10 ಮಳಿಗೆಗಳು, 'ಬಿ' ವಲಯದಲ್ಲಿ (ನಿಲ್ದಾಣ ಪ್ರವೇಶದ್ವಾರದ ಕಡೆ) 6,936 ಚದರ ಅಡಿ ವಿಸ್ತೀರ್ಣದಲ್ಲಿ 7 ಮಳಿಗೆಗಳನ್ನು ನಿರ್ಮಿಸುವ ಉದ್ದೇಶವನ್ನು ಐಆರ್‌ಎಸ್‌ಡಿಸಿ ಹೊಂದಿದೆ.


ರೈಲ್ ಆರ್ಕೆಡ್ ನೀಲನಕ್ಷೆ

ಪ್ರಜಾವಾಣಿ ವಿಶೇಷ

ಟೆಂಡರ್ ಕರೆದು ಅಷ್ಟೂ ಜಾಗವನ್ನು 9 ವರ್ಷಗಳ ಅವಧಿಗೆ ಗುತ್ತಿಗೆ ನೀಡಲು ಐಆರ್‌ಎಸ್‌ಡಿಸಿ ಉದ್ದೇಶಿಸಿದೆ. ನಗರದ ಕೇಂದ್ರ ಭಾಗದಲ್ಲಿ ನಿರ್ಮಾಣವಾಗುವ ಈ ಆರ್ಕೇಡ್‌ನಿಂದ ಪ್ರಯಾಣಿಕರು ಮತ್ತು ಇತರ ಗ್ರಾಹಕರಿಗೆ ಪ್ರಯೋಜನವಾಗಲಿದೆ. ರೈಲ್ವೆ ಇಲಾಖೆಗೂ ವರಮಾನ ಬರಲಿದೆ ಎಂಬುದು ನಿಗಮದ ಅಭಿಪ್ರಾಯ.

'ಆದರೆ, ಇದರಿಂದ ಪ್ರಯಾಣಿಕರ ಓಡಾಟಕ್ಕೆ ಮತ್ತು ಅವರನ್ನು ಕರೆ ತರುವ ವಾಹನಗಳ ಸಂಚಾರಕ್ಕೆ ತೊಡಕಾಗಲಿದೆ. ವಾಹನಗಳ ನಿರ್ಗಮನಕ್ಕೆ 25 ಅಡಿ ರಸ್ತೆಯನ್ನಷ್ಟೇ ಉಳಿಸಲಾಗಿದೆ. ಅದಕ್ಕೂ ಅಂಗಡಿ ಮುಂಗಟ್ಟುಗಳು ಚಾಚಿಕೊಳ್ಳುವ ಸಾಧ್ಯತೆ ಇದೆ. ಇದು ಸಂಚಾರ ಸಮಸ್ಯೆ ತಂದೊಡ್ಡುವುದರಲ್ಲಿ ಅನುಮಾನವೇ ಇಲ್ಲ' ಎಂದು ರೈಲ್ವೆ ಹೋರಾಟಗಾರ ಸಂಜೀವ್ ದ್ಯಾಮಣ್ಣನವರ್ ಕಳವಳ ವ್ಯಕ್ತಪಡಿಸಿದರು.

'ಕೋವಿಡ್ ಸಂದರ್ಭದಲ್ಲಿ ವಾಹನಗಳ ಮತ್ತು ಪ್ರಯಾಣಿಕರ ದಟ್ಟಣೆ ಇಲ್ಲದಾಗಿನ ಪರಿಸ್ಥಿತಿ ನೋಡಿಕೊಂಡು ಈ ಯೋಜನೆ ರೂಪಿಸಿದಂತಿದೆ. ಹಬ್ಬದ ಸಂದರ್ಭದಲ್ಲಿ ಈಗಿರುವ ಜಾಗದಲ್ಲೂ ದಟ್ಟಣೆ ಉಂಟಾಗುತ್ತಿದೆ. ಆವರಣವನ್ನು ಇನ್ನಷ್ಟು ವಿಸ್ತರಿಸುವ ಅಗತ್ಯ ಇದೆ. ಕನಿಷ್ಠ 60 ಅಡಿ ರಸ್ತೆಯನ್ನು ಇಲ್ಲಿ ನಿರ್ಮಿಸಬೇಕಾಗುತ್ತದೆ. ಆದರೆ, ಈಗಿರುವ ರಸ್ತೆಯನ್ನೂ ಕಿರಿದಾಗಿಸುವುದು ಸಮಂಜಸವಲ್ಲ' ಎಂದರು.

'ವಾಹನ ನಿಲುಗಡೆಗೆ ಇರುವ ಜಾಗವನ್ನು ಹಾಗೆಯೇ ಉಳಿಸಿ ಅದರ ಮೇಲೆ ಪಿಲ್ಲರ್‌ಗಳನ್ನು ನಿರ್ಮಿಸಿ ವಾಣಿಜ್ಯ ಉದ್ದೇಶಕ್ಕೆ ಬಳಕೆ ಮಾಡಿಕೊಳ್ಳಬಹುದಿತ್ತು. ಅದನ್ನು ಬಿಟ್ಟು ಇರುವ ಜಾಗ ಹಾಳು ಮಾಡುತ್ತಿರುವುದು ಸರಿಯಲ್ಲ' ಎಂದರು.

ಅಂಕಿ-ಅಂಶಗಳು

15,550 ಚದರ ಅಡಿ
ಆರ್ಕೇಡ್ ನಿರ್ಮಾಣಕ್ಕೆ ಬಳಸಲು ಉದ್ದೇಶಿಸಿರುವ ಜಾಗ

17
ನಿರ್ಮಾಣ ಆಗಲಿರುವ ಒಟ್ಟು ಮಳಿಗೆಗಳು

9 ವರ್ಷ
ಆರ್ಕೇಡ್ ನಡೆಸಲು ಕಂಪನಿಗೆ ನೀಡುವ ಗುತ್ತಿಗೆ ಅವಧಿ

ಆರ್ಕೇಡ್ ನಿರ್ಮಿಸುತ್ತಿರುವುದು ಒಳ್ಳೆಯದು. ಪ್ರಯಾಣಿಕರಿಗೂ ಅನುಕೂಲ ಆಗಲಿದೆ. ಆದರೆ, ಇದರಿಂದ ಪ್ರಯಾಣಿಕರ ಸಂಚಾರಕ್ಕೆ ಯಾವುದೇ ತೊಡಕಾಗಬಾರದು
ರಾಜಕುಮಾರ್ ದುಗಾರ್
ರೈಲ್ವೆ ಹೋರಾಟಗಾರ

'ಕಿಷ್ಕಿಂದೆ ಆಗಲಿದೆ ರೈಲು ನಿಲ್ದಾಣದ ಆವರಣ'

'ಕೆಎಸ್‌ಆರ್ ರೈಲು ನಿಲ್ದಾಣದಲ್ಲಿ ಈಗ ಕಡಿಮೆ ಜಾಗ ಇದೆ. ರೈಲು ಪ್ರಯಾಣಿಕರಲ್ಲದವರೂ ಆರ್ಕೇಡ್‌ಗೆ ಬಂದು ಹೋಗಲು ಅವಕಾಶ ಕಲ್ಪಿಸಲಾಗುತ್ತಿದೆ. ರೈಲು ನಿಲ್ದಾಣ ಆವರಣವನ್ನು ಕಿಷ್ಕಿಂದೆ ಮಾಡಲು ಹೊರಟಂತಿದೆ' ಎಂದು ರೈಲ್ವೆ ಹೋರಾಟಗಾರ ಕೃಷ್ಣಪ್ರಸಾದ್ ಟೀಕಿಸಿದರು.

'ಕೋವಿಡ್ ಪೂರ್ವದಲ್ಲಿ ರೈಲು ನಿಲ್ದಾಣದ ಆವರಣ ಸದಾ ಗಿಜಿಗುಡುತ್ತಿತ್ತು. ಆರ್ಕೇಡ್ ನಿರ್ಮಾಣವಾದರೆ ಪ್ರಯಾಣಿಕರ ಸಂಚಾರವೇ ಕಷ್ಟವಾಗಲಿದೆ. ಕೊನೆ ಗಳಿಗೆಯಲ್ಲಿ ಓಡಿ ಬರುವ ಪ್ರಯಾಣಿಕರಂತೂ ರೈಲು ಹತ್ತಲು ಸಾಧ್ಯವೇ ಇಲ್ಲದಂತಾಗಲಿದೆ' ಎಂದರು.

'ರೈಲು ನಿಲ್ದಾಣದಲ್ಲಿ ಪ್ರಯಾಣಿಕರಿಗೆ ಆದ್ಯತೆ ಇರಬೇಕು. ವಾಹನ ನಿಲುಗಡೆಗೆ ಕಡಿಮೆ ದರದ ವ್ಯವಸ್ಥೆ ಇರಬೇಕು. ಟಿಕೆಟ್ ಪಡೆಯಲು ಬರುವವರಿಗೆ ವಿಶಾಲವಾದ ಜಾಗ ಇರಬೇಕು. ಇರುವ ಜಾಗವನ್ನೂ ಕಿರಿದು ಮಾಡುವುದರಿಂದ ಪ್ರಯಾಣಿಕರಿಗೆ ಕಿರಿಕಿರಿ ಆಗಲಿದೆ. ಹಿರಿಯ ನಾಗರಿಕರು, ಅಂಗವಿಕಲರು ರೈಲು ನಿಲ್ದಾಣ ಪ್ರವೇಶಿಸುವುದೇ ಕಷ್ಟವಾಗಲಿದೆ' ಎಂದು ಅವರು ಹೇಳಿದರು.

ಬಿಎಸ್‌ವೈ ಕುಟುಂಬದ ವಿರುದ್ಧ ಎಸಿಬಿಗೆ ದೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಕುಟುಂಬದ ಸದಸ್ಯರ ಒಡೆತನದ ಧವಳಗಿರಿ ಡೆವಲಪರ್ಸ್ ಕಂಪನಿ ಸಾರ್ವಜನಿಕ ಉದ್ದೇಶಕ್ಕೆ ಮೀಸಲಿರಿಸಿದ್ದ ರಸ್ತೆ ಹಾಗೂ ಅಸ್ತಿತ್ವದಲ್ಲೇ ಇಲ್ಲದ ಜಮೀನುಗಳನ್ನು ಖರೀದಿಸಿದಂತೆ ದಾಖಲೆ ಸೃಷ್ಟಿಸಿ ಬೆಂಗಳೂರು ಮೆಟ್ರೊ ರೈಲು ನಿಗಮದಿಂದ ₹ 22.92 ಕೋಟಿ ಪರಿಹಾರ ಪಡೆದು ವಂಚಿಸಿದೆ ಎಂದು ಆರೋಪಿಸಿ ವಕೀಲ ಟಿ.ಜೆ. ಅಬ್ರಹಾಂ ಭ್ರಷ್ಟಾಚಾರ ನಿಗ್ರಹ ದಳಕ್ಕೆ (ಎಸಿಬಿ) ದೂರು ನೀಡಿದ್ದಾರೆ.

ಬಿ.ಎಸ್. ಯಡಿಯೂರಪ್ಪ, ಅವರ ಮಕ್ಕಳಾದ ಬಿ.ವೈ. ವಿಜಯೇಂದ್ರ, ಬಿ.ವೈ. ರಾಘವೇಂದ್ರ, ಅಳಿಯ ಆರ್.ಎನ್. ಸೋಹನ್ ಕುಮಾರ್ ಮತ್ತು ಕೆ. ಹೊನ್ನಪ್ಪ ನಿಶಿತ್ ಎಂಬುವವರ ವಿರುದ್ಧ ಭ್ರಷ್ಟಾಚಾರ ನಿಯಂತ್ರಣ ಕಾಯ್ದೆ ಅಡಿಯಲ್ಲಿ ಎಫ್‌ಐಆರ್ ದಾಖಲಿಸಿ ತನಿಖೆ ನಡೆಸುವಂತೆ ಎಸಿಬಿಗೆ ಸೆಪ್ಟೆಂಬರ್ 9ರಂದು ಸಲ್ಲಿಸಿರುವ ದೂರಿನಲ್ಲಿ ಮನವಿ ಮಾಡಿದ್ದಾರೆ.

'ಬಶೀರ್ ಎಂಬುವವರು ವೈಯಾಲಿಕಾವಲ್ ಗೃಹ ನಿರ್ಮಾಣ ಸಹಕಾರ ಸಂಘದಿಂದ ಪಡೆದಿದ್ದ ನಿವೇಶನದ ಪಕ್ಕದಲ್ಲಿದ್ದ ರಸ್ತೆಯನ್ನೂ ತಮ್ಮ ನಿವೇಶನದ ಜತೆ ವಿಲೀನ ಮಾಡುವಂತೆ ಕೋರಿ ಸಲ್ಲಿಸಿದ್ದ ಅರ್ಜಿಯನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಮೂರು ಬಾರಿ ತಿರಸ್ಕರಿಸಿತ್ತು. ಆದರೆ, ಅದನ್ನು ವಿಲೀನಗೊಳಿಸಿ ಯಡಿಯೂರಪ್ಪ ಅವರು ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಆದೇಶ ಹೊರಡಿಸಿದ್ದರು. ರಸ್ತೆಯೂ ಸೇರಿದಂತೆ 13.1 ಗುಂಟೆ ಜಮೀನನ್ನು ಬಶೀರ್ ಬಳಿ ಶೇಖರಪ್ಪ ಎಂಬುವವರು ಖರೀದಿಸಿ, ಬಳಿಕ ಧವಳಗಿರಿ ಡೆವಲಪರ್ಸ್‌ಗೆ ಮಾರಿದ್ದರು' ಎಂಬ ಆರೋಪ ದೂರಿನಲ್ಲಿದೆ.

'ನಾಗವಾರ ಹೋಬಳಿಯಲ್ಲಿನ ಆ 13.1 ಗುಂಟೆಯ ಜತೆಗೆ ಚೆಂಗಪ್ಪ ಮತ್ತು ಕಮಲ್ ಪಾಶಾ ಎಂಬುವವರು 100 ಸರ್ವೆ ನಂಬರ್‌ಗಳನ್ನು ಉಲ್ಲೇಖಿಸಿ 25,000 ಚದರ ಅಡಿ ಜಮೀನನ್ನು ಧವಳಗಿರಿ ಡೆವಲಪರ್ಸ್‌ಗೆ ಮಾರಿದ್ದರು. ಒಂದೇ ಕ್ರಯಪತ್ರದಲ್ಲಿ ಈ ವಹಿವಾಟು ನಡೆದಿದೆ. ವಾಸ್ತವದಲ್ಲಿ 100 ಸರ್ವೆ ನಂಬರ್‌ಗಳಲ್ಲಿ ಈ ಜಮೀನು ಇರಲೇ ಇಲ್ಲ. ಆದರೆ, ಈ ಎಲ್ಲವನ್ನೂ ಮೆಟ್ರೊ ಯೋಜನೆಗೆ ಸ್ವಾಧೀನಪಡಿಸಿಕೊಳ್ಳಲಾಗಿದೆ ಎಂಬಂತೆ ದಾಖಲೆ ಸೃಷ್ಟಿಸಿ, ಧವಳಗಿರಿ ಡೆವಲಪರ್ಸ್ ₹ 22.92 ಕೋಟಿ ಪರಿಹಾರ ಪಡೆದಿದೆ' ಎಂದು ಆರೋಪಿಸಿದ್ದಾರೆ.

'ಎನ್‌ಇಪಿ ಸಂವಿಧಾನ ವಿರೋಧಿ'

ಶಿಕ್ಷಣ ತಜ್ಞರು, ಸಾಹಿತಿಗಳು, ಹೋರಾಟಗಾರರ ಅಭಿಮತ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೇಂದ್ರ ಸರ್ಕಾರವು ರೂಪಿಸಿರುವ ನೂತನ ಶಿಕ್ಷಣ ನೀತಿ (ಎನ್‌ಇಪಿ) ಸಂವಿಧಾನ ವಿರೋಧಿಯಾಗಿದೆ. ವಿಧಾನಮಂಡಲದಲ್ಲಿ ಚರ್ಚಿಸದೇ ಈ ನೀತಿಯನ್ನು ರಾಜ್ಯದಲ್ಲಿ ಅನುಷ್ಠಾನಕ್ಕೆ ತರದಂತೆ ಸಂಘಟಿತ ಹೋರಾಟ ನಡೆಸಬೇಕು' ಎಂಬ ಅಭಿಪ್ರಾಯ ಸಮುದಾಯ–ಕರ್ನಾಟಕದ ನೇತೃತ್ವದಲ್ಲಿ ಸೋಮವಾರ ನಡೆದ ಸಮಾಲೋಚನಾ ಸಭೆಯಲ್ಲಿ ವ್ಯಕ್ತವಾಯಿತು.

ಭಾರತೀಯ ಜ್ಞಾನ ವಿಜ್ಞಾನ ಸಮಿತಿ, ವಿವಿಧ ವಿದ್ಯಾರ್ಥಿ ಮತ್ತು ದಲಿತ ಸಂಘಟನೆಗಳ ಸಹಭಾಗಿತ್ವದಲ್ಲಿ ನಗರದ ಗಾಂಧಿಭವನದಲ್ಲಿ ಸೋಮವಾರ ನಡೆದ ಸಭೆಯಲ್ಲಿ ಶಿಕ್ಷಣ ತಜ್ಞರು, ಸಾಹಿತಿಗಳು, ಹೋರಾಟಗಾರರು ಮತ್ತು ವಿದ್ಯಾರ್ಥಿ ಮುಖಂಡರು ಪಾಲ್ಗೊಂಡಿದ್ದರು. ಎನ್‌ಇಪಿ ಕುರಿತು ತೀವ್ರ ಕಳವಳ ವ್ಯಕ್ತಪಡಿಸಿದ ಎಲ್ಲರೂ, ರಾಜ್ಯದಲ್ಲಿ ಹೊಸ ನೀತಿಯ ಅನುಷ್ಠಾನಕ್ಕೆ ಹೊರಡಿಸಿರುವ ಆದೇಶ ಹಿಂಪಡೆಯುವಂತೆ ಒತ್ತಾಯಿಸಿ ಹೋರಾಟ ನಡೆಸುವ ಇಂಗಿತ ವ್ಯಕ್ತಪಡಿಸಿದರು.

ಸಾಹಿತಿ ಪ್ರೊ.ಎಸ್.ಜಿ.ಸಿದ್ದರಾಮಯ್ಯ ಮಾತನಾಡಿ, 'ಕೇಂದ್ರ ಸರ್ಕಾರವು ಸಂವಿಧಾನವನ್ನು ಗಾಳಿಗೆ ತೂರಿಕೊಂಡು ಆಡಳಿತ ನಡೆಸುತ್ತಿರುವುದಕ್ಕೆ ಎನ್‌ಇಪಿ ಸಾಕ್ಷಿ. ಸಂವಿಧಾನಕ್ಕೆ ವಿರುದ್ಧವಾಗಿರುವ ಈ ನೀತಿಯ ಅನುಷ್ಠಾನಕ್ಕೆ ರಾಜ್ಯದಲ್ಲಿ ಅವಕಾಶ ನೀಡಬಾರದು' ಎಂದರು.

ರಾಜ್ಯಸಭಾ ಸದಸ್ಯ ಡಾ.ಎಲ್. ಹನುಮಂತಯ್ಯ, 'ಶಿಕ್ಷಣ ಸಮವರ್ತಿ ಪಟ್ಟಿಯಲ್ಲಿದೆ. ಈ ವಿಷಯದಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ಸಮಾನ ಅಧಿಕಾರವಿದೆ. ಆದರೆ, ಎನ್‌ಇಪಿ ಮೂಲಕ ಕೇಂದ್ರ ಸರ್ಕಾರವು ರಾಜ್ಯದ ಅಧಿಕಾರವನ್ನು ಆಕ್ರಮಿಸಿಕೊಳ್ಳುತ್ತಿದೆ' ಎಂದು ಹೇಳಿದರು.


ಗಾಂಧಿ ಭವನದಲ್ಲಿ ಎನ್‌ಇಪಿ ಕುರಿತು ಸೋಮವಾರ ನಡೆದ ಸಮಾಲೋಚನಾ ಸಭೆಯಲ್ಲಿ ಸಾಹಿತಿ ಪ್ರೊ.ಎಸ್‌.ಜಿ. ಸಿದ್ದರಾಮಯ್ಯ ಮಾತನಾಡಿದರು. ದಲಿತ ಸಂಘರ್ಷ ಸಮಿತಿ ಮುಖಂಡ ಮಾವಳ್ಳಿ ಶಂಕರ್, ರಾಜ್ಯಸಭಾ ಸದಸ್ಯ ಡಾ.ಎಲ್. ಹನುಮಂತಯ್ಯ, ಶಿಕ್ಷಣ ತಜ್ಞ ಡಾ.ಪಿ.ವಿ. ನಿರಂಜನಾರಾಧ್ಯ ಮತ್ತು ಸಾಹಿತಿ ಡಾ. ವಸುಂಧರಾ ಭೂಪತಿ ಇದ್ದರು – ಪ್ರಜಾವಾಣಿ ಚಿತ್ರ

ಹೊಸ ಶಿಕ್ಷಣ ನೀತಿಯಲ್ಲಿ ವರ್ಣಾಶ್ರಮ ವ್ಯವಸ್ಥೆಯನ್ನು ಸ್ಥಿರೀಕರಿಸುವ ಪ್ರಯತ್ನ ಅಡಗಿದೆ. ಆದರೆ, ಅದನ್ನೇ 21ನೇ ಶತಮಾನದ ಶಿಕ್ಷಣ ನೀತಿ ಎಂದು ನಂಬಿಸಲಾಗುತ್ತಿದೆ. ಈ ಬಗ್ಗೆ ಜನರು ಎಚ್ಚೆತ್ತುಕೊಂಡು ಹೋರಾಟ ನಡೆಸಬೇಕಿದೆ ಎಂದರು.

ಶಿಕ್ಷಣ ತಜ್ಞ ಡಾ.ಪಿ.ವಿ. ನಿರಂಜನಾರಾಧ್ಯ ಅವರು ಹಿಂದಿನ ಮತ್ತು ಹೊಸ ಶಿಕ್ಷಣ ನೀತಿಗಳ ಕುರಿತು ವಿಶ್ಲೇಷಣೆ ಮಂಡಿಸಿದರು. ಎನ್‌ಇಪಿ ವಿರುದ್ಧ ಹೋರಾಟ ಆರಂಭಿಸಿರುವ ಎಲ್ಲರನ್ನೂ ಒಂದೇ ವೇದಿಕೆಗೆ ತರುವ ಪ್ರಯತ್ನ ಮಾಡಲು ಸಭೆಯಲ್ಲಿ ತೀರ್ಮಾನಿಸಲಾಯಿತು.

ಲೇಖಕಿ ಡಾ. ವಸುಂಧರಾ ಭೂಪತಿ, ಶಿಕ್ಷಣ ತಜ್ಞ ಬಿ. ಶ್ರೀಪಾದ ಭಟ್, ದಲಿತ ಸಂಘಟನೆಗಳ ಮುಖಂಡರಾದ ಮಾವಳ್ಳಿ ಶಂಕರ್, ಬಿ. ರಾಜಶೇಖರ ಮೂರ್ತಿ, ಮೋಹನ್ ರಾಜ್, ಜಿಗಣಿ ಶಂಕರ್, ಎನ್. ವೆಂಕಟೇಶ್, ಎಸ್‌ಎಫ್‌ಐ ರಾಜ್ಯ ಘಟಕದ ಅಧ್ಯಕ್ಷ ಅಮರೇಶ್ ಕಡಗದ, ಕರ್ನಾಟಕ ವಿದ್ಯಾರ್ಥಿ ಸಂಘಟನೆ ಮುಖಂಡ ಸರೋವರ್ ಬೆಂಕಿಕೆರೆ, ವಿದ್ಯಾರ್ಥಿ ಜನತಾ ದಳದ ಹರಿಪ್ರಸಾದ್, ಕರ್ನಾಟಕ ರಾಷ್ಟ್ರ ಸಮಿತಿಯ ಅಮರೇಶ್ ವಿ., ಸಮುದಾಯ ಕರ್ನಾಟಕದ ಉಪಾಧ್ಯಕ್ಷ ಟಿ. ಸುರೇಂದ್ರ ರಾವ್ ಮತ್ತು ಸಹ ಕಾರ್ಯದರ್ಶಿ ವಿಮಲಾ ಕೆ.ಎಸ್. ಪಾಲ್ಗೊಂಡಿದ್ದರು.

ಕೋವಿಡ್ ಅಂಕಿ–ಅಂಶ
ಆಧಾರ: ಕೋವಿಡ್19 ಇಂಡಿಯಾ, ಒಆರ್‌ಜಿ

	ವಿಶ್ವ	ಭಾರತ
ಒಟ್ಟು ಪ್ರಕರಣ	22.57 ಕೋಟಿ ▲	3.32 ಕೋಟಿ
ಸಕ್ರಿಯ ಪ್ರಕರಣ	1.86 ಕೋಟಿ ▲	3.55 ಲಕ್ಷ ▼
ಗುಣಮುಖ	20.24 ಕೋಟಿ ▲	3.24 ಕೋಟಿ ▲
ಸಾವು	46.48 ಲಕ್ಷ ▲	4.43 ಲಕ್ಷ ▲

ದಿನದ ಮಾಹಿತಿ

	ವಿಶ್ವ	ಭಾರತ
ಹೊಸ ಪ್ರಕರಣ	3.81 ಲಕ್ಷ ▼	24,404 ▼
ಗುಣಮುಖ	4.08 ಲಕ್ಷ ▼	39,795 ▼
ಸಾವು	6,112 ▼	340 ▲

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ)
35,450 ▲ ಅಮೆರಿಕ; 28,992 ▼ ಬ್ರಿಟನ್; 21,352 ▼ ಟರ್ಕಿ

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು (ಲಕ್ಷಗಳಲ್ಲಿ)
93.03 ▲ ಅಮೆರಿಕ; 13.02 ▲ ಬ್ರಿಟನ್; 6.13 ▼ ಇರಾನ್
(*ರಾತ್ರಿ 12 ಗಂಟೆಯ ವರೆಗಿನ ಮಾಹಿತಿ)

ಎಲ್ಲಿ ಹೆಚ್ಚು ಸಾವು (ಒಟ್ಟು)
1.38 ಲಕ್ಷ ಮಹಾರಾಷ್ಟ್ರ; 35,190 ▲ ತಮಿಳುನಾಡು; 25,083 ದೆಹಲಿ

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ)
65.00 ಮಹಾರಾಷ್ಟ್ರ ▲; 43.90 ಕೇರಳ ▲; 26.35 ತಮಿಳುನಾಡು ▲

ಬೆಂಗಳೂರು ನಗರ ಜಿಲ್ಲಾ ಕೋವಿಡ್ ಅಂಕಿ–ಅಂಶ
12,41,639 ▲ ಒಟ್ಟು ಸೋಂಕಿತರು

ಸಕ್ರಿಯ ಪ್ರಕರಣ	ಗುಣಮುಖ ಆದವರು	ಒಟ್ಟು ಸಾವು
7,211 ▼	12,18,371 ▲	16,056 ▲

ದಿನದ ಏರಿಕೆ

ಹೊಸ ಪ್ರಕರಣ	214 ▼
ಗುಣಮುಖ	371 ▲
ಸಾವು	3 ▼

ಆಧಾರ: ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಜೆಇಇ (ಅಡ್ವಾನ್ಸ್ಡ್) ಮುಂದೂಡಿಕೆ

ನವದೆಹಲಿ (ಪಿಟಿಐ): ಜೆಇಇ ಮೇನ್ಸ್ ಫಲಿತಾಂಶ ವಿಳಂಬವಾಗಿರುವ ಕಾರಣ ಜೆಇಇ (ಅಡ್ವಾನ್ಸ್ಡ್) ನೋಂದಣಿಯನ್ನು ಮತ್ತೆ ಮುಂದೂಡಲಾಗಿದೆ.

ನೋಂದಣಿ ಪ್ರಕ್ರಿಯೆ ಕಳೆದ ವಾರವೇ ಆರಂಭವಾಗಬೇಕಿತ್ತು. ಫಲಿತಾಂಶ ವಿಳಂಬವಾದ ಕಾರಣ ಸೋಮವಾರಕ್ಕೆ ಮುಂದೂಡಲಾಗಿತ್ತು. ಸೋಮವಾರವೂ ನೋಂದಣಿ ಆರಂಭಗೊಂಡಿಲ್ಲ.

ಪ್ರತಿ ಗುರುವಾರ ಶಾಸಕರ ಭೇಟಿ • ಅಧಿವೇಶನದ ವೇಳೆ ಪ್ರತಿ ಮಂಗಳವಾರ ಶಾಸಕಾಂಗ ಪಕ್ಷದ ಸಭೆ

ಶಾಸಕಾಂಗ ಸಭೆ: ಬಿಜೆಪಿ ಶಾಸಕರಲ್ಲಿ ಹುರುಪು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇನ್ನು ಮುಂದೆ ಪ್ರತಿ ಗುರುವಾರ ಬಿಜೆಪಿ ಶಾಸಕರನ್ನು ವೈಯಕ್ತಿಕವಾಗಿ ಮತ್ತು ಗುಂಪಿನಲ್ಲಿ ಭೇಟಿಯಾಗುವುದರ ಜತೆಗೆ ಅಧಿವೇಶನ ನಡೆಸುವ ಸಂದರ್ಭದಲ್ಲಿ ಪ್ರತಿ ಮಂಗಳವಾರ ಶಾಸಕಾಂಗ ಪಕ್ಷದ ಸಭೆ ನಡೆಸಲು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತೀರ್ಮಾನಿಸಿದ್ದಾರೆ.

ಸೋಮವಾರ ರಾತ್ರಿ ನಡೆದ ಬಿಜೆಪಿ ಶಾಸಕಾಂಗ ಪಕ್ಷದ ಸಭೆಯಲ್ಲಿ ಈ ತೀರ್ಮಾನ ತೆಗೆದುಕೊಳ್ಳಲಾಗಿದೆ ಎಂದು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಜೆ.ಸಿ.ಮಾಧುಸ್ವಾಮಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಸಾಕಷ್ಟು ಶಾಸಕರಿಗೆ ಅವರದ್ದೇ ಆದ ಸಮಸ್ಯೆಗಳು ಇರುತ್ತವೆ. ಅದನ್ನು ಕೇಳಿಸಿಕೊಂಡು ಪರಿಹಾರ ಕಲ್ಪಿಸಲು ಪ್ರತಿ ಗುರುವಾರ 'ಶಾಸಕರ ದಿನ'ವಾಗಿ ಪರಿಗಣಿಸಲು ಮುಖ್ಯಮಂತ್ರಿ ತೀರ್ಮಾನಿಸಿದ್ದಾರೆ. ಜತೆಗೆ ವಿಧಾನಮಂಡಲ ಅಧಿವೇಶನ ನಡೆಯುವಾಗ ಪ್ರತಿ ಮಂಗಳವಾರ ಬೆಳಿಗ್ಗೆ 9.30 ರಿಂದ 11 ರವರೆಗೆ ಶಾಸಕಾಂಗ ಪಕ್ಷದ ಸಭೆ ನಡೆಸಲಾಗುತ್ತದೆ. ಪಕ್ಷಕ್ಕೆ ಸಂಬಂಧಿಸಿದ ಸಮಸ್ಯೆಗಳಿದ್ದರೆ, ಅಲ್ಲಿ ಚರ್ಚಿಸಿ ಬಗೆಹರಿಸಿಕೊಳ್ಳಲು ವೇದಿಕೆ ಒದಗಿಸಲಾಗುತ್ತದೆ ಎಂದು ಅವರು ಹೇಳಿದರು.



ವೇದಿಕೆಯಲ್ಲಿ ಯಡಿಯೂರಪ್ಪ, ಬಸವರಾಜ ಬೊಮ್ಮಾಯಿ, ನಳಿನ್ ಕುಮಾರ್ ಕಟೀಲ್ ಇದ್ದರು

ಸರ್ಕಾರ ಹಮ್ಮಿಕೊಂಡಿರುವ ಎಲ್ಲ ಕಾರ್ಯಕ್ರಮಗಳು ಮತ್ತು ಯೋಜನೆಗಳನ್ನು ರಾಜ್ಯದ ಮನೆ ಮನೆಗೆ ತಲುಪಿಸುವ ಕಾರ್ಯವನ್ನು ಶಾಸಕರು ಮಾಡಬೇಕು. ಈ ಸಂಬಂಧ ಯಾವುದೇ ಗೊಂದಲ ಇದ್ದರೆ ಅದರ ನಿವಾರಣೆ ಮಾಡಲಾಗುವುದು ಎಂದು ಮಾಧುಸ್ವಾಮಿ ಹೇಳಿದರು.

ಆನ್‌ಲೈನ್ ಜೂಜು ನಿಷೇಧಿಸುವ ಸಂಬಂಧಿಸಿದ ಮಸೂದೆ, ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿತಿ ಕ್ಷೇತ್ರಗಳ ಪುನರ್‌ವಿಂಗಡಣೆ ಅಧಿಕಾರವನ್ನು ಚುನಾವಣಾ ಆಯೋಗದಿಂದ ಹಿಂದಕ್ಕೆ ಪಡೆದು ಪ್ರತ್ಯೇಕ ಪ್ರಾಧಿಕಾರಕ್ಕೆ ವಹಿಸುವ ಮಸೂದೆಯೂ ಸೇರಿ ಹಲವು ಮಸೂದೆಗಳನ್ನು ಮಂಡಿಸಲಾಗುವುದು ಎಂದು ಮಾಧುಸ್ವಾಮಿ ಹೇಳಿದರು.

ಬೆಲೆ ಏರಿಕೆ, ರಾಷ್ಟ್ರೀಯ ಶಿಕ್ಷಣ ನೀತಿ, ಕೋವಿಡ್ ನಿರ್ವಹಣೆ ಸೇರಿದಂತೆ ಯಾವುದೇ ವಿಷಯದ ಬಗ್ಗೆ ವಿಧಾನ ಮಂಡಲದಲ್ಲಿ ವಿರೋಧ ಪಕ್ಷಗಳ ಆರೋಪಗಳಿಗೆ ತಕ್ಕ ಉತ್ತರ ನೀಡಲು ನಿರ್ಧರಿಸಲಾಗಿದೆ ಎಂದರು.

ವಿರೋಧ ಪಕ್ಷಗಳ ಎಲ್ಲ ಆರೋಪಗಳಿಗೂ ಒಗ್ಗಟ್ಟಿನಿಂದ ಶಾಸಕರು ಉತ್ತರಿಸಬೇಕು. ಇತ್ತೀಚೆಗೆ ನಡೆದ ಮೂರು ಮಹಾನಗರ ಪಾಲಿಕೆ ಚುನಾವಣೆಯಲ್ಲಿ ಪಕ್ಷ ಉತ್ತಮ ಸಾಧನೆ ತೋರಿದೆ. ಮುಂಬರುವ ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿ ಚುನಾವಣೆಗಳು, ಬಿಬಿಎಂಪಿ ಚುನಾವಣೆಯನ್ನು ಗೆದ್ದು, ವಿಧಾನಸಭೆ ಚುನಾವಣೆಯನ್ನು ಗೆಲ್ಲಬೇಕಾಗಿದೆ. ಇದಕ್ಕಾಗಿ ಈಗಿನಿಂದಲೇ ಶ್ರಮವಹಿಸಬೇಕು ಎಂದು ಬೊಮ್ಮಾಯಿ ಸಭೆಯಲ್ಲಿ ಹೇಳಿದರು ಎಂದು ಮೂಲಗಳು ತಿಳಿಸಿವೆ.

ಹಿಂದೆ ಯಡಿಯೂರಪ್ಪ ಅವರ ನೇತೃತ್ವದಲ್ಲಿ ಕೋವಿಡ್ ಲಾಕ್‌ಡೌನ್ ಮತ್ತು ಪ್ರವಾಹ ಸಂತ್ರಸ್ತರಿಗೆ ಹಲವು ಉತ್ತಮ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಆ ಬಗ್ಗೆ ಜನರಲ್ಲಿ ಉತ್ತಮ ಭಾವನೆ ಇದೆ. ಇನ್ನು ಮುಂದೆಯೂ ವಿಶ್ವಾಸ ಗಳಿಸುವ ಕೆಲಸ ಆಗಬೇಕಾಗಿದೆ ಎಂದು ಅವರು ಹೇಳಿದರು.

ಸಭೆಯಲ್ಲಿ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಇದ್ದರು.

ಆರೋಗ್ಯಪೂರ್ಣ ಚರ್ಚೆಗೆ ವೇದಿಕೆ

'ಇವತ್ತಿನ ಶಾಸಕಾಂಗ ಪಕ್ಷದ ಸಭೆ ಹಿಂದಿನ ಸಭೆಗಳಂತೆ ಇರಲಿಲ್ಲ. ಸಂಪೂರ್ಣ ಸೌಹಾರ್ದಯುತ ಮತ್ತು ಆರೋಗ್ಯಪೂರ್ಣ ಚರ್ಚೆಗೆ ವೇದಿಕೆ ಆಗಿತ್ತು' ಎಂದು ಸಚಿವರೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

'ಮುಖ್ಯಮಂತ್ರಿಯವರೇ ಸ್ವತಃ ಕೆಲವು ಆಲೋಚನೆಗಳನ್ನು ಮುಂದಿಟ್ಟಿದ್ದು, ಶಾಸಕರಿಗೆ ತೃಪ್ತಿ ತಂದಿತು. ಪಕ್ಷ ಮತ್ತು ಸರ್ಕಾರವನ್ನು ಸರಿಯಾದ ಹಳಿಯ ಮೇಲೆ ಒಯ್ಯುವ ಒಂದು ವೇದಿಕೆ ಸಜ್ಜು ಮಾಡಿದಂತಾಗಿದೆ' ಎಂದರು.

'ಪಕ್ಷಕ್ಕೆ ಇಂತಹದ್ದೊಂದು ಕಾಯಕಲ್ಪದ ಅಗತ್ಯವಿತ್ತು. ಅದರ ಮೊದಲ ಹೆಜ್ಜೆ ಇದಾಗಿದೆ. ಸದನದ ಒಳಗೆ ಮತ್ತು ಹೊರಗೆ ಪಕ್ಷದ ಶಾಸಕರು ಒಗ್ಗಟ್ಟಿನಿಂದ ಹೆಜ್ಜೆ ಇಡಲು ಇದು ಸಹಾಯಕವಾಗುತ್ತದೆ' ಎಂದು ಅವರು ಹೇಳಿದರು.

ಮಾತುಕತೆಯ ಭರವಸೆ: ರೈತರ ಪ್ರತಿಭಟನೆ ಸ್ಥಗಿತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೃಷಿ ಉತ್ಪನ್ನ ಮಾರುಕಟ್ಟೆ ನಿಯಂತ್ರಣ (ಎಪಿಎಂಸಿ) ಕಾಯ್ದೆ, ಭೂ ಸುಧಾರಣಾ ಕಾಯ್ದೆ ಮತ್ತು ಭೂ ಕಂದಾಯ ಕಾಯ್ದೆಗಳಿಗೆ ತಂದಿರುವ ತಿದ್ದುಪಡಿ ರದ್ದುಗೊಳಿಸಲು ಆಗ್ರಹಿಸಿ ಸೋಮವಾರ ಪ್ರತಿಭಟನೆ ಆರಂಭಿಸಿದ್ದ ರೈತ ಸಂಘದ ಕಾರ್ಯಕರ್ತರು, ಮುಖ್ಯಮಂತ್ರಿ ಜತೆ ಮಾತುಕತೆಗೆ ಅವಕಾಶ ಕಲ್ಪಿಸುವ ಭರವಸೆ ಆಧರಿಸಿ ಹೋರಾಟ ಕೈಬಿಟ್ಟಿದ್ದಾರೆ.

ವಿಧಾನ ಮಂಡಲದ ಹಿಂದಿನ ಅಧಿವೇಶನದಲ್ಲಿ ಮೂರೂ ಕಾಯ್ದೆಗಳಿಗೆ ಕೆಲವು ತಿದ್ದುಪಡಿಗಳನ್ನು ಅಂಗೀಕರಿಸಲಾಗಿತ್ತು. ಅವುಗಳನ್ನು ಹಿಂದಕ್ಕೆ ಪಡೆಯುವಂತೆ ಕೋಡಿಹಳ್ಳಿ ಚಂದ್ರಶೇಖರ್ ನೇತೃತ್ವದ ಕರ್ನಾಟಕ ರಾಜ್ಯ ರೈತ ಸಂಘ ವಿಧಾನಸೌಧ ಮುತ್ತಿಗೆ ಹಮ್ಮಿಕೊಂಡಿತ್ತು. ಎಚ್.ಆರ್. ಬಸವರಾಜಪ್ಪ ಸೇರಿದಂತೆ ಹಲವು ಮಂದಿ ರೈತ ನಾಯಕರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲ್ವೆ ನಿಲ್ದಾಣದಿಂದ ಮೆರವಣಿಗೆ ಆರಂಭಿಸಿದ್ದ ರೈತರು ಆನಂದರಾವ್ ವೃತ್ತದ ಮಾರ್ಗವಾಗಿ ಸ್ವಾತಂತ್ರ್ಯ ಉದ್ಯಾನ ತಲುಪುತ್ತಿದ್ದಂತೆಯೇ ಪೊಲೀಸರು ತಡೆದರು. ಬ್ಯಾರಿಕೇಡ್ ಅಳವಡಿಸಿ ಶೇಷಾದ್ರಿ ರಸ್ತೆಯನ್ನು ಮುಚ್ಚಿ ರೈತರು ವಿಧಾನಸೌಧದತ್ತ ತೆರಳದಂತೆ ಮಾಡಿದರು.

ರೈತರು ಮತ್ತು ಪೊಲೀಸರ ನಡುವೆ ಕೆಲಕಾಲ ತಳ್ಳಾಟ, ನೂಕಾಟ ನಡೆದವು. ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ವಿರುದ್ಧ ಘೋಷಣೆ ಕೂಗಿದ ರೈತರು, ಕೃಷಿ ಹಾಗೂ ಭೂ ಒಡೆತನಕ್ಕೆ ಸಂಬಂಧಿಸಿದ ಕಾಯ್ದೆಗಳ ತಿದ್ದುಪಡಿ ಹಿಂದಕ್ಕೆ ಪಡೆಯುವಂತೆ ಆಗ್ರಹಿಸಿದರು.

ಮಧ್ಯಾಹ್ನ 2.30ಕ್ಕೆ ಪ್ರತಿಭಟನಾ ಸ್ಥಳಕ್ಕೆ ಬಂದ ಸಹಕಾರ ಸಚಿವ ಎಸ್.ಟಿ. ಸೋಮಶೇಖರ್, 'ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ನಿಮ್ಮೊಂದಿಗೆ ಮಾತುಕತೆ ನಡೆಸುವುದಾಗಿ ತಿಳಿಸಿದ್ದಾರೆ. ಈ ಭರವಸೆಯ ಆಧಾರದಲ್ಲಿ ಪ್ರತಿಭಟನೆ ಹಿಂಪಡೆಯಬೇಕು' ಎಂದು ಮನವಿ ಮಾಡಿದರು.

ಬಳಿಕ ಮಾತನಾಡಿದ ಕೋಡಿಹಳ್ಳಿ ಚಂದ್ರಶೇಖರ್, 'ಮಾತುಕತೆಯ ಭರವಸೆಯ ಆಧಾರದಲ್ಲಿ ತಾತ್ಕಾಲಿಕವಾಗಿ ಹೋರಾಟ ಸ್ಥಗಿತಗೊಳಿಸುತ್ತಿದ್ದೇವೆ. ಬೇಡಿಕೆ ಈಡೇರದಿದ್ದರೆ ಮತ್ತೆ ಹೋರಾಟಕ್ಕೆ ಸಿದ್ಧ' ಎಂದು ಪ್ರಕಟಿಸಿದರು.

ಮೈತ್ರಿ ಕುರಿತು ತೀರ್ಮಾನಿಸಿಲ್ಲ: ಎಚ್‌ಡಿಕೆ

ಬೆಂಗಳೂರು: 'ಕಲಬುರ್ಗಿ ಮಹಾನಗರ ಪಾಲಿಕೆಯಲ್ಲಿ ಬೆಂಬಲ ನೀಡುವಂತೆ ಬಿಜೆಪಿ ನಾಯಕರು ಮನವಿ ಮಾಡಿದ್ದಾರೆ. ಆದರೆ, ತಮ್ಮ ಪಕ್ಷ ಮೈತ್ರಿ ಕುರಿತು ಯಾವುದೇ ತೀರ್ಮಾನ ಮಾಡಿಲ್ಲ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ ಹೇಳಿದರು.

ಸೋಮವಾರ ರಾತ್ರಿ ಜೆಡಿಎಸ್ ಶಾಸಕಾಂಗ ಪಕ್ಷದ ಸಭೆಗೂ ಮೊದಲು ಸುದ್ದಿಗಾರರ ಜತೆ ಮಾತನಾಡಿದ ಅವರು, 'ಬಿಜೆಪಿಯವರು ಈಗ ಸಹಕಾರ ಕೇಳುತ್ತಾರೆ. ನಂತರ ನಮ್ಮ ವಿರುದ್ಧವೇ ಮಾತನಾಡುತ್ತಾರೆ. ಅವಶ್ಯಕತೆ ಇದ್ದಾಗ ನಮ್ಮನ್ನು ಬಳಸಿಕೊಂಡು ನಂತರ ದೂರುವುದು ಬಿಜೆಪಿಯವರ ಲಕ್ಷಣ. ಈ ಕಾರಣದಿಂದಾಗಿ ಮೈತ್ರಿ ಕುರಿತು ಯಾವುದೇ ನಿರ್ಧಾರ ಮಾಡಿಲ್ಲ' ಎಂದರು.

ಜಾತ್ಯತೀತ ಪಕ್ಷಗಳು ಒಂದಾಗಬೇಕು ಎಂದು ಕೆಲವರು ಸಲಹೆ ನೀಡುತ್ತಿದ್ದಾರೆ. ಪಕ್ಷದ ಶಾಸಕರ ಜತೆ ಚರ್ಚಿಸಿದ ಬಳಿಕ ತೀರ್ಮಾನಕ್ಕೆ ಬರಲಾಗುವುದು ಎಂದರು.

ಕಲಬುರ್ಗಿ ಮಹಾನಗರ ಪಾಲಿಕೆಯ ನಾಲ್ವರು ಜೆಡಿಎಸ್ ಸದಸ್ಯರೂ ಶಾಸಕಾಂಗ ಪಕ್ಷದ ಸಭೆಗೆ ಹಾಜರಾಗಿದ್ದರು. ಪಕ್ಷದ ಬಹುತೇಕ ಶಾಸಕರು ಸಭೆಯಲ್ಲಿದ್ದರು.

ಪಠ್ಯಪುಸ್ತಕ ಪರಿಶೀಲನೆ ಎಐಡಿಎಸ್‌ಒ ಖಂಡನೆ

ಬೆಂಗಳೂರು: 'ಪಠ್ಯಪುಸ್ತಕ ತಿದ್ದುಪಡಿಯು ವೈಜ್ಞಾನಿಕ ಹಾಗೂ ಪ್ರಜಾಸತ್ತಾತ್ಮಕ ಶಿಕ್ಷಣದ ಆಶಯಕ್ಕೆ ಮಾರಕ. ಸರ್ಕಾರವು ಜನಸಾಮಾನ್ಯರು, ಇತಿಹಾಸಕಾರರು, ವಿಜ್ಞಾನಿಗಳ ಅಭಿಪ್ರಾಯಕ್ಕೆ ಮನ್ನಣೆ ನೀಡದೆ ಪಠ್ಯಪುಸ್ತಕ ಪರಿಶೀಲನೆಗೆ ಮುಂದಾಗಿರುವುದು ಅತ್ಯಂತ ಹೇಯ ಕೃತ್ಯ' ಎಂದು ಎಐಡಿಎಸ್‌ಒ ಖಂಡಿಸಿದೆ.

'ಪಠ್ಯಪುಸ್ತಕಗಳಲ್ಲಿನ ಕೆಲವು ಪಾಠಗಳನ್ನು ಕಡಿತಗೊಳಿಸುವ ಸಲುವಾಗಿ ಸರ್ಕಾರವು ಪರಿಶೀಲನಾ ಸಮಿತಿ ರಚಿಸಲು ಮುಂದಾಗಿದೆ. 6ನೇ ತರಗತಿ ಸಮಾಜ ವಿಜ್ಞಾನ ವಿಷಯದಲ್ಲಿನ 'ಹೊಸ ಧರ್ಮಗಳ ಉದಯ' ಪಾಠದ ಪುಟ 82 ಮತ್ತು 83ನ್ನು ಕೈಬಿಡಲು ಸೂಚಿಸಲಾಗಿದೆ. ವೈದಿಕ ಧರ್ಮಗಳಲ್ಲಿದ್ದ ದೋಷಗಳಿಂದಾಗಿಯೇ ಹೊಸ ಧರ್ಮಗಳು ಉದಯವಾದವು ಎಂಬ ಸಾರಾಂಶವಿದ್ದ ಈ ಪಾಠವನ್ನು ಸಂಪೂರ್ಣ ತೆಗೆದು ಹಾಕಲು ಆದೇಶಿಸಿರುವುದು ಅಪ್ರಜಾತಾಂತ್ರಿಕ ಮತ್ತು ಅವೈಜ್ಞಾನಿಕ' ಎಂದು ರಾಜ್ಯ ಘಟಕದ ಕಾರ್ಯದರ್ಶಿ ಅಜಯ್ ಕಾಮತ್ ಹೇಳಿದ್ದಾರೆ.

ನಗರದಲ್ಲಿ ಇಂದು

ಶ್ರೀ ವೀರಭದ್ರೇಶ್ವರ ಜಯಂತ್ಯುತ್ಸವ–2021: ಉದ್ಘಾಟನೆ–ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, 'ಶ್ರೀ ವೀರಭದ್ರೇಶ್ವರ ಪ್ರಶಸ್ತಿ ಪುರಸ್ಕಾರ'–ಶಾಸಕ ಬಿ.ಎಸ್.ಯಡಿಯೂರಪ್ಪ, ಅಧ್ಯಕ್ಷತೆ–ವಸತಿ ಸಚಿವ ವಿ.ಸೋಮಣ್ಣ, ಆಯೋಜನೆ–ವೀರಶೈವ ಲಿಂಗಾಯತ ಸಂಘಟನಾ ವೇದಿಕೆ, ಸ್ಥಳ–ಶ್ರೀ ಬಸವೇಶ್ವರ ಸುಜ್ಞಾನ ಕಲ್ಯಾಣ ಮಂಟಪ, ವಿಜಯನಗರ–ಸಂಜೆ 5.

ವ್ಯಾಪಾರ ಶ್ರೇಷ್ಠತಾ ಪ್ರಶಸ್ತಿ ಪ್ರದಾನ ಸಮಾರಂಭ: ಮುಖ್ಯ ಅತಿಥಿ–ಸಚಿವ ಭಗವಂತ ಖೂಬಾ, ಅಧ್ಯಕ್ಷತೆ–ಎಫ್‌ಕೆಸಿಸಿಐ ಅಧ್ಯಕ್ಷ ಪೆರಿಕಲ್ ಎಂ.ಸುಂದರ್, ಆಯೋಜನೆ–ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆ, ಸ್ಥಳ–ಎಂ.ವಿ.ಆಡಿಟೋರಿಯಂ, ಎಫ್‌ಕೆಸಿಸಿಐ, ಕೆ.ಜಿ.ರಸ್ತೆ–ಮಧ್ಯಾಹ್ನ 12.

'ತೇಜಸ್ವಿ ಜೀವಲೋಕ–9, ಕುರಿಂಜಿ ಲೋಕ' ಛಾಯಾಚಿತ್ರ, ಸಾಕ್ಷ್ಯಚಿತ್ರ ಪ್ರದರ್ಶನ ಮತ್ತು ಸಂವಾದ ಕಾರ್ಯಕ್ರಮ: ಆಯೋಜನೆ–ಪರಿಸರ, ನಿಸರ್ಗ ಸಂರಕ್ಷಣಾ ಸಂಸ್ಥೆ, ಕರ್ನಾಟಕ ಚಿತ್ರಕಲಾ ಪರಿಷತ್, ಕೆ.ಪಿ.ಪೂರ್ಣಚಂದ್ರ ತೇಜಸ್ವಿ ಪ್ರತಿಷ್ಠಾನ ಹಾಗೂ ಪೀಣ್ಯ ಕೈಗಾರಿಕಾ ಸಂಘ, ಸ್ಥಳ–ಕರ್ನಾಟಕ ಚಿತ್ರಕಲಾ ಪರಿಷತ್, ಕುಮಾರಕೃಪ ರಸ್ತೆ–ಬೆಳಿಗ್ಗೆ 11.

ವಿದ್ಯಾರಣ್ಯಪುರ: ಪ್ರತಿಭಟನೆ ಬಳಿಕ ಬಂತು ನೀರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸತತ 11 ದಿನಗಳಿಂದ ಕುಡಿಯುವ ನೀರು ಪೂರೈಸದಿರುವುದನ್ನು ಖಂಡಿಸಿ, ವಿದ್ಯಾರಣ್ಯಪುರ ವಾರ್ಡ್‌ನ ವಿವಿಧ ಬಡಾವಣೆಗಳ ನಿವಾಸಿಗಳು ಜಲಮಂಡಳಿಯ ಸ್ಥಳೀಯ ಕಚೇರಿ ಬಳಿ ಸೋಮವಾರ ಪ್ರತಿಭಟನೆ ನಡೆಸಿದರು. ಬಳಿಕ ಎಚ್ಚೆತ್ತುಕೊಂಡ ಜಲಮಂಡಳಿ ಇಲ್ಲಿನ ಬಡಾವಣೆಗಳ ನೀರಿನ ಸಮಸ್ಯೆಯನ್ನು ಬಗೆಹರಿಸಿದೆ.

ಜಲಮಂಡಳಿಯ ಸ್ಥಳೀಯ ಕಚೇರಿ ಬಳಿ ಸೇರಿದ್ದ ಸ್ಥಳೀಯರು ಅಧಿಕಾರಿಗಳ ವಿರುದ್ಧ ಧಿಕ್ಕಾರ ಕೂಗಿದರು. ನೀರು ಪೂರೈಕೆ ಮಾಡದಿದ್ದರೆ ಜಲಮಂಡಳಿ ಕಚೇರಿಗೆ ಬೀಗ ಹಾಕುವುದಾಗಿ ಎಚ್ಚರಿಸಿದರು. ಸ್ಥಳಕ್ಕೆ ಪೊಲೀಸರ ಜೊತೆ ಭೇಟಿ ನೀಡಿದ ಜಲಮಂಡಳಿ ಅಧಿಕಾರಿಗಳು, 'ಯಂತ್ರಗಳು ಕೆಟ್ಟಿದ್ದರಿಂದ ನೀರಿನ ಸಮಸ್ಯೆ ಸೃಷ್ಟಿಯಾಗಿದೆ. ಬದಲಿ ಯಂತ್ರಗಳನ್ನು ಅಳವಡಿಸಿ ತಕ್ಷಣವೇ ಸಮಸ್ಯೆ ಬಗೆಹರಿಸುತ್ತೇವೆ' ಎಂದು ಭರವಸೆ ನೀಡಿದರು. ಬಳಿಕ ಸ್ಥಳೀಯರು ಪ್ರತಿಭಟನೆ ಕೈಬಿಟ್ಟರು.

'ಪ್ರತಿಭಟನೆ ನಡೆಸಿದ ಬಳಿಕ ಜಲಮಂಡಳಿಯ ಸ್ಥಳೀಯ ಅಧಿಕಾರಿಗಳನ್ನು ಮೇಲಧಿಕಾರಿಗಳು ತರಾಟೆಗೆ ತೆಗೆದುಕೊಂಡಿದ್ದಾರೆ. ಸೋಮವಾರ ಸಂಜೆಯೇ ಇಲ್ಲಿನ ಮನೆಗಳಿಗೆ ನೀರು ಪೂರೈಕೆ ಆಗಿದೆ' ಎಂದು ಪ್ರತಿಭಟನೆಯ ನೇತೃತ್ವ ವಹಿಸಿದ್ದ ವಿದ್ಯಾರಣ್ಯಪುರ ಸಾಂಸ್ಕೃತಿಕ ಕೇಂದ್ರದ ಅಧ್ಯಕ್ಷ ಆರ್.ಅಶ್ವತ್ಥ್ 'ಪ್ರಜಾವಾಣಿ'ಗೆ ತಿಳಿಸಿದರು.


ನೀರು ಪೂರೈಕೆ ಆಗದಿರುವುದನ್ನು ಖಂಡಿಸಿ ವಿದ್ಯಾರಣ್ಯಪುರ ವಾರ್ಡ್‌ನ ವಿವಿಧ ಬಡಾವಣೆಗಳ ನಿವಾಸಿಗಳು ಸ್ಥಳೀಯ ಜಲಮಂಡಳಿ ಕಚೇರಿ ಬಳಿ ಸೋಮವಾರ ಪ್ರತಿಭಟನೆ ನಡೆಸಿದರು

ವಾರ್ಡ್‌ನ ಎಚ್‌ಎಂಟಿ ಬಡಾವಣೆ, ಬಿಇಎಲ್ ಬಡಾವಣೆ, ಎನ್‌ಟಿಐ ಬಡಾವಣೆ ಸೇರಿದಂತೆ ಹಲವಾರು ಪ್ರದೇಶಗಳಿಗೆ 11 ದಿನಗಳಿಂದ ನೀರು ಪೂರೈಕೆ ಆಗಿರಲಿಲ್ಲ. ಕುಡಿಯುವ ನೀರಿಗೂ ಸ್ಥಳೀಯರು ಟ್ಯಾಂಕರ್‌ಗಳ ಮೊರೆ ಹೋಗಬೇಕಾದ ಸ್ಥಿತಿ ನಿರ್ಮಾಣವಾಗಿತ್ತು.

'ನಾವು ಒಂದು ಟ್ಯಾಂಕರ್ ನೀರಿಗೆ ₹ 500ರಿಂದ ₹ 650ರವರೆಗೆ ತೆತ್ತಿದ್ದೇವೆ. ನಮಗೆ 10 ದಿನಗಳಲ್ಲಿ ಆರೇಳು ಸಾವಿರ ರೂಪಾಯಿ ವೆಚ್ಚವಾಗಿದೆ. ಹೆಚ್ಚು ಜನರಿದ್ದ ಕುಟುಂಬಗಳು ₹ 10 ಸಾವಿರಕ್ಕೂ ಅಧಿಕ ಮೊತ್ತವನ್ನು ನೀರಿಗಾಗಿ ವ್ಯಯಿಸಿವೆ' ಎಂದು ಅಶ್ವತ್ಥ್ ತಿಳಿಸಿದರು.

ಈ ಪ್ರದೇಶದ ನೀರಿನ ಬವಣೆ ಬಗ್ಗೆ 'ಪ್ರಜಾವಾಣಿ' ಸೋಮವಾರದ ಸಂಚಿಕೆಯಲ್ಲಿ ವರದಿ ಪ್ರಕಟಿಸಿತ್ತು.

ಮನು ಬಳಿಗಾರ ಅವರಿಗೆ ಬೀಳ್ಕೊಡುಗೆ, ಅಭಿನಂದನಾ ಸಮಾರಂಭ

'ಎಲ್ಲ ವರ್ಗದ ಸಾಹಿತಿಗಳನ್ನು ಒಗ್ಗೂಡಿಸಿದವರು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಎಲ್ಲ ವರ್ಗ, ಪಂಥದ ಸಾಹಿತಿಗಳು ಹಾಗೂ ಲೇಖಕರನ್ನು ಒಂದುಗೂಡಿಸಿದ್ದು ಮನು ಬಳಿಗಾರ ಅವರ ದೊಡ್ಡ ಸಾಧನೆ. ಅವರು ಮಹಿಳಾ ಲೇಖಕಿಯರಿಗೂ ಮನ್ನಣೆ ನೀಡಿದ್ದರು. ಅಖಂಡ ಕರ್ನಾಟಕವನ್ನು ನಿಜವಾದ ಸಾಂಸ್ಕೃತಿಕ ಏಕೀಕರಣಕ್ಕೆ ಒಳಪಡಿಸುವುದರತ್ತ ಹೆಚ್ಚು ಗಮನ ನೀಡಿದರು. ದೇಶದ ಪ್ರಮುಖ ನಗರಗಳಲ್ಲಿ ಸಮ್ಮೇಳನ ಆಯೋಜಿಸಿದ ಹಿರಿಮೆ ಅವರದ್ದು' ಎಂದು ಸಾಹಿತಿ ಎಚ್‌.ಎಸ್. ವೆಂಕಟೇಶಮೂರ್ತಿ ತಿಳಿಸಿದರು.

ಕನ್ನಡ ಸಾಹಿತ್ಯ ಪರಿಷತ್ ಆಯೋಜಿಸಿದ್ದ ಮನು ಬಳಿಗಾರ ಅವರಿಗೆ ಬೀಳ್ಕೊಡುಗೆ ಹಾಗೂ ಅಭಿನಂದನಾ ಸಮಾರಂಭದಲ್ಲಿ ಪಾಲ್ಗೊಂಡು ಸೋಮವಾರ ಮಾತನಾಡಿದರು.

'ಕಾವ್ಯ, ಸಾಹಿತ್ಯ, ಕವಿಗಳು, ಲೇಖಕರ ಬಗ್ಗೆ ಮನು ಅವರು ಮಿತಾಂತವಾದ ಪ್ರೀತಿ ಹೊಂದಿದ್ದರು. ಸಾಹಿತ್ಯ ಹಾಗೂ ಅದರ ಉತ್ಸವಗಳಲ್ಲಿ ಸ್ವಯಂಪ್ರೇರಿತವಾಗಿ ಪಾಲ್ಗೊಳ್ಳುತ್ತಿದ್ದರು. ತಮ್ಮ ಅಧಿಕಾರಾವಧಿಯಲ್ಲಿ ಹಲವು ಕೆಲಸಗಳನ್ನು ಕ್ಷಮತೆಯಿಂದ ನಿರ್ವಹಿಸಿರುವ ಅವರು ಪ್ರಕಟಣೆ ಪ್ರಪಂಚದಲ್ಲೂ ದೊಡ್ಡ ಸಾಧನೆ ಮಾಡಿದ್ದಾರೆ. ಏನಾದರೂ ಸಂಕಲ್ಪ ಮಾಡಿದರೆ ಅದನ್ನು ಸಾಧಿಸದೇ ಬಿಡುತ್ತಿರಲಿಲ್ಲ. ಹಳಗನ್ನಡ, ಮಹಿಳಾ ಹಾಗೂ ದಲಿತ ಸಾಹಿತ್ಯ ಸಮ್ಮೇಳನಗಳನ್ನು ಆಯೋಜಿಸಿದ್ದ ಶ್ರೇಯ ಅವರದ್ದು' ಎಂದರು.



ಎಚ್‌.ಎಸ್‌.ವೆಂಕಟೇಶಮೂರ್ತಿ ಅವರು ಮನು ಬಳಿಗಾರ ಅವರಿಗೆ ಸ್ಮರಣಿಕೆ ನೀಡಿ ಗೌರವಿಸಿದರು. ಕನ್ನಡ ಸಾಹಿತ್ಯ ಪರಿಷತ್‌ನ ಆಡಳಿತಾಧಿಕಾರಿ ಎಸ್‌.ರಂಗಪ್ಪ ಹಾಗೂ ಪ್ರೊ.ಮಲ್ಲೇಪುರಂ ಜಿ.ವೆಂಕಟೇಶ್ ಇದ್ದಾರೆ – ಪ್ರಜಾವಾಣಿ ಚಿತ್ರ

ವಿದ್ವಾಂಸ ಪ್ರೊ.ಮಲ್ಲೇಪುರಂ ಜಿ.ವೆಂಕಟೇಶ್, 'ಮನು ಬಳಿಗಾರ ಕನ್ನಡದ ಮನ್ವಂತರ ಸೃಷ್ಟಿಸಿದ್ದಾರೆ. ಅಧಿಕಾರಾವಧಿಯಲ್ಲಿ ತಮಗೆ ಸಂಭಾವನೆ ರೂಪದಲ್ಲಿ ಬಂದ ಹಣವನ್ನು ಕೂಡಿಟ್ಟು ಆ ಮೊತ್ತದಲ್ಲಿ ಇಬ್ಬರು ಮಹನೀಯರಿಗೆ ಗೌರವ ಪ್ರಶಸ್ತಿ ನೀಡಿದ ಉದಾರಿ. ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದಲ್ಲಿ ಕನ್ನಡದ ಉತ್ಸವಗಳನ್ನು ನಡೆಸಿದವರು' ಎಂದರು.

ಮನು ಬಳಿಗಾರ, 'ಜನರನ್ನು ಮೆಚ್ಚಿಸಲು ಯಾವ ಕೆಲಸವನ್ನೂ ಮಾಡಬಾರದು. ಎಲ್ಲರನ್ನು ತೃಪ್ತಿಪಡಿಸುವುದು ಕಷ್ಟ. ನ್ಯಾಯ, ನೀತಿ ಧರ್ಮ ಇರುವೆಡೆ ಕಾನೂನು ಇರುತ್ತದೆ. ಜನಬೆಂಬಲ ಹಾಗೂ ಮನ್ನಣೆಯೂ ಇರುತ್ತದೆ. ಸಾಹಿತ್ಯ ವಲಯದಲ್ಲಿ ಸ್ವಲ್ಪ ತ್ಯಾಗ ಮಾಡಿದರೆ ಎಲ್ಲರನ್ನೂ ಸರಿಸಮಾನರಾಗಿ ನೋಡುವುದು ಸುಲಭ. ಈ ನಾಡಿನ ಸಂಸ್ಕೃತಿ, ಹಿನ್ನೆಲೆ ಹಾಗೂ ಪರಂಪರೆ ವಿಶಿಷ್ಟವಾದುದು. ಅದನ್ನು ತಿಳಿದುಕೊಂಡು ಬದುಕಬೇಕು' ಎಂದು ಹೇಳಿದರು.

ಕಸಾಪ ಗೌರವ ಸಲಹೆಗಾರ ಪದ್ಮರಾಜ ದಂಡಾವತಿ ಇದ್ದರು.

ಗಡ್ಡ ಬೋಳಿಸಿಕೊಂಡು ಬಂದಿದ್ದ ಬಸನಗೌಡ ಪಾಟೀಲ ಯತ್ನಾಳ • ಹಸಿರು ಶಾಲು ಹೊದ್ದ ಡಿ.ಕೆ. ಶಿವಕುಮಾರ್

ಮಾಜಿ ಸಿಎಂಗಳಿಗೆ ಹಿಂದಿನ ಸಾಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಬ್ಬರು ಮಾಜಿ ಮುಖ್ಯಮಂತ್ರಿಗಳಿಗೆ ಹಿಂದಿನ (ನಾಲ್ಕನೇ) ಸಾಲು, ಗಡ್ಡ ಬೋಳಿಸಿಕೊಂಡು ಬಂದಿದ್ದ ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ. ಹಸಿರು ಶಾಲು ಹೊದ್ದು ಕುಳಿತಿದ್ದ ಡಿ.ಕೆ.ಶಿವಕುಮಾರ್, ಮಾಸ್ಕ್ ಮತ್ತು ಕೈಗೆ ಗ್ಲೌಸ್ ಇಲ್ಲದೇ ಕುಳಿತಿದ್ದ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ...

ಬಸವರಾಜ ಬೊಮ್ಮಾಯಿ ಮುಖ್ಯಮಂತ್ರಿ ಆದ ಬಳಿಕ ಮೊದಲ ಬಾರಿಗೆ ನಡೆಯುತ್ತಿರುವ ವಿಧಾನಸಭೆಯ ಸೋಮವಾರದ ಕಲಾಪದಲ್ಲಿ ಕಂಡು ಬಂದ ದೃಶ್ಯಗಳಿವು.

ಮಾಜಿ ಮುಖ್ಯಮಂತ್ರಿಗಳಾದ ಬಿ.ಎಸ್.ಯಡಿಯೂರಪ್ಪ ಮತ್ತು ಜಗದೀಶ್ ಶೆಟ್ಟರ್ ಅವರಿಗೆ ಕೊನೆಯ ಸಾಲಿನಲ್ಲಿ ಆಸನ ವ್ಯವಸ್ಥೆ ಮಾಡಲಾಗಿತ್ತು. ಕಳೆದ ಕೆಲವು ದಶಕಗಳಿಂದ ಆಡಳಿತ ಮತ್ತು ವಿರೋಧ ಪಕ್ಷದಲ್ಲಿದ್ದಾಗ ಮುಂದಿನ ಸಾಲಿನಲ್ಲೇ ಕೂರುತ್ತಿದ್ದ ಇಬ್ಬರಿಗೂ ಮುಖ್ಯಮಂತ್ರಿ ಆಸನದಿಂದ ಹಿಂದಿನ ನಾಲ್ಕನೇ ಸಾಲಿನಲ್ಲಿ ವ್ಯವಸ್ಥೆ ಮಾಡಲಾಗಿತ್ತು. ಯಡಿಯೂರಪ್ಪ ಅವರಿಗೆ ಮುಖ್ಯ ಸಚೇತರಿಗೆ ಮೀಸಲಾದ ಆಸನದ ಪಕ್ಕವೇ ಆಸನ ನೀಡಲಾಗಿದೆ. ಶಾಸಕ ಸುರೇಶ್ ಕುಮಾರ್ ಅವರಿಗೂ ಇದೇ ಸಾಲಿನಲ್ಲಿ ವ್ಯವಸ್ಥೆ ಮಾಡಲಾಗಿದೆ.

ರಾಜ್ಯದಲ್ಲಿ ನಾಯಕತ್ವ ಬದಲಾವಣೆ ಆಗುವವರೆಗೆ ತಾವು ಗಡ್ಡ ಬೋಳಿಸುವುದಿಲ್ಲ ಎಂದು ಶಾಸಕ ಬಸನಗೌಡ ಪಾಟೀಲ ಯತ್ನಾಳ ಹೇಳಿದ್ದರು. ಮುಖ್ಯಮಂತ್ರಿ ಬದಲಾವಣೆ ಆದ ಬೆನ್ನಲ್ಲೇ ಗಡ್ಡ ಬೋಳಿಸಿಕೊಂಡಿದ್ದ ಯತ್ನಾಳ್ ಅವರು ವಿಶೇಷ ರೀತಿ ಕಾಣಿಸಿಕೊಂಡರು.

ಕೋವಿಡ್ ಆರಂಭವಾದ ಬಳಿಕ ವಿಧಾನಸಭೆಗೆ ಬರುವ ಸಂದರ್ಭದಲ್ಲಿ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರು ಮಾಸ್ಕ್, ಫೇಸ್ ಶೀಲ್ಡ್ ಮತ್ತು ಕೈಗೆ ಗ್ಲೌಸ್ ಹಾಕಿಕೊಂಡಿರುತ್ತಿದ್ದರು. ಆದರೆ ಈ ಬಾರಿ ಮಾಸ್ಕ್ ಧರಿಸಿ ಒಳಗೆ ಬಂದರೂ ಬಳಿಕ ಮಾಸ್ಕ್ ತೆಗೆದರು. ಫೇಸ್ ಶೀಲ್ಡ್ ಹಾಕಿಕೊಂಡಿರಲಿಲ್ಲ.

ಮೊದಲ ಬಾರಿಗೆ ಸಚಿವರಾದ ಶಂಕರ್ ಪಾಟೀಲ ಮುನೇನಕೊಪ್ಪ, ಮುನಿರತ್ನ ಅವರು ಸದನದೊಳಗೆ ಚುರುಕಿನಿಂದ ಓಡಾಡಿದ್ದು ಕಂಡು ಬಂತು.

ಅಗಲಿದ ಗಣ್ಯರಿಗೆ ಸಂತಾಪ ಸೂಚಿಸಿದ ತಕ್ಷಣ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಗುಜರಾತ್‌ನ ನೂತನ ಮುಖ್ಯಮಂತ್ರಿ ಪ್ರಮಾಣ ವಚನ ಸ್ವೀಕಾರ ಕಾರ್ಯಕ್ರಮಕ್ಕೆ ತೆರಳಿದರು. ಬೊಮ್ಮಾಯಿ ಅವರು ತಮ್ಮ ಮಾತಿನಲ್ಲಿ ಪದೇ ಪದೇ 'ಯಡಿಯೂರಪ್ಪ ಸಾಹೇಬರು' ಎಂಬ ಪದವನ್ನು ಬಳಸಿದರು.

ಬೆಳಗಾವಿ ಪಾಲಿಕೆ ಸದಸ್ಯರು: ಬೆಳಗಾವಿ ಮಹಾನಗರ ಪಾಲಿಕೆಗೆ ಇತ್ತೀಚೆಗೆ ನಡೆದ ಚುನಾವಣೆಯಲ್ಲಿ ಆಯ್ಕೆಯಾದ ಬಿಜೆಪಿಯ ಸದಸ್ಯರಲ್ಲಿ ಹಲವರು ವಿಧಾನಸಭೆಯ ಪ್ರೇಕ್ಷಕರ ಗ್ಯಾಲರಿಯಲ್ಲಿ ಕುಳಿತು ಕಲಾಪವನ್ನು ವೀಕ್ಷಿಸಿದರು. ಸದಸ್ಯರು ಕೇಸರಿ ಪೇಟ ತೊಟ್ಟು ಗಮನ ಸೆಳೆದರು.



ಮಾಜಿ ಮುಖ್ಯಮಂತ್ರಿಗಳಾದ ಜಗದೀಶ ಶೆಟ್ಟರ್ ಹಾಗೂ ಬಿ.ಎಸ್‌.ಯಡಿಯೂರಪ್ಪ ಅವರು ವಿಧಾನಸಭೆಯ ಸೋಮವಾರದ ಕಲಾಪದಲ್ಲಿ ಹಿಂದಿನ ಸಾಲಿನಲ್ಲಿ ಕುಳಿತಿದ್ದರು. ಸಚಿವ ಸಿ.ಸಿ.ಪಾಟೀಲ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಇದ್ದಾರೆ

'ಶಾಸಕನಾಗಿ ಬರುವುದಕ್ಕೆ ಬೇಸರವಿಲ್ಲ'

'ಈ ಬಾರಿ ಅಧಿವೇಶನಕ್ಕೆ ಕೇವಲ ಶಾಸಕನಾಗಿ ಬರುತ್ತಿರುವುದಕ್ಕೆ ಬೇಸರವಿಲ್ಲ. ಮುಖ್ಯ ಸಚೇತಕರ ಪಕ್ಕದಲ್ಲೇ ಆಸನ ವ್ಯವಸ್ಥೆಗೆ ಮನವಿ ಮಾಡಿದ್ದೆ. ಅದಕ್ಕೆ ವ್ಯವಸ್ಥೆ ಮಾಡಿದ್ದಾರೆ' ಎಂದು ಯಡಿಯೂರಪ್ಪ ಸುದ್ದಿಗಾರರಿಗೆ ತಿಳಿಸಿದರು.

'ಶಾಸಕನಾಗಿ ಪರಿಣಾಮಕಾರಿಯಾಗಿ ಕೆಲಸ ಮಾಡುತ್ತೇನೆ. ಮುಖ್ಯಮಂತ್ರಿಯಾಗೇ ಕೆಲಸ ಮಾಡಬೇಕೆಂದು ಇಲ್ಲ. ಮುಂದಿನ ಬಾರಿ ಬಿಜೆಪಿಯನ್ನು ಅಧಿಕಾರಕ್ಕೆ ತರಲು ಪಕ್ಷದ ರಾಜ್ಯ ಘಟಕದ ಅಧ್ಯಕ್ಷರ ಜತೆ ರಾಜ್ಯ ಪ್ರವಾಸ ಮಾಡುತ್ತೇನೆ' ಎಂದು ಅವರು ಹೇಳಿದರು.

ಯಡಿಯೂರಪ್ಪ ಸುತ್ತುವರಿದ ಶಾಸಕರು: ಹಲವು ಶಾಸಕರು ಯಡಿಯೂರಪ್ಪ ಅವರ ಬಳಿ ಹೋಗಿ ನಮಸ್ಕರಿಸಿದರೆ, ಸಚಿವರಾದ ಶಿವರಾಮ್ ಹೆಬ್ಬಾರ್ ಮತ್ತು ಸಿ.ಸಿ.ಪಾಟೀಲ ಅವರು ಕಾಲುಮುಟ್ಟಿ ನಮಸ್ಕರಿಸಿದರು.

'ನಮ್ಮದು ಲವ್– ಹೇಟ್ ಸಂಬಂಧ'

'ನಂದು ಮತ್ತು ಈಶ್ವರಪ್ಪಂದು ಒಂದು ರೀತಿ ಲವ್ ಅಂಡ್ ಹೇಟ್ ಸಂಬಂಧ. ಈಶ್ವರಪ್ಪನ ಮೇಲೆ ಪ್ರೀತಿಯೂ ಇದೆ– ರಾಜಕೀಯ ವೈರವೂ ಇದೆ'.

–ಹೀಗೆಂದು ವಿಧಾನಸಭೆಯಲ್ಲಿ ಹೇಳಿದ್ದು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ. ಸಂತಾಪ ಸೂಚಕ ನಿರ್ಣಯದ ಮೇಲೆ ಮಾತನಾಡುತ್ತಿದ್ದಾಗ ಕಾಂಗ್ರೆಸ್‌ನ ಕೆ.ಆರ್.ರಮೇಶ್ ಕುಮಾರ್ ಆಡಿದ ಮಾತು ಸ್ವಾರಸ್ಯಕರ ತಿರುವು ಪಡೆಯಿತು.

ಸಿದ್ದರಾಮಯ್ಯ ಮಾತನಾಡುವಾಗ ಮೈಕ್ರೊಫೋನ್‌ಗೆ ಕಾಗದ ಅಡ್ಡ ಹಿಡಿದು ಮಾತನಾಡುತ್ತಿದ್ದರು. ರಮೇಶ್ ಕುಮಾರ್ ಅವರು ಸಿದ್ದರಾಮಯ್ಯ ಗಮನಕ್ಕೆ ತಂದು, 'ನೀವು ಹೇಳುತ್ತಿರುವುದು ಸರಿಯಾಗಿ ಕೇಳುತ್ತಿಲ್ಲ' ಎಂದರು. 'ನಾನು ಮಾತಾಡ್ತಾ ಇರೋದು ಕೇಳ್ತಾ ಇಲ್ವಾ' ಎಂದು ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಅವರನ್ನು ಪ್ರಶ್ನಿಸಿದರು. 'ಕೇಳ್ತಾ ಇದೆ' ಎಂದು ಕಾಗೇರಿ ತಲೆ ಅಲ್ಲಾಡಿಸಿದರು.

'ನಿಮ್ಮಿಬ್ಬರ ಮಧ್ಯೆ ಅಡ್ಜಸ್ಟ್‌ಮೆಂಟ್ ಇದೆ' ಎಂದು ರಮೇಶ್‌ಕುಮಾರ್ ಛೇಡಿಸಿದರು.

'ನಮಗೆ–ನಿಮಗೆ ಅಡ್ಜೆಸ್ಟ್‌ಮೆಂಟ್ ಇದ್ಯಾ? ಅಡ್ಜೆಸ್ಟ್‌ಮೆಂಟ್ ಏನೂ ಇಲ್ಲ, ಪರಸ್ಪರ ಗೌರವ ಇದೆ' ಎಂದು ಸಿದ್ದರಾಮಯ್ಯ ಅವರು ಕಾಗೇರಿ ಉದ್ದೇಶಿಸಿ ಹೇಳಿದರು.

'ಹಾಗಿದ್ರೆ ಈಶ್ವರಪ್ಪ ಜತೆ ಇರಬೇಕು' ಎಂದು ರಮೇಶ್ ಕುಮಾರ್ ಹೇಳಿದರು. 'ಈಶ್ವರಪ್ಪನ ಜತೆ ನಂದು ಲವ್ ಅಂಡ್ ಹೇಟ್ ಸಂಬಂಧ' ಎಂದು ನಗುತ್ತಾ ಹೇಳಿದರು. 'ಹೌದದು, ರಾಜಕೀಯವಾಗಿ ಮಾತ್ರ ವೈರತ್ವ' ಎಂದು ಈಶ್ವರಪ್ಪ ಧ್ವನಿಗೂಡಿಸಿದರು.

ಚಿತ್ರ ನಟಿ ಜಯಂತಿಯವರಿಗೆ ಶ್ರದ್ಧಾಂಜಲಿ ಸಲ್ಲಿಸುವ ಸಂದರ್ಭದಲ್ಲಿ ಸಿದ್ದರಾಮಯ್ಯ ಅವರು ಮಧುರ ನೆನಪು ಹಂಚಿಕೊಂಡರು. 'ಪ್ರತಿ ಬಾರಿ ಜಯಂತಿ ಸಿಕ್ಕಾಗ 'ಏನಪ್ಪಾ ಹೀರೋ' ಎನ್ನುತ್ತಿದ್ದರು. ನಾನು ಅವರಿಗೆ ಏನಮ್ಮಾ 'ಎವರ್ ಗ್ರೀನ್ ಹೀರೋಯಿನ್' ಎನ್ನುತ್ತಿದ್ದೆ' ಎಂದರು.

ಸುದ್ದಿ 2 ನಿಮಿಷ

ಸತೀಶ್ ರೆಡ್ಡಿ ಮುಖ್ಯ ಸಚೇತಕ

ಬೆಂಗಳೂರು: ವಿಧಾನಸಭೆಯಲ್ಲಿ ಆಡಳಿತ ಪಕ್ಷದ ಮುಖ್ಯಸಚೇತಕರನ್ನಾಗಿ ಶಾಸಕ ಸತೀಶ್ ರೆಡ್ಡಿಯವರನ್ನು ನೇಮಿಸಿ ಅಧಿಸೂಚನೆ ಹೊರಡಿಸಲಾಗಿದ್ದು, ವಿಧಾನಸಭಾಧ್ಯಕ್ಷರು ಸದನದಲ್ಲಿ ಮಂಗಳವಾರ ಈ ವಿಷಯ ಪ್ರಕಟಿಸಲಿದ್ದಾರೆ ಎಂದು ಮೂಲಗಳು ತಿಳಿಸಿವೆ.



ಸತೀಶ್ ರೆಡ್ಡಿ ಬೆಂಗಳೂರಿನ ಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರದ ಶಾಸಕರು. ಇವರು ಸಚಿವ ಸ್ಥಾನದ ಆಕಾಂಕ್ಷಿಯಾಗಿದ್ದರು. ಇವರಿಗೆ ಸಚಿವ ಸ್ಥಾನ ಒಲಿಯಲಿಲ್ಲ. ಮುಖ್ಯ ಸಚೇತಕ ಸ್ಥಾನ ನೀಡಿ ಸಮಾಧಾನಪಡಿಸಲಾಗಿದೆ. ಈ ಹಿಂದೆ ಸುನಿಲ್ ಕುಮಾರ್ ಮುಖ್ಯ ಸಚೇತಕರಾಗಿದ್ದರು.

17ಕ್ಕೆ ಯುವ ಕಾಂಗ್ರೆಸ್‌ನಿಂದ 'ರಾಷ್ಟ್ರೀಯ ನಿರುದ್ಯೋಗ ದಿನ'

ಬೆಂಗಳೂರು: 'ತಕ್ಷಣ ಉದ್ಯೋಗ ಒದಗಿಸುವಂತೆ ಪ್ರಧಾನಿ ನರೇಂದ್ರ ಮೋದಿ ಅವರನ್ನು ಒತ್ತಾಯಿಸಲು ಇದೇ 17ರಂದು 'ರಾಷ್ಟ್ರೀಯ ನಿರುದ್ಯೋಗ ದಿನ' ಆಚರಿಸಲಾಗುವುದು' ಎಂದು ರಾಜ್ಯ ಯುವ ಕಾಂಗ್ರೆಸ್ ಅಧ್ಯಕ್ಷ ರಕ್ಷಾ ರಾಮಯ್ಯ ಹೇಳಿದರು.

ಸುದ್ದಿಗಾರರ ಜತೆ ಸೋಮವಾರ ಮಾತನಾಡಿದ ಅವರು, 'ದೇಶದಲ್ಲಿ ನಿರುದ್ಯೋಗ ಸಮಸ್ಯೆ ಗಂಭೀರವಾಗಿದೆ. ಯುವ ಜನರ ಆಕ್ರೋಶವನ್ನು ಪ್ರಧಾನಿವರೆಗೆ ತಲುಪಿಸಲು ಅಂದು ವ್ಯಾಪಕ ಪ್ರತಿಭಟನೆ ಹಮ್ಮಿಕೊಳ್ಳಲಾಗುವುದು' ಎಂದರು.

'ಅಂದು ಯುವಜನರು, ಯುವ ಕಾರ್ಯಕರ್ತರು ಟ್ವಿಟರ್ ಹಾಗೂ ಇತರೆ ಸಾಮಾಜಿಕ ಜಾಲತಾಣದ ತಮ್ಮ ಖಾತೆಗಳ ಮೂಲಕ ಉದ್ಯೋಗ ನೀಡುವಂತೆ ಪ್ರಧಾನಿ ಮೋದಿ ಅವರನ್ನು ಒತ್ತಾಯಿಸಬೇಕು' ಎಂದೂ ಮನವಿ ಮಾಡಿದರು.

'ರಾಜ್ಯದಲ್ಲಿ ಒಂದೂವರೆ ವರ್ಷದಿಂದ 40 ಲಕ್ಷಕ್ಕೂ ಹೆಚ್ಚು ಮಂದಿ ಉದ್ಯೋಗ ಕಳೆದುಕೊಂಡಿದ್ದಾರೆ. ಕೆಲವರಿಗೆ ವೇತನ ಕಡಿತವಾಗಿದೆ. ಗಾರ್ಮೆಂಟ್ಸ್ ನೌಕರರು, ಚಾಲಕರು, ಅಸಂಘಟಿತ ಕಾರ್ಮಿಕರು ಹೀಗೆ ಲೆಕ್ಕವಿಲ್ಲದಷ್ಟು ಜನ ಉದ್ಯೋಗ ಕಳೆದುಕೊಂಡು ಕಣ್ಣೀರಿನಲ್ಲಿ ಮುಳುಗಿದ್ದಾರೆ' ಎಂದರು.

'ಉದ್ಯೋಗ ಸೃಷ್ಟಿಗಲ್ಲ, ಕೌಶಲ ತರಬೇತಿಗೆ ಒತ್ತು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಉದ್ಯೋಗ ಸೃಷ್ಟಿಗಿಂತಲೂ, ಬೇಡಿಕೆ ಆಧಾರಿತ ಕೌಶಲ ತರಬೇತಿಗೆ ಹೆಚ್ಚಿನ ಒತ್ತು ನೀಡಲಾಗುತ್ತಿದೆ' ಎಂದು ಕೌಶಲಾಭಿವೃದ್ಧಿ ಸಚಿವ ಡಾ. ಸಿ.ಎನ್. ಅಶ್ವತ್ಥನಾರಾಯಣ ತಿಳಿಸಿದರು.

ಬೆಂಗಳೂರಿನಲ್ಲಿ ನಿರುದ್ಯೋಗ ಸಮಸ್ಯೆ ಹೆಚ್ಚುತ್ತಿರುವ ಬಗ್ಗೆ ವಿಧಾನ ಪರಿಷತ್‌ನಲ್ಲಿ ಕಾಂಗ್ರೆಸ್‌ನ ಬಿ.ಕೆ. ಹರಿಪ್ರಸಾದ್ ಕೇಳಿದ ಪ್ರಶ್ನೆಗೆ ಅವರು, 'ಕೋವಿಡ್ ಸಾಂಕ್ರಾಮಿಕದ ಕಾರಣದಿಂದ ನಿರೀಕ್ಷೆಯಂತೆ ಕೌಶಲ ತರಬೇತಿ ನೀಡಲು ಸಾಧ್ಯ ಆಗಿಲ್ಲ. ಜೊತೆಗೆ, ಆರ್ಥಿಕ ಚಟುವಟಿಕೆಯೂ ಕುಂಠಿತಗೊಂಡಿದೆ' ಎಂದರು.

'ಖಾಸಗಿ ಸಂಸ್ಥೆಗಳು ನಡೆಸಿದ ಸಮೀಕ್ಷೆಗಳ ಪ್ರಕಾರ ಉದ್ಯೋಗ ಸೃಷ್ಟಿಯ ಶೇಕಡಾವಾರು ಪ್ರಮಾಣದಲ್ಲಿ ಬೆಂಗಳೂರಿಗಿಂತ ಪುಣೆ ಮತ್ತು ಹೈದರಾಬಾದ್ ಬಹಳ ಮುಂದಿದೆ. ಶೇ 4ರಷ್ಟು ಮಂದಿ ಮಾತ್ರ ಬೆಂಗಳೂರಿನಲ್ಲಿ ಉದ್ಯೋಗ ಗಿಟ್ಟಿಸಿಕೊಂಡಿದ್ದಾರೆ. ಉದ್ಯೋಗ ಸೃಷ್ಟಿ ವಿಷಯದಲ್ಲಿ ಬೆಂಗಳೂರು ನಗರ ಹಿಂದುಳಿದಿದೆ' ಎಂದರು.

'ಉದ್ಯೋಗ ಸೃಷ್ಟಿಗೆ ಸರ್ಕಾರ ಆಸಕ್ತಿ ವಹಿಸದೇ ಇದ್ದರೆ, ಕೌಶಲ ತರಬೇತಿ ನೀಡುವ ಅಗತ್ಯವಾದರೂ ಏನು' ಎಂದು ಹರಿಪ್ರಸಾದ್ ಪ್ರಶ್ನಿಸಿದರು.

'ಸ್ಕಿಲ್ ಕನೆಕ್ಟ್ ಪೋರ್ಟಲ್ ಮೂಲಕ ತರಬೇತಿ ಮತ್ತು ನೇಮಕಾತಿ ನಡುವಿನ ಅಂತರ ಕಡಿಮೆ ಮಾಡಲಾಗುವುದು. ಆ ಮೂಲಕ, ನೇಮಕಾತಿಗೆ ಹೆಚ್ಚಿನ ಅನುಕೂಲ ಮಾಡಿಕೊಡಲಾಗುವುದು' ಎಂದರು.

'ಇಲಾಖೆಯ ಮೂಲಕ 492 ಉದ್ಯೋಗ ಮೇಳಗಳ ಮೂಲಕ 65,583 ಅಭ್ಯರ್ಥಿಗಳಿಗೆ ಉದ್ಯೋಗ ಅವಕಾಶ ಕಲ್ಪಿಸಲಾಗಿದೆ' ಎಂದೂ ಸಚಿವರು ಮಾಹಿತಿ ನೀಡಿದರು.

'ವನ್ಯಜೀವಿಗಳ ಸಂಖ್ಯೆ ಕಡಿಮೆ ಎಲ್ಲಿ ಆಗುತ್ತೇರಿ?'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದಲ್ಲಿ ವನ್ಯಜೀವಿಗಳ ಸಂಖ್ಯೆ ಕಡಿಮೆ ಎಲ್ಲಿ ಆಗುತ್ತದೆ... ಹೆಚ್ಚಾಗುತ್ತಾ ಹೋಗುತ್ತದೆ' –ಇದು, ಅರಣ್ಯ ಸಚಿವ ಉಮೇಶ ಕತ್ತಿ ಅವರ ಉತ್ತರ.



ಉಮೇಶ ಕತ್ತಿ

'ವನ್ಯಜೀವಿಗಳ ಸಂಖ್ಯೆ ಕಡಿಮೆ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ. ಅಳಿವಿನ ಅಂಚಿನಲ್ಲಿರುವ ವನ್ಯಜೀವಿಗಳ ಸಂರಕ್ಷಣೆಗೆ ಸರ್ಕಾರ ಯಾವ ಯೋಜನೆಗಳನ್ನು ರೂಪಿಸಿದೆ' ಎಂದು ವಿಧಾನ ಪರಿಷತ್‌ನಲ್ಲಿ ಜೆಡಿಎಸ್‌ನ ಎಚ್.ಎಂ. ರಮೇಶ್‌ಗೌಡ ಕೇಳಿದ ಪ್ರಶ್ನೆಗೆ ಹೀಗೆ ಉತ್ತರಿಸಿದ್ದಾರೆ. 'ಅರಣ್ಯ ಇಲಾಖೆಯ ಕಟ್ಟುನಿಟ್ಟಿನ ರಕ್ಷಣಾ ಕ್ರಮಗಳಿಂದಾಗಿ ಮುಖ್ಯವಾಗಿ ಆನೆ, ಹುಲಿ, ಚಿರತೆ ಮುಂತಾದ ವನ್ಯಜೀವಿಗಳ ಸಂಖ್ಯೆ ಹೆಚ್ಚಳವಾಗಿದೆ' ಎಂದರು.

'2017ರ ಆನೆ ಗಣತಿಯಂತೆ ರಾಜ್ಯದಲ್ಲಿ 6,049 ಆನೆಗಳಿವೆ. ದೇಶದಲ್ಲಿರುವ ಆನೆಗಳ ಒಟ್ಟು ಸಂಖ್ಯೆಯ ಶೇ 25ರಷ್ಟು ಕರ್ನಾಟಕದಲ್ಲಿದ್ದು, ರಾಷ್ಟ್ರದಲ್ಲಿಯೇ ರಾಜ್ಯ ಪ್ರಥಮ ಸ್ಥಾನದಲ್ಲಿದೆ. 'ನಾಲ್ಕು ವರ್ಷಗಳಿಗೆ ಒಮ್ಮೆ ವನ್ಯಜೀವಿಗಳ ಗಣತಿ ನಡೆಯುತ್ತದೆ. ವನ್ಯಜೀವಿಗಳ ಹಾವಳಿಯಿಂದ ನಷ್ಟ ಅನುಭವಿಸಿದವರಿಗೆ ಸರ್ಕಾರದಿಂದ ಪರಿಹಾರ ನೀಡಲಾಗುತ್ತಿದೆ' ಎಂದೂ ಕತ್ತಿ ತಿಳಿಸಿದರು.

33 ಹುಲಿ ಸಾವು: 2018ರ ಸಾಲಿನ ಹುಲಿ ಗಣತಿಯಂತೆ ರಾಜ್ಯದಲ್ಲಿ 524 ಹುಲಿಗಳಿವೆ ಎಂದು ಅಂದಾಜಿಸಲಾಗಿದ್ದು, ದೇಶದಲ್ಲೇ ಎರಡನೇ ಸ್ಥಾನದಲ್ಲಿದೆ. ರಾಜ್ಯದಲ್ಲಿ ಮೂರು ವರ್ಷದಲ್ಲಿ 33 ಹುಲಿಗಳು ಮೃತಪಟ್ಟಿವೆ. 2018–19ರಲ್ಲಿ 11, 2019–20ರಲ್ಲಿ 10 ಹಾಗೂ 2020–21ರಲ್ಲಿ 12 ಹುಲಿಗಳು ಸಾವಿಗೀಡಾಗಿವೆ ಎಂದು ಕತ್ತಿ ತಿಳಿಸಿದರು.

ಕೊಡಗು ಮತ್ತು ಚಾಮರಾಜನಗರ ಜಿಲ್ಲೆಯಲ್ಲಿ ಹುಲಿಗಳ ಸಾವು ಹೆಚ್ಚು ಎಂದೂ ಅವರು ಹೇಳಿದರು.

ಶುಲ್ಕದ ಹಣ ಹುಲಿ ಸಂರಕ್ಷಿತ ಪ್ರತಿಷ್ಠಾನ ನಿಧಿಗೆ

ಕೊಡಚಾದ್ರಿ ಪ್ರವೇಶ ಶುಲ್ಕ ಮೂರು ಪಟ್ಟು, ಚಾರಣ ಶುಲ್ಕ ಶೇ 50ರಷ್ಟು ಹೆಚ್ಚಳ ಮಾಡಿರುವುದಕ್ಕೆ ಸ್ಪಷ್ಟನೆ ನೀಡಿರುವ ಅರಣ್ಯ ಇಲಾಖೆ, ಈ ಹಣವನ್ನು ಭದ್ರಾ ಹುಲಿ ಸಂರಕ್ಷಿತ ಪ್ರತಿಷ್ಠಾನ ನಿಧಿ ಮತ್ತು ಕಟ್ಟಿನಹೊಳೆ ಪರಿಸರ ಅಭಿವೃದ್ಧಿ ಸಮಿತಿಗೆ ಜಮೆ ಮಾಡುವುದಾಗಿ ಹೇಳಿದೆ.

ಕೊಡಚಾದ್ರಿ ಚಾರಣ ಶುಲ್ಕ ಪರಿಷ್ಕರಣೆ ಕುರಿತು ವಿಧಾನ ಪರಿಷತ್ ಕಾಂಗ್ರೆಸ್ ಸದಸ್ಯ ಕೆ. ಪ್ರತಾಪಚಂದ್ರ ಶೆಟ್ಟಿ ಕೇಳಿದ ಪ್ರಶ್ನೆಗೆ ಉತ್ತರಿಸಿರುವ ಅರಣ್ಯ ಸಚಿವ ಉಮೇಶ ಕತ್ತಿ, '2021ರ ಏ.1ರಿಂದ ಶುಲ್ಕವನ್ನು ಪರಿಷ್ಕರಿಸಲಾಗಿದೆ. ಪ್ರವೇಶ ಶುಲ್ಕವನ್ನು ₹25ರಿಂದ ₹100ಕ್ಕೆ, ಚಾರಣ ಶುಲ್ಕವನ್ನು ₹200ರಿಂದ ₹300ಕ್ಕೆ ಏರಿಸಲಾಗಿದೆ' ಎಂದರು.

'ಕೊಡಚಾದ್ರಿಯಲ್ಲಿ 2021–22ರ ಆಗಸ್ಟ್‌ವರೆಗೆ ₹22.46 ಲಕ್ಷವನ್ನು ವಿವಿಧ ಶುಲ್ಕಗಳ ರೂಪದಲ್ಲಿ ಸಂಗ್ರಹಿಸಲಾಗಿದೆ. ಈ ಪೈಕಿ ಕಟ್ಟಿನಹೊಳೆ ಪರಿಸರ ಅಭಿವೃದ್ಧಿ ಸಮಿತಿಗೆ ₹2.82 ಲಕ್ಷ ಹಾಗೂ ಭದ್ರಾ ಹುಲಿ ಪ್ರತಿಷ್ಠಾನ ನಿಧಿಗೆ ₹19.64 ಲಕ್ಷ ಜಮಾ ಮಾಡಲಾಗಿದೆ' ಎಂದೂ ಅವರು ತಿಳಿಸಿದರು.

ಕಾಂಗ್ರೆಸ್‌ನಿಂದ ಇಂದು ನಿಲುವಳಿ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಲೆ ಏರಿಕೆಯಿಂದ ಜನ ಸಾಮಾನ್ಯರು ತತ್ತರಿಸಿದ್ದು, ಈ ಬಗ್ಗೆ ಮಂಗಳವಾರ ವಿಧಾನಸಭೆಯಲ್ಲಿ ನಿಲುವಳಿ ಸೂಚನೆ ಮಂಡಿಸುವುದಾಗಿ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದ್ದಾರೆ.

ಸುದ್ದಿಗಾರರ ಜತೆ ಮಾತನಾಡಿ ಅವರು, ರಾಜ್ಯದ ಜನರ ಕಾಳಜಿಯಿಂದ ಈ ವಿಷಯ ಪ್ರಸ್ತಾಪಿಸುತ್ತಿದ್ದೇವೆ. ಸಾಮಾಜಿಕ ಜಾಲತಾಣಗಳಲ್ಲಿ ಸಾರ್ವಜನಿಕರು ಕೇಂದ್ರ, ರಾಜ್ಯ ಸರ್ಕಾರಗಳನ್ನು ತರಾಟೆಗೆ ತೆಗೆದುಕೊಳ್ಳುತ್ತಿದ್ದಾರೆ. ಇದನ್ನು ಬಿಜೆಪಿಯವರಯ ಗಮನಿಸುವುದು ಒಳ್ಳೆಯದು ಎಂದರು.

ಕೇಂದ್ರ ಸರ್ಕಾರದಿಂದ ಮೋಸ: ಕಚ್ಚಾ ತೈಲ ಬೆಲೆ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಏರಿಕೆ ಆಗಿದೆ ಎಂಬ ನೆಪ ಹೇಳಿ ಪೆಟ್ರೋಲ್, ಡೀಸೆಲ್ ದರ ಏರಿಸುವ ಮೂಲಕ ಕೇಂದ್ರ ಸರ್ಕಾರ ಸಾರ್ವಜನಿಕರಿಗೆ ಮೋಸ ಮಾಡುತ್ತಿದೆ ಎಂದು ಸಿದ್ದರಾಮಯ್ಯ ದೂರಿದರು.

ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ತೆರಿಗೆಯನ್ನು ರಾಜ್ಯ ಸರ್ಕಾರ ಕಡಿತಗೊಳಿಸಬೇಕು. ಈ ತೆರಿಗೆ ಪ್ರಮಾಣವು ಮನಮೋಹನ್‌ಸಿಂಗ್ ಪ್ರಧಾನಿ ಆಗಿದ್ದಾಗ ಮತ್ತು ಈಗ ಎಷ್ಟು ಇದೆ ಎಂಬುದನ್ನು ಮಾಧ್ಯಮಗಳೇ ಪರಿಶೀಲಿಸಲಿ. ಮುಖ್ಯಮಂತ್ರಿ ಬೊಮ್ಮಾಯಿ ಅವರಾದರೂ ಜನರಿಗೆ ನಿಜಾಂಶ ವಿವರಿಸಲಿ ಎಂದರು.

ವಾಜಪೇಯಿ ಅವರು 1973ರಲ್ಲಿ ಬೆಲೆ ಏರಿಕೆ ವಿರೋಧಿಸಿ ಎತ್ತಿನ ಗಾಡಿಯಲ್ಲಿ ಸಂಸತ್ತಿಗೆ ಬಂದಿರಲಿಲ್ಲವೇ? ಕಾಂಗ್ರೆಸ್ ಪ್ರತಿಭಟನೆಯನ್ನು ವಿರೋಧಿಸುವ ಮುಖ್ಯಮಂತ್ರಿ ಹಾಗೂ ಬಿಜೆಪಿಯವರು ಇತಿಹಾಸ ಓದಲಿ. ಆಗ ವಾಜಪೇಯಿಯವರು ಏಕೆ ಪ್ರತಿಭಟಿಸಿದರು? ಜನ ಬೀದಿಗೆ ಇಳಿದಿದ್ದರೆ? ಯುಪಿಎ ಸರ್ಕಾರದ ಅವಧಿಯಲ್ಲಿ ಸ್ವಲ್ಪ ಬೆಲೆ ಏರಿಕೆಯಾದಾಗ ಶೋಭಾ ಕರಂದ್ಲಾಜೆ ನೇತೃತ್ವದಲ್ಲಿ ಸಿಲಿಂಡರ್ ತಲೆ ಮೇಲೆ ಹೊತ್ತು ಧರಣಿ ಮಾಡಿರಲಿಲ್ಲವೇ ಎಂದು ಪ್ರಶ್ನಿಸಿದರು.

ಮನಮೋಹನ್ ಸಿಂಗ್ ಅವರು ಪ್ರಧಾನಿ ಆಗಿದ್ದಾಗ ಡೀಸೆಲ್ ಮೇಲಿನ ತೆರಿಗೆ ₹3.45 ಇತ್ತು. ಈಗ ₹31.74 ಆಗಿದೆ. ಅದೇ ರೀತಿ ಪೆಟ್ರೋಲ್ ಮಾರಾಟದ ಮೇಲಿನ ತೆರಿಗೆ ₹9.21 ಇತ್ತು. ಅದು ₹32.98 ಕ್ಕೆ ಏರಿಕೆಯಾಗಿದೆ ಎಂದು ಸಿದ್ದರಾಮಯ್ಯ ಹೇಳಿದರು.

ಇಂದು ಕಲಾಪ ಸಲಹಾ ಸಮಿತಿ ಸಭೆ

ಅಧಿವೇಶನವನ್ನು ಸುಸೂತ್ರವಾಗಿ ನಡೆಸಲು ಮತ್ತು ಪ್ರಮುಖ ಮಸೂದೆಗಳಿಗೆ ಒಪ್ಪಿಗೆ ಪಡೆಯುವ ಬಗ್ಗೆ ಮಂಗಳವಾರ ಬೆಳಿಗ್ಗೆ 10.30 ಕ್ಕೆ ವಿಧಾನಸಭೆ ಅಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಅಧ್ಯಕ್ಷತೆಯಲ್ಲಿ ಕಲಾಪ ಸಲಹಾ ಸಮಿತಿ ಸಭೆ ನಡೆಯಲಿದೆ.

ಶಿಕ್ಷಕರ ಅರ್ಹತಾ ಪರೀಕ್ಷೆ: ಶೇ 19.51ರಷ್ಟು ಅಭ್ಯರ್ಥಿಗಳು ತೇರ್ಗಡೆ

ಬೆಂಗಳೂರು: ಸರ್ಕಾರಿ ಶಾಲಾ ಶಿಕ್ಷಕರ ಹುದ್ದೆಯ ಅರ್ಹತೆಗಾಗಿ ಆಗಸ್ಟ್ 22ರಂದು ನಡೆದ ಕರ್ನಾಟಕ- ಶಿಕ್ಷಕರ ಅರ್ಹತಾ ಪರೀಕ್ಷೆಯಲ್ಲಿ (ಕೆ-ಟಿಇಟಿ) ಶೇ 19.51ರಷ್ಟು ಅಭ್ಯರ್ಥಿಗಳು ತೇರ್ಗಡೆಯಾಗಿದ್ದಾರೆ.

ಈ ಬಾರಿ 2.31 ಲಕ್ಷ ಅಭ್ಯರ್ಥಿಗಳು ಪರೀಕ್ಷೆ ಬರೆದಿದ್ದು, ಈ ಪೈಕಿ, 45,074 ಅಭ್ಯರ್ಥಿಗಳು ಅರ್ಹತೆ ಪಡೆದಿದ್ದಾರೆ. ಕಳೆದ ವರ್ಷ ಶೇ 3.93 ರಷ್ಟು ಫಲಿತಾಂಶ ಬಂದಿತ್ತು. ಪತ್ರಿಕೆ– 1ರಲ್ಲಿ (ಒಂದರಿಂದ 5ನೇ ತರಗತಿಗೆ ಬೋಧಿಸುವ ಶಿಕ್ಷಕರಿಗಾಗಿ) 13,639 ಮಂದಿ ಶೇ 60ಕ್ಕಿಂತ ಹೆಚ್ಚು ಹಾಗೂ ಪತ್ರಿಕೆ– 2ರಲ್ಲಿ (6–8ನೇ ತರಗತಿಗೆ ಬೋಧಿಸುವ ಶಿಕ್ಷಕರಿಗಾಗಿ) 19,523 ಅಭ್ಯರ್ಥಿಗಳು ಶೇ 60ರಷ್ಟು ಅಂಕ ಗಳಿಸಿದ್ದಾರೆ.

ಅಧಿವೇಶನಕ್ಕೆ ಪ್ರತಿಭಟನೆ ಬಿಸಿ

ಒಂದನೇ ಪುಟದಿಂದ

ಕುಮಾರ ಪಾರ್ಕ್ ನಿವಾಸದಿಂದ ಸಿದ್ದರಾಮಯ್ಯ ಸ್ವತಃ ಎತ್ತಿನಬಂಡಿ ಮುನ್ನಡೆಸಿಕೊಂಡು ಸಾಗಿದರು. ಇನ್ನೊಂದೆಡೆ ಸದಾಶಿವನಗರದಿಂದ ಡಿ.ಕೆ. ಶಿವಕುಮಾರ್ ಬಂಡಿ ಏರಿ ಬಂದರು. ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಎಸ್.ಆರ್. ಪಾಟೀಲ, ಕೆಪಿಸಿಸಿ ಕಾರ್ಯಾಧ್ಯಕ್ಷರಾದ ರಾಮಲಿಂಗಾ ರೆಡ್ಡಿ, ಈಶ್ವರ ಖಂಡ್ರೆ, ಶಾಸಕರಾದ ಜಿ. ಪರಮೇಶ್ವರ, ಎಂ.ಬಿ. ಪಾಟೀಲ, ಪ್ರಿಯಾಂಕ್ ಖರ್ಗೆ ಸೇರಿದಂತೆ ಹಲವರು ಜತೆಗಿದ್ದರು.

ಎರಡೂ ತಂಡಗಳು ವಿಂಡ್ಸರ್ ಮ್ಯಾನರ್ ವೃತ್ತ ತಲುಪುತ್ತಿದ್ದಂತೆ ಮತ್ತಷ್ಟು ಮಂದಿ ಶಾಸಕರು, ಮುಖಂಡರು ಮತ್ತು ಕಾರ್ಯಕರ್ತರು ಬಂದು ಸೇರಿದರು. ವಿಧಾನಸೌಧದ ಕಡೆಗೆ ಸಾಗಲು ಅನುಮತಿ ನಿರಾಕರಿಸಿದ ಪೊಲೀಸರು, ರಸ್ತೆಗೆ ಅಡ್ಡಲಾಗಿ ಬ್ಯಾರಿಕೇಡ್‌ಗಳನ್ನು ಇರಿಸಿ ತಡೆಯೊಡ್ಡಿದರು.

ಕೆಲ ಹೊತ್ತಿನ ವಾಗ್ವಾದದ ಬಳಿಕ, ಒಂದು ಎತ್ತಿನಬಂಡಿಗೆ ಮಾತ್ರ ಮುಂದಕ್ಕೆ ಸಾಗಲು ಅನುಮತಿ ನೀಡುವುದಾಗಿ ಪೊಲೀಸರು ತಿಳಿಸಿದರು. ಶಿವಕುಮಾರ್, ಮತ್ತವರ ತಂಡ ಸಿದ್ದರಾಮಯ್ಯ ಮುನ್ನಡೆಸುತ್ತಿದ್ದ ಬಂಡಿ ಏರಿತು. ಇನ್ನೊಂದು ಎತ್ತಿನಬಂಡಿ ಹಾಗೂ ಕಾಂಗ್ರೆಸ್ ಕಾರ್ಯಕರ್ತರ ಗುಂಪನ್ನು ವಿಂಡ್ಸರ್ ಮ್ಯಾನರ್ ವೃತ್ತದಲ್ಲೇ ತಡೆಹಿಡಿದು ನಿಲ್ಲಿಸಲಾಯಿತು.

ವಿಧಾನಸೌಧ ಪ್ರವೇಶಕ್ಕೂ ತಡೆ: ಬಸವೇಶ್ವರ ವೃತ್ತ ಮಾರ್ಗವಾಗಿ ವಿಧಾನಸೌಧದತ್ತ ಕಾಂಗ್ರೆಸ್ ನಾಯಕರು, ಶಾಸಕರು ಹೊರಟರು. ಆದರೆ, ವಿಧಾನಸೌಧದ ಪ್ರವೇಶ ದ್ವಾರದ ಗೇಟ್‌ಗಳನ್ನು ಮುಚ್ಚಿದ ಪೊಲೀಸರು, ಎತ್ತಿನಬಂಡಿಯಲ್ಲಿ ಒಳಕ್ಕೆ ಹೋಗಲು ಅನುಮತಿ ನಿರಾಕರಿಸಿದರು.

ಅಲ್ಲಿಯೂ ಕಾಂಗ್ರೆಸ್ ನಾಯಕರು ಮತ್ತು ಪೊಲೀಸರ ನಡುವೆ ಮಾತಿನ ಚಕಮಕಿ ಆರಂಭವಾಯಿತು. 'ವಿಧಾನಸೌಧದ ಒಳಕ್ಕೆ ಹೋಗಲು ಏಕೆ ಅವಕಾಶ ಇಲ್ಲ? ಎತ್ತಿನಬಂಡಿಯಲ್ಲಿ ನಾವು ಹೋದರೆ ನಿಮ್ಮ ಗಂಟೇನು ಖರ್ಚಾಗುತ್ತದೆ' ಎಂದು ಸಿದ್ದರಾಮಯ್ಯ ಪೊಲೀಸ್ ಅಧಿಕಾರಿಗಳಿಗೆ ರೇಗಿದರು. ಶಿವಕುಮಾರ್ ಕೂಡ ಪೊಲೀಸರ ವಿರುದ್ಧ ಹರಿಹಾಯ್ದರು.

ಲೋಕಸಭಾ ಅಧಿವೇಶನದ ವೇಳೆ ವಾಜಪೇಯಿ ಅವರೂ ಇದೇ ರೀತಿ ಪ್ರತಿಭಟನೆ ನಡೆಸಿದ್ದನ್ನು ಉದಾಹರಣೆ ನೀಡಿದ ಸಿದ್ದರಾಮಯ್ಯ, 'ಒಳಕ್ಕೆ ಹೋಗಲು ಅನುಮತಿ ನೀಡಲೇಬೇಕು' ಎಂದು ಪಟ್ಟು ಹಿಡಿದರು. ಬಳಿಕ ಪೊಲೀಸರು ಗೇಟ್ ತೆರೆದು ಎತ್ತಿನಬಂಡಿ ಒಳಕ್ಕೆ ಹೋಗಲು ಅವಕಾಶ ನೀಡಿದರು.

ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ಬೆಲೆ ಏರಿಕೆಯನ್ನು 'ಕ್ರಿಮಿನಲ್ ಅಪರಾಧ' ಎಂದು ಬಿಜೆಪಿ ನಾಯಕ ಅಟಲ್ ಬಿಹಾರಿ ವಾಜಪೇಯಿ ಟೀಕಿಸಿದ್ದರು. ಈಗ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ನಿತ್ಯವೂ ಜನರ ಕಿಸೆಗಳ್ಳತನ ಮಾಡುತ್ತಿವೆ. ಇದನ್ನು ಸಹಿಸಿಕೊಂಡು ಕೂರಲು ಸಾಧ್ಯವಿಲ್ಲ ಎಂದು ಶಿವಕುಮಾರ್ ಕಿಡಿಕಾರಿದರು.

ವಿಧಾನಸೌಧದ ಮುಂಭಾಗದ ಕೆಂಗಲ್ ಹನುಮಂತಯ್ಯ ಪ್ರತಿಮೆ ಬಳಿಯ ಪ್ರವೇಶ ದ್ವಾರದವರೆಗೂ ಬಂಡಿಯಲ್ಲಿ ಪ್ರತಿಭಟನಾಕಾರರು ಸಾಗಿದರು.

ಬಂಡಿಯಿಂದ ಜಾರಿ ಬಿದ್ದ ಶಾಸಕರು

ಎತ್ತಿನಬಂಡಿಯು ವಿಧಾನಸೌಧದ ಆವರಣ ಪ್ರವೇಶಿಸಿದ ಬಳಿಕ ಕಾಂಗ್ರೆಸ್‌ನ ಹಲವು ಶಾಸಕರು ಮೇಲೇರಿದರು. ಭಾರ ಹೆಚ್ಚಾಗಿದ್ದರಿಂದ ಎತ್ತುಗಳು ಮುಗ್ಗರಿಸಿದವು. ಬಂಡಿಯ ಹಿಂಬದಿಯಲ್ಲಿದ್ದ ಕೆಲವು ಶಾಸಕರು ಜಾರಿ ಕೆಳಕ್ಕೆ ಬಿದ್ದರು.

ದೊಡ್ಡಬಳ್ಳಾಪುರ ಶಾಸಕ ವೆಂಕಟರಮಣಯ್ಯ ನೆಲದ ಮೇಲೆ ಕುಸಿದು ಕುಳಿತರು. ವಿರೋಧ ಪಕ್ಷದ ಮುಖ್ಯ ಸಚೇತಕ ಅಜಯ್ ಸಿಂಗ್, ಬಿ.ಕೆ. ಸಂಗಮೇಶ್ವರ ಸೇರಿದಂತೆ ಕೆಲವು ಶಾಸಕರು ಕೆಳಕ್ಕೆ ಜಾರಿದರು.

ಬಾಲ ಪೀಠಾಧಿಪತಿ ಪ್ರಕರಣ: ನಾಗಾನಂದ ಅಮಿಕಸ್ ಕ್ಯೂರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉಡುಪಿಯ ಶೀರೂರು ಮಠದ ಪೀಠಾಧಿಪತಿಯನ್ನಾಗಿ ಅಪ್ರಾಪ್ತರನ್ನು ನೇಮಕ ಮಾಡಿರುವ ಪ್ರಕರಣದಲ್ಲಿ ನ್ಯಾಯಾಲಯಕ್ಕೆ ಸಲಹೆ ನೀಡಲು ವಕೀಲ ಎಸ್.ಎಸ್.ನಾಗಾನಂದ ಅವರನ್ನು ಅಮಿಕಸ್ ಕ್ಯೂರಿಯಾಗಿ ನೇಮಿಸಿ ಹೈಕೋರ್ಟ್ ಆದೇಶಿಸಿದೆ.

ಮಠದ ಭಕ್ತ ಪಿ. ಲಾತವ್ಯ ಆಚಾರ್ಯ ಸೇರಿ ನಾಲ್ವರು ಸಲ್ಲಿಸಿರುವ ಅರ್ಜಿ ವಿಚಾರಣೆ ನಡೆಸಿದ ಹಂಗಾಮಿ ಮುಖ್ಯ ನ್ಯಾಯಮೂರ್ತಿ ಸತೀಶ್ ಚಂದ್ರ ಶರ್ಮ ನೇತೃತ್ವದ ವಿಭಾಗೀಯ ಪೀಠ, ಈ ಆದೇಶ ಹೊರಡಿಸಿದೆ.

ಅರ್ಜಿಯ ಪ್ರತಿ ಹಾಗೂ ಇತರ ದಾಖಲೆಗಳನ್ನು ಅಮಿಕಸ್ ಕ್ಯೂರಿ ಅವರಿಗೆ ಒದಗಿಸಬೇಕು ಎಂದು ತಿಳಿಸಿದ ಪೀಠ, ಆಕ್ಷೇಪಣೆ ಸಲ್ಲಿಸಲು ಸರ್ಕಾರಕ್ಕೆ ಸೂಚನೆ ನೀಡಿತು. ವಿಚಾರಣೆಯನ್ನು ಸೆ.23ಕ್ಕೆ ನಿಗದಿಪಡಿಸಿತು.



'ಬಾಲ ಸನ್ಯಾಸಿಗಳನ್ನು ಮಠದ ಪೀಠಾಧಿಪತಿ ಮಾಡುವ ಸಂಪ್ರದಾಯ ತಲೆ ತಲಾಂತರಗಳಿಂದ ಇದೆ. ಶಂಕರಾಚಾರ್ಯರು 12ನೇ ವಯಸಿನಲ್ಲಿ, ಮಧ್ವಾಚಾರ್ಯರು 10ನೇ ವಯಸಿನಲ್ಲಿ ಸನ್ಯಾಸ ಸ್ವೀಕರಿಸಿ ಪೀಠಾಧಿಪತಿ ಆಗಿದ್ದರು. ಬಾಲ ಸನ್ಯಾಸಿಗೆ ದೀಕ್ಷೆ ಕೊಡಿಸಿ, ಧರ್ಮಶಾಸ್ತ್ರ, ವೇದ ಮತ್ತು ಉಪನಿಷತ್ತುಗಳನ್ನು ಬೋಧಿಸಿದ ಬಳಿಕ ಅವರನ್ನು ಪೀಠಾಧಿಪತಿ ಮಾಡಲಾಗುತ್ತದೆ. ಇದಕ್ಕೆ ಕಾನೂನಿನ ನಿರ್ಬಂಧ ಇಲ್ಲ. ಬಲವಂತವಾಗಿ ಸನ್ಯಾಸ ಹೇರಿಲ್ಲ' ಎಂದು ಸೋದೆ ವಾದಿರಾಜ ಮಠದ ಪರ ವಕೀಲರು ವಾದಿಸಿದರು.

'16 ವರ್ಷದ ಬಾಲಕನನ್ನು ಪೀಠಾಧಿಪತಿ ಮಾಡುವ ಮೂಲಕ ಮಕ್ಕಳ ಹಕ್ಕು ಉಲ್ಲಂಘಿಸಲಾಗಿದೆ. 18 ವರ್ಷ ತುಂಬದೇ ಇರುವವರು ನೀಡುವ ಸಮ್ಮತಿಗೂ ಮಾನ್ಯತೆ ಇಲ್ಲ. ಪ್ರಕರಣದಲ್ಲಿ ಅಪ್ರಾಪ್ತರ ಹಕ್ಕುಗಳ ಉಲ್ಲಂಘನೆ. ನ್ಯಾಯಾಲಯ ಅವುಗಳನ್ನು ಪರಿಶೀಲಿಸಬೇಕು' ಎಂದು ಅರ್ಜಿದಾರರ ಪರ ವಕೀಲರು ತಿಳಿಸಿದರು.

'ಇದು ಗಂಭೀರ ವಿಚಾರವಾಗಿದ್ದು, ಬಾಲ ಸನ್ಯಾಸತ್ವ ಮತ್ತು ಮಠಾಧಿಪತಿ ನೇಮಕ ನಿರ್ಬಂಧಿಸಲು ಕಾನೂನು ಇದೆಯೇ ಎಂಬುದನ್ನು ಪರಿಶೀಲಿಸಬೇಕಾಗುತ್ತದೆ' ಎಂದು ಪೀಠ ಹೇಳಿತು. ಅಗತ್ಯ ನೆರವು ನೀಡಲು ಅಮಿಕಸ್ ಕ್ಯೂರಿ ಅವರನ್ನು ನೇಮಿಸಿ ಆದೇಶಿಸಿತು.

ದ್ವಿಚಕ್ರ, ಟ್ರ್ಯಾಕ್ಟರ್‌ಗಳಿಗೆ ಸರ್ವಿಸ್ ರಸ್ತೆ ಮಾತ್ರ ಬಳಕೆಗೆ ಪ್ರಸ್ತಾವ

ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್ ವೇ: ಸಣ್ಣ ವಾಹನಗಳಿಗಿಲ್ಲ ಪ್ರವೇಶ

• ಆರ್.ಜಿತೇಂದ್ರ

ರಾಮನಗರ: ದಶಪಥವಾಗಿ ನಿರ್ಮಾಣ ಆಗುತ್ತಿರುವ ಬೆಂಗಳೂರು–ಮೈಸೂರು ಹೆದ್ದಾರಿಯ 'ಎಕ್ಸ್‌ಪ್ರೆಸ್ ವೇ'ಯಲ್ಲಿ ವೇಗದ ವಾಹನಗಳ ಓಡಾಟಕ್ಕೆ ಮಾತ್ರವೇ ಅನುಮತಿ ಇರಲಿದೆ. ದ್ವಿಚಕ್ರ, ಆಟೊ, ಟ್ರ್ಯಾಕ್ಟರ್‌ನಂತಹ ವಾಹನಗಳಿಗೆ ಸರ್ವೀಸ್ ರಸ್ತೆ ಮಾತ್ರ ಸಿಗಲಿದೆ.

ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಇಲ್ಲಿ ಹತ್ತು ಪಥದ ರಸ್ತೆ ನಿರ್ಮಾಣ ಮಾಡುತ್ತಿದೆ. ಇದರಲ್ಲಿ ಆರು ಪಥದ 'ಎಕ್ಸ್‌ಪ್ರೆಸ್ ವೇ' ಮತ್ತು ಅದರ ಎಡಬಲದಲ್ಲಿ ತಲಾ ಎರಡು ಪಥಗಳ ಸರ್ವೀಸ್ ರಸ್ತೆ ನಿರ್ಮಾಣ ಆಗುತ್ತಿದೆ. ಆರು ಪಥದ ವಿಶೇಷ ರಸ್ತೆಗೆ ಟೋಲ್ ಸುಂಕ ಇರಲಿದ್ದು, ಮೈಸೂರು–ಬೆಂಗಳೂರು ನಡುವಿನ ಪ್ರಯಾಣದ ಅವಧಿ 90 ನಿಮಿಷಕ್ಕೆ ಇಳಿಯಲಿದೆ.

ಈ ವಿಶೇಷ ಪಥದಲ್ಲಿ ಸಂಚರಿಸುವ ವಾಹನಗಳ ಸುಗಮ ಪ್ರಯಾಣಕ್ಕೆ ಅನುಕೂಲ ಮಾಡಿಕೊಡಲು ಈ ಹಾದಿಯಲ್ಲಿ ದ್ವಿಚಕ್ರ ಮತ್ತಿತರ ಸಣ್ಣ ವಾಹನಗಳ ಓಡಾಟಕ್ಕೆ ನಿರ್ಬಂಧ ವಿಧಿಸಲು ಹೆದ್ದಾರಿ ಪ್ರಾಧಿಕಾರ ಕೇಂದ್ರ ಸರ್ಕಾರಕ್ಕೆ ಈಗಾಗಲೇ ಪ್ರಸ್ತಾವ ಸಲ್ಲಿಸಿದೆ. ಇದಕ್ಕೆ ಒಪ್ಪಿಗೆ ದೊರೆತಲ್ಲಿ ರಾಜ್ಯದಲ್ಲಿ ಈ ವ್ಯವಸ್ಥೆ ಜಾರಿಗೆ ಬರುವ ಮೊದಲ ರಾಷ್ಟ್ರೀಯ ಹೆದ್ದಾರಿ ಇದಾಗಲಿದೆ.

ಅನುಕೂಲಗಳೇನು?: ಎಕ್ಸ್‌ಪ್ರೆಸ್ ವೇನಲ್ಲಿ ವಾಹನಗಳ ಓಡಾಟಕ್ಕೆ ಯಾವುದೇ ಅಡೆತಡೆ ಇರುವುದಿಲ್ಲ. ಇದರ ಮಧ್ಯೆ ಬೈಕ್, ಆಟೊ ಮೊದಲಾದ ವಾಹನಗಳ ಓಡಾಟ ಹೆಚ್ಚಾದಲ್ಲಿ ಅದರಿಂದ ಅಪಘಾತ ಸಂಭವಿಸುವ ಸಾಧ್ಯತೆ ಹೆಚ್ಚಿರುತ್ತದೆ. ಉಳಿದ ವಾಹನಗಳ ವೇಗಕ್ಕೂ ಅಡ್ಡಿಯಾಗುತ್ತದೆ. ಹೀಗಾಗಿ ದ್ವಿಚಕ್ರ, ತ್ರಿಚಕ್ರ ವಾಹನಗಳಿಗೆ ಸರ್ವೀಸ್ ರಸ್ತೆಯಲ್ಲಿ ಅವಕಾಶ ಕಲ್ಪಿಸಲಾಗುತ್ತದೆ. ಇದರಿಂದ ಅಪಘಾತ ಕಡಿಮೆಯಾಗುವ ಜತೆಗೆ ಸ್ಥಳೀಯ ವಾಹನಗಳಿಗೆ ಟೋಲ್ ಸುಂಕವೂ ತಪ್ಪುತ್ತದೆ ಎನ್ನುವುದು ಅಧಿಕಾರಿಗಳ ವಿವರಣೆ.



ನಿರ್ಮಾಣ ಹಂತದಲ್ಲಿರುವ ಬೆಂಗಳೂರು–ಮೈಸೂರು ಹೆದ್ದಾರಿ

ಎಕ್ಸ್‌ಪ್ರೆಸ್ ವೇನಲ್ಲಿ ಬೈಕ್, ಟ್ರ್ಯಾಕ್ಟರ್ ಮೊದಲಾದ ವಾಹನಗಳಿಗೆ ಸರ್ವೀಸ್ ರಸ್ತೆ ಬಳಸಿಕೊಳ್ಳಲು ಯೋಜಿಸಲಾಗಿದೆ. ಈ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಿದ್ದು ಅನುಮತಿ ಪಡೆಯಲಾಗುವುದು

ಶ್ರೀಧರ್, ಯೋಜನಾ ನಿರ್ದೇಶಕ, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ

ಆದರೆ, ಈ ನಿರ್ಧಾರದಿಂದ ಮೈಸೂರು–ಬೆಂಗಳೂರು ನಡುವೆ ಬೈಕ್‌ನಲ್ಲಿ ಓಡಾಡುವವರಿಗೆ ನಿರಾಸೆ ಆಗಲಿದೆ. ಅವರು ಈ ಮೊದಲಿನಂತೆಯೇ ಎರಡು ಪಥದ ಹಾದಿಯಲ್ಲಿಯೇ ಓಡಾಡಬೇಕಿದ್ದು, ಪ್ರಯಾಣದ ಸಮಯವೂ ಎಂದಿನಂತೆಯೇ ಇರಲಿದೆ.

ವಿಧಾನ ಪರಿಷತ್‌ನಲ್ಲಿ ಇಂಧನ ಸಚಿವ ವಿ. ಸುನಿಲ್ ಕುಮಾರ್

'37.20 ಕೋಟಿ ಯುನಿಟ್ ಸೌರ ವಿದ್ಯುತ್ ಉತ್ಪಾದನೆ ಗುರಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದಲ್ಲಿ ಪ್ರಸಕ್ತ ಸಾಲಿನಲ್ಲಿ (2021–22) ಸೌರ ಚಾವಣಿ (ಸೋಲಾರ್ ರೂಫ್ ಟಾಪ್) ಮೂಲಕ 37.20 ಕೋಟಿ ಯುನಿಟ್ ವಿದ್ಯುತ್ ಉತ್ಪಾದನೆ ಗುರಿ ಹೊಂದಲಾಗಿದೆ' ಎಂದು ಇಂಧನ ಸಚಿವ ವಿ. ಸುನಿಲ್ ಕುಮಾರ್ ತಿಳಿಸಿದರು.

ವಿಧಾನ ಪರಿಷತ್‌ನಲ್ಲಿ ಕಾಂಗ್ರೆಸ್ಸಿನ ಎಂ.ನಾರಾಯಣಸ್ವಾಮಿ ಅವರ ಪ್ರಶ್ನೆಗೆ ಉತ್ತರಿಸಿದ ಅವರು, 'ಸರ್ಕಾರಿ ಕಚೇರಿಗಳು ಮತ್ತು ಖಾಸಗಿ ಮನೆಗಳ ಚಾವಣಿಗಳಲ್ಲಿ ಸೌರ ವಿದ್ಯುತ್ ಉತ್ಪಾದಿಸಲು ಉದ್ದೇಶಿಸಲಾಗಿದೆ' ಎಂದರು.

'ಪ್ರಸಕ್ತ ಸಾಲಿನಲ್ಲಿ ಬೆಸ್ಕಾಂ, ಮೆಸ್ಕಾಂ, ಸೆಸ್ಕ್, ಹೆಸ್ಕಾಂ, ಜೆಸ್ಕಾಂ ಈ ವಿದ್ಯುತ್ ಸರಬರಾಜು ಕಂಪನಿಗಳ ವ್ಯಾಪ್ತಿಯಲ್ಲಿ ಜುಲೈವರೆಗೆ ಸೌರ ಚಾವಣಿಗಳಿಂದ ಉತ್ಪಾದನೆಯಾದ ವಿದ್ಯುತ್ ಕೇವಲ 4.88 ಕೋಟಿ ಯುನಿಟ್. ಇನ್ನಿರುವ ದಿನಗಳಲ್ಲಿ ಗುರಿ ಸಾಧನೆ ಸಾಧ್ಯವೇ' ಎಂದು ನಾರಾಯಣಸ್ವಾಮಿ ಪ್ರಶ್ನಿಸಿದರು.

'ಸೌರ ಚಾವಣಿಯಿಂದ ವಿದ್ಯುತ್ ಉತ್ಪಾದನೆಗೆ ಪ್ರೋತ್ಸಾಹ ನೀಡಲಾಗುತ್ತಿದೆ. ಗ್ರಾಮ ಪಂಚಾಯಿತಿ ಕಚೇರಿಯೂ ಸೇರಿ ಸರ್ಕಾರಿ ಕಚೇರಿ ಕಟ್ಟಡಗಳ ಚಾವಣಿಯಲ್ಲಿ ಸೌರ ಶಕ್ತಿ ವಿದ್ಯುತ್ ಉತ್ಪಾದನೆಗೆ ಕ್ರಮಕೈಗೊಳ್ಳಲಾಗುವುದು. ಗುರಿ ತಲುಪಲು ಎಲ್ಲ ಪ್ರಯತ್ನ ಮಾಡಲಾಗುವುದು' ಎಂದು ಸಚಿವರು ಹೇಳಿದರು.

'ಸರ್ಕಾರಿ ಕಟ್ಟಡಗಳ ಚಾವಣಿಯಲ್ಲಿ ಸೌರಶಕ್ತಿ ವಿದ್ಯುತ್ ಘಟಕಗಳನ್ನು ಕಡ್ಡಾಯಗೊಳಿಸಲು ಚಿಂತನೆ ನಡೆದಿದೆ. ವಿಕಾಸಸೌಧದ ಚಾವಣಿಯ ಮೇಲೆ ಈಗಾಗಲೇ 100 ಕಿಲೋ ವ್ಯಾಟ್ ಸಾಮರ್ಥ್ಯದ ಸೌರ ಘಟಕಗಳನ್ನು ಅಳವಡಿಸಲಾಗಿದೆ. 13ನೇ ಹಣಕಾಸು ಆಯೋಗದ ಅನುದಾನದ ಅಡಿಯಲ್ಲಿ ವಿಧಾನಸೌಧ ಮತ್ತು ಎಂ.ಎಸ್ ಬಿಲ್ಡಿಂಗ್ ಚಾವಣಿಯ ಮೇಲೆ ಸೌರ ಶಕ್ತಿ ಘಟಕ ಅಳವಡಿಸಲು ಸಮೀಕ್ಷೆ ಕಾರ್ಯ ಪೂರ್ಣಗೊಂಡಿದೆ' ಎಂದೂ ಸಚಿವರು ಮಾಹಿತಿ ನೀಡಿದರು.



ವಿಧಾನ ಪರಿಷತ್‌ನಲ್ಲಿ ಸಚಿವ ಶಿವರಾಮ್ ಹೆಬ್ಬಾರ ಹಾಗೂ ವಿ.ಸುನೀಲ್ ಕುಮಾರ್ ಸೋಮವಾರ ಚರ್ಚೆಯಲ್ಲಿ ತೊಡಗಿದ್ದರು. ಸಚಿವ ಬಿ.ಸಿ.ನಾಗೇಶ್ ಇದ್ದಾರೆ

'ಪುರಾತತ್ವ ಇಲಾಖೆ: ಸಿಎಂ ಜೊತೆ ಚರ್ಚೆ'

ಬೆಂಗಳೂರು: 'ಪ್ರವಾಸೋದ್ಯಮ ಇಲಾಖೆಯ ಅಧೀನದಲ್ಲಿರುವ ಪುರಾತತ್ವ ಇಲಾಖೆಯನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವ್ಯಾಪ್ತಿಗೆ ತರುವ ಬಗ್ಗೆ ಮುಖ್ಯಮಂತ್ರಿ ಜೊತೆ ಚರ್ಚಿಸುತ್ತೇನೆ' ಎಂದು ಕನ್ನಡ ಮತ್ತು ಸಂಸ್ಕೃತಿ ಸಚಿವ ವಿ. ಸುನಿಲ್‌ಕುಮಾರ್ ತಿಳಿಸಿದರು.

ವಿಧಾನಪರಿಷತ್‌ನಲ್ಲಿ ಬಿಜೆಪಿಯ ತೇಜಸ್ವಿನಿ ಗೌಡ ಅವರ ಪ್ರಶ್ನೆಗೆ ಉತ್ತರಿಸಿದ ಅವರು, 'ಹಿಂದೆಯೂ ಈ ಬಗ್ಗೆ ಚರ್ಚೆ ನಡೆದಿದೆ. ಜೊತೆಗೆ, ಅಳಿವಿನಂಚಿನಲ್ಲಿರುವ ಹೊಯ್ಸಳ, ರಾಣಿ ಅಬ್ಬಕ್ಕ, ಕೆಳದಿ ಅರಸರ ಅರಮನೆಯೂ ಸೇರಿದಂತೆ ಕೋಟೆ, ಕೊತ್ತಳಗಳ ರಕ್ಷಣೆಗೂ ಸರ್ಕಾರ ಬದ್ಧ' ಎಂದರು.


'ಕನ್ನಡ ಭಾಷೆಯ ಅಭಿವೃದ್ಧಿಗಾಗಿ ಅನುದಾನಕ್ಕೆ ಅನುಸಾರವಾಗಿ ಕ್ರಿಯಾಯೋಜನೆ ರೂಪಿಸಿ, ಕನ್ನಡ ಅಭಿವೃದ್ಧಿ ಪ್ರಾಧಿಕಾರದಿಂದ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಕೋವಿಡ್ ನಡುವೆಯೂ ಆನ್‌ಲೈನ್ ಮೂಲಕ 188 ಕಾರ್ಯಕ್ರಮಗಳನ್ನು ಪ್ರಾಧಿಕಾರ ಆಯೋಜಿಸಿದೆ' ಎಂದು ಮಾಹಿತಿ ನೀಡಿದರು.

'ರಾಜ್ಯದ 22 ವಿಶ್ವವಿದ್ಯಾಲಯಗಳಲ್ಲಿ 6,279 ವಿದ್ಯಾರ್ಥಿಗಳು ಕನ್ನಡವನ್ನು ಮುಖ್ಯ ವಿಷಯವಾಗಿ ಅಧ್ಯಯನ ಮಾಡುತ್ತಿದ್ದಾರೆ' ಎಂದೂ ತಿಳಿಸಿದರು.

ಆಟೊ, ಕ್ಯಾಬ್, ಬಸ್ ನಂಬಿದವರ ಜೀವನ ಬಲು ಕಷ್ಟ ● ಮಕ್ಕಳ ಶಿಕ್ಷಣದ ಮೇಲೂ ಕರಿನೆರಳು

ಮಗುಚಿ ಬಿದ್ದ 'ಬಂಡಿ': ಜೀವನ ದಿಕ್ಕಾಪಾಲು

● ಸಂತೋಷ ಜಿಗಳಿಕೊಪ್ಪ



ಲಾಕ್‌ಡೌನ್ ಜಾರಿಯಲ್ಲಿದ್ದ ವೇಳೆ ಬೆಂಗಳೂರಿನ ನಾಯಂಡಹಳ್ಳಿ ಬಳಿ ನಿಲ್ಲಿಸಲಾಗಿದ್ದ ಖಾಸಗಿ ವಾಹನಗಳು – ಪ್ರಜಾವಾಣಿ ಚಿತ್ರ

ಬೆಂಗಳೂರು: ಸಾರಿಗೆ 'ಬಂಡಿ' ನಂಬಿ ಬದುಕು ಕಟ್ಟಿಕೊಳ್ಳುತ್ತಿದ್ದವರನ್ನು ಕೋವಿಡ್ ಲಾಕ್‌ಡೌನ್ ದಿಕ್ಕಾಪಾಲು ಮಾಡಿದೆ. ಲಾಕ್‌ಡೌನ್ ಹೊಡೆತಕ್ಕೆ ಸಿಲುಕಿರುವ 'ಸಾರಥಿ'ಗಳ ಜೀವನ ಇಂದಿಗೂ ಆರ್ಥಿಕವಾಗಿ ಚೇತರಿಸಿಕೊಳ್ಳುತ್ತಿಲ್ಲ.

ಆಟೊ, ಟ್ಯಾಕ್ಸಿ ಹಾಗೂ ಬಸ್‌ಗಳನ್ನು ಅವಲಂಬಿಸಿ ಕೋಟಿಗೂ ಹೆಚ್ಚು ಮಂದಿ ಜೀವನ ಸಾಗಿಸುತ್ತಿದ್ದಾರೆ. ಲಾಕ್‌ಡೌನ್ ಹೊಡೆತಕ್ಕೆ ಅವರೆಲ್ಲರ ಜೀವನ ತತ್ತರಿಸಿ ಹೋಗಿದೆ. ವಾಹನಗಳ ಮಾಲೀಕರು, ಚಾಲಕರು, ಕ್ಲೀನರ್‌ಗಳು, ಗ್ಯಾರೇಜ್ ಸಿಬ್ಬಂದಿ, ಪಂಕ್ಚರ್ ಹಾಕುವರು ಹಾಗೂ ಚಕ್ರಗಳಿಗೆ ಗಾಳಿ ತುಂಬಿಸುವವರು ಇಂದಿಗೂ ಬದುಕು ಸಾಗಿಸಲು ಪರದಾಡುತ್ತಿದ್ದಾರೆ.

ಪಾನ್ ಅಂಗಡಿಯಿಂದ ಹಿಡಿದು ಬಹುರಾಷ್ಟ್ರೀಯ ಕಂಪನಿವರೆಗಿನ ವಹಿವಾಟಿಗೆ ಬೀಗ ಬಿದ್ದಿತ್ತು. ದೇವಸ್ಥಾನಗಳು, ಪ್ರೇಕ್ಷಣೀಯ ಸ್ಥಳಗಳು ಬಂದ್ ಆಗಿದ್ದವು. ಉದ್ಯೋಗ ಹಾಗೂ ಪ್ರವಾಸಕ್ಕೆಂದು ಸಾರಿಗೆ ವಾಹನಗಳಲ್ಲಿ ಸಂಚರಿಸುತ್ತಿದ್ದ ಜನರು ಮನೆಯಲ್ಲಿ ಉಳಿದಿದ್ದರು. ಪ್ರಯಾಣಿಕರು ಇಲ್ಲದೇ ಸಾರಿಗೆ ವಾಹನಗಳು ನಿಂತಲೇ ನಿಲ್ಲಬೇಕಾಗಿತ್ತು.

ಬಹುತೇಕ ಚಾಲಕರು, ನಗರ ತೊರೆದು ಹಳ್ಳಿಗಳತ್ತ ಮುಖ ಮಾಡಿದ್ದರು. ಅಲ್ಲಿಯೂ ಕೆಲಸ ಸಿಗದೇ ಕಂಗಾಲಾಗಿದ್ದರು. ಕೆಲವರು ಆಟೊ ಹಾಗೂ ಟ್ಯಾಕ್ಸಿಗಳಲ್ಲಿ ಅಗತ್ಯ ವಸ್ತುಗಳನ್ನು ಮಾರಿ ಹೊಟ್ಟೆ ತುಂಬಿಸಿಕೊಂಡರು. ಮಕ್ಕಳ ಆನ್‌ಲೈನ್ ಶಿಕ್ಷಣಕ್ಕೆ ಅಗತ್ಯವಾಗಿದ್ದ ಮೊಬೈಲ್ ಕೊಡಿಸಲು ಸಾಧ್ಯವಾಗದೇ ಸಂಕಟ ಅನುಭವಿಸಿದರು.

ಹಂಪಿ, ಮೈಸೂರು, ಬೆಂಗಳೂರು, ಮಡಿಕೇರಿ, ಮಂಗಳೂರು, ಚಿಕ್ಕಮಗಳೂರು, ವಿಜಯಪುರ, ಉತ್ತರ ಕನ್ನಡ ಹಾಗೂ ಇತರೆಡೆಯ ಪ್ರವಾಸೋದ್ಯಮ ಸ್ಥಳಗಳನ್ನು ಬಂದ್ ಮಾಡಲಾಗಿತ್ತು. ಇದರಿಂದಾಗಿ ಟ್ಯಾಕ್ಸಿಗಳ ಬೇಡಿಕೆ ಕಡಿಮೆಯಾಗಿ ಸಮಸ್ಯೆ ಸೃಷ್ಟಿಯಾಗಿತ್ತು.

ಬದುಕು ಬೀದಿಗೆ ತಂದ ಕೋವಿಡ್

ಇದೀಗ, ಲಾಕ್‌ಡೌನ್ ಭಾಗಶಃ ತೆರವು ಮಾಡಲಾಗಿದೆ. ಐ.ಟಿ, ಬಿ.ಟಿ ಕಂಪನಿಗಳ ಬಾಗಿಲು ಇನ್ನು ತೆರೆದಿಲ್ಲ. ಆಟೊ ಹಾಗೂ ಟ್ಯಾಕ್ಸಿಗಳಿಗೆ ಪ್ರಯಾಣಿಕರ ಕೊರತೆ ಹೆಚ್ಚಿದೆ. ಮೂರನೇ ಅಲೆ ಬಂದು, ಮತ್ತೆ ಲಾಕ್‌ಡೌನ್ ಮಾಡಿದರೆ ನಮ್ಮ ಗತಿಯೇನು? ಎಂದು ಚಾಲಕ ವರ್ಗ ಚಿಂತೆಗೀಡಾಗಿದೆ.

'ಸಾರಿಗೆ ವಾಹನ ನಂಬಿದವರ ಕಷ್ಟ ನಿವಾರಿಸುತ್ತೇವೆ' ಎಂದ ಸರ್ಕಾರ, ಒಂದೂವರೆ ತಿಂಗಳ ತೆರಿಗೆಯನ್ನಷ್ಟೇ ಮನ್ನಾ ಮಾಡಿತು. ವಿಮೆ, ದೃಢತೆ ಪ್ರಮಾಣ ಪತ್ರ ಹಾಗೂ ಇತರೆ ದಾಖಲೆಗಳ ಅಂತಿಮ ದಿನವನ್ನು ಮುಂದೂಡುವುದಾಗಿ ಹೇಳಿದ್ದ ಸರ್ಕಾರ, ಅದನ್ನು ಜಾರಿಗೆ ತರಲಿಲ್ಲ. ಆರ್‌ಟಿಒ ಮೂಲಕ ವಾಹನಗಳನ್ನು ಹಿಡಿಸಿ, ಚಾಲಕರಿಗೆ ದಂಡ ವಿಧಿಸಿತು ಎಂಬ ಆರೋಪವಿದೆ.

ದಿನದ ದುಡಿಮೆ ನಂಬಿದ್ದ ಆಟೊ ಚಾಲಕರು ಹಾಗೂ ಅವರ ಕುಟುಂಬದವರು ಬೀದಿಗೆ ಬಿದ್ದರು. ಆಹಾರ ಪೊಟ್ಟಣಗಳಿಗೆ ಕೈ ಚಾಚಿದರು. ಸರ್ಕಾರದ ಪರಿಹಾರ ಕೆಲವರಿಗಷ್ಟೇ ಲಭ್ಯವಾಯಿತು. ಬಹುತೇಕರು ಪರಿಹಾರಕ್ಕಾಗಿ ಅಲೆದಾಡಿ ಸರ್ಕಾರಕ್ಕೆ ಹಿಡಿಶಾಪ ಹಾಕಿದರು.

ಟ್ಯಾಕ್ಸಿ ಚಲಾಯಿಸುತ್ತಿದ್ದ ಕೆಲವರು, ಅದರ ಸಹವಾಸವೇ ಬೇಡವೆಂದು ಮಾರಿದರು. ಸಾಲದ ಕಂತು ತುಂಬದ ಟ್ಯಾಕ್ಸಿಗಳನ್ನು ಬ್ಯಾಂಕ್ ಹಾಗೂ ಫೈನಾನ್ಸ್‌ನವರು ಜಪ್ತಿ ಮಾಡಿದರು.


ಖಾಸಗಿ ಬಸ್ ಮಾಲೀಕರು, ಚಾಲಕರು ಹಾಗೂ ಕ್ಲೀನರ್ ಬದುಕು ಸಹ ಮೂರಾಬಟ್ಟೆಯಾಯಿತು. ಸಾಲದ ಕಂತು ತುಂಬಿ ಬಸ್ ಉಳಿಸಿಕೊಳ್ಳುವುದೇ ಮಾಲೀಕರಿಗೆ ಸವಾಲಾಯಿತು. ಚಾಲಕರು ಹಾಗೂ ಕ್ಲೀನರ್‌ಗಳು ಕೆಲಸವಿಲ್ಲದೆ, ಅನ್ಯ ಕೆಲಸಗಳಿಗೆ ತೊಡಗಿಸಿಕೊಂಡಿದ್ದರು.

ನಿತ್ಯವೂ ಕಣ್ಣೀರು: 'ಆಟೊ ನನ್ನ ಜೀವನಕ್ಕೆ ಆಧಾರ. ಲಾಕ್‌ಡೌನ್‌ನಿಂದ ಆಟೊ ರಸ್ತೆಗೆ ಇಳಿಯಲಿಲ್ಲ. ಮನೆ ಬಾಡಿಗೆ, ದಿನಸಿ, ತಿಂಗಳ ಖರ್ಚು ಹೊಂದಿಸಲು ಪರದಾಡಿದೆ. ತರಕಾರಿ ಮಾರಿದರೂ ಹೆಚ್ಚು ದುಡಿಮೆಯಾಗಲಿಲ್ಲ. ಲಾಕ್‌ಡೌನ್ ಮುಗಿಯುವವರೆಗೂ ನಿತ್ಯ ಕಣ್ಣೀರು ಸುರಿಸಿದ್ದೇನೆ' ಎಂದು ಆಟೊ ಚಾಲಕ ಕಾಂತರಾಜು ಹೇಳಿದರು.

ರಾಜಾಜಿನಗರದ ಪಂಕ್ಚರ್ ಅಂಗಡಿಯ ಇಮ್ರಾನ್, 'ಅನಕ್ಷರಸ್ಥನಾದ ನನಗೆ, ಪಂಕ್ಚರ್ ಹಾಕುವುದೇ ವೃತ್ತಿ. ಲಾಕ್‌ಡೌನ್‌ನಲ್ಲಿ ಅಂಗಡಿ ಬಂದ್ ಮಾಡಿದ್ದರಿಂದ, ಜೀವನ ನಡೆಸುವುದು ಕಷ್ಟವಾಯಿತು. ಇಂದಿಗೂ ಚೇತರಿಸಿಕೊಳ್ಳಲು ಆಗುತ್ತಿಲ್ಲ. ಮಕ್ಕಳನ್ನು ಶಾಲೆಗೆ ಸೇರಿಸಿ ಬಟ್ಟೆ- ಪುಸ್ತಕ ಕೊಡಿಸಲೂ ಹಣವಿಲ್ಲ. ನಮ್ಮಂಥವರಿಗೆ ಲಾಕ್‌ಡೌನ್ 'ನರಕ' ತೋರಿಸಿದೆ' ಎಂದರು.

ಚಾಲಕ ಚನ್ನಪಟ್ಟಣದ ಮುರುಳಿ, 'ಕೈ ತುಂಬ ದುಡಿಯುತ್ತಿದ್ದ ನಾನು, ಲಾಕ್‌ಡೌನ್‌ನಿಂದ ಒಂದು ರೂಪಾಯಿ ದುಡಿಯಲು ಆಗಲಿಲ್ಲ. ಶೆಡ್‌ನಲ್ಲಿ ನಿಲ್ಲಿಸಿದ್ದ ಕ್ಯಾಬ್ ಹೊರಗೆ ತೆಗೆಯಲಿಲ್ಲ. ತುಕ್ಕು ಹಿಡಿದು, ಎಂಜಿನ್ ಕೆಟ್ಟಿತ್ತು. ದುರಸ್ತಿ ಮಾಡಿಸಲು ಹಣವಿರಲಿಲ್ಲ' ಎಂದು ಕಣ್ಣೀರಿಟ್ಟರು.

'ಕುಟುಂಬದವರ ಹೊಟ್ಟೆ ತುಂಬಿಸುವ ಜವಾಬ್ದಾರಿ, ಸಾಲಗಾರರ ಕಾಟ ಹಾಗೂ ಕಾರು ನಿರ್ವಹಣೆ ಕೆಲಸ ನನ್ನ ಮೇಲಿತ್ತು. ತೆರಿಗೆ, ವಿಮೆ ಹಾಗೂ ಇತರೆ ಶುಲ್ಕ ಭರಿಸಲೇ ಬೇಕಿತ್ತು. ಹೀಗಾಗಿ, ಕಾರು ಮಾರಿ ಸಾಲ ತೀರಿಸಿದೆ' ಎಂದರು.





ಚಾಲಕರಿಗೆ ಪರಿಹಾರದ ಹೆಸರಿನಲ್ಲಿ 'ಭಿಕ್ಷೆ' ಕೊಟ್ಟಿರುವ ಸರ್ಕಾರ, ಅದನ್ನೇ ದೊಡ್ಡ ಸಾಧನೆಯಂತೆ ಮೆರೆಯುತ್ತಿದೆ. ಚಾಲಕರಿಗೆ ಪರಿಹಾರ ಸಿಗಲಿಲ್ಲ.

ಜಿ. ನಾರಾಯಣಸ್ವಾಮಿ, ಕರ್ನಾಟಕ ಚಾಲಕರ ಒಕ್ಕೂಟದ ಅಧ್ಯಕ್ಷ



ಪ್ರಯಾಣಿಕರು ಇಲ್ಲದೇ ಆಟೊ ಚಾಲಕರು ತತ್ತರಿಸಿದ್ದಾರೆ. ಸರ್ಕಾರ ಬಿಡಿಗಾಸು ಪರಿಹಾರ ಕೊಟ್ಟು ಕೈ ತೊಳೆದುಕೊಂಡಿದೆ

ಕಾಂತರಾಜು, ಆಟೊ ಚಾಲಕ

ಕೋವಿಡ್: ಸೋಂಕಿತರ ಸಂಖ್ಯೆ ರಾಜ್ಯದಲ್ಲಿ ಇಳಿಕೆ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಹೊಸ ಪ್ರಕರಣಗಳ ಸಂಖ್ಯೆ ಇಳಿದಿದೆ. ಸೋಮವಾರ 673 ಮಂದಿಗೆಸೋಂಕು ತಗುಲಿದ್ದು, ಸೋಂಕಿತರ ಒಟ್ಟು ಸಂಖ್ಯೆ 29.62 ಲಕ್ಷಕ್ಕೆ ಹೆಚ್ಚಿದೆ. ಕೋವಿಡ್ ದೃಢ ಪ್ರಮಾಣ ಶೇ 0.56ಕ್ಕೆ ತಗ್ಗಿದೆ.

ಕೋವಿಡ್ ಮೃತರ ಸಂಖ್ಯೆಯೂ ಅಲ್ಪ ಕಡಿಮೆಯಾಗಿದೆ. ಒಂದು ದಿನದಲ್ಲಿ 13 ಮಂದಿ ಅಸುನೀಗಿದ್ದಾರೆ. ಮರಣ ಪ್ರಮಾಣ ದರವು ಶೇ 1.93ರಷ್ಟಿದೆ. 24 ಗಂಟೆಗಳಲ್ಲಿ 1,074 ಮಂದಿಗೆ ಕಾಯಿಲೆ ವಾಸಿಯಾಗಿದೆ. ಗುಣಮುಖರ ಸಂಖ್ಯೆಯು 29.08 ಲಕ್ಷದಷ್ಟಿದೆ. ಸಕ್ರಿಯ ಪ್ರಕರಣಗಳು ಮತ್ತಷ್ಟು ಇಳಿದಿವೆ. ಸದ್ಯ 16,241 ಜನ ಆಸ್ಪತ್ರೆ ಸೇರಿ ವಿವಿಧೆಡೆ ಚಿಕಿತ್ಸೆ ಪಡೆಯುತ್ತಿದ್ದಾರೆ.

ಬೆಂಗಳೂರಿನಲ್ಲಿ 214 ಮಂದಿಗೆ ಸೋಂಕು ತಗುಲಿದೆ. ಕೇರಳಕ್ಕೆ ಹೊಂದಿಕೊಂಡ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹೊಸ ಪ್ರಕರಣಗಳು ತಗ್ಗಿವೆ. ಸೋಮವಾರ 115 ಮಂದಿಗೆ ಕೋವಿಡ್ ದೃಢಪಟ್ಟಿದೆ.

ಕೊಡಗು (31), ಮೈಸೂರಿನಲ್ಲೂ (39) ಪ್ರಕರಣಗಳು ಕಡಿಮೆಯಾಗಿವೆ. ಉಡುಪಿ (75), ತುಮಕೂರು (36), ಹಾಸನ (51) ಹಾಗೂ ಚಿಕ್ಕಮಗಳೂರಿನಲ್ಲಿ (35) ಮೂವತ್ತಕ್ಕಿಂತಲೂ ಹೆಚ್ಚು ಪ್ರಕರಣ ವರದಿಯಾಗಿವೆ. 10 ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು ಇಲ್ಲ.

ಕೋವಿಡ್ ಪರೀಕ್ಷೆಗಳ ಸಂಖ್ಯೆ ತುಸು ಏರಿಕೆಯಾಗಿದೆ. ಒಂದು ದಿನದಲ್ಲಿ 1.19 ಲಕ್ಷ ಮಾದರಿಗಳನ್ನು ಪರೀಕ್ಷಿಸಲಾಗಿದೆ.

ರಾಜ್ಯದ ಕೋವಿಡ್ ಅಂಕಿ–ಅಂಶ

ಒಟ್ಟು ಪ್ರಕರಣಗಳು	29,62,408 ▲
ಸಕ್ರಿಯ ಪ್ರಕರಣಗಳು	16,241 ▼
ಗುಣಮುಖರಾದವರು	29,08,622 ▲
ಒಟ್ಟು ಸಾವು	37,517 ▲

ದಿನದ ಏರಿಕೆ

ಹೊಸ ಪ್ರಕರಣ	673 ▼
ಗುಣಮುಖ	1,074 ▲
ಸಾವು	13 ▼

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ವಿವಿಧೆಡೆ ಸಾಧಾರಣ ಮಳೆ

ಹುಬ್ಬಳ್ಳಿ/ಕಲಬುರ್ಗಿ: ಉತ್ತರ ಕನ್ನಡ ಜಿಲ್ಲೆಯ ವಿವಿಧೆಡೆ, ಧಾರವಾಡ, ಹೊಸಪೇಟೆ, ಗದಗ, ವಿಜಯಪುರ, ಬೆಳಗಾವಿ ಜಿಲ್ಲೆಯ ವಿವಿಧೆಡೆ ಸೋಮವಾರ ಮಳೆಯಾಗಿದೆ. ಕಲಘಟಗಿ, ಅಳ್ನಾವರ ಭಾಗಗಳಲ್ಲಿ ಸಾಧಾರಣ, ಕಾರವಾರ, ಶಿರಸಿ, ಸಿದ್ದಾಪುರದಲ್ಲಿ ಮಧ್ಯಾಹ್ನ ಜೋರಾಗಿ ಮಳೆಯಾಗಿದೆ.

ಹಿರೇಬಾಗೇವಾಡಿ, ಗೋಕಾಕ, ರಾಮದುರ್ಗ, ಖಾನಾಪುರ, ಸವದತ್ತಿ, ಎಂ.ಕೆ. ಹುಬ್ಬಳ್ಳಿ ಹಾಗೂ ನಿಪ್ಪಾಣಿಯಲ್ಲೂ ಮಳೆಯಾಗಿದೆ.

ವಿಜಯಪುರ ನಗರ ಸೇರಿದಂತೆ ದೇವರ ಹಿಪ್ಪರಗಿ, ಸಿಂದಗಿ, ಬಸವನ ಬಾಗೇವಾಡಿ, ತಿಕೋಟಾ ಭಾಗದಲ್ಲಿ ಧಾರಾಕಾರ ಮಳೆ ಸುರಿದಿದೆ.

ಕಲಬುರ್ಗಿ, ಯಾದಗಿರಿ ಮತ್ತು ರಾಯಚೂರು ಜಿಲ್ಲೆಯಲ್ಲಿ ಸೋಮವಾರ ಮಳೆಯಾಯಿತು. ಕಲಬುರ್ಗಿ ನಗರ, ಚಿಂಚೋಳಿ, ಕಾಳಗಿ, ಸೇಡಂ, ಯಡ್ರಾಮಿ ತಾಲ್ಲೂಕುಗಳಲ್ಲಿ ಮಳೆಯಾಯಿತು. ರಾಯಚೂರು ನಗರ ಸೇರಿ ಜಿಲ್ಲೆಯ ಮಾನ್ವಿ ಹಾಗೂ ಸಿಂಧನೂರು ತಾಲ್ಲೂಕುಗಳಲ್ಲಿ ಮಳೆ ಸುರಿಯಿತು.

ಶಿವಮೊಗ್ಗ ವರದಿ: ಜಿಲ್ಲೆಯಲ್ಲಿ ಎರಡು ದಿನಗಳಿಂದ ಮಳೆ ಚುರುಕುಗೊಂಡಿದ್ದು, ಸೋಮವಾರವೂ ನಿರಂತರ ಮಳೆ ಸುರಿಯಿತು. ದಾವಣಗೆರೆ ನಗರ ಸೇರಿ ಸೇರಿ ಜಿಲ್ಲೆಯ ಕೆಲವೆಡೆ ಸಾಧಾರಣ ಮಳೆಯಾಗಿದೆ. ಹೊಸನಗರದಲ್ಲಿ 17.86 ಸೆಂ.ಮೀ, ತೀರ್ಥಹಳ್ಳಿಯಲ್ಲಿ 43.20 ಮಿ.ಮೀ, ಸಾಗರದಲ್ಲಿ 30 ಮಿ. ಮೀ, ಸೊರಬ 21.40 ಮಿ. ಮೀ, ಶಿಕಾರಿಪುರ 7.20 ಮಿ.ಮೀ, ಭದ್ರಾವತಿಯಲ್ಲಿ 4.80 ಮಿ.ಮೀ, ಶಿವಮೊಗ್ಗದಲ್ಲಿ 4 ಮಿ.ಮೀ ಮಳೆಯಾಗಿದೆ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್*	124.80	116.32	11,335	10,894
ಹಾರಂಗಿ	2,859	2,858.35	3,928	4,000
ಕಬಿನಿ	2284.00	2,283.1	8,483	5,000
ಹೇಮಾವತಿ	2,922	2,915.90	9,601	5,222
ಲಿಂಗನಮಕ್ಕಿ	1,819	1,815.25	33,258	-
ಸೂಪಾ (ಮೀ)	564	556.25	14,497	1,736
ಮಾಣಿ	594	587.38	4,440	-
ತುಂಗಭದ್ರಾ	1,633	1,632.88	17,656	18,514
ಮಲಪ್ರಭಾ	2079.5	2,079.50	5,026	3,094
ಘಟಪ್ರಭಾ	2175	2,175.00	11,243	11,243
ಭದ್ರಾ	186	185.60	7,781	6,867
ಆಲಮಟ್ಟಿ (ಮೀ)	519.6	519.57	53,516	55,553
ನಾರಾಯಣಪುರ (ಮೀ)	492.25	491.89	65,000	81,600

* ನೆಲಮಟ್ಟದಿಂದ

ಸ್ಥಳಾಂತರ ವಿಳಂಬ, ಕಾಮಗಾರಿ ಪೂರ್ಣಗೊಳಿಸಿದ ಗುತ್ತಿಗೆದಾರ

ರಸ್ತೆ ಮಧ್ಯೆ ವಿದ್ಯುತ್ ಕಂಬ

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ರಸ್ತೆ ವಿಸ್ತರಣೆಯ ಸಂದರ್ಭದಲ್ಲಿ ಮಧ್ಯಭಾಗಕ್ಕೆ ಬಂದ ವಿದ್ಯುತ್ ಕಂಬಗಳನ್ನು ತೆರವುಗೊಳಿಸದೇ ಕಾಂಕ್ರೀಟ್ ಕಾಮಗಾರಿಯನ್ನು ಗುತ್ತಿಗೆದಾರ ಪೂರ್ಣಗೊಳಿಸಿದ್ದಾರೆ. ಇದರ ಫೋಟೊ, ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದ್ದು, ಸಾರ್ವಜನಿಕರಿಂದ ವ್ಯಾಪಕ ಆಕ್ರೋಶ ವ್ಯಕ್ತವಾಗುತ್ತಿದೆ.

ಚಿತ್ರದುರ್ಗ ನಗರದ ತುರುವನೂರು ರಸ್ತೆಯಲ್ಲಿ ಇಂತಹದೊಂದು ಲೋಪ ಕಂಡುಬಂದಿದೆ.

ರಸ್ತೆಯ ಮಧ್ಯಭಾಗದ ವಿದ್ಯುತ್ ಕಂಬಗಳು ಅಪಘಾತಕ್ಕೆ ಆಹ್ವಾನ ನೀಡುವಂತಿವೆ. ರಸ್ತೆ ವಿಸ್ತರಣೆ ಕಾಮಗಾರಿಯನ್ನು ₹ 7 ಕೋಟಿ ವೆಚ್ಚದಲ್ಲಿ ಕೈಗೆತ್ತಿಕೊಳ್ಳಲಾಗಿದೆ. ಒಂದೂವರೆ ವರ್ಷದಿಂದ ಕಾಮಗಾರಿ ನಡೆಯುತ್ತಿದೆ.

ರಸ್ತೆಯ ಮಧ್ಯಭಾಗದಿಂದ ಎರಡೂ ಬದಿಗೆ 10.5 ಮೀಟರ್ ವಿಸ್ತರಣೆ ಮಾಡಲಾಗುತ್ತಿದೆ. ವಿದ್ಯುತ್ ಕಂಬ, ಕಟ್ಟಡಗಳನ್ನು ತೆರವುಗೊಳಿಸದೇ ಕಾಮಗಾರಿ ಪೂರ್ಣಗೊಳಿಸುವ ಕಾರ್ಯ ಭರದಿಂದ ಸಾಗುತ್ತಿದೆ.

ಬಿ.ಎಲ್.ಗೌಡ ಬಡಾವಣೆಯ ವಿಷ್ಣುವರ್ಧನ್ ಉದ್ಯಾನದ ಸಮೀಪ ಕೆಲ ವಿದ್ಯುತ್ ಕಂಬಗಳು ರಸ್ತೆಯ ಮಧ್ಯಭಾಗದಲ್ಲಿವೆ. ಲೋಕೋಪಯೋಗಿ ಇಲಾಖೆಯ ಎಲೆಕ್ಟ್ರಿಕಲ್ ಎಂಜಿನಿಯರಿಂಗ್ ವಿಭಾಗ ಈ ಕಂಬಗಳನ್ನು ಸ್ಥಳಾಂತರ ಮಾಡಬೇಕಿತ್ತು. ಈ ಕಾರ್ಯ ಹಲವು ದಿನಗಳಿಂದ ನನೆಗುದಿಗೆ ಬಿದ್ದಿದ್ದರಿಂದ ಕುಪಿತಗೊಂಡ ಗುತ್ತಿಗೆದಾರ ರಸ್ತೆ ನಿರ್ಮಾಣ ಕಾಮಗಾರಿ ಪೂರ್ಣಗೊಳಿಸಲು ಮುಂದಾಗಿದ್ದಾರೆ.



ಚಿತ್ರದುರ್ಗದ ತುರುವನೂರು ರಸ್ತೆಯ ಮಧ್ಯಭಾಗದಲ್ಲಿರುವ ವಿದ್ಯುತ್ ಕಂಬವನ್ನು ತೆರವುಗೊಳಿಸದೇ ಕಾಮಗಾರಿ ಪೂರ್ಣಗೊಳಿಸಿರುವುದು.

ರಸ್ತೆ ಬದಿಯಲ್ಲಿ ವಿದ್ಯುತ್ ಮಾರ್ಗ ನಿರ್ಮಿಸುವ ಮುನ್ನ ಲೋಕೋಪಯೋಗಿ ಇಲಾಖೆಯ ಅನುಮತಿ ಪಡೆಯಬೇಕು. 'ಬೆಸ್ಕಾಂ' ಈ ನಿಯಮ ಪಾಲಿಸುತ್ತಿಲ್ಲ.

ರವೀಂದ್ರ, ಎಇಇ, ಲೋಕೋಪಯೋಗಿ ಇಲಾಖೆ

ರಸ್ತೆ ವಿಸ್ತರಣೆಯ ಉದ್ದೇಶಕ್ಕೆ ಈ ಮಾರ್ಗದಲ್ಲಿ ಈಗಾಗಲೇ 108 ಮರಗಳನ್ನು ಕಡಿಯಲಾಗಿದೆ. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕಚೇರಿ ಕಾಂಪೌಂಡ್ ಕೂಡ ತೆರವುಗೊಳಿಸಲಾಗಿದೆ. ಕೆಲ ಖಾಸಗಿ ಕಟ್ಟಡಗಳ ತೆರವು ಕಾರ್ಯ ಸಕಾಲಕ್ಕೆ ಪೂರ್ಣಗೊಳ್ಳುತ್ತಿಲ್ಲ. ನ್ಯಾಯಾಲಯದಲ್ಲಿರುವ ಪ್ರಕರಣದ ನೆಪ ಹೇಳಿಕೊಂಡು ಮೊದಲಿದ್ದಷ್ಟೇ ರಸ್ತೆಗೆ ಕಾಂಕ್ರೀಟ್ ಹಾಕಲಾಗುತ್ತಿದೆ.

'ಭೀಮ್ ಆರ್ಮಿ' ಸಂಘಟನೆಯ ಮುಖಂಡ ಅವಿನಾಶ್ ಎಂಬುವರು ಈ ಅವ್ಯವಸ್ಥೆಯ ಪರಿಯನ್ನು ಫೇಸ್‌ಬುಕ್ ಲೈವ್ ಮಾಡಿದ್ದರು. ಸಾರ್ವಜನಿಕರ ತೆರಿಗೆ ಹಣ ಲೋಪವಾಗುತ್ತಿರುವ ಬಗ್ಗೆ ಗಮನ ಸೆಳೆದಿದ್ದರು. ಇದು ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ.

'ರಸ್ತೆ ವಿಸ್ತರಣೆಗೆ ಸರ್ಕಾರ ಅನುಮತಿ ನೀಡುವುದು ತಡವಾಯಿತು. ವಿದ್ಯುತ್ ಕಂಬ ತೆರವುಗೊಳಿಸಲು ₹ 67 ಲಕ್ಷ ಅನುದಾನ ಮೀಸಲಿಡಲಾಗಿದೆ. ಟೆಂಡರ್ ಪ್ರಕ್ರಿಯೆ ಆರಂಭವಾಗಿದ್ದು, ವಾರದಲ್ಲಿ ಸ್ಥಳಾಂತರ ಮಾಡಲಾಗುವುದು' ಎಂದು ಲೋಕೋಪಯೋಗಿ ಇಲಾಖೆಯ ಎಲೆಕ್ಟ್ರಿಕಲ್ ವಿಭಾಗದ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ರವೀಂದ್ರ ತಿಳಿಸಿದ್ದಾರೆ.

ಸ್ಪರ್ಧಾತ್ಮಕ ಪರೀಕ್ಷೆಗೆ ಉಚಿತ ತರಬೇತಿ

ರಾಮನಗರ: ಬೆಂಗಳೂರಿನ ಆರ್.ಎಲ್. ಜಾಲಪ್ಪ ಅಕಾಡೆಮಿಯು ಮಾಗಡಿಯ ಸೋಲೂರಿನಲ್ಲಿರುವ ತರಬೇತಿ ಕೇಂದ್ರದಲ್ಲಿ ಹಿಂದುಳಿದ ಪ್ರವರ್ಗ 1 ಮತ್ತು ಪ್ರವರ್ಗ 2ಎಗೆ ಸೇರಿದ ಅಭ್ಯರ್ಥಿಗಳಿಗೆ ಅ. 20ರಿಂದ ನಾಲ್ಕು ತಿಂಗಳ ಕಾಲ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಉಚಿತ ತರಬೇತಿ ಹಮ್ಮಿಕೊಂಡಿದೆ. ಹೆಚ್ಚಿನ ಮಾಹಿತಿಗೆ ಮೊಬೈಲ್ 9731480759 ಸಂಪರ್ಕಿಸಬಹುದು.

ನಿಧನ ವಾರ್ತೆ

ಸ್ವಾತಂತ್ರ್ಯ ಹೋರಾಟಗಾರ ವೆಂಕೂಸಾ ಭಾಂಡಗೆ




ಗಜೇಂದ್ರಗಡ (ಗದಗ): ಸ್ವಾತಂತ್ರ್ಯ ಹೋರಾಟಗಾರ, ಶತಾಯುಷಿ ವೆಂಕೂಸಾ ಭಾಂಡಗೆ (105) ಭಾನುವಾರ ರಾತ್ರಿ ನಿಧನರಾದರು. ಅವರಿಗೆ ಎಂಟು ಪುತ್ರಿಯರು, ಮೂವರು ಪುತ್ರರು ಇದ್ದಾರೆ.

ಜೈಲುವಾಸದ ಬಳಿಕ ತಾಲ್ಲೂಕಿನಲ್ಲಿ ಭ್ರಷ್ಟಾಚಾರದ ವಿರುದ್ಧ ಚಳವಳಿ ಆರಂಭಿಸಿದ್ದರು. ಪುರಸಭೆ ಸದಸ್ಯರಾಗಿಯೂ ಸೇವೆ ಸಲ್ಲಿಸಿದ್ದ ಅವರು, ರೋಣ ತಾಲ್ಲೂಕಿನ ಭೂ ನ್ಯಾಯಾಧಿಕರಣ ಸಮಿತಿ ಸದಸ್ಯರಾದ್ದರು. ಗಜೇಂದ್ರಗಡದ ಜಗದಂಬ ಕೋಆಪರೇಟಿವ್ ಸೊಸೈಟಿ ಸಂಸ್ಥಾಪಕರಾಗಿದ್ದರು.

ಅಂತ್ಯಕ್ರಿಯೆಯು ಸಕಲ ಸರ್ಕಾರಿ ಗೌರವಗಳೊಂದಿಗೆ ಸೋಮವಾರ ಪಟ್ಟಣದ ಕುಷ್ಟಗಿ ರಸ್ತೆ ಬಳಿಯ ಅವರ ಜಮೀನಿನಲ್ಲಿ ನಡೆಯಿತು.

ಎಲ್ಲಾ ಸಂದರ್ಭಕ್ಕೆ ಸಲ್ಲುವ ನಾಯಕ



ಆಸ್ಕರ್ ಫರ್ನಾಂಡಿಸ್

ಮಂಗಳೂರು: ಪಕ್ಷ ನೀಡಿದ ಹೊಣೆಯನ್ನು ಚಾಚೂ ತಪ್ಪದಂತೆ, ಯಶಸ್ವಿಯಾಗಿ ನಿಭಾಯಿಸುತ್ತಿದ್ದ ಆಸ್ಕರ್ ಫರ್ನಾಂಡಿಸ್ ಅವರು ಕಾಂಗ್ರೆಸ್‌ನಲ್ಲಿ 'ಎಲ್ಲಾ ಸಂದರ್ಭಕ್ಕೂ ಸಲ್ಲುವ ವ್ಯಕ್ತಿ' ಎನಿಸಿಕೊಂಡಿದ್ದರು. ಬಹುಶಃ ಆ ಕಾರಣಕ್ಕಾಗಿಯೇ ನೆಹರೂ–ಗಾಂಧಿ ಪರಿವಾರದ ಅತ್ಯಂತ ಆಪ್ತರಲ್ಲಿ ಒಬ್ಬರೆನಿಸಿಕೊಂಡಿದ್ದರು.

ಈಶಾನ್ಯ ರಾಜ್ಯಗಳಲ್ಲಿ ಪಕ್ಷದೊಳಗೆ ಬಿಕ್ಕಟ್ಟು ಎದುರಾಗಿದ್ದಾಗ ನಿವಾರಿಸುವ ಹೊಣೆಯನ್ನು ಪಕ್ಷವು ಆಸ್ಕರ್ ಅವರ ಹೆಗಲಿಗೇರಿಸಿತ್ತು. ಪಕ್ಷಕ್ಕೆ ಅನುಕೂಲವಾಗುವ ರೀತಿಯಲ್ಲಿ ಆಸ್ಕರ್, ಆ ಗೊಂದಲ ನಿವಾರಿಸಿದ್ದರು. ಅದರಂತೆ, ಈಶಾನ್ಯದ ಬಂಡುಕೋರರ ಜತೆಗಿನ ಸಂಧಾನವನ್ನೂ ನೆರವೇರಿಸಿದ್ದರು.

80ರ ದಶಕದಲ್ಲಿ, ಲೋಕಸಭಾ ಚುನಾವಣೆಗೂ ಸ್ವಲ್ಪ ಕಾಲ ಮೊದಲು ಉಡುಪಿಯ ಕಾಂಗ್ರೆಸ್ ನಾಯಕಿ ಮನೋರಮಾ ಮಧ್ವರಾಜ್ ಅವರು ಆಸ್ಕರ್ ಅವರನ್ನು ಇಂದಿರಾಗಾಂಧಿ ಅವರಿಗೆ ಪರಿಚಯಿಸಿದ್ದರು. ಆಸ್ಕರ್ ಅವರನ್ನು ನೋಡಿದ ಇಂದಿರಾಗಾಂಧಿ 'ಉಡುಪಿಯಲ್ಲಿ ಟಿ.ಎ. ಪೈ ಅವರನ್ನು ಸೋಲಿಸಬಲ್ಲಿರಾ' ಎಂದು ಪ್ರಶ್ನಿಸಿದ್ದರು. ಅನಿರೀಕ್ಷಿತ ಪ್ರಶ್ನೆಗೆ ಆಸ್ಕರ್ ಅವರು ಕೇವಲ ಮುಗುಳುನಗೆಯ ಉತ್ತರ ನೀಡಿದ್ದರು. ಆದರೆ ಇಂದಿರಾ ಗಾಂಧಿ ಅವರು ಆಸ್ಕರ್ ಮನವೊಲಿಸಿ, ಅವರನ್ನು ಕಣಕ್ಕಿಳಿಸಿದ್ದರು. ದಿಗ್ಗಜ ಟಿ.ಎ. ಪೈ ಅವರನ್ನು ಸೋಲಿಸುವ ಮೂಲಕ ಆಸ್ಕರ್ ಅವರ ರಾಜಕೀಯ ಪ್ರಯಾಣ ಆರಂಭವಾಗಿತ್ತು. ಈ ವಿಚಾರಗಳನ್ನು ಆಸ್ಕರ್ ಅವರೇ ಬಳಿಕ ಮಾಧ್ಯಮ ಮಿತ್ರರ ಜತೆಗೆ ಹಂಚಿಕೊಂಡಿದ್ದರು.

ಉಡುಪಿಯಲ್ಲಿ ಕ್ರೈಸ್ತರ ಸಂಖ್ಯೆ ಕಡಿಮೆ ಇದ್ದರೂ, 1980ರಲ್ಲಿ ಇಲ್ಲಿಂದ ಲೋಕಸಭಾ ಚುನಾವಣೆಗೆ ಸ್ಪರ್ಧಿಸಿ ಆಯ್ಕೆಯಾಗಿದ್ದರು. ಐದು ಅವಧಿಗೆ ಸಂಸದರಾಗಿದ್ದ ಅವರು 1998ರ ಚುನಾವಣೆಯಲ್ಲಿ ಪರಾಭವಗೊಂಡರು. ನಂತರ ಪಕ್ಷ ಅವರನ್ನು ರಾಜ್ಯಸಭೆಗೆ ಕಳುಹಿಸಿತ್ತು.

ರಾಜೀವ್ ಗಾಂಧಿ ಅವರ ಸಂಸದೀಯ ಕಾರ್ಯದರ್ಶಿಯಾಗಿದ್ದ ಆಸ್ಕರ್ ಅವರು, ರಾಜೀವ್ ನಿಧನಾನಂತರ ಸೋನಿಯಾ ಗಾಂಧಿ ಅವರಿಗೆ ಆತ್ಮೀಯ ಸಲಹೆಗಾರರಂತೆ ಕೆಲಸ ನಿರ್ವಹಿಸಿದ್ದರು. ಪಿ.ವಿ.ನರಸಿಂಹ ರಾವ್ ಅವರ ಕಾಲದಲ್ಲಿ ಸ್ವಲ್ಪ ಹಿನ್ನೆಲೆಗೆ ಸರಿದಿದ್ದ ಆಸ್ಕರ್, ಸೋನಿಯಾಗಾಂಧಿ ಅವರು ಪಕ್ಷದ ಚುಕ್ಕಾಣಿ ಹಿಡಿಯುತ್ತಿದ್ದಂತೆ ಮತ್ತೆ ಮುಂಚೂಣಿಗೆ ಬಂದರು.

ಜಾತಿ, ಧರ್ಮ ರಾಜಕಾರಣ ಮೀರಿದ 'ಆಸ್ಕರ್'

ಉಡುಪಿ: ಉಡುಪಿಯ ಮುನ್ಸಿಪಲ್ ಕೌನ್ಸಿಲ್ ಸದಸ್ಯರಾಗಿ ರಾಜಕೀಯ ಜೀವನ ಆರಂಭಿಸಿದ ಆಸ್ಕರ್ ಫರ್ನಾಂಡಿಸ್ ರಾಷ್ಟ್ರ ಮಟ್ಟದಲ್ಲಿ ಕಾಂಗ್ರೆಸ್‌ನ ಪ್ರಭಾವಿ ನಾಯಕರಾದರು. ಧರ್ಮ, ಜಾತಿ ರಾಜಕಾರಣ ಮೀರಿ ಬೆಳೆದವರು. 1980ರಿಂದ ಸತತ ಐದು ಅವಧಿಗೆ ಉಡುಪಿ ಲೋಕಸಭಾ ಕ್ಷೇತ್ರದಿಂದ ಗೆಲುವು ಸಾಧಿಸಿದ್ದು ಅವರ ಹೆಗ್ಗಳಿಕೆ.

ಚುನಾವಣಾ ಪ್ರಚಾರ ಭಾಷಣಗಳಲ್ಲಿ ಎಂದಿಗೂ ಮಾತಿನ ಎಲ್ಲೆ ಮೀರದ ಅವರ ವ್ಯಕ್ತಿತ್ವ, ವಿರೋಧ ಪಕ್ಷಗಳ ನಾಯಕರನ್ನೂ ಸೆಳೆದಿತ್ತು. ಕೇಂದ್ರ ಸಚಿವರಾದ ಬಳಿಕ ರಾಜ್ಯಕ್ಕೆ ಸಂಬಂಧಪಟ್ಟ ಪ್ರಮುಖ ಯೋಜನೆಗಳ ಅನುಷ್ಠಾನದಲ್ಲಿ ಆಸ್ಕರ್ ಶ್ರಮಿಸಿದ್ದರು. ಸಣ್ಣ ಉದ್ಯಮಿಗಳು, ಕೃಷಿಕರಿಗೆ ಬ್ಯಾಂಕ್‌ನಲ್ಲಿ ಸುಲಭವಾಗಿ ಸಾಲ ಸಿಗಬೇಕು ಎಂದು ಹಲವು ಕಾರ್ಯಕ್ರಮಗಳನ್ನು ರೂಪಿಸಿದ್ದರು.

ಕೇಂದ್ರ ಭೂಸಾರಿಗೆ ಸಚಿವರಾಗಿದ್ದಾಗ ಕರಾವಳಿ ಭಾಗದಲ್ಲಿ ಮೂಲಸೌಕರ್ಯ ಅಭಿವೃದ್ಧಿ ಹಾಗೂ ಹೆದ್ದಾರಿಗಳ ನಿರ್ಮಾಣಕ್ಕೆ ಹೆಚ್ಚು ಒತ್ತು ದೊರೆಯಿತು. ಕೊಂಕಣ ರೈಲ್ವೆ ಯೋಜನೆಯ ಅನುಷ್ಠಾನ, ಶಾಲಾ, ಕಾಲೇಜುಗಳ ನಿರ್ಮಾಣ, ಸೇತುವೆ ಕಾಮಗಾರಿಗಳಿಗೆ ಆದ್ಯತೆ ಹಾಗೂ ಆರೋಗ್ಯ ಕ್ಷೇತ್ರದ ಅಭಿವೃದ್ಧಿಗೆ ಆಸ್ಕರ್ ನೀಡಿದ ಕೊಡುಗೆ ದೊಡ್ಡದು.

ವೈಯಕ್ತಿಯ ಜೀವನ: ಮಾರ್ಚ್ 27, 1941ರಲ್ಲಿ ರೋಖಿ ಫರ್ನಾಂಡಿಸ್ ಹಾಗೂ ಲಿಯೊನಿಸಾ ದಂಪತಿಯ ಪುತ್ರನಾಗಿ ಆಸ್ಕರ್ ಫರ್ನಾಂಡಿಸ್ ಉಡುಪಿಯಲ್ಲಿ ಜನಿಸಿದರು.

ಕಾಂಗ್ರೆಸ್‌ನ 'ಆ್ಯಂಟನಿ'

ಒಂದು ಕಾಲದಲ್ಲಿ ಕಾಂಗ್ರೆಸ್‌ನ 'ಅಮರ್, ಅಕ್ಬರ್, ಆ್ಯಂಟನಿ' ತಂಡದಲ್ಲಿ ಆಸ್ಕರ್ ಅವರನ್ನು ಆ್ಯಂಟನಿ ಎಂದು ಗುರುತಿಸಲಾಗುತ್ತಿತ್ತು.

ಅರುಣ್ ಸಿಂಗ್ ಅವರನ್ನು 'ಅಮರ್' ಎಂದು, ಕಳೆದ ವರ್ಷ ನಿಧನ ಹೊಂದಿದ ಅಹ್ಮದ್ ಪಟೇಲ್ ಅವರನ್ನು 'ಅಕ್ಬರ್', ಆಸ್ಕರ್ ಅವರನ್ನು ಆ್ಯಂಟನಿ ಎಂದು ಪಕ್ಷದವರೇ ಕರೆಯುತ್ತಿದ್ದರು.

ಉಳಿದಿಬ್ಬರು ರಾಜಕೀಯದಲ್ಲಿ ಪರಿಣಿತರಾಗಿದ್ದರೆ, ಆಸ್ಕರ್ ಅವರಿಗೆ ಅಷ್ಟು ರಾಜಕೀಯ ಚಾಣಾಕ್ಷತೆಯಾಗಲಿ, ಸಂಘಟನಾ ಶಕ್ತಿಯಾಗಲಿ ಇರಲಿಲ್ಲ. ಆದರೆ, ಪಕ್ಷ ಹಾಗೂ ಗಾಂಧಿ ಕುಟುಂಬದ ಬಗ್ಗೆ ಅವರಿಗಿದ್ದ ನಿಷ್ಠೆ ಹಾಗೂ ಪಕ್ಷದ ರಹಸ್ಯಗಳನ್ನು ಕಾಯ್ದುಕೊಳ್ಳುವ ಅವರ ಗುಣವೇ ಅವರನ್ನು ಆ ಎತ್ತರಕ್ಕೆ ಏರಿಸಿತ್ತು ಎಂಬುದು ಕಾಂಗ್ರೆಸ್ ನಾಯಕರ ಅಭಿಪ್ರಾಯವಾಗಿತ್ತು.

ಕ್ಯಾಥೊಲಿಕ್ ಪಂಗಡಕ್ಕೆ ಸೇರಿರುವ ಆಸ್ಕರ್, 1981ರಲ್ಲಿ ಬ್ಲಾಸಂ ಅವರನ್ನು ವಿವಾಹವಾಗಿದ್ದು, ದಂಪತಿಗೆ ಪುತ್ರ ರೋಶನ್ ಹಾಗೂ ಪುತ್ರಿ ರೋಶನಿ ಇದ್ದಾರೆ.

ಉಡುಪಿಯ ಸೇಂಟ್ ಸಿಸಿಲಿಸ್ ಶಾಲೆ ಹಾಗೂ ಬೋರ್ಡ್ ಹೈಸ್ಕೂಲ್‌ನಲ್ಲಿ ಪ್ರಾಥಮಿಕ ಶಿಕ್ಷಣ ಪಡೆದು, ಎಂಜಿಎಂ ಕಾಲೇಜಿನಲ್ಲಿ ಪದವಿ ಪಡೆದಿದ್ದಾರೆ. ಆಸ್ಕರ್ ಅವರು ಯಾವುದೇ ಸಮಾರಂಭದಲ್ಲಿ ಭಾಗವಹಿಸಿದ್ದರೂ ಅವರ ಜತೆಗೆ ಪತ್ನಿ ಬ್ಲಾಸಂ ಇರುತ್ತಿದ್ದರು. ರಾಜಕೀಯ, ಧಾರ್ಮಿಕ, ಸಾಮಾಜಿಕ ಕಾರ್ಯಕ್ರಮಗಳ ವೇದಿಕೆಯಲ್ಲೂ ಪತಿ, ಪತ್ನಿ ಒಟ್ಟಾಗಿ ಕಾಣಿಸಿಕೊಳ್ಳುವುದು ವಿಶೇಷವಾಗಿತ್ತು.

ಯುಪಿಎ–1 ಸರ್ಕಾರದಲ್ಲಿ ಸಚಿವರಾಗಿ ಸಾರಿಗೆ, ರಸ್ತೆ ಮತ್ತು ಹೆದ್ದಾರಿ, ಕಾರ್ಮಿಕ ಖಾತೆಗಳ ಹೊಣೆಯನ್ನು ನಿರ್ವಹಿಸಿದ್ದರು. ಕಾಂಗ್ರೆಸ್ ಪಕ್ಷದ ವಿವಿಧ ಸಮಿತಿಗಳ ಪ್ರಮುಖರಾಗಿ, ಎಐಸಿಸಿ ಪ್ರಧಾನ ಕಾರ್ಯದರ್ಶಿಯಾಗಿಯೂ ಅವರು ಸೇವೆ ಸಲ್ಲಿಸಿದ್ದರು. ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ಪಕ್ಷದ ನಾಯಕರು ಹಾಗೂ ಕಾರ್ಯಕರ್ತರ ಜತೆಗೆ ನಿಕಟ ಸಂಪರ್ಕದಲ್ಲಿ ಇರುತ್ತಿದ್ದ ಆಸ್ಕರ್, ಕೆಪಿಸಿಸಿಯ ಅಧ್ಯಕ್ಷರಾಗಿಯೂ ಕಾರ್ಯ ನಿರ್ವಹಿಸಿದ್ದರು.

ಎಲ್ಲರನ್ನೂ ಒಳಗೊಳ್ಳದ ತಾಲಿಬಾನ್

ವಿಶ್ವಸಂಸ್ಥೆ ಮಾನವ ಹಕ್ಕುಗಳ ಸಮಿತಿ ಮುಖ್ಯಸ್ಥೆ ಮಿಶೆಲ್ ಬಶ್ಲೆಟ್ ಟೀಕೆ

ಜಿನೀವಾ (ಎಎಫ್‌ಪಿ): ಎಲ್ಲರನ್ನೂ ಒಳಗೊಳ್ಳುವ ಸರ್ಕಾರ ರಚಿಸುವುದಾಗಿ ತಾಲಿಬಾನ್ ಹೇಳಿತ್ತು. ಆದರೆ ಸರ್ಕಾರದಲ್ಲಿ ತಾಲಿಬಾನ್‌ನ ಪ್ರಮುಖರಿಗೆ ಮಾತ್ರವೇ ಅವಕಾಶ ನೀಡಿದ್ದು, ಮಹಿಳೆಯರನ್ನು ಹೊರಗಿಟ್ಟಿದೆ ಎಂದು ವಿಶ್ವಸಂಸ್ಥೆಯ ಮಾನವ ಹಕ್ಕುಗಳ ಸಮಿತಿಯ ಮುಖ್ಯಸ್ಥೆ ಮಿಶೆಲ್ ಬಶ್ಲೆಟ್ ಟೀಕಿಸಿದ್ದಾರೆ.

ಜಿನೀವಾದಲ್ಲಿ ನಡೆದ ವಿಶ್ವಸಂಸ್ಥೆಯ ಮಾನವ ಹಕ್ಕುಗಳ ಸಮಿತಿಯ ಸಭೆಯಲ್ಲಿ ಅವರು ಈ ಮಾತು ಹೇಳಿದ್ದಾರೆ.

1996-2001ರ ಅವಧಿಯಲ್ಲಿ ಅತ್ಯಂತ ಕ್ರೂರ ಮತ್ತು ಮೂಲಭೂತವಾದಿ ಸರ್ಕಾರ ನಡೆಸಿದ್ದ ತಾಲಿಬಾನ್, ಇದೇ ಆಗಸ್ಟ್ 15ರಂದು ಮತ್ತೆ ಅಫ್ಗಾನಿಸ್ತಾನವನ್ನು ಸಂಪೂರ್ಣವಾಗಿ ವಶಕ್ಕೆ ಪಡೆಯಿತು. ಈ ಬಾರಿ ಎಲ್ಲರನ್ನೂ ಒಳಗೊಂಡ ಸರ್ಕಾರವನ್ನು ರಚಿಸುವುದಾಗಿ ತಾಲಿಬಾನ್ ಘೋಷಿಸಿತ್ತು. ಆದರೆ, ಕಳೆದ ವಾರ ಘೋಷಿಸಿದ ಹಂಗಾಮಿ ಸರ್ಕಾರದಲ್ಲಿ ತಾಲಿಬಾನ್‌ನ ಪ್ರಮುಖ ನಾಯಕರು ಮತ್ತು ಹಕ್ಕಾನಿ ಉಗ್ರರ ನಾಯಕರಿಗೆ ಸಚಿವ ಸ್ಥಾನ ನೀಡಿತ್ತು.

ಮಹಿಳೆಯರು ಮತ್ತು ಯುವಜನರು ಅರ್ಥಪೂರ್ಣವಾಗಿ ಭಾಗಿಯಾಗುವ ಹಾಗೂ ದೇಶದ ಎಲ್ಲಾ ಸಮುದಾಯಗಳನ್ನು ಒಳಗೊಳ್ಳುವ ಸರ್ಕಾರವನ್ನು ಅಫ್ಗನ್ನರು ಎದುರು ನೋಡುತ್ತಿದ್ದಾರೆ. ದಶಕಗಳಿಂದ ಇರುವ ಆಂತರಿಕ ಕಲಹವು ಈ ಮೂಲಕ ಬಗೆಹರಿಯಬೇಕು ಮತ್ತು ಶಾಂತಿ ನೆಲೆಸಬೇಕು ಎಂದು ಅಫ್ಗನ್ನರು ಬಯಸಿದ್ದಾರೆ ಎಂದು ಮಿಶೆಲ್ ಹೇಳಿದ್ದಾರೆ.

> ಮಹಿಳೆಯರ ಮತ್ತು ಬಾಲಕಿಯರ ಹಕ್ಕುಗಳನ್ನು ಎತ್ತಿಹಿಡಿಯುವುದಾಗಿ ತಾಲಿಬಾನ್ ಹೇಳಿತ್ತು. ಆದರೆ ಪ್ರತಿದಿನವೂ ಅವರನ್ನು ಎಲ್ಲದರಿಂದ ದೂರ ಇಡಲಾಗುತ್ತಿದೆ
> **ಮಿಶೆಲ್ ಬಶ್ಲೆಟ್**, ವಿಶ್ವಸಂಸ್ಥೆ ಮಾನವ ಹಕ್ಕುಗಳ ಸಮಿತಿ ಮುಖ್ಯಸ್ಥೆ

ಕಾಬೂಲ್‌ನಿಂದ ಮತ್ತೆ ವಿಮಾನ ಸಂಚಾರ

ಕಾಬೂಲ್ (ಎಎಫ್‌ಪಿ): ಪಾಕಿಸ್ತಾನದ ಅಂತರರಾಷ್ಟ್ರೀಯ ವಿಮಾನಯಾನವೊಂದು ಸೋಮವಾರ ಬೆಳಿಗ್ಗೆ ಕಾಬೂಲ್ ವಿಮಾನ ನಿಲ್ದಾಣದಿಂದ ಸುಮಾರು 70 ಪ್ರಯಾಣಿಕರನ್ನು ಹೊತ್ತು ಪಾಕಿಸ್ತಾನದ ರಾಜಧಾನಿ ಇಸ್ಲಾಮಾಬಾದ್‌ಗೆ ತೆರಳಿತು. ಅಫ್ಗಾನಿಸ್ತಾನವು ತಾಲಿಬಾನ್ ವಶವಾದ ಬಳಿಕ ಈ ವಿಮಾನ ನಿಲ್ದಾಣದಿಂದ ಹೊರಕ್ಕೆ ಹೋದ ಮೊದಲ ನಾಗರಿಕ ವಿಮಾನ ಇದು.

ವಿಮಾನದಲ್ಲಿ ಪಾಕಿಸ್ತಾನಕ್ಕೆ ತೆರಳಿದವರಲ್ಲಿ ಬಹುತೇಕರು ಅಫ್ಗನ್ನರು. ಅವರಲ್ಲಿ ಹಲವರು ವಿಶ್ವ ಬ್ಯಾಂಕ್, ಮತ್ತಿತರ ಸಂಸ್ಥೆಗಳ ಉದ್ಯೋಗಿಗಳ ಸಂಬಂಧಿಗಳು ಎಂದು ವಿಮಾನ ನಿಲ್ದಾಣದ ಸಿಬ್ಬಂದಿ ಹೇಳಿದ್ದಾರೆ.

ಪಾಕಿಸ್ತಾನ ಅಂತರರಾಷ್ಟ್ರೀಯ ವಿಮಾನಗಳು ಅಫ್ಗಾನಿಸ್ತಾನಕ್ಕೆ ಎಂದಿನ ವಾಣಿಜ್ಯ ಸೇವೆ ಆರಂಭಿಸಿವೆ. ಆದರೆ ಎಷ್ಟು ಅವಧಿಯ ಅಂತರದಲ್ಲಿ ಎರಡು ದೇಶಗಳ ರಾಜಧಾನಿಗಳ ಮಧ್ಯೆ ವಿಮಾನ ಓಡಾಡಲಿದೆ ಎಂದು ಹೇಳಲು ಇದು ಸಮಯವಲ್ಲ ಎಂದು ಪಾಕಿಸ್ತಾನದ ವಿಮಾನ ಯಾನ ಸಂಸ್ಥೆಯೊಂದರ ವಕ್ತಾರರೊಬ್ಬರು ತಿಳಿಸಿದ್ದಾರೆ.

'ತಾಲಿಬಾನ್‌ನಿಂದ ಮಾಜಿ ಸೈನಿಕರ ಹತ್ಯೆ'

ಜಿನೀವಾ (ಎಪಿ): ಅಫ್ಗಾನಿಸ್ತಾನ ಭದ್ರತಾ ಪಡೆಗಳ ಮೇಲೆ ಪ್ರತೀಕಾರ ತೀರಿಸಿಕೊಳ್ಳಲು ಅವುಗಳ ಸಿಬ್ಬಂದಿಗಳನ್ನು ತಾಲಿಬಾನ್ ಹತ್ಯೆಗೈದಿರುವ ಕುರಿತು ತಮ್ಮ ಕಚೇರಿ ಹಲವಾರು ದೂರುಗಳನ್ನು ಸ್ವೀಕರಿಸಿದೆ ಎಂದು ವಿಶ್ವಸಂಸ್ಥೆ ಮಾನವ ಹಕ್ಕುಗಳ ಮುಖ್ಯಸ್ಥೆ ಮಿಶೆಲ್ ಬಶ್ಲೆಟ್ ಹೇಳಿದ್ದಾರೆ.

ಅಲ್ಲದೇ, ಹಿಂದಿನ ಸರ್ಕಾರದ ಉದ್ಯೋಗಿಗಳು ಮತ್ತವರ ಸಂಬಂಧಿಗಳನ್ನು ತಾಲಿಬಾನ್ ಮನಬಂದಂತೆ ಹತ್ಯೆಗೈದಿದೆ ಎಂದು ಆರೋಪಿಸಿದ್ದಾರೆ.

ಹಿಂದಿನ ಸರ್ಕಾರದಲ್ಲಿ ಅಧಿಕಾರಿಯಾಗಿದ್ದವರು ಮತ್ತು ಅಮೆರಿಕ ಭದ್ರತಾ ಪಡೆಗಳಿಗೆ ಸಹಕಾರ ನೀಡಿದವರನ್ನು ವಶಕ್ಕೆ ತೆಗೆದುಕೊಳ್ಳಲು ತಾಲಿಬಾನ್ ಮನೆಮನೆಗೆ ತೆರಳಿ ಶೋಧ ನಡೆಸಿದೆ ಎಂಬ ಹಲವಾರು ದೂರುಗಳನ್ನು ಅವರು ಉಲ್ಲೇಖಿಸಿದ್ದಾರೆ.

ಹೌಸಿಂಗ್ ಎಂಡ್ ಲ್ಯಾಂಡ್ ರೈಟ್ಸ್ ನೆಟ್‌ವರ್ಕ್ ವರದಿ

ಕೋವಿಡ್ ಕಾಲದಲ್ಲಿ ಮನೆ ತೆರವು

ಪ್ರಜಾವಾಣಿ ವಾರ್ತೆ

ನವದೆಹಲಿ: ಕೋವಿಡ್ 19 ಸಾಂಕ್ರಾಮಿಕ ತೀವ್ರವಾಗಿದ್ದ 2020ರ ಮಾರ್ಚ್ ಹಾಗೂ 2021ರ ಜುಲೈ ನಡುವೆ ದೇಶಾದ್ಯಂತ 43,600 ಮನೆ ಅಥವಾ ಗುಡಿಸಲುಗಳನ್ನು ತೆರವು ಮಾಡಲಾಗಿದೆ. 2.57 ಲಕ್ಷ ಜನರನ್ನು ಇದರಿಂದಾಗಿ ಆಶ್ರಯ ಕಳೆದುಕೊಂಡಿದ್ದಾರೆ.

ಹೌಸಿಂಗ್ ಎಂಡ್ ಲ್ಯಾಂಡ್ ರೈಟ್ಸ್ ನೆಟ್‌ವರ್ಕ್ (ಎಚ್‌ಎಲ್‌ಆರ್‌ಎನ್) ಎಂಬ ಎನ್‌ಜಿಒ ಸಿದ್ಧಪಡಿಸಿದ '2020ರಲ್ಲಿ ಬಲವಂತದ ಹೊರಹಾಕುವಿಕೆ: ಸಾಂಕ್ರಾಮಿಕ ಸಮಯದಲ್ಲಿ ತೀವ್ರವಾದ ಮಾನವ ಹಕ್ಕುಗಳ ಬಿಕ್ಕಟ್ಟು' ಎಂಬ ವರದಿಯಲ್ಲಿ ಈ ಅಂಶ ಉಲ್ಲೇಖವಾಗಿದೆ.

ವರದಿಯ ಪ್ರಕಾರ, ಸರ್ಕಾರಿ ಅಧಿಕಾರಿಗಳು ದಿನಕ್ಕೆ ಕನಿಷ್ಠ 505 ಜನರನ್ನು ಅಥವಾ ಪ್ರತಿ ಗಂಟೆಗೆ 21 ಜನರನ್ನು ತೆರವು ಮಾಡಿದ್ದಾರೆ.

'ಕಳೆದ ನಾಲ್ಕು ವರ್ಷಗಳಲ್ಲಿ ಅಂದರೆ, 2017ರಿಂದ 2020ರವರೆಗೆ ವಿವಿಧ ರಾಜ್ಯಗಳು 7,41,300 ಜನರನ್ನು ತೆರವು ಮಾಡಿವೆ. ವರ್ಷವೊಂದಕ್ಕೆ ಸರಾಸರಿ 1,85,300 ಜನರನ್ನು ಒಕ್ಕಲೆಬ್ಬಿಸಲಾಗಿದೆ' ಎಂದು ವರದಿ ಹೇಳಿದೆ.


'2020 ಮತ್ತು 2021ರಲ್ಲಿ ಕೋವಿಡ್ ಲಾಕ್‌ಡೌನ್ ಸಮಯದಲ್ಲೂ ತೆರವು ಕಾರ್ಯಾಚರಣೆ ಮುಂದುವರಿದಿತ್ತು. ಜನರಿಗೆ ಮನೆಯಲ್ಲಿ ಇರುವಂತೆ ಆದೇಶಿಸಿದ್ದ ಸಮಯದಲ್ಲಿ ಅಕ್ರಮವಾಗಿ ತೆರವು ಕಾರ್ಯಾಚರಣೆ ನಡೆಸಲಾಗಿದೆ. ಜನರು ಕೋರ್ಟ್‌ಗಳಿಗೆ ಹೋಗಲು ಅವಕಾಶವಿಲ್ಲದ, ಕರ್ಫ್ಯೂ ಹೇರಿದ್ದ ಪರಿಸ್ಥಿತಿಯ ಲಾಭ ಪಡೆದುಕೊಂಡು ಅಧಿಕಾರಿಗಳು ತಮ್ಮ ಕೆಲಸ ಮುಂದುವರಿಸಿದ್ದರು' ಎಂದು ವರದಿ ಹೇಳಿದೆ.

ಎಚ್‌ಎಲ್‌ಆರ್‌ಎನ್ ನಡೆಸಿದ ವಿಶ್ಲೇಷಣೆ ಪ್ರಕಾರ, ಈ ವರ್ಷದ ಮೊದಲ ಏಳು ತಿಂಗಳಲ್ಲಿ ಅಧಿಕಾರಿಗಳು ಕನಿಷ್ಠ 24,445 ಮನೆಗಳನ್ನು ನೆಲಸಮಗೊಳಿಸಿದ್ದು, ಅದು 1,69,176 ಜನರ ಮೇಲೆ ಪರಿಣಾಮ ಬೀರಿದೆ. ಈ ಪೈಕಿ 13,750 ಜನರನ್ನು ಎರಡನೇ ಅಲೆ ಜೋರಾಗಿದ್ದ ಸಮಯದಲ್ಲಿ ಒಕ್ಕಲೆಬ್ಬಿಸಲಾಯಿತು.

'ಕೋವಿಡ್ ಉತ್ತುಂಗದಲ್ಲಿದ್ದ ಸಮಯದಲ್ಲಿ ತೆರವು ಮಾಡಲಾದ ಈ ಎಲ್ಲ ಪ್ರಕರಣಗಳು ಕಡಿಮೆ ಆದಾಯದ ವರ್ಗದವರನ್ನು ನಿರಾಶ್ರಿತರನ್ನಾಗಿ ಮಾಡಿತು. ಸಾರ್ವಜನಿಕ ಆರೋಗ್ಯ ತುರ್ತುಸ್ಥಿತಿಯ ಸಮಯದಲ್ಲಿ ನಡೆಸಿದ ತೆರವು ಕಾರ್ಯಾಚರಣೆಗಳು ಮಾನವ ಹಕ್ಕುಗಳ ಸ್ಪಷ್ಟ ಉಲ್ಲಂಘನೆಗೆ ಕಾರಣವಾಗಿವೆ. ಕಾರ್ಯಾಚರಣೆಯಿಂದ ಉಂಟಾದ ವ್ಯಾಪಕ ಹಾನಿಯಿಂದ ಸಂವಿಧಾನವು ಖಾತರಿಪಡಿಸಿರುವ ಜನರ ಜೀವಿಸುವ ಹಕ್ಕು ಮೊಟಕುಗೊಂಡಿದೆ' ಎಂದು ವರದಿ ಅಭಿಪ್ರಾಯಪಟ್ಟಿದೆ.



ಸಂತ್ರಸ್ತರ ಪುನರ್ವಸತಿ ಸ್ಥಿತಿಗತಿ



ರಾಜ್ಯದಲ್ಲಿ ಅಕ್ರಮ ವಲಸಿಗರು

ರೈಲ್ವೆ ಹಳಿಗಳ ವಿಸ್ತರಣೆಗಾಗಿ ಕರ್ನಾಟಕ ಕೊಳೆಗೇರಿ ಅಭಿವೃದ್ಧಿ ಮಂಡಳಿಯಿಂದ ಮೈಸೂರಿನಲ್ಲಿ 200 ಮನೆಗಳನ್ನು ಈ ವರ್ಷದ ಏಪ್ರಿಲ್‌ನಲ್ಲಿ ತೆರವುಗೊಳಿಸಲಾಗಿದೆ.

2020ನೇ ಇಸ್ವಿಯ ಜನವರಿಯಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು (ಬಿಬಿಎಂಪಿ) ದೇವರಬೀಸನಹಳ್ಳಿಯಲ್ಲಿ 500 ಮತ್ತು ಬೆಳ್ಳಂದೂರು ಮತ್ತು ಕರಿಯಮ್ಮನ ಅಗ್ರಹಾರದಲ್ಲಿ 200 ಗುಡಿಸಲುಗಳನ್ನು ತೆರವು ಮಾಡಿದೆ ಎಂದು ವರದಿ ಹೇಳಿದೆ. 'ವಲಸೆ ಕಾರ್ಮಿಕರಾದ ಸಂತ್ರಸ್ತರನ್ನು 'ಅಕ್ರಮ ಬಾಂಗ್ಲಾದೇಶಿಯರು' ಎಂದು ತಪ್ಪಾಗಿ ಹಣೆಪಟ್ಟಿ ಕಟ್ಟಲಾಗಿದೆ. ಅವರ ಜೋಪಡಿಗಳನ್ನು ನೆಲಸಮ ಮಾಡಲು ಸಮರ್ಥನೆಯಾಗಿ ಇದನ್ನು ಬಳಸಿಕೊಳ್ಳಲಾಯಿತು. ತೆರವು ಕಾರ್ಯಾಚರಣೆಯನ್ನು ಕರ್ನಾಟಕ ಹೈಕೋರ್ಟ್ ತಡೆಹಿಡಿದು, ಸಂತ್ರಸ್ತ ಕುಟುಂಬಗಳಿಗೆ ಪುನರ್ವಸತಿ ಕಲ್ಪಿಸಲು ಬಿಬಿಎಂಪಿಗೆ ಸೂಚಿಸಿತ್ತು' ಎಂದು ವರದಿ ಉಲ್ಲೇಖಿಸಿದೆ.

'ದಿ ಲ್ಯಾನ್ಸೆಟ್' ವರದಿಯಲ್ಲಿ ವಿಜ್ಞಾನಿಗಳ ಅಭಿಮತ

'ಸಾಮಾನ್ಯರಿಗೆ ಬೂಸ್ಟರ್ ಅಗತ್ಯವಿಲ್ಲ'

ನವದೆಹಲಿ: 'ಜನಸಾಮಾನ್ಯರಿಗೆ ಕೋವಿಡ್ ಬೂಸ್ಟರ್ ಡೋಸ್‌ಗಳು ಪರಿಣಾಮಕಾರಿಯಾಗಿ ಕೆಲಸ ಮಾಡುವ ಬಗ್ಗೆ ಇದುವರೆಗೆ ಯಾವುದೇ ಮಾಹಿತಿಗಳು ವಿಶ್ವಾಸಾರ್ಹವಾದ ಪುರಾವೆಗಳನ್ನು ಒದಗಿಸಿಲ್ಲ' ಎಂದು 'ದಿ ಲ್ಯಾನ್ಸೆಟ್'ನಲ್ಲಿ ಪ್ರಕಟವಾದ ವರದಿಯೊಂದು ಹೇಳಿದೆ.

ಆಹಾರ ಮತ್ತು ಔಷಧ ಆಡಳಿತ ಹಾಗೂ ವಿಶ್ವ ಆರೋಗ್ಯ ಸಂಸ್ಥೆಯ ಕೆಲ ಪರಿಣತರನ್ನೊಳಗೊಂಡ ಅಂತರಾಷ್ಟ್ರೀಯ ವಿಜ್ಞಾನಿಗಳ ಗುಂಪೊಂದು ಪ್ರಕಟಿಸಿರುವ ವಿಮರ್ಶಾ ವರದಿಯಲ್ಲಿ ಈ ಅಂಶವನ್ನು ಪ್ರತಿಪಾದಿಸಲಾಗಿದೆ.

'ವಿಶ್ವಾದ್ಯಂತ ಲಸಿಕೆ ಹಾಕದ ಕೋಟ್ಯಂತರ ಜನರನ್ನು ರಕ್ಷಿಸಲು ಬೂಸ್ಟರ್ ಡೋಸ್‌ಗಳನ್ನು ಬಳಸುವುದರಿಂದ ಯಾವುದೇ ಪ್ರಯೋಜನವಿಲ್ಲ. ದುರ್ಬಲ ರೋಗನಿರೋಧಕ ಶಕ್ತಿ ಹೊಂದಿರುವ ಕೆಲವು ಜನರಿಗೆ ಮಾತ್ರ ಬೂಸ್ಟರ್‌ಗಳು ಉಪಯುಕ್ತವಾಗಬಹುದು, ಆದರೆ ಸಾಮಾನ್ಯ ಜನರಿಗೆ ಇದರ ಅಗತ್ಯ ಇನ್ನೂ ಇಲ್ಲ' ಎಂದು ವಿಜ್ಞಾನಿಗಳು ತಮ್ಮ ವರದಿಯಲ್ಲಿ ಹೇಳಿದ್ದಾರೆ.

ಕೋವ್ಯಾಕ್ಸಿನ್‌ಗೆ ಈ ತಿಂಗಳಲ್ಲಿ ಡಬ್ಲ್ಯುಎಚ್‌ಒ ಅನುಮತಿ?

ನವದೆಹಲಿ (ಪಿಟಿಐ): ಹೈದರಾಬಾದ್ ಮೂಲದ ಭಾರತ್ ಬಯೋಟೆಕ್ ಅಭಿವೃದ್ಧಿಪಡಿಸಿದ ಕೋವ್ಯಾಕ್ಸಿನ್ ಲಸಿಕೆಗೆ ವಿಶ್ವ ಆರೋಗ್ಯ ಸಂಸ್ಥೆಯು (ಡಬ್ಲ್ಯುಎಚ್‌ಒ) ಇದೇ ತಿಂಗಳು ಅನುಮೋದನೆ ನೀಡುವ ಸಾಧ್ಯತೆ ಇದೆ ಎಂದು ಅಧಿಕೃತ ಮೂಲಗಳು ಸೋಮವಾರ ತಿಳಿಸಿವೆ.

ಡಬ್ಲ್ಯುಎಚ್‌ಒ ಇಲ್ಲಿಯವರೆಗೆ ಫೈಜರ್-ಬಯೋಟೆಕ್, ಯುಎಸ್ ಫಾರ್ಮಾ ಮೇಜರ್ಸ್‌ನ ಜಾನ್ಸನ್ ಮತ್ತು ಜಾನ್ಸನ್, ಮಾಡರ್ನಾ, ಚೀನಾದ ಸಿನೋಫಾರ್ಮ್ ಮತ್ತು ಆಕ್ಸ್‌ಫರ್ಡ್-ಅಸ್ಟ್ರಾಜೆನಿಕಾ ಅಭಿವೃದ್ಧಿಪಡಿಸಿದ ಕೋವಿಡ್ ಲಸಿಕೆಗಳನ್ನು ತುರ್ತು ಬಳಕೆಗಾಗಿ ಅನುಮೋದಿಸಿದೆ.

75 ಕೋಟಿ ಡೋಸ್ ಲಸಿಕೆ ನೀಡಿಕೆ: ಮಾಂಡವೀಯಾ

ನವದೆಹಲಿ (ಪಿಟಿಐ): 'ಭಾರತದಲ್ಲಿ ಈವರೆಗೆ 75 ಕೋಟಿ ಡೋಸ್ ಕೋವಿಡ್ ಲಸಿಕೆಗಳನ್ನು ನೀಡಲಾಗಿದೆ. ಈ ಮೂಲಕ ಮಹತ್ವದ ಹೆಗ್ಗುರುತನ್ನು ದಾಟಲಾಗಿದೆ' ಎಂದು ಕೇಂದ್ರ ಆರೋಗ್ಯ ಸಚಿವ ಮನ್‌ಸುಖ್ ಮಾಂಡವೀಯಾ ಸೋಮವಾರ ಹೇಳಿದ್ದಾರೆ.

ದೇಶದ ಲಸಿಕೆ ಅಭಿಯಾನವು ಪ್ರಧಾನಿ ನರೇಂದ್ರ ಮೋದಿಯವರ ನೇತೃತ್ವದಲ್ಲಿ ಹೊಸ ಆಯಾಮಗಳನ್ನು ಸೃಷ್ಟಿಸುತ್ತಿದೆ ಎಂದು ತಿಳಿಸಿರುವ ಅವರು, ಸ್ವಾತಂತ್ರ್ಯದ 75ನೇ ವರ್ಷದಲ್ಲಿ ದೇಶವು 75 ಕೋಟಿ ಡೋಸ್ ಲಸಿಕೆಯನ್ನು ಜನರಿಗೆ ನೀಡುವ ಮೂಲಕ ಸಾಧನೆ ಮಾಡಿದೆ ಎಂದು ಅವರು ಟ್ವೀಟ್ ಮಾಡಿದ್ದಾರೆ.

ಕೋವಿಡ್ ಮರಣಪತ್ರ: ಮಾರ್ಗಸೂಚಿ ಮರು ಪರಿಶೀಲನೆಗೆ ಸಲಹೆ

ನವದೆಹಲಿ: ಕೋವಿಡ್ 19ನಿಂದಾಗಿ ಸಾವಿಗೀಡಾದ ಸಂತ್ರಸ್ತರ ಕುಟುಂಬಗಳಿಗೆ ಪರಿಹಾರ ನೀಡುವ ಉದ್ದೇಶದಿಂದ ನೀಡಲಾಗುವ ಮರಣಪತ್ರಗಳಲ್ಲಿ ಆತ್ಮಹತ್ಯೆಯಿಂದಾದ ಸಾವನ್ನು ಸೇರಿಸದಿರುವ ಕುರಿತ ತನ್ನ ಮಾರ್ಗಸೂಚಿಯನ್ನು ಮರುಪರಿಶೀಲಿಸಬೇಕು ಎಂದು ಕೇಂದ್ರ ಸರ್ಕಾರಕ್ಕೆ ಸುಪ್ರೀಂಕೋರ್ಟ್ ಸೋಮವಾರ ಸಲಹೆ ನೀಡಿದೆ.

ನ್ಯಾಯಮೂರ್ತಿಗಳಾದ ಎಂ.ಆರ್. ಶಾ ಮತ್ತು ಎ.ಎಸ್. ಬೋಪಣ್ಣ ಅವರನ್ನೊಳಗೊಂಡ ನ್ಯಾಯಪೀಠವು, 'ಕೋವಿಡ್ ಸೋಂಕಿತ ವ್ಯಕ್ತಿ ಆತ್ಮಹತ್ಯೆ ಮಾಡಿಕೊಂಡರೆ ಅಂಥವರಿಗೆ ಕೋವಿಡ್ ಮರಣಪತ್ರಗಳನ್ನು ನೀಡಲಾಗದು ಎಂದು ನೀವು ನಿರ್ದಿಷ್ಟವಾಗಿ ಹೇಳಿದ್ದೀರಿ. ಆದರೆ, ಇದನ್ನು ಮರುಪರಿಶೀಲಿಸುವ ಅಗತ್ಯವಿದೆ' ಎಂದು ಸರ್ಕಾರದ ಪರವಾಗಿ ಹಾಜರಿದ್ದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರಿಗೆ ತಿಳಿಸಿದೆ. ಇದಕ್ಕೆ ಪ್ರತಿಕ್ರಿಯಿಸಿದ ಮೆಹ್ತಾ ಅವರು, 'ಸಾವಿನ ಕಾರಣ ಆತ್ಮಹತ್ಯೆ ಎಂದಾಗಿರುತ್ತದೆಯೇ ಹೊರತು ಕೋವಿಡ್ ಅಲ್ಲ' ಎಂದರು.

'ಈ ಬಗ್ಗೆ ಕೇಂದ್ರ ಸರ್ಕಾರವು ಸಲ್ಲಿಸಿರುವ ಅಫಿಡವಿಟ್ ಮೇಲ್ನೋಟಕ್ಕೆ ಸರಿ ಎನಿಸುತ್ತದೆ. ಆದರೆ, ಕೊರೊನಾ ಪೀಡಿತರಾಗಿ ಅದರಿಂದಲೇ ಆತ್ಮಹತ್ಯೆ ಮಾಡಿಕೊಂಡವರ ಬಗ್ಗೆ ಏನೂ ಹೇಳಿಲ್ಲ.' ಎಂದೂ ಪೀಠವು ಪ್ರಶ್ನಿಸಿತು.

ಕೋವಿಡ್‌ನಿಂದಾಗಿ ಆತ್ಮಹತ್ಯೆ ಮಾಡಿಕೊಂಡವರ ಕುಟುಂಬಗಳಿಗೆ ಪರಿಹಾರ ನೀಡಬೇಕು. ಆತ್ಮಹತ್ಯೆ ಎನ್ನುವ ಕಾರಣಕ್ಕಾಗಿ ಅವರಿಗೆ ಪರಿಹಾರ ನೀಡದಿರುವುದು ಅಸಮಂಜಸ' ಎಂದು ಪ್ರಶ್ನಿಸಿ ವಕೀಲರಾದ ರೀಪಕ್ ಕನ್ಸಲ್ ಮತ್ತು ಗೌರವ್ ಕುಮಾರ್ ಬನ್ಸಲ್ ಎಂಬುವರು ಅರ್ಜಿ ಸಲ್ಲಿಸಿದ್ದರು.

ಹಿಂದಿನಂತೆಯೇ ಅಫ್ಗನ್ನರ ಪರ ಭಾರತದ ನಿಲುವು: ಜೈಶಂಕರ್

ನವದೆಹಲಿ: 'ಅಫ್ಗಾನಿಸ್ತಾನವು ಗಂಭೀರವಾದ ಮಾನವೀಯ ಬಿಕ್ಕಟ್ಟನ್ನು ಎದುರಿಸುತ್ತಿರುವಾಗ, ಭಾರತವು ಹಿಂದಿನಂತೆಯೇ ಅಫ್ಗನ್ನರ ಪರವಾಗಿ ನಿಲ್ಲಲಿದೆ' ಎಂದು ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಸೋಮವಾರ ಹೇಳಿದ್ದಾರೆ.

ವಿಶ್ವಸಂಸ್ಥೆಯ ಉನ್ನತಮಟ್ಟದ ವರ್ಚುವಲ್ ಸಭೆಯಲ್ಲಿ ಮಾತನಾಡಿದ ಅವರು,'ಯುದ್ಧದಿಂದ ಹಾನಿಗೊಳಗಾದ ಅಫ್ಗಾನಿಸ್ತಾನದ ಭವಿಷ್ಯದಲ್ಲಿ ಜಾಗತಿಕ ಮಟ್ಟದಲ್ಲಿ ಭಾರತವು ಪ್ರಧಾನ ಪಾತ್ರ ವಹಿಸಲಿದೆ' ಎಂದರು.

'ನೆರೆಯ ರಾಷ್ಟ್ರವಾಗಿ ಭಾರತವು ಅಲ್ಲಿನ ಬೆಳವಣಿಗೆಗಳನ್ನು ಗಮನಿಸುತ್ತಿದೆ. ಅಫ್ಗಾನಿಸ್ತಾನಕ್ಕೆ ಸಹಾಯ ಮಾಡಲು ಸಾಧ್ಯವಾದಷ್ಟು ಉತ್ತಮವಾದ ವಾತಾವರಣವನ್ನು ಸೃಷ್ಟಿಸಲು ಅಂತರರಾಷ್ಟ್ರೀಯ ಸಮುದಾಯವು ಒಗ್ಗೂಡಬೇಕು' ಎಂದೂ ಜೈಶಂಕರ್ ಕರೆ ನೀಡಿದರು.

ಅತ್ಯಾಚಾರ, ಹತ್ಯೆ: ಆರೋಪಿಯಿಂದ ತಪ್ಪೊಪ್ಪಿಗೆ

ಮುಂಬೈ: 'ಸಾಕಿ ನಾಕಾ ಪ್ರದೇಶದಲ್ಲಿ ಮಹಿಳೆಯ ಮೇಲೆ ಅತ್ಯಾಚಾರ ನಡೆಸಿ, ಹತ್ಯೆ ಮಾಡಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಬಂಧನಕ್ಕೊಳಗಾಗಿರುವ ಆರೋಪಿಯು ತಪ್ಪೊಪ್ಪಿಕೊಂಡಿದ್ದಾನೆ' ಎಂದು ಮುಂಬೈ ಪೊಲೀಸ್ ಆಯುಕ್ತ ಹೇಮಂತ್ ನಾಗರಾಳೆ ಸೋಮವಾರ ಹೇಳಿದ್ದಾರೆ.

'ಪ್ರಕರಣದ ಆರೋಪಿ, ಉತ್ತರ ಪ್ರದೇಶದ ಜೌನ್‌ಪುರ ಮೂಲದ ಮೋಹಿತ್ ಚೌಹಾಣ್ (45) ಅಪರಾಧ ಎಸಗಿದ್ದನ್ನು ಒಪ್ಪಿಕೊಂಡಿದ್ದಾನೆ.



ನಿದ್ರೆಯ ಬಗ್ಗೆ ನಿರ್ಲಕ್ಷ್ಯ ಸಲ್ಲದು!

ನಿದ್ರೆಯ ಪ್ರಮಾಣ ಕಡಿಮೆಯಾದರೆ ಮೆದುಳಿನ ಚೇತರಿಕೆ ಪೂರ್ಣವಾಗುವುದಿಲ್ಲ; ಅದರ ಕಾರ್ಯಕ್ಷಮತೆ ಕುಂಠಿತವಾಗುತ್ತದೆ; ನೆನಪುಗಳ ಮರುಕಳಿಕೆ ಕ್ಷೀಣಿಸುತ್ತದೆ.

ಡಾ. ಕಿರಣ್ ವಿ. ಎಸ್.

ಆಯಸ್ಸಿನ ಸರಿಸುಮಾರು ಮೂರನೆಯ ಒಂದು ಭಾಗವನ್ನು ನಾವು ಕಳೆಯುವುದು ನಿದ್ರೆಯಲ್ಲಿ. ನಮ್ಮ ಜೀವನದ ಬೇರೆ ಯಾವುದೇ ಪ್ರಕ್ರಿಯೆಗಿಂತಲೂ ಅಧಿಕ ಕಾಲವನ್ನು ನಿದ್ರೆ ಆವರಿಸುತ್ತದೆ. ಬಹಳ ಕಾಲದವರೆಗೆ ನಿದ್ರೆಯನ್ನು 'ಬದುಕಿನ ವಿರಾಮದ ವೇಳೆ' ಎಂದು ಮಾತ್ರ ಪರಿಗಣಿಸಲಾಗುತ್ತಿತ್ತು. ದೇಹದ ಮತ್ತು ಮನಸ್ಸಿನ ಆರೋಗ್ಯ ನಿದ್ರೆಯ ಸೌಖ್ಯದ ಮೇಲೆ ಅವಲಂಬಿತವಾಗಿವೆ; ನಿದ್ರೆ ಕಡಿಮೆಯಾದಾಗ ಇಡೀ ದಿನ ಕಿರಿಕಿರಿಯ ಮನಃಸ್ಥಿತಿ ಇರುವುದು ಅನುಭವಕ್ಕೆ ಬಂದಿರುತ್ತದೆ. 'ಹೀಗೇಕೆ' ಎನ್ನುವ ಪ್ರಶ್ನೆಯನ್ನು ಬೆಂಬತ್ತಿದಾಗ ನಿದ್ರೆಯ ವಿವಿಧ ಆಯಾಮಗಳು ಬೆಳಕಿಗೆ ಬಂದವು. ವೈದ್ಯಕೀಯ ವಿಜ್ಞಾನ ಬೆಳೆದಂತೆ ನಿದ್ರೆಯನ್ನೂ ಆರೋಗ್ಯದ ದಾಯರೆಗೆ ತರಲಾಯಿತು; ನಿದ್ರೆಯ ಕುರಿತಾದ ಅಧ್ಯಯನಗಳು ಮೊದಲಾದವು. ಪ್ರಸ್ತುತ ನಿದ್ರೆಯ ಕುರಿತಾದ ಪರೀಕ್ಷೆಗಳು, ಚಿಂತನೆಗಳು, ಸಲಹೆಗಳು, ಚಿಕಿತ್ಸೆಗಳು ಲಭ್ಯವಿದೆ.

ನಿದ್ರೆಯ ವೇಳೆ ಮೆದುಳಿನ ವರ್ತನೆಯನ್ನು ವಿಜ್ಞಾನಿಗಳು ಅಳೆದಿದ್ದಾರೆ. ನಿದ್ರೆಯಲ್ಲಿ ಎರಡು ಪ್ರಕಾರಗಳಿವೆ: ಆಳವಾದ ನಿದ್ರೆ ಮತ್ತು ಕನಸುಗಳ ನಿದ್ರೆ. ನಿದ್ರೆಯ ಬಹುಭಾಗ ಆಳವಾದ ನಿದ್ರೆಯದ್ದು. ಈ ವೇಳೆ ಮೆದುಳಿನಲ್ಲಿ ದೊಡ್ಡಗಾತ್ರದ, ನಿಧಾನಗತಿಯ ತರಂಗಗಳು ಕಾಣುತ್ತವೆ; ಸ್ನಾಯುಗಳು ಸಡಿಲವಾಗುತ್ತವೆ; ಉಸಿರಾಟ ಆಳವಾಗಿ, ನಿಧಾನವಾಗಿ ಆಗುತ್ತದೆ; ದಿನವಿಡೀ ದಣಿದಿರುವ ದೇಹ ಮತ್ತು ಮಿದುಳಿಗೆ ಚೈತನ್ಯ ದೊರೆಯುತ್ತದೆ. ಕನಸುಗಳ ನಿದ್ರೆ ಇದಕ್ಕಿಂತ ಭಿನ್ನ. ಇದರಲ್ಲಿ ಮೆದುಳಿನ ಕ್ರಿಯಾಶೀಲತೆ ಹೆಚ್ಚುತ್ತದೆ; ಸ್ನಾಯುಗಳು ನಿಶ್ಚೇಷ್ಟವಾಗುತ್ತವೆ; ಉಸಿರಾಟ ಮತ್ತು ಎದೆಬಡಿತದಲ್ಲಿ ಏರುಪೇರಾಗುತ್ತದೆ. ಕನಸುಗಳ ನಿದ್ರೆಯ ಮೂಲೋದ್ದೇಶ ಇನ್ನೂ ಸರಿಯಾಗಿ ತಿಳಿದುಬಂದಿಲ್ಲ. ಆದರೆ, ಆ ವೇಳೆ ಆಗುವ ಶಾರೀರಿಕ ವ್ಯತ್ಯಾಸಗಳ ಅಧ್ಯಯನ ಸಾಕಷ್ಟು ಆಗಿದೆ. ಒಂದು ರಾತ್ರಿಯಲ್ಲಿ ಆಳನಿದ್ರೆ ಮತ್ತು ಕನಸುಗಳ ನಿದ್ರೆಗಳ ನಾಲ್ಕೈದು ಆವರ್ತನಗಳು ಜರುಗುತ್ತವೆ. ನಿದ್ರೆಯಿಂದ ಮೆದುಳಿನ ಕೋಶಗಳ ಕಶ್ಮಲಗಳು, 'ಜೇಡರಬಲೆ'ಗಳು ತೊಳೆದುಹೋಗುತ್ತವೆ. ನಿದ್ರೆಯ ಪ್ರಮಾಣ ಕಡಿಮೆಯಾದರೆ ಮೆದುಳಿನ ಚೇತರಿಕೆ ಪೂರ್ಣವಾಗುವುದಿಲ್ಲ; ಅದರ ಕಾರ್ಯಕ್ಷಮತೆ ಕುಂಠಿತವಾಗುತ್ತದೆ; ನೆನಪುಗಳ ಮರುಕಳಿಕೆ ಕ್ಷೀಣಿಸುತ್ತದೆ. ಮನಸ್ಸಿನ ವ್ಯಾಪಾರಗಳು ತಹಬಂದಿಗೆ ಬರಲು ನಿದ್ರೆಯಿಂದ ಅನಾನುಕೂಲವಾಗುತ್ತದೆ. ಈ ಕಾರಣಕ್ಕೇ ಪರೀಕ್ಷೆಯಂತಹ ಮುಖ್ಯವಾದ ಕೆಲಸಗಳ ಹಿಂದಿನ ದಿನ ನಿದ್ರೆಗೆಡೆವುದು ಸೂಕ್ತವಲ್ಲ. ಕೆಲಸಗಳಲ್ಲಿ ಮುಳುಗಿ, ಕಡಿಮೆ ನಿದ್ರೆ ಮಾಡುವವರಿಗೆ ಇಳಿವಯಸ್ಸಿನಲ್ಲಿ ತೀವ್ರ ಮರೆವಿನಂತಹ ಮೆದುಳಿನ ಸಮಸ್ಯೆಗಳು ಕಾಣುತ್ತವೆ.

ನಮ್ಮ ಮೆದುಳಿನಲ್ಲಿ ಜೈವಿಕ ಗಡಿಯಾರವಿದೆ. ಬೆಳಕಿನ ಪ್ರಮಾಣ ಮತ್ತು ಮೆದುಳಿನ ಪೀನಿಯಲ್ ಗ್ರಂಥಿಯಲ್ಲಿ ಸ್ರವಿಸುವ ಮೆಲಟೋನಿನ್ ಎಂಬ ಚೋದಕದ ಪ್ರಭಾವದಲ್ಲಿ ಚಲಿಸುವ ಈ ಜೈವಿಕ ಗಡಿಯಾರ, ನಿದ್ರೆಯ ನಿಯಂತ್ರಣದಲ್ಲಿ ಮಹತ್ವದ ಪಾತ್ರ ವಹಿಸುತ್ತದೆ. ಇದಲ್ಲದೆ, ಶರೀರಕ್ಕೆ ಹಸಿವಿನಂತೆ ನಿದ್ರೆಯ ಸಹಜ ಅವಶ್ಯಕತೆಯೂ ಇರುತ್ತದೆ; ಈ ಅಗತ್ಯ ಒಂದು ಹಂತ ತಲುಪಿದಾಗ ನಿದ್ರೆ ಒತ್ತರಿಸಿಕೊಂಡು ಬರುತ್ತದೆ. ಆ ಸಮಯದಲ್ಲಿ ವಾಹನಚಾಲನೆ, ಯಂತ್ರಚಾಲನೆಯಂತಹ ಜವಾಬ್ದಾರಿಯುತ ಕೆಲಸಗಳನ್ನು ಮಾಡುವುದು ಅಪಾಯಕಾರಿ. ಆಗ ಬೇರೆಲ್ಲಾ ಕೆಲಸಗಳನ್ನೂ ಬದಿಗಿಟ್ಟು ತೆಗೆಯುವ ಒಂದು ಸಣ್ಣನಿದ್ರೆ ಒತ್ತರಿಕೆಯನ್ನು ದೂರಮಾಡುತ್ತದೆ.



ಖಿನ್ನತೆ ಉಳ್ಳವರಲ್ಲಿ ಅತಿನಿದ್ರೆ ಇಲ್ಲವೇ ನಿದ್ರಾಹೀನತೆ ಕಾಣಬಹುದು. ಮೈಗ್ರೇನ್ ತಲೆನೋವು, ಅಧಿಕ ರಕ್ತದೊತ್ತಡ, ಅಪಸ್ಮಾರ, ಮಧುಮೇಹ ಮುಂತಾದ ಸಮಸ್ಯೆಗಳು ನಿದ್ರಾಹೀನತೆಯಿಂದ ಹೆಚ್ಚಾಗುತ್ತವೆ. ಶರೀರದ ರಕ್ಷಕ ವ್ಯವಸ್ಥೆಯ ಸಾಮರ್ಥ್ಯ ಕುಸಿದು, ಸೋಂಕುಗಳು ಸಂಭವಿಸಬಹುದು. ಇಂತಹ ಸಮಸ್ಯೆಗಳು ಉಳ್ಳವರು ಚೆನ್ನಾಗಿ ನಿದ್ರೆ ಮಾಡಬೇಕು. ಯಾವುದೇ ಕಾರಣಕ್ಕೂ ಒಂದು ದಿನವೂ ನಿದ್ರೆಯಿಂದ ವಂಚಿತರಾಗಬಾರದು.

ನಿದ್ರಾಹೀನತೆಯಿಂದ ಮೆದುಳಿನ ಕೆಲವು ಭಾಗಗಳಿಗೆ ಹೆಚ್ಚು ತೊಂದರೆಯಾಗುತ್ತದೆ. ಭಾಷೆಯ ಬಳಕೆಯನ್ನು ನಿಯಂತ್ರಿಸುವ ಭಾಗಕ್ಕೆ ಅಧಿಕವಾಗಿ ಸಮಸ್ಯೆ ಆಗುತ್ತದೆ; ಮಾತು ತೊದಲುತ್ತದೆ. ವಸ್ತುಗಳ ಬಿಂಬಗಳನ್ನು ಗ್ರಹಿಸುವ ಭಾಗಕ್ಕೆ ಧಕ್ಕೆಯಾಗುತ್ತದೆ; ನೋಟದ ಸ್ಥಿರತೆ ಕುಗ್ಗಿ, ವಸ್ತುಗಳ ಗಾತ್ರ ಬದಲಾದಂತೆ ಕಾಣುತ್ತದೆ. ನಿರ್ಧಾರ ತೆಗೆದುಕೊಳ್ಳುವ ಕ್ಷಮತೆ ಕಡಿಮೆಯಾಗುತ್ತದೆ. ಹೀಗಾಗಿ, ಮುಖ್ಯವಾದ ನಿರ್ಧಾರಗಳನ್ನು ತೆಗೆದುಕೊಳ್ಳುವ ಜವಾಬ್ದಾರಿ ಇರುವವರು ನಿದ್ರೆಗೆಡುವುದು ಸೂಕ್ತವಲ್ಲ.

ಉಸಿರಾಟದ ಸಮಸ್ಯೆಗಳು; ದೀರ್ಘಕಾಲಿಕ ರಾತ್ರಿ-ಪಾಳಿ ಕೆಲಸ; ರಾತ್ರಿಯಿಡೀ ಮೋಜು ಮಾಡಿ, ಹಗಲಿನಲ್ಲಿ ಕೆಲಗಂಟೆಗಳ ಕಾಲ ಮಾತ್ರ ಮಲಗುವುದು; ರಾತ್ರಿ ನಿದ್ರೆಯ ವೇಳೆ ಆಗಾಗ ಎಚ್ಚರಾಗಬೇಕಾದ ಉದ್ಯೋಗ; ಯಾವುದೋ ಕೆಲಸ ಇಲ್ಲವೇ ಹವ್ಯಾಸಕ್ಕೆ ಸಿಲುಕಿ, ನಿದ್ರೆಯ ಸಮಯವನ್ನು ಕಡಿಮೆ ಮಾಡಿಕೊಳ್ಳುವುದು – ಇವೆಲ್ಲವೂ ನಿದ್ರಾಹೀನತೆಯಿಂದ ಉಂಟಾಗುವ ಪರಿಣಾಮಗಳನ್ನೇ ತೋರುತ್ತವೆ. ಕಾರಣಗಳ ಹೊರತಾಗಿಯೂ ನಿದ್ರಾಹೀನತೆಯಿಂದ ಬಳಲುವವರು, ಎಷ್ಟೋ ಪ್ರಯತ್ನ ಮಾಡಿದರೂ ನಿದ್ರೆ ಬಾರದವರಿದ್ದಾರೆ. ಇಂತಹವರು ಒಂದು ನಿಶ್ಚಿತ ಸಮಯಕ್ಕೆ ಮಲಗುವ ಮತ್ತು ಏಳುವ ಪದ್ಧತಿ ಮಾಡಿಕೊಳ್ಳಬೇಕು; ವಾರಾಂತ್ಯಕ್ಕಾಗಲೀ, ಬೇರೆ ನೆಪಗಳಿಗಾಗಲೀ ಇದನ್ನು ಬದಲಾಯಿಸಬಾರದು. ನಿದ್ರೆಯ ಸಮಯಕ್ಕೆ ಒಂದು ತಾಸು ಮುನ್ನ ತುಸುವೇ ಬೆಳಕಿನಲ್ಲಿ ಕಾಲ ಕಳೆಯಬೇಕು. ಈ ಸಮಯದಲ್ಲಿ ದೂರದರ್ಶನ, ಕಂಪ್ಯೂಟರ್, ಮೊಬೈಲ್ ನೋಡಬಾರದು. ಮನಸ್ಸಿಗೆ ಆಪ್ತವಾದ ಪುಸ್ತಕವನ್ನು ಓದುವುದು ಒಳಿತು. ನಿದ್ರೆಯ ಸಮಯದಲ್ಲಿ ಸಾಮಾನ್ಯ ಆಹಾರಸೇವನೆ ಸೂಕ್ತ; ಭೂರಿಭೋಜನ, ಮದ್ಯಪಾನ, ಧೂಮಪಾನ, ಕಾಫಿ-ಟೀಗಳನ್ನು ದೂರವಿಡಬೇಕು. ಎಚ್ಚರದ ಸಮಯದಲ್ಲಿ ಭೌತಿಕ ಚಟುವಟಿಕೆ ಇರಬೇಕು. ಸ್ವಲ್ಪ ವ್ಯಾಯಾಮ, ತೋಟದ ಕೆಲಸ, ನಡಿಗೆ ಒಳ್ಳೆಯದು. ನಿದ್ರೆಯ ಕೋಣೆ ತಂಪಾಗಿ, ನಿಶ್ಶಬ್ದವಾಗಿ, ಮಂದಬೆಳಕಿನಿಂದಿರುವುದು ಅಗತ್ಯ. ನಿದ್ರೆಗೆ ಮುನ್ನ ಬಿಸಿನೀರಿನಲ್ಲಿ ಸ್ನಾನ ಮಾಡಿ, ಧ್ಯಾನ ಮಾಡುವುದರಿಂದ ನಿದ್ರಾಹೀನತೆ ಕಡಿಮೆಯಾಗುತ್ತದೆ. ಹಗಲುವೇಳೆಯಲ್ಲಿ ಮಲಗುವುದು ಕೂಡ ರಾತ್ರಿ ನಿದ್ರೆ ಬಾರದಿರುವುದಕ್ಕೆ ಕಾರಣ.

ನಿದ್ರೆ ಆರೋಗ್ಯದ ಭಾಗ; ಈ ಬಗ್ಗೆ ಯಾವುದೇ ಸಮಸ್ಯೆ ಇದ್ದರೂ ನಿಮ್ಮ ವೈದ್ಯರು ನೆರವಾಗಬಲ್ಲರು.

ನೆಮ್ಮದಿಗಾಗಿ ನೆಮ್ಮದಿಯಿಂದ ಬರೆಯಿರಿ

ಭಾಷೆ ನಮ್ಮ ಅನುಭವಗಳಿಗೆ ಒಂದು ರೂಪ ನೀಡಿ, ಅವುಗಳನ್ನು ನಮ್ಮಿಂದ ಬೇರೆಯಾಗಿ ನಿಲ್ಲಿಸಿ ನಮ್ಮ ಅವಲೋಕನಕ್ಕೆ ನಿಲುಕುವಂತೆ ಮಾಡುತ್ತದೆ.



ರಮ್ಯಾ ಶ್ರೀಹರಿ

ಯಾವುದಕ್ಕೆ ನಾಮ, ರೂಪ, ಆಕಾರಗಳಿಲ್ಲವೋ ಅದು ನಮ್ಮನ್ನು ಹೆದರಿಸುತ್ತದೆ, ಅನೂಹ್ಯ ರೀತಿಯಲ್ಲಿ ಬಂಧಿಸಿಡುತ್ತದೆ. ಕತ್ತಲ ಗುಣವೂ ಹೀಗೆ, ಭಯವನ್ನು ಮೂಲವಾಗಿಟ್ಟುಕೊಂಡು ಹಿಡಿತವನ್ನು ಸಾಧಿಸುವುದು. ನಮ್ಮ ಆಂತರ್ಯದ ಲೋಕವೂ ಕತ್ತಲ ಈ ಹಿಡಿತಕ್ಕೆ ಹೊರತಾಗಿಲ್ಲ, ಅಲ್ಲಿ ಏನಿದೆಯೋ, ಏನಿಲ್ಲವೋ, ಯಾವುದು ಯಾವುದರ ಮುಸುಕು ಹೊದ್ದು ಕೂತಿದೆಯೋ, ಎಲ್ಲಿಂದಲೋ ಬಂದು ಇಲ್ಲಿ ಸೇರಿಕೊಂಡಿರುವ ಪರಕೀಯ ವಸ್ತು ಯಾವುದೋ – ಎಲ್ಲವೂ ಅಸ್ಪಷ್ಟ. ಈ ಅಸ್ಪಷ್ಟತೆಗೆ, ಅಮೂರ್ತತೆಗೆ ಒಂದು ರೂಪ ಕೊಡುವುದು ಸುಲಭವಲ್ಲ. ಆದರೆ ಅಸ್ಪಷ್ಟತೆಯನ್ನು ಅಪೂರ್ಣವಾಗಿಯಾದರೂ ದಾಖಲಿಸಿ ನಮ್ಮಿಂದಾಚೆಗೆ ಒಂದು ಅಸ್ತಿತ್ವ ಕೊಡಬಲ್ಲ ಕ್ರಿಯೆಯೇ ಬರವಣಿಗೆ.

ಬರವಣಿಗೆ ಎಂದಾಕ್ಷಣ ಅದು ಸೃಜನಶೀಲ ಪ್ರಕ್ರಿಯೆ ಎಂದೆಣಿಸಬೇಕಾಗಿಲ್ಲ. ಎಲ್ಲ ಬರವಣಿಗೆಯೂ ಸೃಜನಶೀಲತೆಯನ್ನು ಬೇಡುವುದಿಲ್ಲ, ಎಲ್ಲ ಬರವಣಿಗೆ ಕಲೆಯಲ್ಲ. ನಮ್ಮ ಅನುಭವಗಳು ಅನೇಕ ಸಾರಿ ಕಥೆ, ಕವನ, ಕಾದಂಬರಿಗಳಿಗೆ ಪ್ರೇರಕವಾಗಿದ್ದರೂ ಸಾಹಿತ್ಯ ಕೇವಲ ಅನುಭವಕಥನವಲ್ಲ, ಅಲ್ಲಿ ಕಲೆಗಾರಿಕೆಯ, ಕಲ್ಪನಾಶಕ್ತಿಯ, ಕಟ್ಟುವಿಕೆಯ ಅಂಶಗಳಿವೆ. ಅನುಭವವನ್ನು ಕಲೆಯಾಗಿಸುವುದು ಎಲ್ಲರಿಗೂ ದಕ್ಕುವಂಥದ್ದಲ್ಲ. ಅನುಭವಗಳನ್ನು ಹಸಿ ಹಸಿಯಾಗಿಯೇ ದಾಖಲಿಸುವುದರಿಂದ ಅನೇಕ ಪ್ರಯೋಜನಗಳಿವೆ, ಅದರಲ್ಲಿ ಮುಖ್ಯವಾದದ್ದು ಮಾನಸಿಕ ಸ್ವಾಸ್ಥ್ಯ.

ನಮ್ಮ ಅನುಭವಗಳನ್ನು ಬರೆದುಬಿಟ್ಟರೆ ಅಥವಾ ಭಾವನೆಗಳನ್ನು ನೇರವಾಗಿ ಅಭಿವ್ಯಕ್ತಿಸಿದರೆ ಮಾನಸಿಕ ಸ್ವಾಸ್ಥ್ಯ ಸಿದ್ಧಿಸಿಬಿಡುತ್ತದೆಯೇ? ಅದು ಹೇಗೆ?

ಮೊದಲನೆಯದಾಗಿ ಬರವಣಿಗೆಯಿರಬಹುದು ಅಥವಾ ಯಾವುದೇ ಅಭಿವ್ಯಕ್ತಿಮಾರ್ಗ ಇರಬಹುದು, ಅದಕ್ಕೆ ಸ್ಪಂದಿಸುವ ಇನ್ನೊಂದು ಜೀವಿ ಇಲ್ಲದಿದ್ದರೆ ಮಾನಸಿಕ ಸ್ವಾಸ್ಥ್ಯ ಸಿದ್ಧಿಸುವುದಿಲ್ಲ. ಮುಖ್ಯವಾಗಿ ನಮ್ಮನ್ನು ಕಾಣುವ, ಕೇಳುವ, ನಮಗೆ ಸ್ಪಂದಿಸುವ ವ್ಯಕ್ತಿ/ ಸಮುದಾಯದೊಟ್ಟಿಗೆ ನಾವು ಕಟ್ಟಿಕೊಳ್ಳುವ ಮಾನವ ಸಂಬಂಧಗಳಷ್ಟೇ ನಿಜಕ್ಕೂ ನಮ್ಮನ್ನು ಗುಣಪಡಿಸುವಂಥದ್ದಾಗಿದೆ; ಮತ್ತೆಲ್ಲ ಕಸರತ್ತು ಅದಕ್ಕೆ ಪೂರಕವಷ್ಟೇ. ಹೀಗಿದ್ದರೂ ಬರೆಯುವುದು ಎನ್ನುವ ಕ್ರಿಯೆಗೆ ನಮ್ಮ ಅನುಭವಲೋಕದಲ್ಲೇ ಅಸಾಧಾರಣ ಬದಲಾವಣೆ ತರುವ ಶಕ್ತಿಯಿದೆ. ಇದಕ್ಕೆ ಮುಖ್ಯ ಕಾರಣವಿದೆ; ಭಾಷೆಗೆ ಎಟುಕದ ಅನುಭವಗಳು ಪತ್ತೆಹಚ್ಚಲಾರದ ರೋಗದಂತೆ ನಮ್ಮನ್ನು ಇನ್ನಿಲ್ಲದಷ್ಟು ಬವಣೆಗೆ, ಅಸಹಾಯಕತೆಗೆ ದೂಡುತ್ತದೆ. ರೋಗನಿರ್ಣಯವೇ ಆಗದಿರುವಾಗ ಚಿಕಿತ್ಸೆಯ ಬಗೆ ಕಂಡುಹಿಡಿಯುವುದಾದರೂ ಹೇಗೆ?

ಭಾಷೆ ನಮ್ಮ ಅನುಭವಗಳಿಗೆ ಒಂದು ರೂಪ ನೀಡಿ, ಅವುಗಳನ್ನು ನಮ್ಮಿಂದ ಬೇರೆಯಾಗಿ ನಿಲ್ಲಿಸಿ ನಮ್ಮ ಅವಲೋಕನಕ್ಕೆ ನಿಲುಕುವಂತೆ ಮಾಡುತ್ತದೆ. ಭಾಷೆಯ ನೆರವಿಲ್ಲದ ಅನುಭವ ಅದು ಹೇಗಿರಬಹುದೆಂಬ ಕಲ್ಪನೆಯೂ ನಮಗೆ ಸುಲಭವಾಗಿ ಎಟುಕುವಂಥದ್ದಲ್ಲ. ಮೇಲಾಗಿ ಬರವಣಿಗೆ ಒಂದು ಕ್ರಿಯೆ: ಭಾವನೆಗಳನ್ನು, ಸಂವೇದನೆಗಳನ್ನು ಕ್ರಿಯೆಯ ಮೂಲಕ ಅಭಿವ್ಯಕ್ತಿಸಿದಾಗ ಅವುಗಳ ಒತ್ತಡ ಕಡಿಮೆಯಾಗುವುದು ನಮ್ಮ ದಿನನಿತ್ಯದ ಅನುಭವಗಳಲ್ಲೊಂದು. ಉದಾಹರಣೆಗೆ, ಚಿಂತೆಯಲ್ಲಿ ಮುಳುಗಿದ್ದಾಗ ನಮಗೆ ಒಂದು ಸರಳ ಕೆಲಸವೂ ಸಾಧ್ಯವಿಲ್ಲ. ಆದರೆ ಪ್ರಯತ್ನಪಟ್ಟು ಯಾವುದಾದರೂ ಕೆಲಸದಲ್ಲಿ ಮನಸಿಟ್ಟಿದ್ದೇ ಆದರೆ ಚಿಂತೆಯ ಒತ್ತಡ ಕಡಿಮೆಯಾಗುತ್ತದೆ. ಹೀಗಿರುವಾಗ ನೇರವಾಗಿ ಚಿಂತೆ, ದುಃಖಗಳನ್ನೇ ಗಮನದಲ್ಲಿಟ್ಟುಕೊಂಡು ಬರೆಯುವ ಕ್ರಿಯೆಯೂ ಒಂದು ಬಗೆಯ ವ್ಯಾಯಾಮದಂತೆ, ನಡಿಗೆಯಂತೆ ಒಳಗಿನ ಒತ್ತಡವನ್ನು ನಿಯಂತ್ರಿಸುತ್ತದೆ.

ಬರೆಯುವುದೇನೋ ಸರಿ, ಆದರೆ ಹೇಗೆ ಮತ್ತು ಏನು ಎಂದರೆ ಅದಕ್ಕಾಗಿ ಇಲ್ಲಿ ಕೆಲವು ಸರಳ ದಿಕ್ಸೂಚಿಗಳಿವೆ. ಇವುಗಳು ಉದಾಹರಣೆಗಳಷ್ಟೇ,; ನಮ್ಮ ಅಗತ್ಯಗಳು ಮತ್ತು ಗ್ರಹಿಕೆಯ ರೀತಿಗೆ ತಕ್ಕಂತೆ ಅನೇಕ ಪ್ರಯೋಗಗಳನ್ನು ಮಾಡಬಹುದು.

- ಆಲೋಚನೆಗಳನ್ನು ಬರೆಯುವುದು ಸುಲಭ. ಅಲ್ಲಿಂದಲೇ ಶುರು ಮಾಡಿ.
- ಕಾಡುವ ಚಿಂತೆ, ಸಮಸ್ಯೆಗಳನ್ನು ಬರೆಯಿರಿ.
- ಕಣ್ಣುಮುಚ್ಚಿ ದೇಹದ ಸಂವೇದನೆಗಳನ್ನು ಅನುಭವಿಸಿ, ಅದರ ಮಾತನ್ನು ಆಲಿಸಿ ಬರೆಯಿರಿ.
- ಭಾವನೆಗಳ ಬಗ್ಗೆ ಬರೆಯುವಾಗ ಅವುಗಳನ್ನು ಆದಷ್ಟು ಒಂದು ಪದ ಅಥವಾ ವಾಕ್ಯದಲ್ಲಿ ಪ್ರತ್ಯೇಕವಾಗಿ ಹೆಸರಿಸಿ ಬರೆಯಿರಿ.

ಘಟನೆಗಳು ಮತ್ತು ಅವುಗಳಿಗೆ ಸಂಬಂಧಪಟ್ಟ ಜನರ ಬಗ್ಗೆ ಬರೆಯುವಾಗ ಅವು ಕಥೆಗಳಂತೆ ಒಂದಕ್ಕೊಂದು ಹೆಣೆದುಕೊಳ್ಳುತ್ತವೆ. ಹೀಗೆಂದು ಕಥೆಯ ವಿವರಗಳಲ್ಲೇ ಮುಳುಗಿಹೋಗದೆ, ನಿಮ್ಮನ್ನು ಅದು ಹೇಗೆ ಪ್ರಭಾವಿಸಿದೆ ಅನ್ನುವುದರ ಕಡೆ ಗಮನ ಕೊಡಿ.

'ನನಗೆ ಈಗ ಏನು ಬೇಕು', 'ನನಗೆ ನಾನು ಹೇಗೆ ಕಾಣಿಸಿಕೊಳ್ಳುತ್ತಿದ್ದೇನೆ' ಇಂತಹ ಪ್ರಶ್ನೆಗಳಿಗೆ ಉತ್ತರಿಸುವುದು ಬರವಣಿಗೆಯನ್ನು ಮುಂದುವರಿಸಲು ಸಹಾಯಕ.

ಅಸ್ಪಷ್ಟ ನೋವು, ನೆನಪುಗಳಿಗೆ ತೆರೆದುಕೊಳ್ಳಿರಿ; ಒಂದೇ ಬಾರಿಗೆ ಎಲ್ಲವನ್ನೂ ಬರೆಯುವ ಹಠ ಬೇಡ. ಹೇಳಿಕೊಳ್ಳಲು ಸಾಧ್ಯವಿಲ್ಲದ್ದನ್ನು ಬರೆದಿಡುವ ಸಂಕಲ್ಪವೇ ಸಾಕು – ಒಳಗಿನ ಲೋಕಕ್ಕೆ ಚಲನೆ ಸಿಕ್ಕಂತಾಗುತ್ತದೆ

ಪೊಲೀಸ್ ಕಾನ್‌ಸ್ಟೇಬಲ್ ನೇಮಕಾತಿ ಪರೀಕ್ಷೆಯ ಮಾದರಿ ಪ್ರಶ್ನೆಗಳು

ಭಾಗ- 58

786. 49 ವಿದ್ಯಾರ್ಥಿಗಳಿರುವ ಒಂದು ತರಗತಿಯಲ್ಲಿ ಶಿವಾನಂದ ಆರಂಭದಿಂದ 18ನೇ ಸ್ಥಾನದಲ್ಲಿದ್ದಾನೆ ಹಾಗಾದರೆ, ಇನ್ನೊಂದು ಬದಿಯಿಂದ ಶಿವಾನಂದ ಎಷ್ಟನೇ ಸ್ಥಾನದಲ್ಲಿದ್ದಾನೆ?
ಎ) 18 ಬಿ) 19
ಸಿ) 31 ಡಿ) 32

787. 4, 16, 36, 64, 100___ ಸರಣಿ ಪೂರ್ಣಗೊಳಿಸಿರಿ.
ಎ) 122 ಬಿ) 144
ಸಿ) 166 ಡಿ) 188

788. FLOWER:UOLDVI::TERMINAL: ....
ಎ) FLIPMRZO ಬಿ) GVINRMZO
ಸಿ) RVNIGLKA ಡಿ) MNIVGYEO

789. ಒಂದು ತಿಂಗಳಿನ 3ನೇ ಸೋಮವಾರದ ನಂತರದ ದಿನ 16ನೇ ತಾರೀಖು ಆದರೆ, ಆ ತಿಂಗಳಿನ 5ನೇ ಸೋಮವಾರ ಎಷ್ಟನೇ ತಾರೀಖು ಆಗುತ್ತದೆ?
ಎ) 29 ಬಿ) 28
ಸಿ) 27 ಡಿ) 30

790. ಸೂರ್ಯನ ಹೊರ ಪದರ ಯಾವುದು?
ಎ) ಲಿಥೋಸ್ಫಿಯರ್ ಬಿ) ಕೊರೊನಾ
ಸಿ) ದ್ಯುತಿಗೋಳ ಡಿ) ವರ್ಣತಂತು

791. ಸಾಮಾನ್ಯವಾಗಿ ಆಮ್ಲಗಳು ಈ ಗುಣ ಹೊಂದಿವೆ
ಎ) ಕಹಿ ರುಚಿಯನ್ನು ಹೊಂದಿವೆ
ಬಿ) ಹುಳಿ ರುಚಿಯನ್ನು ಹೊಂದಿವೆ
ಸಿ) ಸಿಹಿ ರುಚಿಯನ್ನು ಹೊಂದಿವೆ
ಡಿ) ಯಾವ ರುಚಿಯನ್ನು ಹೊಂದಿರುವುದಿಲ್ಲ

792. ಸೋಡಿಯಂ ಕಾರ್ಬೋನೇಟ್‌ನ ಸಾಮಾನ್ಯ ಹೆಸರು?
ಎ) ವಾಷಿಂಗ್ ಸೋಡಾ ಬಿ) ಅಡುಗೆ ಸೋಡಾ
ಸಿ) ಅಡುಗೆ ಉಪ್ಪು ಡಿ) ಸುಣ್ಣದ ಕಲ್ಲು

793. ಒಂದೇ ಸಂಖ್ಯೆಯ ಪ್ರೋಟಾನು, ಬೇರೆ ಬೇರೆ ಸಂಖ್ಯೆಯ ನ್ಯೂಟ್ರಾನ್‌ಗಳನ್ನು ಹೊಂದಿರುವ ಒಂದೇ ಧಾತುವಿನ ಪರಮಾಣುಗಳಿಗೆ ಏನೆನ್ನುತ್ತಾರೆ?
ಎ) ಸಮಸ್ಥಾನಿಗಳು ಬಿ) ಸಮಭಾರಿ ರೇಖೆಗಳು
ಸಿ) ಸಮಸತ್ವಗಳು ಡಿ) ಸಮಾಂಗಿಗಳು

794. ಈ ಕೆಳಗಿನ ಯಾವ ಮಾಧ್ಯಮದಲ್ಲಿ ಶಬ್ದದ ವೇಗ ಅಧಿಕವಾಗಿರುತ್ತದೆ?
ಎ) ಗಾಜು ಬಿ) ಕಬ್ಬಿಣ
ಸಿ) ಗಾಳಿ ಡಿ) ನೀರು

795. ಭಾರತ ಸಂವಿಧಾನದಲ್ಲಿ ಚುನಾವಣಾ ಆಯೋಗಗಳ ಕುರಿತು ಈ ಕೆಳಗಿನ ಯಾವ ಭಾಗದಲ್ಲಿ ವಿವರಿಸಲಾಗಿದೆ?
ಎ) 10ನೇ ಭಾಗ ಬಿ) 15ನೇ ಭಾಗ
ಸಿ) 18ನೇ ಭಾಗ ಡಿ) 20ನೇ ಭಾಗ

796. ಪಕ್ಷಾಂತರ ನಿಷೇಧ ಕಾಯ್ದೆ ಜಾರಿಗೆ ಬಂದಾಗ ಭಾರತದ ಪ್ರಧಾನಿ ಆಗಿದ್ದವರು ಯಾರು?
ಎ) ಇಂದಿರಾ ಗಾಂಧಿ ಬಿ) ರಾಜೀವ್ ಗಾಂಧಿ
ಸಿ) ವಿ.ಪಿ.ಸಿಂಗ್ ಡಿ) ಮೊರಾರ್ಜಿ ದೇಸಾಯಿ

797. ಕೇಂದ್ರ- ರಾಜ್ಯಗಳ ನಡುವೆ ಶಾಸನೀಯ ಅಧಿಕಾರವನ್ನು ಈ ಕೆಳಗಿನ ಯಾವ ಕಾಯ್ದೆ ವಿಭಜಿಸಿದೆ?
ಎ) ಭಾರತ ಸರ್ಕಾರ ಕಾಯ್ದೆ, 1935
ಬಿ) ಭಾರತ ಸರ್ಕಾರ ಕಾಯ್ದೆ, 1919
ಸಿ) ಭಾರತ ಸರ್ಕಾರ ಕಾಯ್ದೆ, 1892
ಡಿ) ಭಾರತ ಸರ್ಕಾರ ಕಾಯ್ದೆ, 1861

798. ಈ ಕೆಳಗಿನ ಯಾವುದು ದೇಶೀಯ ಸಾಹಿತ್ಯ ಕೃತಿ?
ಎ) ಗಾಥಾಸಪ್ತಶತಿ ಬಿ) ರಾಜತರಂಗಿಣಿ
ಸಿ) ಪೃಥ್ವಿರಾಜ ರಾಸೋ ಡಿ) ಇಂಡಿಕಾ

799. ವೇದಗಳು ಪ್ರಮುಖವಾಗಿ ಇವುಗಳ ಸಂಗ್ರಹವಾಗಿವೆ
ಎ) ಪ್ರಕೃತಿ ಆರಾಧನೆ
ಬಿ) ಯಾಗ-ಯಜ್ಞಾದಿಗಳು
ಸಿ) ಮಾಟವಿದ್ಯೆ
ಸಂಕೇತಗಳು:
ಎ) ಎ ಮಾತ್ರ ಸರಿ ಬಿ) ಎ ಮತ್ತು ಸಿ ಸರಿ
ಸಿ) ಬಿ ಮಾತ್ರ ಸರಿ ಡಿ) ಮೇಲಿನ ಎಲ್ಲವೂ ಸರಿ

800. ಬ್ಯಾಬಿಲೋನಿಯಾದ ತೂಗು ಉದ್ಯಾನವನ್ನು ಯಾವ ನದಿ ದಡದ ಮೇಲೆ ನಿರ್ಮಿಸಲಾಗಿತ್ತು?
ಎ) ಯುಫ್ರೆಟಿಸ್ ಬಿ) ಮೆಕಾಂಗ್
ಸಿ) ವೋಲ್ಗಾ ಡಿ) ಡ್ಯಾನ್ಯೂಬ್

(ಪ್ರಶ್ನೋತ್ತರ ಸಂಯೋಜನೆ: ಸ್ಲೇಟ್ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಕೇಂದ್ರ, ಧಾರವಾಡ)

ಭಾಗ 57ರ ಉತ್ತರಗಳು: 771. ಡಿ, 772. ಸಿ, 773. ಎ, 774. ಬಿ, 775. ಡಿ, 776. ಎ, 777. ಡಿ, 778. ಎ, 779. ಸಿ, 780. ಸಿ, 781. ಎ, 782. ಎ, 783. ಸಿ, 784. ಎ, 785. ಎ

ಬಾಯಿಯೆಂಬ ಬಾಗಿಲು ಕಾಯುವಾ



ಆಹಾರದ ಸುದೀರ್ಘ ಯಾನದ ಹೆಬ್ಬಾಗಿಲು ಬಾಯಿ. ಇದರ ಆರೋಗ್ಯವೇ ದೇಹಾರೋಗ್ಯದ ಮೊದಲ ಮೆಟ್ಟಿಲು...

ಡಾ. ಸತ್ಯನಾರಾಯಣ ಭಟ್ ಪಿ.

ಬಾಯಿ ಮತ್ತು ಅದರ ಉಪಾಂಗಗಳ ಸ್ಪಷ್ಟ ವರ್ಣನೆ ಭಾರತೀಯ ವೈದ್ಯಗ್ರಂಥಗಳಲ್ಲಿದೆ. ತುಟಿ, ಒಸಡು, ನಾಲಿಗೆ, ಹಲ್ಲು, ಅಂಗಳ, ಗಂಟಲು ಮತ್ತು ಇಡಿಯ ಬಾಯಿ ಎಂಬ ಸಪ್ತಾಂಗಗಳ ಬಗ್ಗೆ ವಿವರಗಳಿವೆ. ಅವುಗಳ ರಕ್ಷಣೆಯಿಂದ ದೇಹದ ಹೆಬ್ಬಾಗಿಲ ಸಂರಕ್ಷಣೆ ಸಾಧ್ಯ. ಇಂತಹ ಅಂಗಗಳಲ್ಲಿ ಸಂಭವಿಸುವ 65 ರೋಗಗಳ ಯಾದಿ ಮಾತ್ರವಲ್ಲ. ಅವುಗಳ ಕಾರಣ, ಲಕ್ಷಣ ಮತ್ತು ಚಿಕಿತ್ಸೆಯ ವಿವರಗಳು ಭಾರತೀಯ ಪ್ರಾಚೀನ ವೈದ್ಯಸಾಹಿತ್ಯದ ಹೆಮ್ಮೆ.

ತುಟಿಯ ಆರೋಗ್ಯ: ಅತ್ತ ಚರ್ಮವೂ ಅಲ್ಲ. ಇತ್ತ ಒಳ ಲೋಳ್ಪದರವೂ ಅಲ್ಲ, ಅಂತಹ ಒಂದು ನಾಜೂಕಿನ ಅಂಗವೇ ತುಟಿ. ಕಾವ್ಯಗಳಲ್ಲಿ ಬಣ್ಣನೆಗೊಳ್ಳುವ ಕೆಂಪು ತೊಂಡೆಯ ಬಣ್ಣದ ತುಟಿ ನಿಜ ಆರೋಗ್ಯದ ಲಕ್ಷಣ. ಅದರ ಸಹಜ ಬಣ್ಣಕ್ಕೆ ಕೃತಕ ರಾಸಾಯನಿಕ ಸಾಧನವೂ ಅನಗತ್ಯ. ರಾಸಾಯನಿಕಗಳಿಂದ ಹಾನಿಯೇ ಸಂಭವಿಸೀತು. ಚಳಿಗಾಲದ ದಿನಗಳಲ್ಲಿ ಸೀಳುವ ತುಟಿ ತೊಂದರೆ ಒಂದೆಡೆ. ಬೇಸಿಗೆಯಲ್ಲಿ ಒಣಗುವ ಸಮಸ್ಯೆ ಕೂಡ ಕಿರಿಕಿರಿಯದೇ ಸೈ. ಒಂದರ್ಥದಲ್ಲಿ ಚರ್ಮದ ಸಹಜ ಆರೋಗ್ಯವಿದ್ದರೆ ಅಂದದ ತುಟಿಯ ಸಂರಕ್ಷಣೆಗೆ ಸುಸಾಧ್ಯ. ಹಾಲು ಮತ್ತು ಅದರ ಎಲ್ಲ ಉತ್ಪನ್ನಗಳು ಚರ್ಮಾರೋಗ್ಯಕ್ಕೆ ಪೂರಕ. ತುಪ್ಪದ ಸೇವನೆ ಹಾಗೂ ರಾತ್ರಿ ವೇಳೆ ತುಟಿಗೆ ಸವರುವ ಸರಳ ಉಪಾಯ ಕೈಗೊಳ್ಳಿರಿ. ಸಾಸಿವೆ ಎಣ್ಣೆ, ಹರಳೆಣ್ಣೆ, ತೆಂಗಿನೆಣ್ಣೆಯ ತಿಲು ಲೇಪನದಿಂದಲೂ ಲಾಭವಿದೆ. ತುಟಿಯಂಚಿನ ಹುಣ್ಣು ತಡೆಗೆ ಮನೆ ಮದ್ದಿದೆ. ಕಲ್ಲುಸಕ್ಕರೆಯನ್ನು ಚೀಪಬಹುದು. ಬಸಳೆ ಎಲೆ ಜಗಿಯಲಾದೀತು. ಕಡೆಬಾಯಿಯ ಜೊಲ್ಲು ಸುರಿತದ ಸಮಸ್ಯೆ; ನಿದ್ರಿಸುವಾಗ ಅಥವಾ ಸಹಜವಾದ ಜೊಲ್ಲು ಸ್ರಾವಗಳು ಕೇಡಿನದಲ್ಲ. ಇಳಿ ಹರೆಯದ ಸಮಸ್ಯೆ. ಒಣ ಶುಂಠಿಯ ಚೂರುಗಳನ್ನು ಚೀಪುವದಾದೀತು. ಜತೆಗೆ ಬೆಲ್ಲದ ಚೂರು ಸಹ. ಬಾಯಿಯ ಆರೋಗ್ಯಕ್ಕೆ ಸಹಕಾರಿ. ಆಹಾರದ ರುಚಿ ವರ್ಧಕ. ಲಾಲಾಸ್ರಾವದ ಸಹಜತೆಗೆ ಪೂರಕ.


ಒಸಡಿನ ಆರೋಗ್ಯ: ಹಲ್ಲಿನ ಭದ್ರ ಅಡಿಗಲ್ಲು ಒಸಡು. ಬಲವಾದ ಮಾಂಸಪೇಶಿಗಳ ಸಮುಚ್ಚಯವಿದು. ಆಗಾಗ ಕಾಣುವ ಕುರು, ರಕ್ತಸ್ರಾವ, ಕೀವು ಸುರಿತಗಳು ಒಸಡಿನ ಸಮಸ್ಯೆಗಳು. ಬೇವು, ಹೆಬ್ಬೇವು ಎಲೆಗಳ ಮುದ್ದೆಯನ್ನು ಕೆಲ ನಿಮಿಷ ಕಾಲ ಬಾಯಿಯಲ್ಲಿಡುವುದೇ ಸರಳ ಉಪಾಯ. ಕವಲ ಎಂಬ ಚಿಕಿತ್ಸೆ ಇದು. ಒಸಡಿನ ಆರೋಗ್ಯಪಾಲನೆಗೆ ಪೂರಕ. ತೆಂಗಿನ ಅಥವಾ ಸಾಸಿವೆ ಅಥವಾ ಎಳ್ಳಿನ ಎಣ್ಣೆಯಿಂದ ಬಾಯಿ ಮುಕ್ಕುಳಿಸಿರಿ. ಅನಂತರ ಹದ ಬಿಸಿನೀರಿನ ಬಾಯಿ ಮುಕ್ಕುಳಿಸುವ ಉಪಚಾರ. ಹಲ್ಲುಗಳೂ ಸೇರಿದಂತೆ, ಇಡಿಯ ಬಾಯಿಗೆ ಮತ್ತು ಅದರ ಉಪಾಂಗಗಳಿಗೆ ಇಂತಹ ಸರಳ ವಿಧಾನದಿಂದ ಲಾಭವಿದೆ.

ಶುಚಿಯಾದ ಹಲ್ಲು-ಆರೋಗ್ಯದ ಮೆಟ್ಟಿಲು: ಹೊಂಗೆ, ಬೇವು, ಬಿಳಿಮತ್ತಿ, ಕರಿಜಾಲಿ ಮತ್ತು ಕಗ್ಗಲಿ ಎಂಬ ಪರಿಸರದ ಮರಗಳಿವೆಯಲ್ಲ. ಅವುಗಳ ಕಿರು ಬೆರಳಿನ ಗಾತ್ರದ ಕಡ್ಡಿಗಳಿಂದ ಹಲ್ಲು ಶುಚಿಗೊಳಿಸುವ ವಿಧಾನ ಶತಶತಮಾನಗಳ ಸಂಪ್ರದಾಯ. ಜಜ್ಜಿದ ಟೊಂಗೆಯ ಬ್ರಷ್ ಪರಿಸರ ಪೂರಕ. ನಾಜೂಕಾಗಿ ಹಲ್ಲು ಶುಚಿಗೊಳಿಸಿರಿ. ಗೋಡಂಬಿ ಎಲೆ, ಮಾವಿನೆಲೆಯ ಸುರುಳಿಯ ನೈಸರ್ಗಿಕ ದಂತ ಬ್ರಷ್ ಕೂಡ ಯೂಸ್ ಎಂಡ್ ತ್ರೋ ಮಾತ್ರವಲ್ಲ. ಅವುಗಳಲ್ಲಿರುವ ಸೆಲೆನಿಯಂ, ಕ್ರೋಮಿಯಂ ಎಂಬ ಟ್ರೇಸ್ ಎಲಿಮೆಂಟ್(ಕಣ ರೂಪಿ ಮೂಲ ಧಾತು) ದೇಹಾರೋಗ್ಯ ಸಾಧಕ. ಎಲೆಗಳ ನಡುವಿನ ದಪ್ಪ ನರವು ಅತ್ಯುತ್ತಮ ಟಂಗ್ ಕ್ಲೀನರ್ ಎಂಬುದು ನೆನಪಿಡಿ. ಲಿಂಬೆಯ ಒಣಗಿದ ಸಿಪ್ಪೆ ಪುಡಿಮಾಡಿರಿ. ಪುಡಿಯುಪ್ಪು ಕೂಡಿಸಿರಿ. ಹಲ್ಲು ಪುಡಿಯಂತೆ ಬಳಸಿರಿ. ದಂತ ಪಂಕ್ತಿಯ ಜುಮುಗುಟ್ಟುವಿಕೆ, ಹಲ್ಲು ನೋವು ಪರಿಹಾರಕ ವಿಧಾನವಿದು. ನಡುರಾತ್ರಿಯ ಹಲ್ಲು ನೋವಿನ ಸಮಸ್ಯೆಯೇ? ತುಳಸಿ ಎಲೆರಸ ತೊಟ್ಟಿಕ್ಕಿಸಿರಿ. ತೆಂಗಿನ ಎಣ್ಣೆಯ ಬಾಯಿ ಮುಕ್ಕುಳಿಸುವಿಕೆ ಕೂಡ ಪ್ರಥಮ ಉಪಚಾರವೇ ಸೈ.

ನಾಲಿಗೆ ಶುದ್ಧವಿರಲಿ: ದಪ್ಪನೆಯ ಲೇಪವಿದ್ದರೆ ಪಚನ ಕ್ರಿಯೆ ನಿಧಾನವೆಂದರ್ಥ. ಮಲಪ್ರವೃತ್ತಿಯ ಅಡಚಣೆಯನ್ನೂ ನಿಧಾನಿಸಲಾದೀತು. ಬೆಳ್ಳಿಯ ಅಥವಾ ಉಕ್ಕಿನ ತಿಲು ಕಡ್ಡಿಯಿಂದ ಬೆಳಗು, ಬೈಗಿಗೆ ಎರಡು ಬಾರಿ ನಾಲಿಗೆ ಶುಚಿಗೊಳಿಸಿರಿ. ಜ್ಯೇಷ್ಠಮಧು ಎಂಬ ಅಂಗಡಿಮದ್ದು ಲಭ್ಯವಿದೆ. ಇದು ಬೇರಿನ ರೂಪದಲ್ಲಿ ಅಥವಾ ಪುಡಿಯಾಗಿ ಲಭ್ಯ. ಅದರ ಕಷಾಯ ತಯಾರಿಸಿರಿ. ನಾಕಾರು ಬಾರಿ ಬಾಯಿ ಮುಕ್ಕುಳಿಸಿರಿ. ಪದೇ ಪದೇ ಕಾಡುವ ಬಾಯಿ ಹುಣ್ಣು ಪರಿಹಾರಕ್ಕಿದುವೇ ಸಂಜೀವಿನಿ. ನೆಲ್ಲಿಯ ಚೂರು ಅಥವಾ ಒಣ ಶುಂಠಿಯ ಚೂರು ಚಪ್ಪರಿಸಿ ತಿನ್ನಲಾದೀತು. ಬಾಯಿ ರುಚಿ ಹೆಚ್ಚಲು ಇದು ಸುಲಭ ಉಪಾಯ. ಬಾಯಿಯ ದುರ್ವಾಸನೆ ತಡೆಗೆ ಲವಂಗ, ಏಲಕ್ಕಿಯ ಚಪ್ಪರಿಸುವಿಕೆ ಕೂಡ ಸಹಕಾರಿ.

ಅಂಗಳದ ಆರೋಗ್ಯ: ಬಾಯಿಯೆಂಬ ಹೆಬ್ಬಾಗಿಲ ಮೇಲು ಕಮಾನು ಅಂಗಳ. ಅಲ್ಲಿ ಉರಿಯೂತ, ಒಣಗುವಿಕೆಯಂತಹ ಸಮಸ್ಯೆ ಉಂಟಾದೀತು. ಬೇವಿನೆಲೆ, ನೇರಿಳೆ, ಕರಿಬೇವಿನೆಲೆ, ಜಾಜಿ ಚಿಗುರೆಲೆಯಂತಹ ಸಸ್ಯಸಾಧನಗಳ ಬಳಕೆ ಸೂಕ್ತ. ಎಲೆ ಅರೆದ ಮುದ್ದೆ ನಾಲಗೆ ಮತ್ತು ಅಂಗಳದ ನಡುವೆ ಹತ್ತು ನಿಮಿಷ ಕಾಲ ಒತ್ತಿಡಿರಿ. ಬಾಯಿಯ ಆರೋಗ್ಯ ಸಾಧನೆಗೆ ಇದು ಸರಳ ಸೂತ್ರ. ನಿರಪಾಯಕರ ಕೂಡ. ಯಾವುದೇ ಕಾರಣಕ್ಕೂ ತಂಬಾಕು ಬಳಕೆ ಖಂಡಿತ ಬೇಡ. ತಂಬುಳಿ ಬಳಸಿರಿ. ವೀಳ್ಯದೆಲೆ, ನೆಲನೆಲ್ಲಿ, ಒಂದೆಲಗ, ಧನಿಯಾ, ಮೆಂತೆ, ನೆಲ್ಲಿ, ದಾಳಿಂಬೆ ಚಿಗುರುಗಳ ತಂಬುಳಿ ತಂಪು ಮಾತ್ರ ಅಲ್ಲ. ತುಟಿ, ಬಾಯಿಯ ಹುಣ್ಣಿಗೆ ಖಂಡಿತ ರಾಮಬಾಣ. ಬಾಯಿಯ ಆರೋಗ್ಯಕ್ಕೆ ಸುಲಭ ಸೂತ್ರ.

ಗಂಟಲು ಸಂರಕ್ಷಣೆ: ದಾಳಿಂಬೆ, ಕಿತ್ತಳೆಯಂತಹ ಹಣ್ಣುಗಳ ಯಥೇಚ್ಛ ಸೇವನೆಯಿಂದ ಬಾಯಿಯ ಆರೋಗ್ಯರಕ್ಷಣೆಗೆ ಒತ್ತು ನೀಡಬಹುದು. ಗಂಟಲ ಬದಿಯ ಗ್ರಂಥಿಗಳ ಉರಿಯೂತ ಮತ್ತು ನೋವು ಪದೇ ಪದೇ ಕಾಣುವ ಶೀತಬಾಧೆಯ ತೊಂದರೆ. ನೆನಪಿಡಿರಿ. ಕುತ್ತಿಗೆಯ ಮೇಲಿನ ಎಲ್ಲ ಇಂದ್ರಿಯಗಳಿಗೆ ಕಫದ ತೊಂದರೆಯಿಂದಲೇ ರೋಗಭಯ. ಹಾಗಾಗಿ ಕಫದ ನಿಯಂತ್ರಣಕ್ಕೆ ಒತ್ತು ಬೇಕು. ಶುಂಠಿ, ಕಾಳು ಮೆಣಸು, ಹಿಪ್ಪಲಿಯ ಬಳಕೆಗೆ ಇಲ್ಲಿ ಅವಕಾಶವಿದೆ. ಮಲ ಪ್ರವೃತ್ತಿ ಸರಾಗವಾದರೆ ದೇಹದ ಅನಗತ್ಯ ವಿಷಾಂಶ ಹೊರಹೋದಂತೆ. ಅದಕ್ಕೆ ಒತ್ತು ನೀಡಲು ತ್ರಿಫಲಾ ಎಂಬ ಚೂರ್ಣ ಬಳಕೆ ಲೇಸು. ಅಣಿಲೆ, ತಾರೆ ಮತ್ತು ನೆಲ್ಲಿಗಳ ಸಮ್ಮಿಶ್ರಣವೇ ತ್ರಿಫಲಾ. ಒಂದೊಂದಾಗಿ ಅಥವಾ ಒಟ್ಟಾಗಿ ಬಳಸಲಾದೀತು.



ಸುಭಾಷಿತ

ಪಶುವಿನೊಂದಿಗೆ ಗುದ್ದಾಡಬಾರದು ಎಂಬುದನ್ನು ಬಹಳ ಹಿಂದೆಯೇ ನಾನು ಕಂಡುಕೊಂಡಿದ್ದೇನೆ. ಒಂದುವೇಳೆ ನೀವು ಹಾಗೆ ಗುದ್ದಾಡಿದ್ದೇ ಆದರೆ ಕೊಳಕಾಗುತ್ತೀರಿ. ನೀವು ಹಾಗೆ ಆಗುವುದು ಆ ಪಶುವಿಗೆ ಇಷ್ಟವಾಗುತ್ತದೆ!

–ಜಾರ್ಜ್ ಬರ್ನಾರ್ಡ್ ಶಾ

ಬಳಕೆಯಾಗದ 'ಶಾಸಕರ ನಿಧಿ' ಉದಾಸೀನ, ನಿರ್ಲಕ್ಷ್ಯ ಸಲ್ಲದು

ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಡಿ ಶಾಸಕರಿಗೆ ರಾಜ್ಯ ಸರ್ಕಾರ ಪ್ರತಿವರ್ಷ ನೀಡುವ ತಲಾ ₹ 2 ಕೋಟಿ ಅನುದಾನ ಪೂರ್ಣ ಪ್ರಮಾಣದಲ್ಲಿ ಬಳಕೆ ಆಗದಿರುವುದಕ್ಕೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತೀವ್ರ ಅತೃಪ್ತಿ ವ್ಯಕ್ತಪಡಿಸಿರುವುದು ಗಮನಾರ್ಹ. ಶಾಸಕರ ನಿಧಿ ಎಂದೇ ಕರೆಯಲಾಗುವ ಈ ಅನುದಾನವನ್ನು ಪೂರ್ಣ ಬಳಕೆ ಮಾಡಿ ಎಂದು ಮುಖ್ಯಮಂತ್ರಿಯವರು ಎಲ್ಲ ಶಾಸಕರಿಗೂ ಪತ್ರ ಬರೆದು ಒತ್ತಾಯಿಸಿದ್ದಾರೆ. ನಿಗದಿ ಆಗಿರುವ ಅನುದಾನ ಸಕಾಲದಲ್ಲಿ ಬಳಕೆ ಆಗದಿದ್ದರೆ ರಾಜ್ಯದ ಪ್ರಗತಿ ಕುಂಠಿತಗೊಳ್ಳಲಿದೆ ಎಂದು ಅವರು ಕಾಳಜಿ ವ್ಯಕ್ತಪಡಿಸಿರುವುದು ಸರಿಯಾಗಿಯೇ ಇದೆ. ಖುದ್ದು ಮುಖ್ಯಮಂತ್ರಿಯವರೇ ಪತ್ರ ಬರೆದಿರುವುದನ್ನು ಗಮನಿಸಿಯಾದರೂ ಶಾಸಕರು ತಮ್ಮ ಕ್ಷೇತ್ರದ ಅಭಿವೃದ್ಧಿಯತ್ತ ಗಮನ ಹರಿಸಬೇಕಾಗಿದೆ. 2021–22ನೇ ಸಾಲಿಗೆ ಎರಡು ಕಂತುಗಳಲ್ಲಿ ಶಾಸಕರಿಗೆ ತಲಾ ಒಂದು ಕೋಟಿ ರೂಪಾಯಿ ಅನುದಾನ ಬಿಡುಗಡೆಯಾಗಿದೆ. ಈ ವರ್ಷದ ಜುಲೈ ಅಂತ್ಯದ ವೇಳೆಗೆ ಸರಾಸರಿ ಶೇಕಡ 17.21ರಷ್ಟು ಅನುದಾನ ಮಾತ್ರ ಬಳಕೆಯಾಗಿದೆ ಎನ್ನುವುದು ಶಾಸಕರು ಪಕ್ಷಭೇದವಿಲ್ಲದೆ ನಾಚಿಕೆ ಪಟ್ಟುಕೊಳ್ಳುವ ಸಂಗತಿಯೇ ಸರಿ. ಕೋವಿಡ್ ಸಂಕಷ್ಟದಿಂದ ಇಡೀ ರಾಜ್ಯ ಆರ್ಥಿಕ ಹಿನ್ನಡೆ ಕಂಡಿರುವ ಈ ಸಂದಿಗ್ಧ ಸಮಯದಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ಈ ನಿಧಿಯಿಂದಾಗಿ ಆರ್ಥಿಕ ಚಟುವಟಿಕೆಗಳು ಹೆಚ್ಚಾದರೆ ಜನರಿಗೆ ಒಳಿತಾಗಬಹುದು. ಶಾಸಕರು ಸೋಂಬೇರಿತನವನ್ನು ಬಿಟ್ಟು ಲಭ್ಯವಿರುವ ಸಂಪನ್ಮೂಲ ಬಳಸಿ ಅಭಿವೃದ್ಧಿ ಕೆಲಸಗಳ ವೇಗ ಹೆಚ್ಚಿಸುವ ಅಗತ್ಯ ಈಗ ಹಿಂದೆಂದಿಗಿಂತ ಹೆಚ್ಚಿದೆ. ಅನುದಾನವು ಚಿತ್ರದುರ್ಗ, ಕಲಬುರ್ಗಿ, ವಿಜಯಪುರ, ಬಳ್ಳಾರಿ, ಕೊಪ್ಪಳ ಈ ಐದು ಜಿಲ್ಲೆಗಳಲ್ಲಿ ಅತಿಕಡಿಮೆ ಬಳಕೆಯಾಗಿದೆ. 'ಉತ್ತರ ಕರ್ನಾಟಕ ಹಿಂದುಳಿದಿರಲು ಸರ್ಕಾರದ ಮಲತಾಯಿ ಧೋರಣೆಯೇ ಕಾರಣ' ಎಂದು ಪದೇ ಪದೇ ಹೇಳುವ ಆ ಭಾಗದ ಕೆಲವು ಜನನಾಯಕರು ಈ ವಿಷಯದ ಕಡೆಗೆ ಗಮನ ಹರಿಸಬೇಕು. ಜನಪ್ರತಿನಿಧಿಗಳ ಇಚ್ಛಾಶಕ್ತಿಯ ಕೊರತೆಯೂ ಹಿಂದುಳಿದಿರುವಿಕೆಗೆ ಒಂದು ಪ್ರಮುಖ ಕಾರಣ ಎನ್ನುವುದನ್ನು ಜನ ಗಮನಿಸಬೇಕು. ಚಿತ್ರದುರ್ಗ ಜಿಲ್ಲೆಯಲ್ಲಿ ಶಾಸಕರ ನಿಧಿ ಶೇ 2.25ರಷ್ಟು ಮಾತ್ರ ಬಳಕೆಯಾಗಿದೆ ಎನ್ನುವುದು ಆ ಜಿಲ್ಲೆಯ ಶಾಸಕರಿಗೆ ಮುಜುಗರ ಉಂಟು ಮಾಡುವುದಿಲ್ಲವೇ? ಕಲಬುರ್ಗಿ (ಶೇ 7.15), ವಿಜಯಪುರ (ಶೇ 8.98), ಬಳ್ಳಾರಿ (ಶೇ 10.25) ಮತ್ತು ಕೊಪ್ಪಳ (ಶೇ 11.63) ಜಿಲ್ಲೆಗಳಲ್ಲಿ ಬಳಕೆಯಾದ ಶಾಸಕರ ನಿಧಿಯ ಪ್ರಮಾಣವೂ ಈ ಜಿಲ್ಲೆಗಳು ಏಕೆ ಇನ್ನೂ ಹಿಂದುಳಿದಿವೆ ಎನ್ನುವುದಕ್ಕೆ ದಿಕ್ಸೂಚಿಯಾಗಿದೆ. ಅದರಲ್ಲೂ ಚಿತ್ರದುರ್ಗ, ಹೊಸದುರ್ಗ, ಹೊಳಲ್ಕೆರೆ ಮತ್ತು ಚಳ್ಳಕೆರೆ ವಿಧಾನಸಭಾ ಕ್ಷೇತ್ರಗಳಲ್ಲಿ ಜುಲೈ ಅಂತ್ಯದವರೆಗೆ 'ಪ್ರಗತಿ ಶೂನ್ಯ' ಎಂದು ಮುಖ್ಯಮಂತ್ರಿಯವರು ಉಲ್ಲೇಖಿಸಿದ್ದಾರೆ. ಇದು, ನಾಚಿಕೆಗೇಡಿನ ಸಂಗತಿ. ಇವರಲ್ಲಿ ಒಬ್ಬ ಶಾಸಕರು ತಮಗೆ ಸಚಿವ ಸಂಪುಟದಲ್ಲಿ ಸ್ಥಾನ ಸಿಕ್ಕಿಲ್ಲ ಎಂದು ಸಾರ್ವಜನಿಕವಾಗಿ ಸಿಟ್ಟು ಪ್ರಕಟಿಸಿದ್ದೂ ಉಂಟು. ಈ ಕ್ಷೇತ್ರಗಳ ಜನ ಪಕ್ಷಭೇದ ಮರೆತು ಈ ಶಾಸಕರ ಬಳಿ ತಮ್ಮ ಕ್ಷೇತ್ರದ ಅಭಿವೃದ್ಧಿ ಕೆಲಸ ಮಾಡಿಕೊಡಲು ಒತ್ತಡ ಹೇರಬೇಕಿದೆ.



ಲಭ್ಯವಿರುವ ಸಂಪನ್ಮೂಲ ಬಳಸಿ ಅಭಿವೃದ್ಧಿ ಚಟುವಟಿಕೆಗಳ ವೇಗ ಹೆಚ್ಚಿಸುವ ಅಗತ್ಯ ಈಗ ಹಿಂದೆಂದಿಗಿಂತ ಹೆಚ್ಚಿದೆ

ಶಾಸಕರ ನಿಧಿಯ ಅನುದಾನ ನೇರವಾಗಿ ಶಾಸಕರ ಖಾತೆಗೆ ಹೋಗದೆ, ಜಿಲ್ಲಾಧಿಕಾರಿಗಳ ಪಿ.ಡಿ. (ವೈಯಕ್ತಿಕ ಠೇವಣಿ) ಖಾತೆಗೆ ಹೋಗುತ್ತದೆ. ಹಣ ಪೋಲಾಗಬಾರದು ಮತ್ತು ಸೂಕ್ತ ಬಾಬ್ತುಗಳಿಗೆ ಖರ್ಚಾಗಬೇಕು ಎಂದು ನೋಡಿಕೊಳ್ಳಲು ಸರ್ಕಾರ ಅನುಸರಿಸುತ್ತಿರುವ ವಿಧಾನ ಇದು. ಸಮುದಾಯ ಭವನ, ದೇವಾಲಯ ನಿರ್ಮಾಣ, ಗ್ರಾಮೀಣ ರಸ್ತೆ, ಚರಂಡಿ, ಕುಡಿಯುವ ನೀರು, ಕ್ರೀಡೆ, ಸಾಂಸ್ಕೃತಿಕ ಕಾರ್ಯಕ್ರಮ, ಶಾಲೆ, ಕಾಲೇಜು, ಅಂಗನವಾಡಿ ಕಟ್ಟಡ, ವಿದ್ಯುತ್ ದೀಪ, ಗ್ರಂಥಾಲಯ, ಬಸ್ ತಂಗುದಾಣ, ಪ್ರವಾಸಿ ಸ್ಥಳಗಳಲ್ಲಿ ಮೂಲ ಸೌಕರ್ಯ– ಹೀಗೆ ವಿವಿಧ ಜನೋಪಯೋಗಿ ಕೆಲಸಗಳಿಗೆ ಈ ನಿಧಿಯನ್ನು ಬಳಸಬಹುದು. ಕ್ಷೇತ್ರಾಭಿವೃದ್ಧಿ ಯೋಜನೆಯ ಅಡಿ ಶಾಸಕರು ಶಿಫಾರಸು ಮಾಡುವ ಯೋಜನೆಗಳಿಗೆ ಜಿಲ್ಲಾಧಿಕಾರಿ ಖಾತೆಯಿಂದ ಹಣ ಬಿಡುಗಡೆ ಆಗುತ್ತದೆ. ಕೋವಿಡ್ ಹಿನ್ನೆಲೆಯಲ್ಲಿ ಅನುದಾನ ಬಿಡುಗಡೆ ಮಾಡುವಲ್ಲಿ ಸರ್ಕಾರ ವಿಳಂಬ ಮಾಡಿದೆ ಎನ್ನುವುದು ನಿಜ. ಆದರೆ ಈ ವರ್ಷ ನಿಧಿಯ ಪೂರೈಕೆ ಸಮರ್ಪಕವಾಗಿ ನಡೆದಿರುವುದು ಸುಳ್ಳಲ್ಲ. ಮುಖ್ಯಮಂತ್ರಿಯವರ ಪತ್ರದಲ್ಲಿ ಉಲ್ಲೇಖಿಸಿದಂತೆ ಜಿಲ್ಲಾಧಿಕಾರಿಗಳ ಖಾತೆಗಳಲ್ಲಿ ಒಟ್ಟು ₹ 938.15 ಕೋಟಿ ಅನುದಾನ ಲಭ್ಯವಿದೆ. ಶಾಸಕರು ಸರ್ಕಾರದ ಮೇಲೆ ಗೂಬೆ ಕೂರಿಸುವ ಮನೋಭಾವವನ್ನು ಬಿಟ್ಟು, ಇಷ್ಟು ಹಣದ ಬಳಕೆಗೆ ಸಮರ್ಪಕ ಯೋಜನೆಗಳನ್ನು ರೂಪಿಸಿ ಶೀಘ್ರ ಅನುಷ್ಠಾನಗೊಳಿಸುವುದು ಜರೂರಾಗಿ ಆಗಬೇಕಾದ ಕೆಲಸ. ಕೋವಿಡ್ ಸಂಕಷ್ಟದ ಕಾರಣ ಕೇಂದ್ರ ಸರ್ಕಾರವು ಸಂಸದರ ಸ್ಥಳೀಯ ಪ್ರದೇಶಾಭಿವೃದ್ಧಿ ನಿಧಿಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಿರುವುದು ನಮ್ಮ ಕಣ್ಣೆದುರೇ ಇದೆ. ರಾಜ್ಯದಲ್ಲೂ ಹಾಗಾಗದಂತೆ ನೋಡಿಕೊಳ್ಳಬೇಕಾದ ಹೊಣೆ ಶಾಸಕರದ್ದೇ ಆಗಿದೆ. ಗ್ರಾಮೀಣ ಪ್ರದೇಶದ ಕೊರತೆಗಳನ್ನು ಗಮನಿಸಿ ಸೂಕ್ತ ಕಾಮಗಾರಿಗಳನ್ನು ಮತ್ತು ಕಾರ್ಯಕ್ರಮಗಳನ್ನು ಕೈಗೆತ್ತಿಕೊಂಡು ಆಯಾ ಪ್ರದೇಶದ ಆರ್ಥಿಕತೆಯ ಚೇತರಿಕೆಗೆ ವೇಗ ಒದಗಿಸುವ ಕೆಲಸ ಶೀಘ್ರ ನಡೆಯಲಿ.

ಕೃಷಿ ಸುಸ್ಥಿರತೆ ಹಾಗೂ ನೆಲ–ಜಲ ಆರೋಗ್ಯ ಭಂಜಿಸುತ್ತಿರುವ ಅಡಿಕೆ ನೆಡುತೋಪಿನ ಉನ್ಮಾದ

ಉಳಿಯುವುದೇ ಅಡಿಕೆ ರೈತರ ಮಾನ?



ವಿಶ್ಲೇಷಣೆ

ಡಾ. ಕೇಶವ ಎಚ್. ಕೊರ್ಸೆ

ಅಡಿಕೆ ಬೆಲೆಯು ಕ್ವಿಂಟಲ್‌ಗೆ ಐವತ್ತು ಸಾವಿರ ರೂಪಾಯಿಗೂ ಮೀರಿ ಮುನ್ನುಗ್ಗುತ್ತಿದೆ. ಕಳೆದ ಮೂರು ದಶಕಗಳಿಂದಂತೂ ತೀವ್ರ ಏರಿಳಿತ ಕಾಣುತ್ತಿರುವ ಅಡಿಕೆ ಧಾರಣೆಯು ಇದೀಗ ಮತ್ತೊಂದು ದಾಖಲೆಯ ಏರಿಕೆಯತ್ತ ಸಾಗುತ್ತಿರುವಂತಿದೆ. ದೇಶೀಯ ಉತ್ಪಾದನಾ ಕೊರತೆ ಹಾಗೂ ಆಮದಿನ ನಿರ್ಬಂಧ- ಇವೆರಡರ ಪರಿಣಾಮವಾಗಿ ಸೃಷ್ಟಿಯಾಗಿರಬಹುದಾದ ಈ ವಿದ್ಯಮಾನವು ಮಾರುಕಟ್ಟೆಯಲ್ಲಿ ಸಂಚಲನ ಮೂಡಿಸುತ್ತಿದೆ.

ಜನಜೀವನ ಹಾಗೂ ಆರ್ಥಿಕತೆಯ ಬಹುಪಾಲು ಆಯಾಮಗಳು ಕೋವಿಡ್ ಸಂಕಷ್ಟಕ್ಕೆ ತುತ್ತಾಗಿರುವಾಗ, ಕೃಷಿ ಉತ್ಪನ್ನವೊಂದಕ್ಕೆ ಈ ಪರಿಯ ಬೆಲೆ ಬಂದಿರುವುದು ಕುತೂಹಲದ ಸಂಗತಿಯೇ ಸರಿ. ಮಾರುಕಟ್ಟೆ ಆರ್ಥಿಕತೆಯನ್ನೇ ನೆಚ್ಚುವ ಉದಾರವಾದಿ ಅರ್ಥಶಾಸ್ತ್ರಜ್ಞರು, ಇದನ್ನೊಂದು 'ಹೊಸ ಹಸಿರುಕ್ರಾಂತಿ' ಎಂಬಂತೆ ವರ್ಣಿಸಿದರೂ ಆಶ್ಚರ್ಯವಿಲ್ಲ!

ಆದರೆ, ಒಂದೆರಡು ಎಕರೆಗಳಷ್ಟೇ ಜಮೀನಿರುವ ಅಡಿಕೆಕೃಷಿಯ ಬಹುಸಂಖ್ಯಾತ ಸಣ್ಣ ರೈತರು, ಈ ಬೆಲೆ ಹೆಚ್ಚಳವನ್ನು ಸಂಭ್ರಮಿಸುತ್ತಿಲ್ಲ. ಏಪ್ರಿಲ್- ಮೇ ತಿಂಗಳ ಬೇಸಿಗೆಯಲ್ಲೇ ಅಡಿಕೆ ಹಂಗಾಮು ಮುಗಿದು, ಬಹುಪಾಲು ರೈತರು ಕೈಯಲ್ಲಿದ್ದ ಫಸಲು ಮಾರಿಯಾಗಿದೆ. ಶ್ರಾವಣ- ಭಾದ್ರಪದದ ಈಗಿನ ಬೆಲೆಯೇರಿಕೆಯ ಲಾಭವಾಗುವುದು ಕೇವಲ ಮಧ್ಯವರ್ತಿಗಳು ಮತ್ತು ದೊಡ್ಡ ರೈತರಿಗೆ ಎಂಬುದು ಅವರ ಅನುಭವ. ಆದರೆ, ಅವರನ್ನು ತೀವ್ರ ಚಿಂತೆಗೀಡುಮಾಡಿರುವುದು ಈ ಕ್ಷಣದ ನಷ್ಟವನ್ನೂ ಮೀರಿದ ಕೆಲವು ಗಂಭೀರ ಸವಾಲುಗಳು. ಅವು ಕೇವಲ ಅಡಿಕೆ ಬೆಳೆಗಾರರನ್ನಷ್ಟೇ ಅಲ್ಲ, ಸಮಗ್ರ ಕೃಷಿ ಕ್ಷೇತ್ರದ ಸುಸ್ಥಿರತೆ ಹಾಗೂ ನಾಡಿನ ಸಾಮಾಜಿಕ-ಆರ್ಥಿಕ ಪರಿಸ್ಥಿತಿಯನ್ನೇ ಪ್ರಭಾವಿಸುತ್ತಿರುವುದರಿಂದ, ಈ ಕುರಿತು ಗಂಭೀರ ಚಿಂತನೆಯಾಗಬೇಕಿದೆ.

ಉಷ್ಣವಲಯದ ಈ ಏಕದಳ ಪ್ರಭೇದವು ಕರಾವಳಿ ಹಾಗೂ ಸಹ್ಯಾದ್ರಿಯ ಕೃಷಿಬೆಳೆಯಾಗಿ ವಿಕಾಸವಾಗಿ ಸಹಸ್ರಮಾನವೇ ಕಳೆದಿದೆ. ಕಣಿವೆಗಳ ಜೌಗಿನಲ್ಲಿ ಭತ್ತದ ಗದ್ದೆಯ ಜೊತೆ ಅಡಿಕೆಯನ್ನೂ ಅಲ್ಲಿನ ರೈತರು ಬೆಳೆದರು. ಹೊಳೆ- ಕೆರೆಗಳ ನೀರು ಹಾಗೂ ಸಗಣಿ- ತರಗೆಲೆಗಳ ಗೊಬ್ಬರವಷ್ಟನ್ನೇ ಬಳಸಿ ಬಾಳೆ, ಕಾಳುಮೆಣಸು, ತೆಂಗು, ವೀಳ್ಯದೆಲೆ, ಏಲಕ್ಕಿ, ಜಾಯಿಕಾಯಿ ಇತ್ಯಾದಿ ವೈವಿಧ್ಯಮಯ ಬೆಳೆಗಳೊಂದಿಗೆ ಅಡಿಕೆ ಬೆಳೆಯುವ ಅವರ ಸಹಜಕೃಷಿ ಸಂಸ್ಕೃತಿಯೇ ಅನನ್ಯವಾದದ್ದು.


ಇತ್ತೀಚಿನವರೆಗೂ ಅವರು ಬಳಸುತ್ತಿದ್ದ ಆಧುನಿಕ ಮದ್ದೆಂದರೆ, ಕೊಳೆಯಂಥ ಶಿಲೀಂಧ್ರಜನ್ಯ ರೋಗ ನಿಯಂತ್ರಿಸಲು ಸಿಂಪಡಿಸುವ ಮೈಲುತುತ್ತ ದ್ರಾವಣ ಮಾತ್ರ. ಕಾಡುಹಂದಿ, ಕಾಡುಕೋಣದಂಥ ವನ್ಯಪ್ರಾಣಿಗಳ ಹಾವಳಿ ನಿಭಾಯಿಸುತ್ತ, ಮಳೆಗಾಲದ ನಿರಂತರ ಮಳೆಯಿಂದ ಫಸಲು ರಕ್ಷಿಸಿಕೊಳ್ಳಲು ಮರವನ್ನೇರಿ ಅವಕ್ಕೆ ಹುಲ್ಲು ಅಥವಾ ಅಡಿಕೆಹಾಳೆ ಹೊದಿಸುತ್ತ, ಪರಿಶ್ರಮದಿಂದ ಸಾಧಿಸಿದ ಸಂಕೀರ್ಣ ಬೇಸಾಯ ಕ್ರಮವಿದು.

ಮಧ್ಯಯುಗದಿಂದ ಇತ್ತೀಚಿನ ದಶಕಗಳವರೆಗಿನ ದೀರ್ಘ ಇತಿಹಾಸವನ್ನೊಮ್ಮೆ ಅವಲೋಕಿಸಿದರೆ, ಜೀವನೋಪಾಯಕ್ಕಾಗಿ ಹಲವು ತಲೆಮಾರುಗಳು ಕಟ್ಟಿಕೊಟ್ಟ ಈ ಅದ್ಭುತ ಕೃಷಿಪರಂಪರೆಯ ಪರಿಚಯವಾಗುತ್ತದೆ.

ಈ ಅನನ್ಯ ಅಡಿಕೆಕೃಷಿಗೆ ಇಂದು ಎದುರಾಗಿರುವ ಎರಡು ಪ್ರಮುಖ ಬಿಕ್ಕಟ್ಟುಗಳಲ್ಲಿ ಮೊದಲಿನದು, ಬದಲಾಗುತ್ತಿರುವ ಅಡಿಕೆಕೃಷಿಯ ಚಹರೆ. ಇತ್ತೀಚಿನ ದಶಕಗಳಲ್ಲಿ ಅಡಿಕೆಯು ಅಪ್ಪಟ ವಾಣಿಜ್ಯ ಬೆಳೆಯಾಗಿ ಪರಿವರ್ತಿತವಾಯಿತಷ್ಟೇ? ಅಡಿಕೆ ಕೃಷಿಯು ಆಗ ಹಣವುಳ್ಳವರ ಹೂಡಿಕೆ ಕ್ಷೇತ್ರವಾಗತೊಡಗಿತು! ಕರಾವಳಿ ಹಾಗೂ ಮಲೆನಾಡಿನ ಭತ್ತದಗದ್ದೆ, ಗುಡ್ಡ-ಕಣಿವೆಗಳೆಲ್ಲ ಅಡಿಕೆ ತೋಟಗಳಾಗತೊಡಗಿವೆ. ಇದರಿಂದ ಪ್ರಭಾವಿತರಾದ ಅರೆಮಲೆನಾಡು ಹಾಗೂ ಬಯಲುನಾಡಿನ ರೈತರು, ಹತ್ತಿಪ್ಪತ್ತು ಎಕರೆ ದಿಢೀರ್ ಅಡಿಕೆ ನೆಡುತೋಪು ನಿರ್ಮಿಸುವ ಕಾರ್ಯಕ್ಕಿಳಿದಿದ್ದಾರೆ.

ದೇಶದ ಸುಮಾರು ನಾಲ್ಕೂವರೆ ಲಕ್ಷ ಹೆಕ್ಟೇರ್ ಭೂಮಿಯಲ್ಲಿ ವಾರ್ಷಿಕ ಒಂಬತ್ತು ಲಕ್ಷ ಟನ್ ಅಡಿಕೆ ಉತ್ಪಾದನೆಯಾಗುತ್ತಿದ್ದು, ಜಗತ್ತಿನಲ್ಲೇ ಮೊದಲ ಸ್ಥಾನದಲ್ಲಿದೆ. ಇದರಲ್ಲಿ ಮುಕ್ಕಾಲು ಭಾಗ ಕರ್ನಾಟಕದ್ದೇ. ಕಳೆದ ಐದು ವರ್ಷಗಳಲ್ಲಿ ಇದರ ಬೆಳವಣಿಗೆ ದರ ಶೇ 55ಕ್ಕೂ ಮಿಕ್ಕಿದೆಯೆಂದು, ರಾಜ್ಯಸಭೆಗೆ ಇತ್ತೀಚೆಗೆ ನೀಡಿದ ಮಾಹಿತಿಯಲ್ಲಿ ಕೇಂದ್ರ ಸರ್ಕಾರವೇ ಹೇಳಿದೆ.

ರಾಜ್ಯವು ಜಾಗತಿಕ ಅಡಿಕೆ ಸಾಮ್ರಾಟನಾಗುತ್ತಿದೆಯೆಂದು ಸಂಭ್ರಮಿಸಬೇಕೇ? ಅದಕ್ಕೆ ಬೇರೆ ಮುಖವೂ ಇದೆಯಲ್ಲ! ಕರಾವಳಿಯ ಸಮೃದ್ಧ ಜೌಗು, ಮಲೆನಾಡಿನ ವೈವಿಧ್ಯಮಯ ಕಾಡು, ಬಯಲುನಾಡಿನ ಫಲವತ್ತಾದ ಭೂಮಿ- ಎಲ್ಲವೂ ಅಡಿಕೆ ಪಾಲಾಗುತ್ತಿವೆ. ಇತ್ತೀಚೆಗಂತೂ ಬೃಹತ್ ಯಂತ್ರ ಬಳಸಿ ಕಾಡು- ಗೋಮಾಳಗಳನ್ನೆಲ್ಲ ಸವರಿ ಒಮ್ಮೆಲೇ ಅಡಿಕೆತೋಟ ನಿರ್ಮಿಸುವ ಉನ್ಮಾದವೇ ಹಬ್ಬುತ್ತಿದೆ. ತೋಟಗಾರಿಕೆಯ ಮೂಲಸೂತ್ರವಾಗಬೇಕಾದ ಮಿಶ್ರಬೆಳೆ ಹಾಗೂ ಕೃಷಿಅರಣ್ಯ ತತ್ವಗಳು ಮಾಯವಾಗುತ್ತಿವೆ. ಹೊಳೆ- ಕೆರೆಗಳೆಲ್ಲ ಬತ್ತಿ ಬೇಸಿಗೆಯಲ್ಲಿ ನೀರಿಲ್ಲದಾಗಿ, ಎಲ್ಲೆಂದರಲ್ಲಿ ಕೊಳವೆಬಾವಿ ನಿರ್ಮಿಸಿ ಅಂತರ್ಜಲವನ್ನೆತ್ತಿ ನೀರುಣಿಸಲಾಗುತ್ತಿದೆ. ಹವಾಮಾನ ಬದಲಾವಣೆಯೋ ಅಥವಾ ಪರಿಸರಸ್ನೇಹಿಯಲ್ಲದ ಬೇಸಾಯ ಕ್ರಮಗಳಿಂದಾಗಿಯೋ ಹೊಸದಾಗಿ ತಲೆದೋರುತ್ತಿರುವ ಕೀಟ ಹಾಗೂ ಸೂಕ್ಷ್ಮಾಣುಜನ್ಯ ರೋಗಗಳನ್ನು ನಿಯಂತ್ರಿಸಲು ಮೋನೊಕ್ರೊಟೊಫಾಸ್ ಸೇರಿದಂತೆ ಆರ್ಗನೋಫಾಸ್ಫೇಟ್, ಕಾರ್ಬಾಮೇಟ್ಸ್ ತೆರನ ಕೃತಕ ಕ್ರಿಮಿನಾಶಕಗಳನ್ನು ಮಿತಿಮೀರಿ ಬಳಸಲಾಗುತ್ತಿದೆ.



ಹಣ ಗಳಿಸಲಿಕ್ಕೆಂದೇ ಉಳ್ಳವರು ಅಡಿಕೆ ಬೆಳೆಯಲು ನುಗ್ಗುತ್ತಿರುವುದರ ಪರಿಣಾಮವಿದು. ರಿಯಲ್ ಎಸ್ಟೇಟ್ ತೆರನಲ್ಲಿ ಅಂಕೆಗೆ ಸಿಗದೆ ಬೆಳೆಯುತ್ತಿದೆ ಅಡಿಕೆ ನೆಡುತೋಪು ಉದ್ಯಮ! ಲಾಭವೇ ಮುಖ್ಯವಾಗುವ ವಾಣಿಜ್ಯೋದ್ಯಮದ ಹಿಡಿತಕ್ಕೆ ಸಿಲುಕಿ, ಜೀವನೋಪಾಯಕ್ಕಾಗಿನ ಪಾರಂಪರಿಕ ಕೃಷಿಸಂಸ್ಕೃತಿಯೊಂದು ವಿಕೃತಿಯಾಗುತ್ತಿರುವ ಬಗೆಯಿದು.

ಅಡಿಕೆಯೇನೂ ಆಹಾರ ಬೆಳೆಯಲ್ಲ. ದಕ್ಷಿಣ ಏಷ್ಯಾ ಮತ್ತು ಅರಬ್ ರಾಷ್ಟ್ರಗಳಿಗೆ ರಫ್ತಾಗುವುದಾದರೂ ಅದೇನೂ ಗಮನಾರ್ಹ ಪ್ರಮಾಣದ್ದಲ್ಲ. ದೇಶದೊಳಗೆ ಬಳಕೆಯಾಗಬೇಕಾದ ಸರಕಿದು. ಮೂಲತಃ ಬಳಸುವುದು ಪಾರಂಪರಿಕ ಧಾರ್ಮಿಕ ವಿಧಿವಿಧಾನಗಳ ಪೂಜಾವಸ್ತುವಾಗಿ, ತಾಂಬೂಲಕ್ಕಾಗಿ, ಮನೆಮದ್ದು ಹಾಗೂ ಆಯುರ್ವೇದದ ಔಷಧಗಳ ಧಾತುವಾಗಿ. ಈಗ ನಿಷೇಧವಾಗಿರುವ ಗುಟ್ಕಾದಂಥ ತಂಬಾಕು ಉತ್ಪನ್ನಗಳ ಭಾಗವಾಗಿಯೂ ಅಡಿಕೆ ಬಳಕೆಯಾಗುತ್ತಿದೆ. ಇನ್ನುಳಿದ ಬದಲಿ ಉಪಯೋಗಗಳೆಲ್ಲ ಸೀಮಿತವಾಗಿದ್ದು, ಅಡಿಕೆ ಬಳಕೆಗೊಂದು ಮಿತಿಯಿದೆ. ಇದಾವುದನ್ನೂ ಗಮನಿಸದೆ ಅಡಿಕೆ ನೆಡುತೋಪು ಮಾತ್ರ ಹೆಚ್ಚುತ್ತಲೇ ಇದೆ!

ಕಳವಳಕಾರಿಯಾದ ಎರಡನೆಯ ಸಂಗತಿಯು ಅದರ ಸುರಕ್ಷತೆಯ ಕುರಿತಾದದ್ದು. ಅಡಿಕೆಯಲ್ಲಿರುವ 'ಅರೆಕೋಲಿನ್' ಅಂಶ ಅಪಾಯಕಾರಿಯೆಂದು ಗುರುತಿಸಿರುವ ವಿಶ್ವ ಆರೋಗ್ಯ ಸಂಸ್ಥೆಯು, ತಂಬಾಕಿನಂಥ 'ಕ್ಯಾನ್ಸರ್‌ಕಾರಕ' ಉತ್ಪನ್ನಗಳ ಪಟ್ಟಿಯಲ್ಲಿ ಅದನ್ನಿರಿಸಿದೆ. ದೇಶದ ಆಹಾರ ಸುರಕ್ಷತೆ ಮತ್ತು ಮಾನದಂಡ ನಿರ್ವಹಣಾ ಪ್ರಾಧಿಕಾರವೂ (FSSAI) ಅಡಿಕೆಯನ್ನು ಅಪಾಯಕಾರಿ ಆಹಾರವೆಂದೇ ಗುರುತಿಸಿದೆ. ತಂಬಾಕು ಬಳಸದೆ ಅಡಿಕೆ ಸೇವಿಸಿದರೆ ಆರೋಗ್ಯಕ್ಕೆ ಅಪಾಯವಿಲ್ಲವೆಂಬುದನ್ನು ಹಲವು ಸಂಶೋಧಕರು ದಾಖಲೆಗಳೊಂದಿಗೆ ಮಂಡಿಸುತ್ತಿರುವರಾದರೂ, ಅದನ್ನು ಜಾಗತಿಕ ಆರೋಗ್ಯ ವಿಜ್ಞಾನ ಲೋಕ ಒಪ್ಪುತ್ತಿಲ್ಲ. ಹೀಗಾಗಿ ಸುರಕ್ಷತೆಯ ಮುದ್ರೆ ಬೀಳುವವರೆಗೆ, ಮಾರುಕಟ್ಟೆಯಲ್ಲಿ ಅಡಿಕೆಯ ಸ್ಥಾನವು ಎಂದಿಗೂ ಡೋಲಾಯಮಾನವೇ.

ಬೇಡಿಕೆಯ ಕೊರತೆ, ಆರೋಗ್ಯವಿಜ್ಞಾನದ ವಿಧಿ- ನಿಷೇಧಗಳು ಅಥವಾ ನ್ಯಾಯಾಲಯಗಳ ತೀರ್ಪುಗಳಿಂದಾಗಿ ಭವಿಷ್ಯದಲ್ಲಿ ಅಡಿಕೆಯ ಬಳಕೆ ಯಾವಾಗಲಾದರೂ ಕುಸಿಯಬಹುದು. ಆಗ ಬೆಲೆ ಇಳಿದರೆ ನೆಡುತೋಪುಗಳ ನವಕೃಷಿಕರೆಲ್ಲ ಕೃಷಿಭೂಮಿಯನ್ನು ಬೇರೆ ಉದ್ಯಮಕ್ಕೆ ಹೊರಳಿಸಿಯಾರು. ಆದರೆ, ಜೀವನೋಪಾಯಕ್ಕಾಗಿ ಅಡಿಕೆ ಬೆಳೆಯುತ್ತಿರುವ ಮಲೆನಾಡು ಹಾಗೂ ಕರಾವಳಿಯ ಲಕ್ಷಾಂತರ ಸಣ್ಣರೈತರು ಮಾತ್ರ ತೋಟದ ನಿರ್ವಹಣಾ ವೆಚ್ಚವನ್ನೂ ನಿರ್ವಹಿಸಲಾಗದೆ ಬೀದಿಪಾಲಾದಾರು!

ಗಗನಕ್ಕೇರಿದ ಅಡಿಕೆ ಆರ್ಥಿಕತೆಯಲ್ಲಿ ಪಾಲು ಗಳಿಸಲೇ ಎಲ್ಲರೂ ನಿರತರಾಗಿರುವಾಗ, ಅಡಿಕೆಯ ಅಡಿಪಾಯವೇ ಕುಸಿಯುತ್ತಿರುವುದನ್ನು ಕೃಷಿನೀತಿ ನಿರೂಪಕರಾದರೂ ಗುರುತಿಸಬೇಕಿದೆ. ಸಹಕಾರಿ ಕ್ಷೇತ್ರವೂ ಸೇರಿದಂತೆ ರೈತ ಸಂಘಟನೆಗಳು ಹಾಗೂ ಸರ್ಕಾರವು ಅಡಿಕೆ ಸಣ್ಣರೈತರ ಭವಿಷ್ಯದ ಮಾನ ಕರಗದಂತೆ ನೋಡಿಕೊಳ್ಳಬೇಕಿದೆ.

ಲೇಖಕ: ನಿರ್ದೇಶಕ, ಸಂರಕ್ಷಣಾ ಜೀವಶಾಸ್ತ್ರ ಮತ್ತು ಸುಸ್ಥಿರ ಅಭಿವೃದ್ಧಿ ಅಧ್ಯಯನ ಕೇಂದ್ರ, ಶಿರಸಿ

ಚುರುಮುರಿ



ಮಂಗಳದಲ್ಲಿ ಗಣಿಗಾರಿಕೆ

• ಸುಮಂಗಲಾ

ಬೆಕ್ಕಣ್ಣ ಬಿಟ್ಟೂ ಬಿಡದೆ ಯುಟ್ಯೂಬಿನಲ್ಲಿ ನಾಸಾದ ಚಾನೆಲ್ ನೋಡುತ್ತಿತ್ತು. ಆಮೇಲೆ ಅದೇನೋ ಕೋಡ್ ಭಾಷೆಯಲ್ಲಿ ಉಲಿಯುತ್ತ, ತಲೆತಗ್ಗಿಸಿ ಕೂತು ಬರೆಯುತ್ತಿತ್ತು.

'ಮಂಗಳ ಗ್ರಹದಾಗೂ ಜೀವ ಇತ್ತು ಅಂತ ನಾಸಾದ ರೋವರ್ ಹೇಳೈತೆ. ಅಂದ್ರ ಅಲ್ಲೂ ಬೆಕ್ಕುಗಳಿದ್ದವು ಹೌದಿಲ್ಲೋ. ಈಗೂ ಅಲ್ಲಿ ಯಾವುದಾದರೂ ಜಾಗದಾಗೆ ಇರಬೌದು. ನಾಸಾದವ್ರಿಗೆ ಹೇಳಿ, ಮಂಗಳ ಮಾರ್ಜಾಲಗಳಿಗೆ ಈ ಕೋಡ್ ಭಾಷೆ ಕಳಿಸತೀನಿ. ಮಾರ್ಜಾಲಗಳಷ್ಟೇ ಇದನ್ನ ಡಿಕೋಡ್ ಮಾಡಾಕೆ ಆಗ್ತದ' ಎಂದು ಘನಗಂಭೀರವಾಗಿ ಹೇಳಿತು.

'ಎಷ್ಟರ ಶಾಣೇ ಆಗೀಯ...!' ನಾ ಮೂಗಿನ ಮೇಲೆ ಬೆರಳಿಟ್ಟೆ. 'ಮುಂದಿನ ಸಲ ಮಂಗಳನ ಮ್ಯಾಗೆ ನಮ್ಮ ದೇಶದ ನೌಕೆ ಇಳಿಸೋರು ಯಾರು ಗೊತ್ತದೇನು...' ಎಂದು ಕೇಳಿತು. ನಾನು ಗೊತ್ತಿಲ್ಲೆಂದು ಕತ್ತು ಅಡ್ಡಡ್ಡ ಅಲ್ಲಾಡಿಸಿದೆ.

'ನಮ್ಮ ಗಣಿಮಾವಂದಿರು!'

'ಅಂ... ಇಸ್ರೊದವರು ಅಲ್ಲೇನು...' ನಾನು ಕಕ್ಕಾಬಿಕ್ಕಿಯಾಗಿ ಕೇಳಿದೆ. ಹ್ಹೆಹ್ಹೆ ಎಂದು ನಕ್ಕ ಬೆಕ್ಕಣ್ಣ ಹತ್ತಿರ ಬಂದು ಪಿಸುಗುಟ್ಟಿತು.

'ಅಲ್ಲಿಯ ಮಾರ್ಜಾಲಗಳಿಗೆ ಕ್ವಿಜ್ ಥರಾ ಪ್ರಶ್ನೆ ಕೇಳೀನಿ... ಕಬ್ಬಿಣದಿಂದ ಹಿಡಿದು ಚಿನ್ನ, ಪ್ಲಾಟಿನಂವರೆಗೆ ಏನೇ ಖನಿಜಗಳಿದ್ರೂ ನನಗ ಮಾಹಿತಿ ಗೊತ್ತಾಗತದ. ಅದನ್ನ ನಮ್ಮ ಬಳ್ಳಾರಿ ಗಣಿಮಾವಂದಿರಿಗೆ ಹೇಳತೀನಿ. ಅವ್ರು ಅಫ್ಗಾನಿಸ್ತಾನದಾಗ ಟ್ರಿಲಿಯನ್ ಡಾಲರ್ ಮೌಲ್ಯದ ಅದಿರು ಐತಿ ಅಂತ ಚೀನಾದವರ ಜೊತಿಗೆ ಸೇರಿಕ್ಯಂಡು ಅಲ್ಲಿಗೆ ಹೋಗೂ ಯೋಚನಿ ಮಾಡತಿದ್ರು. ನಾ ಹೇಳಿದೆ... ಅಲ್ಲಿ ಅದಿರಿನ ಗಣಿ ಮ್ಯಾಗೆ ತಾಲಿಬಾನಿಯರು ಬಂದೂಕು ಟ್ರಿಗರ್ ವತ್ತಿ ಕೂತಿರ್ತಾರ. ನಮ್ಮ ದೇಶದಾಗೆ ರಾಜಾರೋಷವಾಗಿ ಗಣಿ ಅಗೆದಂಗೆ ಅಲ್ಲಿ ಮಾಡಾಕೆ ಆಗಂಗಿಲ್ಲ. ಚೀನಾದವ್ರೂ ನಮಗ ಟೋಪಿ ಹಾಕಬೌದು. ಅದ್ರ ಬದಲಿಗೆ ಮಂಗಳ ಗ್ರಹದಾಗೆ ಗಣಿಗಾರಿಕೆ ಮಾಡಾಕೆ ಸ್ಕೆಚ್ ಹಾಕೂಣಂತ. ಗಣಿಮಾಮಾರೂ ಹ್ಞೂಂ ಅಂದಾರ. ನನಗೂ ಕಮಿಶನ್ ಸಿಗತೈತಿ...'

ಬೆಕ್ಕಣ್ಣ ಪಿಸಪಿಸನೆ ವಿವರಿಸುತ್ತಿದ್ದರೆ, ಸಂಡೂರಿನ ಗಣಿಪ್ರದೇಶದಂತಾದ ಮಂಗಳನ ಮೇಲ್ಮೈ ಕಲ್ಪಿಸಿಕೊಳ್ಳುತ್ತ ನನಗೆ ತಲೆತಿರುಗಿತು!

ದಿನದ ಟ್ವೀಟ್

ಸೀಟು ಮೀಸಲಾಗಲಿ

ಬಹುತೇಕ ಜಿಲ್ಲೆಗಳಲ್ಲಿ ವೈದ್ಯಕೀಯ ಕಾಲೇಜು ಇರುವುದರಿಂದ, ಗ್ರಾಮೀಣ ವಿದ್ಯಾರ್ಥಿಗಳು ವೈದ್ಯಕೀಯ ಸೀಟುಗಳಲ್ಲಿ ಮೀಸಲಾತಿ ಪಡೆಯುವಂತೆ ಆಗಬೇಕು. ಆಯಾ ಜಿಲ್ಲೆಗೆ ಸೇರಿದ ಸ್ಥಳೀಯ ಗ್ರಾಮೀಣ ವಿದ್ಯಾರ್ಥಿಗಳಿಗೆ ಆಯಾ ಜಿಲ್ಲೆಯ ವೈದ್ಯಕೀಯ ಕಾಲೇಜಿನಲ್ಲಿ ಶೇ 20ರಷ್ಟು ಮೀಸಲಾತಿ ದೊರೆಯಬೇಕು. ಇದರಿಂದ ಜಿಲ್ಲೆಗಳು ಸ್ಥಳೀಯ ಪ್ರತಿಭಾವಂತ ವೈದ್ಯರನ್ನು ಹೊಂದಬಹುದು.

ಶ್ರೀನಿವಾಸ್ ಎಚ್.ಕೆ., ನಾಗರಿಕ

ಕಿಡಿನುಡಿ



ದೆಹಲಿಯಲ್ಲಿ ಐ.ಟಿ. ಇಲಾಖೆ, ಸಿ.ಬಿ.ಐ. ಮತ್ತು ಪೊಲೀಸರನ್ನು ಬಳಸಿಕೊಂಡು ಅವರು ನಮ್ಮನ್ನು ಸೋಲಿಸಲು ನೋಡಿದರು. ಆದರೆ, ನಾವು 62 ಸೀಟುಗಳನ್ನು ಗೆದ್ದೆವು. ಪಂಜಾಬ್, ಗೋವಾ, ಉತ್ತರಾಖಂಡ ಮತ್ತು ಗುಜರಾತ್‌ನಲ್ಲಿ ನಾವು ಬೆಳೆಯತೊಡಗಿದಂತೆ ನಮಗೆ ಇ.ಡಿ. ನೋಟಿಸ್‌ಗಳು ಬಂದವು! ಭಾರತದ ಜನರಿಗೆ ಪ್ರಾಮಾಣಿಕ ರಾಜಕಾರಣ ಬೇಕಾಗಿದೆ. ಬಿಜೆಪಿಯ ಇಂತಹ ಗಿಮಿಕ್‌ಗಳು ಎಂದಿಗೂ ಯಶಸ್ವಿಯಾಗುವುದಿಲ್ಲ, ಅವರು ನಮ್ಮನ್ನು ಇನ್ನಷ್ಟು ಬಲಯುತಗೊಳಿಸುತ್ತಾರೆ.

ಅರವಿಂದ ಕೇಜ್ರಿವಾಲ್, ದೆಹಲಿ ಮುಖ್ಯಮಂತ್ರಿ

25 ವರ್ಷಗಳ ಹಿಂದೆ

ಶನಿವಾರ, 14-9-1996

• **ಶಂಕರಾನಂದ ವಿರುದ್ಧ ಹೈಕೋರ್ಟಿಗೆ ವರದಿ**

ನವದೆಹಲಿ, ಸೆ. 13 (ಯುಎನ್‌ಐ)– ಕೋಟ್ಯಂತರ ರೂಪಾಯಿ ಮೌಲ್ಯದ ವೈದ್ಯಕೀಯ ಉಪಕರಣ ಆಮದು ಹಗರಣದಲ್ಲಿ ಕೇಂದ್ರ ಆರೋಗ್ಯ ಖಾತೆಯ ಮಾಜಿ ಸಚಿವ ಬಿ.ಶಂಕರಾನಂದ ಅವರು ನೇರವಾಗಿ ಭಾಗಿಯಾಗಿದ್ದಾರೆ ಎಂದು ದೆಹಲಿ ಹೈಕೋರ್ಟಿನಲ್ಲಿ ಇಂದು ಕೇಂದ್ರ ಸರ್ಕಾರದ ವೈದ್ಯಕೀಯ ಇಲಾಖೆ ಸಲ್ಲಿಸಿದ ತನಿಖಾ ವರದಿ ಬಹಿರಂಗಪಡಿಸಿದೆ.

• **ಮಹಿಳಾ ಮೀಸಲಾತಿ ಮಸೂದೆಗೆ ಅಂಗೀಕಾರ ಇಲ್ಲ**

ನವದೆಹಲಿ, ಸೆ. 13 (ಯುಎನ್‌ಐ)– ಲೋಕಸಭೆ ಹಾಗೂ ರಾಜ್ಯ ವಿಧಾನಸಭೆಗಳಲ್ಲಿ ಮಹಿಳೆಯರಿಗೆ ಶೇ 33ರಷ್ಟು ಮೀಸಲಾತಿ ನೀಡುವ ಕುರಿತ ಮಸೂದೆ ಅಂಗೀಕಾರ ಪಡೆಯಲು ವಿಫಲವಾಗಿದ್ದು, ಮಸೂದೆಯನ್ನು ಜಂಟಿ ಸದನ ಸಮಿತಿಗೆ ಪರಿಶೀಲನೆಗಾಗಿ ಒಪ್ಪಿಸಲಾಗಿದೆ.

• **ನಗರದಲ್ಲಿ ಕಾಡ್ಗಿಚ್ಚಿನಂತೆ ಹರಡುತ್ತಿರುವ 'ಮದ್ರಾಸ್ ಐ'**

ಬೆಂಗಳೂರು ಸೆ. 13– 'ಮದ್ರಾಸ್ ಐ' ಎಂದೇ ಖ್ಯಾತವಾಗಿರುವ ಕಣ್ಣಿನ ಸೋಂಕು ರೋಗ ನಗರದಲ್ಲಿ ವ್ಯಾಪಕವಾಗಿರುವ ಹಿನ್ನೆಲೆಯಲ್ಲಿ ಮಿಂಟೊ ಕಣ್ಣಾಸ್ಪತ್ರೆಯಲ್ಲಿ ಕಣ್ಣಿನ ಪೊರೆ ತೆಗೆಯುವ ಶಸ್ತ್ರಚಿಕಿತ್ಸೆಯನ್ನು ಸೆ. 23 ರವರೆಗೆ ಸ್ಥಗಿತಗೊಳಿಸಲಾಗಿದೆ ಎಂದು ಆಸ್ಪತ್ರೆ ಮೂಲಗಳು ತಿಳಿಸಿವೆ.

50 ವರ್ಷಗಳ ಹಿಂದೆ

ಮಂಗಳವಾರ, 14-9-1971

• **ರಾಜ್ಯದಲ್ಲಿ ಹಿಂದಿ ಮಾಧ್ಯಮ ವಿ.ವಿ. ಸ್ಥಾಪನೆ ಯತ್ನಕ್ಕೆ ಉಗ್ರ ವಿರೋಧ**

ಬೆಳಗಾವಿ, ಸೆ. 13– ಕರ್ನಾಟಕದಲ್ಲಿ ಹಿಂದಿ ಭಾಷಾ ಮಾಧ್ಯಮ ವಿಶ್ವವಿದ್ಯಾಲಯದ ಸ್ಥಾಪನೆ ಯತ್ನವನ್ನು ಬೆಳಗಾವಿ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನವು ಉಗ್ರವಾಗಿ ವಿರೋಧಿಸಿದೆ.

ಭಾನುವಾರ ರಾತ್ರಿ ಮುಕ್ತಾಯವಾದ ಎರಡು ದಿನಗಳ ಸಮ್ಮೇಳನವು, ರಾಜ್ಯಕ್ಕೆ 'ಕರ್ನಾಟಕ' ಎಂದು ಹೆಸರಿಡಲು ಮತ್ತು ರಾಜ್ಯದಲ್ಲಿ ಆಡಳಿತದ ಎಲ್ಲ ಮಟ್ಟಗಳಲ್ಲೂ ಕನ್ನಡವನ್ನು ಜಾರಿಗೆ ತರಲು ಕ್ರಮಗಳನ್ನು ಕೈಗೊಳ್ಳಬೇಕೆಂದು ಆಗ್ರಹಪಡಿಸಿದೆ.

• **ತುಳಸೀದಾಸ್‌ದಾಸಪ್ಪ ಅವರ ಮತ ಚೀಟಿಗಳ 'ಕೆಲವೊಂದು ವಿಚಿತ್ರ'**

ಬೆಂಗಳೂರು, ಸೆ. 13– ಮೈಸೂರು ಕ್ಷೇತ್ರದಿಂದ ಲೋಕಸಭೆಗೆ ಆಯ್ಕೆಗೊಂಡ ಆಡಳಿತ ಕಾಂಗ್ರೆಸ್ಸಿನ ಅಭ್ಯರ್ಥಿ ಎಚ್. ತುಳಸೀದಾಸ್ ದಾಸಪ್ಪ ಅವರ ಚೀಟಿಗಳ ಕೆಲವೊಂದು ವಿಚಿತ್ರಗಳು ಮತಗಳ ಎಣಿಕೆ ಸಮಯದಲ್ಲಿ ಕಂಡುಬಂದವು ಎಂದು ಚುನಾವಣೆಯಲ್ಲಿ ಸೋತ ಅಭ್ಯರ್ಥಿ ಡಾ.ಎಚ್.ಎಲ್. ತಿಮ್ಮೇಗೌಡರ ಪರವಾಗಿ ಏಜೆಂಟರಾಗಿ ಕಾರ್ಯ ನಿರ್ವಹಿಸಿದ ಇಬ್ಬರು ಇಂದು ಮೈಸೂರು ಹೈಕೋರ್ಟಿನಲ್ಲಿ ಸಾಕ್ಷ್ಯಗಳನ್ನಿತ್ತರು.

ಸಂಗತ

ಭಾವೈಕ್ಯ: ರಾಷ್ಟ್ರೀಯತೆಯ ಅಡಿಪಾಯ

ಪರಸ್ಪರ ವೈಷಮ್ಯ ಮರೆತು ಸಹಿಷ್ಣುತೆ ಸಾಧಿಸಲು ವಚನ ಸಂಸ್ಕೃತಿ ನೆರವಾಗಬಲ್ಲದು

• ಪ್ರೊ. ಶಿವಲಿಂಗಸ್ವಾಮಿ ಎಚ್.ಕೆ.

ಭಾರತದಲ್ಲಿ ರಾಷ್ಟ್ರೀಯತೆಯ ಪರಿಕಲ್ಪನೆಯು ಇಂದು ಒಂದು ರಾಷ್ಟ್ರವ್ಯಾಪಿ ವ್ಯಾಮೋಹ. ಇದರ ಹಿಂದಿರುವ ಕಾರಣಗಳು, ಒಂದು ಹಂತದಲ್ಲಿ ಜನರ ಭಾವನೆಗೆ ಸಂಬಂಧಿಸಿರಬಹುದು. ಮತ್ತೊಂದೆಡೆ, ಬಹುಮಟ್ಟಿಗೆ ರಾಜಕೀಯ ಕಾರಣಗಳಾಗಿರಬಹುದು.

ಈ ಪರಿಕಲ್ಪನೆಯ ವಿಕಸನವನ್ನು ಭಾರತದ ಪ್ರಾರಂಭದ ಹಂತಗಳ ರಾಜಕೀಯ ವ್ಯಾಪ್ತಿಯಲ್ಲಿ ಅವಲೋಕಿಸಿದರೆ, ರಾಜಾರಾಮ ಮೋಹನ್ ರಾಯ್, ಬಾಲಗಂಗಾಧರ ತಿಲಕ್ ಮುಂತಾದವರಿಗೆ ಬ್ರಿಟಿಷರ ಆಳ್ವಿಕೆಯ ಸಮಯದಲ್ಲಿ ಇದೊಂದು ಅನಿವಾರ್ಯ ಕ್ರಮವಾಗಿತ್ತು. ಪರಕೀಯರ ಆಳ್ವಿಕೆಯಲ್ಲಿ ನಲುಗಿದ್ದ ಜನರಲ್ಲಿ ರಾಷ್ಟ್ರದ ಪರಿಕಲ್ಪನೆಯೇ ಇರಲಿಲ್ಲ. ಅವರಲ್ಲಿ ಸ್ವಾತಂತ್ರ್ಯ ಎಂಬ ಪರಿಕಲ್ಪನೆಯನ್ನು ರಾಷ್ಟ್ರ ಎಂಬ ಪರಿಕಲ್ಪನೆಯ ಅಡಿಪಾಯದ ಮೇಲೆ ಹಾಕಿಕೊಟ್ಟು, ಕಡೆಯಲ್ಲಿ ಭಾರತವನ್ನು ಸ್ವತಂತ್ರ ರಾಷ್ಟ್ರವನ್ನಾಗಿ ಕಟ್ಟಬೇಕಿತ್ತು. ಭಾರತವು ಪರಕೀಯರ ವಸಾಹತುವಾಗಲು ಮೂಲಕಾರಣ ನಮ್ಮ ನಮ್ಮಲ್ಲಿರುವ ಒಡಕು ಎಂಬುದು, ಒಂದೇ ಭೂವ್ಯಾಪ್ತಿಯಲ್ಲಿ ನೂರಾರು ಭಾಗಗಳಾಗಿದ್ದ ಭಾರತೀಯರಿಗೆ ಮನವರಿಕೆಯಾಗಬೇಕಿತ್ತು. ಈ ದಿಸೆಯಲ್ಲಿ ಜನರಲ್ಲಿ ಏಕತೆಯ ಭಾವವನ್ನು ಅಸ್ತ್ರವನ್ನಾಗಿ ಬೆಳೆಸುವುದು, ಯುರೋಪಿನಲ್ಲಿ ಶಿಕ್ಷಣ ಪಡೆದು 'ರಾಷ್ಟ್ರ' ಎಂಬ ಪರಿಕಲ್ಪನೆಯ ಬಗ್ಗೆ ಅರಿವಿದ್ದ ಪ್ರಜ್ಞಾವಂತ ಜನನಾಯಕರ ಪ್ರಮುಖ ಆದ್ಯತೆಯಾಗಿತ್ತು.

ಒಂದು ಜನ ಅಥವಾ ಜನಾಂಗವು ಒಂದು ರಾಷ್ಟ್ರವಾಗಿ ನಿರ್ಮಾಣವಾಗಲು ಪ್ರಜೆಗಳೆಲ್ಲರೂ ಸಮಾನ ಮನಃಸ್ಥಿತಿಯನ್ನು ಹೊಂದಿರಬೇಕಾಗುತ್ತದೆ. ತಾವೆಲ್ಲ ಒಂದು ಎಂಬ ಅತ್ಯಂತ ಜಟಿಲವಾದ ಭಾವನೆಯನ್ನು ತಂದುಕೊಂಡು ದೇಶಭಕ್ತಿಯನ್ನು ಮೆರೆಯಬೇಕಾಗುತ್ತದೆ. ಭಾರತೀಯರಲ್ಲಿ ರಾಜಕೀಯವಾಗಿ ಒಗ್ಗಟ್ಟನ್ನು ಸಾಧಿಸಿ ಅವರಲ್ಲಿ ರಾಷ್ಟ್ರೀಯ ಪ್ರಜ್ಞೆಯನ್ನು ಬೆಳೆಸುವ ಮೂಲಕ ಈ ಕಾರ್ಯವನ್ನು ಸಾಧಿಸಬೇಕು ಎಂದು ಈ ಜನನಾಯಕರು ಅರಿತಿದ್ದರು.

ಯುರೋಪಿನ ಏಕತೆಯ ಪರಿಕಲ್ಪನೆಯನ್ನು ಭಾರತದ ಸಂದರ್ಭದಲ್ಲಿ ನೋಡುವುದಾದರೆ, ರಾಷ್ಟ್ರೀಯತೆಯ ಭಾವನೆಯು ಮೇಲ್ನೋಟಕ್ಕೆ ಜನರಲ್ಲಿ ಏಕತೆಯ ಭಾವನೆಯನ್ನು ಮೂಡಿಸುವ ಉತ್ಕೃಷ್ಟ ಪರಿಕಲ್ಪನೆ ಎಂದು ತೋರುತ್ತದೆ. ಆದರೆ ಈ ಪರಿಕಲ್ಪನೆ ಒಂದು ಸಿದ್ಧಾಂತವಾದರೆ ಜನರನ್ನು ಜನಾಂಗೀಯ, ಭಾಷೀಯ ಮತ್ತು ಭೌಗೋಳಿಕ ಕಾರಣಗಳಿಂದ ಪ್ರತ್ಯೇಕಿಸುವ ಪರಿಕರವಾಗಿಯೂ ರೂಪುಗೊಳ್ಳಬಹುದು ಎಂಬುದು ಸ್ವಾತಂತ್ರ್ಯೋತ್ತರ ಭಾರತದಲ್ಲಿ ಹಿಂಸಾತ್ಮಕವಾಗಿ ಸಾಬೀತಾಗಿದೆ.

ಸಂಕೀರ್ಣವಾದ ಜಾತಿ ವ್ಯವಸ್ಥೆಯನ್ನು ಹೊಂದಿರುವ ಭಾರತದಲ್ಲಿ ಎಲ್ಲರೂ ಸಮಾನ ಮನಃಸ್ಥಿತಿಯನ್ನು ಹೊಂದಬೇಕು ಎಂಬ ರಾಷ್ಟ್ರೀಯತೆಯ ಕರೆಯು ಸ್ವಾತಂತ್ರ್ಯಪೂರ್ವದ ಸಂದರ್ಭದಲ್ಲಿ ಸೂಕ್ತವಾಗಿತ್ತು. ಸ್ವಾತಂತ್ರ್ಯೋತ್ತರ ಭಾರತದಲ್ಲಿ ಜನನಾಯಕರಿಗೆ ಬಹುದೊಡ್ಡ ತಲೆನೋವಾಗಿದ್ದು ಭಾರತೀಯರ ಮಧ್ಯೆ ಭುಗಿಲೆದ್ದಿದ್ದ ಕೋಮು ವೈಷಮ್ಯ. ಪರಸ್ಪರ ಸಹಿಷ್ಣುತೆಯನ್ನು ಮರೆದು ಸ್ವಾತಂತ್ರ್ಯ ಗಳಿಸಿದ ಭಾರತೀಯರು ಕ್ರಮೇಣ ಅನ್ಯರ ಬಗ್ಗೆ ಅಸಹಿಷ್ಣುತೆಯನ್ನು ತೋರ್ಪಡಿಸತೊಡಗಿದರು.

ಇಂತಹ ಬಿಕ್ಕಟ್ಟಿನಲ್ಲಿ ಮತ್ತು ಪ್ರಜಾಸತ್ತಾತ್ಮಕ ಸಂದರ್ಭಗಳಲ್ಲಿ ಪರಸ್ಪರ ಸಹಿಷ್ಣುತೆಯನ್ನು ಬಲವಂತವಾಗಿ ತರುವ ಪ್ರಯತ್ನಗಳಾದರೆ ದುರಂತಗಳೇ ಸಂಭವಿಸಬಹುದು. ಹೀಗಿರುವಾಗ, ಜನರಿಗೆ ರಾಜಕೀಯ ಏಕತೆಗಿಂತ ಭಾವೈಕ್ಯ ಅವಶ್ಯಕ ಎಂಬುದನ್ನು ನಾವು ಮನಗಾಣಬೇಕಿದೆ.

ಭಾರತೀಯರಲ್ಲಿ ಸಾಮುದಾಯಿಕ ಪ್ರಜ್ಞೆಯನ್ನು ಕರ್ನಾಟಕದಲ್ಲಿ 12ನೇ ಶತಮಾನದಲ್ಲಿಯೇ ವಚನ ಸಂಸ್ಕೃತಿಯು ಹುಟ್ಟುಹಾಕಿತ್ತು. ಒಂದು ದೃಷ್ಟಿಯಲ್ಲಿ ಭಾರತದಲ್ಲಿ ರಾಷ್ಟ್ರೀಯ ಪ್ರಜ್ಞೆಗಿಂತ ಸಾಮುದಾಯಿಕ ಪ್ರಜ್ಞೆಯು ಬಹಳ ಪ್ರಮುಖವಾದ ಏಕೀಕರಣದ ಅಸ್ತ್ರ ಎಂದರೆ ತಪ್ಪಾಗಲಾರದು. ಸಮಾಜದಲ್ಲಿನ ಎಲ್ಲ ಭೇದಗಳನ್ನೂ ತೊಡೆದುಹಾಕಬೇಕೆಂಬ ಸದುದ್ದೇಶವನ್ನು ಈ ಚಳವಳಿಯು ಹೊಂದಿತ್ತು.



ಅಕ್ಷರ ಮತ್ತು ಅನ್ನ ದಾಸೋಹ ಎಂದರೆ ಭಿನ್ನ ಭಿನ್ನ ಸಾಮಾಜಿಕ ಅನುಭವಗಳನ್ನು ಒಂದು ಕಡೆ ನೇವರಿಸುವಂತಹ ಒಂದು ಪ್ರಕ್ರಿಯೆ. ಕಾಯಕದ ಪರಿಕಲ್ಪನೆಗೂ ಇಲ್ಲಿ ಹೆಚ್ಚಿನ ಮಹತ್ವ ಬಂತು. ವಚನಕಾರರ ಕಾಲದಲ್ಲಿ ಭಾವೈಕ್ಯತೆಗೆ ನಾಂದಿ ಹಾಡಲು ಇವೆಲ್ಲವೂ ಗಮನಾರ್ಹವಾದ ಕೊಡುಗೆ ಕೊಟ್ಟವು. ಆದರೆ ಸಮಕಾಲೀನ ಪರಿಸ್ಥಿತಿಯಲ್ಲಿ ಭಾರತದ ರಾಷ್ಟ್ರೀಯತೆಯಲ್ಲಿ ಉತ್ಕಟವಾದ ಧಾರ್ಮಿಕ ಭಾವನೆಗಳು ಬೆರೆತುಹೋಗಿವೆ. ರಾಷ್ಟ್ರ ಎಂಬ ಪರಿಕಲ್ಪನೆಯು ಭೂವ್ಯಾಪ್ತಿಯನ್ನು ಮೀರಿ, ಜನರ ಭಾವವನ್ನೂ ಮೀರಿ ಕೇವಲ ಧರ್ಮವನ್ನು ಆಲಿಂಗಿಸಿದೆ. ಈ ಹಿನ್ನೆಲೆಯಲ್ಲಿ ವಚನಕಾರರು ಸೃಜಿಸಿದ ದಾಸೋಹದ ಪರಿಕಲ್ಪನೆಯಲ್ಲಿ ಅಡಕವಾಗಿದ್ದ ಭಾವೈಕ್ಯವನ್ನು ಇಂದಿನ ಭಾರತದಲ್ಲಿ ರಾಷ್ಟ್ರೀಯತೆಯನ್ನು ಹುಟ್ಟುಹಾಕಲು ಅಡಿಪಾಯವಾಗಿ ಬಳಸಿಕೊಂಡರೆ, ಧರ್ಮ ಮತ್ತು ಜಾತಿಯ ಕಾರಣದಿಂದ ಉಲ್ಬಣಿಸಿರುವ ಪರಸ್ಪರ ವೈಷಮ್ಯ ಮರೆಯಾಗಿ ಸಹಿಷ್ಣುತೆ ಸಾಧ್ಯವಾಗುತ್ತದೆ.

ಧರ್ಮವನ್ನು ಆಲಿಂಗಿಸಿದ ರಾಷ್ಟ್ರೀಯತೆಯು ಬಲವಂತದ ಏಕತೆಯನ್ನು ಹುಟ್ಟುಹಾಕಲು ಯತ್ನಿಸುತ್ತದೆ. ಭಾವೈಕ್ಯತೆಗಿಂತ ಏಕರೂಪತೆ ಆದ್ಯತೆಯಾಗಿ, ಈ ಗೀಳು ಕಡೆಗೆ ಆಹಾರ, ಶಿಕ್ಷಣ, ಪಠ್ಯಕ್ರಮ ಮುಂತಾದವನ್ನೂ ಆಕ್ರಮಿಸುತ್ತದೆ.

ಒಂದು ದೇಶ, ಒಂದು ಧರ್ಮ, ಒಂದು ಭಾಷೆ ಎಂಬ ಪರಿವರ್ತನೆಯ ಪ್ರಯತ್ನದ ಬದಲು ಬಸವಣ್ಣನವರ ಆಶಯದಂತೆ 'ನೀಡುವ' ಗುಣ ಬೆಳೆಸಿಕೊಂಡರೆ ಅನ್ಯ ಧರ್ಮಗಳಿಗೆ, ಅನ್ಯ ಭಾಷೆಗಳಿಗೆ ಸ್ಥಾನ ನೀಡುವ ಭಾವ ಬೆಳೆಯಬಹುದು. ಹಾಗೆಯೇ ವೈವಿಧ್ಯತೆಯ ಮೂಲಕ ಭಾವೈಕ್ಯ ತಂದುಕೊಳ್ಳಬಹುದು ಮತ್ತು ಯುರೋಪಿನ ಮಾರ್ಗವನ್ನು ತೊಡೆದು ಹಾಕಬಹುದು.

ಲೇಖಕ: ಪ್ರಾಧ್ಯಾಪಕ, ತುಮಕೂರು ವಿಶ್ವವಿದ್ಯಾಲಯ

ವಾಚಕರ ವಾಣಿ

ಸರ್ಕಾರ ಕಣ್ತೆರೆಯಲಿ

ಕಲ್ಯಾಣ ಕರ್ನಾಟಕದಲ್ಲಿ ಅಭಿವೃದ್ಧಿ ಪರ್ವ ಶುರುವಾಗದೇ ಇರುವುದನ್ನು ಎತ್ತಿ ತೋರಿರುವ ವಿಶೇಷ ವರದಿಗಳಿಂದ (ಪ್ರ.ವಾ., ಸೆ. 12) ಸರ್ಕಾರದ ಕಣ್ತೆರೆಯಲಿ. ಕಲ್ಯಾಣ ಕರ್ನಾಟಕದ ಕಲ್ಯಾಣ ಎಷ್ಟಿದೆ ಎನ್ನುವುದನ್ನು ತಿಳಿಯಲು ಇಲ್ಲಿನ ಬಡವರ ಸಂಖ್ಯೆ ಮತ್ತು ತಲಾ ವರಮಾನ ನೋಡಿದರೆ ಸಾಕು. ಈ ಭಾಗದ ನಾಯಕರು ಜನರ ಸಮಸ್ಯೆಗಳಿಗೆ, ಅವರ ಅವಶ್ಯಕತೆಗಳಿಗೆ ಮಿಡಿಯುವ ಸ್ವಭಾವವನ್ನು ಬೆಳೆಸಿಕೊಳ್ಳುವುದು ಅಗತ್ಯ.

ಬಿ.ಆರ್.ಅಣ್ಣಾಸಾಗರ, ಸೇಡಂ

ಸಾರ್ವಜನಿಕ ಸಾರಿಗೆಗೂ ಬೇಕು ಡಿಜಿಟಲ್ ಪೇ

ಕೋವಿಡ್ ತಕ್ಕಮಟ್ಟಿಗೆ ನಿಯಂತ್ರಣಕ್ಕೆ ಬಂದಿರುವುದರಿಂದ ನಿಧಾನವಾಗಿ ಜನಜೀವನ ಸಹಜ ಸ್ಥಿತಿಗೆ ಬರುತ್ತಿದೆ. ಸಾಮಾನ್ಯ ಜನರು ತಮ್ಮ ತಮ್ಮ ಕೆಲಸಗಳಿಗೆ ಹೋಗಲು ಸಾರ್ವಜನಿಕ ಸಾರಿಗೆಯನ್ನು ಅವಲಂಬಿಸುವುದು ಸಹಜ. ಇಂತಹ ಸಂದರ್ಭಗಳಲ್ಲಿ ಬಸ್‌ನ ನಿರ್ವಾಹಕರಿಗೂ ಪ್ರಯಾಣಿಕರಿಗೂ ಚಿಲ್ಲರೆ ವಿಷಯದಲ್ಲಿ ಜಗಳಗಳು ಸರ್ವೇಸಾಮಾನ್ಯ. ಈ ದಿಸೆಯಲ್ಲಿ ನಮ್ಮ ಸಾರಿಗೆ ಇಲಾಖೆಯವರು ಪ್ರಯಾಣಿಕರ ಅನುಕೂಲಕ್ಕಾಗಿ ಯಾಕೆ ಆನ್‌ಲೈನ್ ಪೇಮೆಂಟ್ ವ್ಯವಸ್ಥೆಯನ್ನು ಜಾರಿಗೆ ತರಬಾರದು? ನಗದು ವ್ಯವಹಾರವನ್ನು ಕಡಿಮೆ ಮಾಡಿ ಎಂದು ಸರ್ಕಾರವೇ ಹೇಳುತ್ತಾ ಬರುತ್ತಿದೆ. 'ಡಿಜಿಟಲ್ ಇಂಡಿಯಾ'ಗಾಗಿ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಈ ದಿಸೆಯಲ್ಲಿ, ಜನರ ಬದುಕಿನ ಅವಿಭಾಜ್ಯ ಅಂಗವಾಗಿರುವ ಸಾರ್ವಜನಿಕ ಸಾರಿಗೆಯಲ್ಲಿ ಡಿಜಿಟಲ್ ಪೇ ವ್ಯವಸ್ಥೆಯನ್ನು ಜಾರಿಗೆ ತರಲಿ. ಈ ಮೂಲಕ, ಅತಿ ಹೆಚ್ಚು ನಗದು ವ್ಯವಹಾರ ಮಾಡುವ ಸಾರ್ವಜನಿಕ ಸಾರಿಗೆಯಲ್ಲಿ ಸರ್ಕಾರದ ಆದಾಯ ಸೋರಿಕೆಯು ತಪ್ಪುತ್ತದೆ. ಸಾರ್ವಜನಿಕರು ಕೂಡ ಸಂತೋಷದಿಂದ ಪ್ರಯಾಣ ಮಾಡುತ್ತಾರೆ.

ಹರವೆ ಸಂಗಣ್ಣ ಪ್ರಕಾಶ್, ಹರವೆ, ಚಾಮರಾಜನಗರ

ಎಂಥಾ ದಿನ?

ವಿವೇಕಾನಂದರ ಜನ್ಮದಿನ
ಯುವದಿನವಾದಂತೆ
ನೆಹರೂ ಅವರದು ಮಕ್ಕಳ ದಿನದಂತೆ
ರಾಧಾಕೃಷ್ಣನ್‌ರದು ಶಿಕ್ಷಕರ ದಿನದಂತೆ
ಈಗ ಮೋದಿಯವರ ಜನ್ಮದಿನ
ಏನಾಗಬೇಕೆಂಬ ಚರ್ಚೆಯಂತೆ!
ದೇಶಕ್ಕೆ ಅವರು ನೀಡಿದ ವಚನದಂತೆ
'ಅಚ್ಛೇದಿನ್' ಎಂದು ಆಚರಿಸಿಬಿಡಲಿ,
ಆಗಲಾದರೂ ಪರಿಹಾರವಾಗಬಹುದೇ
ನೋಡೋಣ
ಬಡಬೋರೇಗೌಡನ ಚಿಂತೆ!

ಜೆ.ಬಿ.ಮಂಜುನಾಥ, ಪಾಂಡವಪುರ

ನಂಬಿಕೆ ಮೂಡಿಸುವ ಸಕಾರಾತ್ಮಕ ನಡೆ

ಭಾನುವಾರ ಬೆಂಗಳೂರಿನಿಂದ ಹೈದರಾಬಾದ್‌ಗೆ ಹೊರಡಲು ಸಿದ್ಧವಾಗಿದ್ದ ವಿಮಾನದಲ್ಲಿ ತಾಂತ್ರಿಕ ದೋಷ ಕಂಡುಬಂದಾಗ, ಆ ವಿಮಾನದಲ್ಲಿ ಪ್ರಯಾಣಿಸುತ್ತಿದ್ದ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಅವರು ತಮಗೆ ವಿಶೇಷ ವಿಮಾನದ ವ್ಯವಸ್ಥೆ ಮಾಡಲು ಮುಂದೆ ಬಂದ ಸಿಬ್ಬಂದಿಯ ಮನವಿಯನ್ನು ಒಪ್ಪದಿದ್ದುದು ಮಾದರಿ ನಡೆ. ವಿಶೇಷ ವಿಮಾನದ ವ್ಯವಸ್ಥೆ ಮಾಡುವವರೆಗೂ ಕೆಳಗಿಳಿದು ಗಣ್ಯಾತಿಗಣ್ಯರ ಕೊಠಡಿಯಲ್ಲಿ ವಿಶ್ರಾಂತಿ ಪಡೆಯಬೇಕೆಂಬ ಕೋರಿಕೆಯನ್ನೂ ತಳ್ಳಿಹಾಕಿದ ಸಚಿವೆ, 'ಇಲ್ಲಿರುವ ಪ್ರತಿಯೊಬ್ಬರೂ ಸಮಾನರು. ಹಾಗೆಯೇ ನಾನು ಕೂಡ ಅವರಲ್ಲಿ ಒಬ್ಬಳು. ಎಲ್ಲರಿಗೂ ಮತ್ತೊಂದು ವಿಮಾನದ ವ್ಯವಸ್ಥೆ ಮಾಡಿ, ಆಗಮಾತ್ರ ನಾನು ವಿಮಾನದಿಂದ ಇಳಿಯುವೆ' ಎಂದಿದ್ದಾಗಿ ವರದಿಗಳು ತಿಳಿಸಿವೆ.

ಕೇವಲ ಬಾಯಿಮಾತಿನಲ್ಲಿ ನಾವು ಜನಸೇವಕರು ಎಂದು ಹೇಳಿಕೊಂಡು, ತಮಗಿರುವ ಅಧಿಕಾರ, ಪ್ರಭಾವ, ಅಂತಸ್ತಿನ ಮೂಲಕ ದರ್ಪದ ಧೋರಣೆ ತೋರುತ್ತಾ, ಅತಿ ಹೆಚ್ಚಿನ ಪ್ರಾಮುಖ್ಯ ನಿರೀಕ್ಷಿಸುವ ರಾಜಕಾರಣಿಗಳು, ಅಧಿಕಾರಿಗಳ ನಡತೆಯನ್ನೇ ಜನ ಹೆಚ್ಚಾಗಿ ನೋಡುತ್ತಿರುತ್ತಾರೆ. ಅವರು ಇಂತಹ ಸರಳತೆ, ಸಮಾನತಾ ಭಾವನೆಯನ್ನು ರಾಜಕಾರಣಿಗಳಿಂದ ಖಂಡಿತ ನಿರೀಕ್ಷಿಸುತ್ತಾರೆ. ಇಂತಹ ಒಂದೊಂದು ಸಣ್ಣ ಸಣ್ಣ ಸಕಾರಾತ್ಮಕ ನಡೆಯೂ ವ್ಯಕ್ತಿಯ ಮೇಲಿನ ನಂಬಿಕೆ, ಗೌರವವನ್ನು ಹೆಚ್ಚಿಸುವುದು ಸತ್ಯ.

ಅರ್ಚನಾ ಶಂಕರ್, ಬೆಂಗಳೂರು

ಗೋಡ್ಸೆ ಆರಾಧಕರ ಬಗ್ಗೆ ಮೌನವೇಕೆ?

ಗುಜರಾತ್‌ನಲ್ಲಿ ನಾಥೂರಾಂ ಗೋಡ್ಸೆ ಪ್ರತಿಮೆ ಸ್ಥಾಪನೆಗೆ ಹಿಂದೂ ಸೇನಾ ನಿರ್ಧರಿಸಿರುವ ಸುದ್ದಿ (ಪ್ರ.ವಾ., ಸೆ. 13) ಓದಿ ತುಂಬಾ ಬೇಸರವಾಯಿತು. ಮಹಾತ್ಮ ಗಾಂಧಿಯವರ ಹಂತಕ ಗೋಡ್ಸೆಯ ಆರಾಧನೆಯೆಂದರೆ ಅದು ಪರೋಕ್ಷವಾಗಿ ಗಾಂಧೀಜಿಯನ್ನು ಹಾಗೂ ಅವರ ತತ್ವ, ಸಿದ್ಧಾಂತಗಳನ್ನು ವಿರೋಧಿಸುವುದೆಂದೇ ಅರ್ಥ! ಇದು ದೇಶದ್ರೋಹವಾಗುವುದಿಲ್ಲವೇ?

ಅಷ್ಟಕ್ಕೂ ಗಾಂಧೀಜಿ ಈ ದೇಶಕ್ಕೆ ಮಾಡಿದ ದ್ರೋಹವಾದರೂ ಏನು? ತಮ್ಮೆಲ್ಲಾ ವೈಯಕ್ತಿಕ ಜೀವನವನ್ನು ದೇಶಕ್ಕಾಗಿ ಧಾರೆಯೆರೆದು ಸ್ವಾತಂತ್ರ್ಯ ತಂದುಕೊಟ್ಟಿದ್ದೇ ಅವರ ತಪ್ಪೇ? ಇಂದಿನ ಯುವಕರಿಗೆ ಗಾಂಧೀಜಿ ಆದರ್ಶವಾಗಬೇಕೇ ವಿನಾ ಗೋಡ್ಸೆಯಲ್ಲ. ಗೋಡ್ಸೆ ಆರಾಧಕರ ಬಗ್ಗೆ ಜಾಣಮೌನ ವಹಿಸುತ್ತಿರುವ ಸರ್ಕಾರಗಳು ಸಮಾಜಕ್ಕೆ ಏನು ಸಂದೇಶ ಕೊಡಲು ಹೊರಟಿವೆ ಎಂಬುದು ಬಹಿರಂಗವಾಗಬೇಕಾಗಿದೆ.

ಚಾವಲ್ಮನೆ ಸುರೇಶ್ ನಾಯಕ್, ಹಾಲ್ಮತ್ತೂರು, ಕೊಪ್ಪ

ಇದು ಪ್ರಜಾಪ್ರಭುತ್ವದ ಸೌಂದರ್ಯ!

ಸಾಗರದಲ್ಲಿ ಇತ್ತೀಚೆಗೆ ಸ್ಥಳೀಯ ಬಿಜೆಪಿ ಘಟಕದ ವತಿಯಿಂದ ಸನ್ಮಾನಿತರಾಗಿ ಮಾತನಾಡಿದ ಗೃಹ ಸಚಿವ ಆರಗ ಜ್ಞಾನೇಂದ್ರ, 'ಹಿಂದೆ ತುರ್ತುಪರಿಸ್ಥಿತಿ ಸಂದರ್ಭದಲ್ಲಿ ಪೊಲೀಸರಿಂದ ಬೆನ್ನುಮೂಳೆ ಮುರಿಯುವ ರೀತಿಯಲ್ಲಿ ಹೊಡೆತ ತಿಂದಿದ್ದೆ. ಈಗ ಪೊಲೀಸರ ಕೈನಿಂದ ಸೆಲ್ಯೂಟ್ ಸ್ವೀಕರಿಸುತ್ತಿದ್ದೇನೆ. ಇದೇ ಪ್ರಜಾಪ್ರಭುತ್ವದ ಸೌಂದರ್ಯ' ಎಂದು ಮಾರ್ಮಿಕವಾಗಿ ಹೇಳಿದರು.

ನಿಜ, ಪ್ರಜಾಪ್ರಭುತ್ವದಲ್ಲಿ ಎಂತೆಂಥ ಅವಕಾಶಗಳು ನಾಗರಿಕರಿಗೆ ದೊರೆಯುತ್ತವೆ. ಅದರಲ್ಲೂ ರಾಜಕೀಯ ಪಕ್ಷವೊಂದರ ಕಾರ್ಯಕರ್ತರಾದರೆ ರಾಜ್ಯದ ಮುಖ್ಯಮಂತ್ರಿ, ದೇಶದ ಪ್ರಧಾನಿ ಸ್ಥಾನದವರೆಗೆ ಏರಲು ಸಾಧ್ಯವಿದೆ. ಅಡ್ಡದಾರಿ ಹಿಡಿಯದೆ ಸಂಯಮದಿಂದ ಸೇವೆ ಮಾಡಿದರೆ ಉನ್ನತ ಸ್ಥಾನ ಒಲಿಯುವ ಸಾಧ್ಯತೆ ಇದೆ. ಹಾದಿ ತಪ್ಪಿದರೆ ಜೈಲು ಪಾಲಾಗುವ ಸಂದರ್ಭವೂ ಎದುರಾಗಬಹುದು. ಪ್ರಜೆಗಳೇ ಪ್ರಭುಗಳಾಗುವ ಆಶಯದ ಪ್ರಜಾಪ್ರಭುತ್ವದ ಅಂತರಂಗ ನಿಜಕ್ಕೂ ಸೌಂದರ್ಯವರ್ಧಿನಿಯಾಗಿದೆ.

ಗಣಪತಿ ಶಿರಳಗಿ, ಸಾಗರ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ಮುಖ್ಯಮಂತ್ರಿ ತಲೆದಂಡ

ಬಿಜೆಪಿಯ ಹೊಸ ಕಾರ್ಯತಂತ್ರ

ಚುನಾವಣೆಯ ಹೊಸ್ತಿಲಲ್ಲಿರುವ ರಾಜ್ಯಗಳಲ್ಲಿ ಮುಖ್ಯಮಂತ್ರಿ ಬದಲಾವಣೆಯನ್ನು ಒಂದು ಕಾರ್ಯತಂತ್ರವಾಗಿ ಬಿಜೆಪಿ ಅನುಸರಿಸುತ್ತಿರುವಂತೆ ಕಾಣಿಸುತ್ತಿದೆ. ಉತ್ತರಾಖಂಡದಲ್ಲಿ ಎರಡು ಬಾರಿ, ಕರ್ನಾಟಕ ಮತ್ತು ಗುಜರಾತ್‌ನಲ್ಲಿ ಒಂದು ಬಾರಿ ಮುಖ್ಯಮಂತ್ರಿ ಬದಲಾವಣೆ ಮಾಡಲಾಗಿದೆ. ಹಾಲಿ ಮುಖ್ಯಮಂತ್ರಿಯ ನೇತೃತ್ವದಲ್ಲಿ ಚುನಾವಣೆ ಗೆಲ್ಲಲಾಗದು ಎಂಬುದೇ ಬದಲಾವಣೆಯ ಹಿಂದಿನ ಲೆಕ್ಕಾಚಾರ. ಹೊಸ ಮುಖ್ಯಮಂತ್ರಿಯ ಆಯ್ಕೆಯಲ್ಲಿ ಜಾತಿ ಸಮೀಕರಣಕ್ಕೆ ಹೆಚ್ಚಿನ ಮಹತ್ವ ಕೊಡಲಾಗಿದೆ


ತ್ರಿವೇಂದ್ರ ಸಿಂಗ್ ರಾವತ್

ಗುಜರಾತ್ ಪಟೇಲರ ಓಲೈಕೆಯ ಗುರಿ


ಭೂಪೇಂದ್ರ ಪಟೇಲ್

ಅಮಿತ್ ಶಾ ಅವರ ಆಪ್ತ ವಿಜಯ ರೂಪಾಣಿ ಅವರನ್ನು ಗುಜರಾತ್ ಮುಖ್ಯಮಂತ್ರಿ ಗಾದಿಯಿಂದ ಕೆಳಗಿಳಿಸಿ ಭೂಪೇಂದ್ರ ಪಟೇಲ್ ಅವರಿಗೆ ಆ ಸ್ಥಾನ ನೀಡಿದ್ದರ ಹಿಂದೆ ಜಾತಿ ಸಮೀಕರಣವನ್ನು ಬಿಜೆಪಿಗೆ ಅನುಕೂಲಕರವಾಗಿಸುವ ಗುರಿಯೇ ಮುಖ್ಯವಾಗಿದೆ.

ವಿಜಯ ರೂಪಾಣಿ ಅವರು ಅಲ್ಪಸಂಖ್ಯಾತ ಜೈನ ಸಮುದಾಯಕ್ಕೆ ಸೇರಿದವರು. ಅವರ ನಾಯಕತ್ವದಲ್ಲಿ ಚುನಾವಣೆ ಎದುರಿಸುವುದು ಕಷ್ಟ ಎಂಬುದೇ ನಾಯಕತ್ವ ಬದಲಾವಣೆಯ ಪ್ರಮುಖ ಕಾರಣ ಎಂದು ವಿಶ್ಲೇಷಕರು ಹೇಳುತ್ತಾರೆ. ರಾಜ್ಯದಲ್ಲಿ ನಡೆದ ಬೆಳವಣಿಗೆಗಳು ಕೂಡ ಈ ವಿಶ್ಲೇಷಣೆಗೆ ಪೂರಕವಾಗಿಯೇ ಇವೆ.

ರಾಮನ ವಂಶಜರು ಎಂದು ಹೇಳಿಕೊಳ್ಳುವ ಪಟೇಲ್ ಅಥವಾ ಪಾಟೀದಾರ್ ಸಮುದಾಯವು ಗುಜರಾತ್‌ನಲ್ಲಿ ಆರ್ಥಿಕವಾಗಿ ಮತ್ತು ರಾಜಕೀಯವಾಗಿ ಬಲಾಢ್ಯವಾಗಿದೆ. ರಾಜ್ಯದ ಒಟ್ಟು 6 ಕೋಟಿ ಜನಸಂಖ್ಯೆಯಲ್ಲಿ ಪಟೇಲ್ ಸಮುದಾಯದ ಜನಸಂಖ್ಯೆ 1.5 ಕೋಟಿಯಷ್ಟು ಎಂದು ಅಂದಾಜಿಸಲಾಗಿದೆ. ರಾಜ್ಯದ 182 ವಿಧಾನಸಭಾ ಕ್ಷೇತ್ರಗಳ ಪೈಕಿ 80ರಲ್ಲಿ ಪಟೇಲ್ ಸಮುದಾಯವು ನಿರ್ಣಾಯಕವಾಗಿದೆ.


1980ರ ದಶಕದವರೆಗೆ ಕಾಂಗ್ರೆಸ್ ಪಕ್ಷದ ಜತೆಗೆ ಈ ಸಮುದಾಯ ಇತ್ತು. ಆದರೆ, ಕಾಂಗ್ರೆಸ್ ಪಕ್ಷವು ಕ್ಷತ್ರಿಯ, ಪರಿಶಿಷ್ಟ ಜಾತಿ, ಬುಡಕಟ್ಟು ಸಮುದಾಯ, ಮುಸ್ಲಿಂ ಜಾತಿಗಳ ಹೊಸ ಸಮೀಕರಣಕ್ಕೆ ಮುಂದಾದ ಬಳಿಕ ಪಟೇಲರು ಬಿಜೆಪಿಯತ್ತ ವಾಲಿದರು. ಪಟೇಲ್ ಸಮುದಾಯಕ್ಕೆ ಇತರ ಹಿಂದುಳಿದ ವರ್ಗಗಳಡಿ ಮೀಸಲಾತಿ ನೀಡಬೇಕು ಎಂಬ ಚಳವಳಿ 2015ರಲ್ಲಿ ಆರಂಭವಾದಾಗಿನಿಂದ ಸಮುದಾಯದ ಬಿಜೆಪಿ ನಿಷ್ಠೆಯು ಅಲುಗಾಡಿತು. ಚಳವಳಿಯ ನಾಯಕ ಹಾರ್ದಿಕ್ ಪಟೇಲ್ ಅವರು ಕಾಂಗ್ರೆಸ್ ಸೇರಿದ್ದು ಕೂಡ ಇದಕ್ಕೆ ಒಂದು ಕಾರಣ.

ನರೇಂದ್ರ ಮೋದಿ ಅವರ ಬಳಿಕ ಗುಜರಾತ್ ಮುಖ್ಯಮಂತ್ರಿಯಾಗಿದ್ದ ಆನಂದಿಬೆನ್ ಪಟೇಲ್ ಅವರ ಉತ್ತರಾಧಿಕಾರಿಯಾಗಿ ವಿಜಯ ರೂಪಾಣಿ ಅವರ ನೇಮಕವು ಪಟೇಲ್ ಸಮುದಾಯದ ಅತೃಪ್ತಿಗೆ ಕಾರಣವಾಯಿತು. ನಿತಿನ್ ಪಟೇಲ್ ಅವರು ಮುಖ್ಯಮಂತ್ರಿ ಹುದ್ದೆಯ ಪ್ರಬಲ ಆಕಾಂಕ್ಷಿ ಆಗಿದ್ದರು. ಹಾಗಿದ್ದರೂ, ಪಟೇಲ್ ಸಮುದಾಯದವರಲ್ಲಿ ಇದ್ದ ಸ್ಥಾನವನ್ನು ಬೇರೆಯವರಿಗೆ ಕೊಡಲಾಯಿತು.

ಗುಜರಾತ್ ವಿಧಾನಸಭೆಗೆ 2017ರಲ್ಲಿ ನಡೆದ ಚುನಾವಣೆಯಲ್ಲಿಯೂ ಸಮುದಾಯದ ಅತೃಪ್ತಿ ಪ್ರತಿಫಲನಗೊಂಡಿದೆ. ಆ ಚುನಾವಣೆಯಲ್ಲಿ ಬಿಜೆಪಿಗೆ 99 ಕ್ಷೇತ್ರಗಳಲ್ಲಿ ಮಾತ್ರ ಗೆಲ್ಲುವುದು ಸಾಧ್ಯವಾಯಿತು. 78 ಕ್ಷೇತ್ರಗಳಲ್ಲಿ ಗೆದ್ದ ಕಾಂಗ್ರೆಸ್, ಬಿಜೆಪಿಗೆ ನಡುಕ ಹುಟ್ಟಿಸಿತ್ತು. 2014ರ ಲೋಕಸಭಾ ಚುನಾವಣೆಯಲ್ಲಿ ಶೇ 60ರಷ್ಟಿದ್ದ ಬಿಜೆಪಿಯ ಮತ ಪ್ರಮಾಣವು ಶೇ 49ಕ್ಕೆ ಕುಸಿದಿತ್ತು.

ಕಳೆದ ವಿಧಾನಸಭೆ ಚುನಾವಣೆಯಲ್ಲಿ ನರೇಂದ್ರ ಮೋದಿ, ಅಮಿತ್ ಶಾ ಜೋಡಿಯು ವ್ಯಾಪಕ ಪ್ರಚಾರ ನಡೆಸಿತ್ತು. ಹಾಗಿದ್ದರೂ ರೂಪಾಣಿ ಅವರು ಮುಖ್ಯಮಂತ್ರಿಯಾಗಿದ್ದುದೇ ಪಕ್ಷದ ಹಿನ್ನಡೆಗೆ ಕಾರಣ ಎಂದು ಹೇಳಲಾಗುತ್ತಿದೆ. ರೂಪಾಣಿ ನೇತೃತ್ವದಲ್ಲಿಯೇ ಮುಂದಿನ ಚುನಾವಣೆ ಎದುರಿಸಿದರೆ ಗೆಲುವು ಕಷ್ಟ ಎಂಬುದು ಬಿಜೆಪಿ ಆಂತರಿಕವಾಗಿ ನಡೆಸಿದ ಸಮೀಕ್ಷೆಯಿಂದ ತಿಳಿದು ಬಂದಿದೆ ಎಂದು ವರದಿಯಾಗಿದೆ.

ಹಾಗಾಗಿ, ಗುಜರಾತ್‌ನಲ್ಲಿ ಜಾತಿ ಸಮೀಕರಣವನ್ನು ಗೆಲುವಿಗೆ ಪೂರಕವಾಗಿ ಇರಿಸಿಕೊಳ್ಳುವುದಕ್ಕಾಗಿಯೇ ಭೂಪೇಂದ್ರ ಅವರಿಗೆ ಮಣೆ ಹಾಕಲಾಗಿದೆ ಎಂದು ವಿಶ್ಲೇಷಿಸಲಾಗುತ್ತಿದೆ.


ವಿಜಯ ರೂಪಾಣಿ

ಉತ್ತರಾಖಂಡ ವರ್ಷದಲ್ಲಿ ಮೂವರು ಮುಖ್ಯಮಂತ್ರಿ

ಬಿಜೆಪಿಯು 2021ರಲ್ಲಿ ಉತ್ತರಾಖಂಡ ರಾಜ್ಯದ ಮುಖ್ಯಮಂತ್ರಿಯನ್ನು ಎರಡು ಬಾರಿ ಬದಲಿಸಿದೆ, ಅದೂ ನಾಲ್ಕು ತಿಂಗಳ ಅಂತರದಲ್ಲಿ. ರಾಜ್ಯದ ವಿಧಾನಸಭಾ ಚುನಾವಣೆಗೆ ವರ್ಷಕ್ಕಿಂತಲೂ ಕಡಿಮೆ ಅವಧಿ ಇದ್ದ ಸಂದರ್ಭದಲ್ಲಿ ಬಿಜೆಪಿ ಇಂತಹ ಮಹತ್ವದ ನಿರ್ಧಾರ ತೆಗೆದುಕೊಂಡಿದೆ. ಚುನಾವಣೆ ಕಾರಣದಿಂದಲೇ ಮುಖ್ಯಮಂತ್ರಿ ಬದಲಾವಣೆ ಮಾಡಲಾಗಿದೆ ಎಂದು ಪಕ್ಷದ ಹಲವು ನಾಯಕರೂ ಹೇಳಿದ್ದಾರೆ.

2017ರಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದಾಗ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ್ದ ತ್ರಿವೇಂದ್ರ ಸಿಂಗ್ ರಾವತ್ ಅವರು ನಾಲ್ಕು ವರ್ಷ ಆಳ್ವಿಕೆ ನಡೆಸಿದ್ದರು. ಪಕ್ಷದೊಳಗೆ ವಿರೋಧಿಗಳ ಸಂಖ್ಯೆ ಹೆಚ್ಚಾಗಿದ್ದು ಮತ್ತು ಜನಪ್ರಿಯತೆ ಕುಸಿದಿದ್ದು ಅವರ ರಾಜೀನಾಮೆಗೆ ಕಾರಣ ಎಂದು ವಿವರಿಸಲಾಗಿತ್ತು.

ತ್ರಿವೇಂದ್ರ ಸಿಂಗ್ ಅವರು ತಮ್ಮ ಅಧಿಕಾರದ ಅವಧಿಯಲ್ಲಿ ಆರ್‌ಎಸ್‌ಎಸ್, ಬಿಜೆಪಿಯ ಕೇಂದ್ರ ನಾಯಕರು ಮತ್ತು ರಾಜ್ಯ ನಾಯಕರನ್ನು ಕಡೆಗಣಿಸಿದ್ದರು ಎಂಬ ಆರೋಪ ಬಹಳ ಜೋರಾಗಿತ್ತು. ಕೇಂದ್ರದ ನಾಯಕರಿಂದ, ಆರ್‌ಎಸ್‌ಎಸ್ ನಾಯಕರಿಂದ ಬಂದ ಸೂಚನೆಗಳನ್ನು ಪಾಲಿಸುತ್ತಿರಲಿಲ್ಲ ಮತ್ತು ಅದಕ್ಕೆ ವಿರುದ್ಧವಾಗಿ ನಡೆಯುತ್ತಿದ್ದರು ಎಂದು ರಾಜ್ಯ ಬಿಜೆಪಿ ಘಟಕದ ಹಲವು ನಾಯಕರು ಬಹಿರಂಗವಾಗಿಯೇ ಅಸಮಾಧಾನ ವ್ಯಕ್ತಪಡಿಸಿದ್ದರು. ಯಾವುದೇ ನೀತಿ ರೂಪಿಸುವಲ್ಲಿ ಮತ್ತು ನಿರ್ಧಾರ ಕೈಗೊಳ್ಳುವಲ್ಲಿ ಅವರು ಅಧಿಕಾರಿ ವರ್ಗಕ್ಕೆ ಹೆಚ್ಚಿನ ಆದ್ಯತೆ ನೀಡುತ್ತಿದ್ದರು. ಇದರಿಂದ ಪಕ್ಷದ ಶಾಸಕರ ವಿಶ್ವಾಸವನ್ನು ಕಳೆದುಕೊಳ್ಳಬೇಕಾಯಿತು ಎಂದು ಅವರ ರಾಜೀನಾಮೆಯ ಹಿಂದಿನ ಕಾರಣವನ್ನು ಹಲವರು ಬಹಿರಂಗಪಡಿಸಿದ್ದರು.

ಇದಕ್ಕಿಂತಲೂ ಮುಖ್ಯ ಕಾರಣ ಎಂದರೆ ಚಾರ್‌ಧಾಮ್ ಮಂದಿರ ನಿರ್ವಹಣಾ ಮಂಡಳಿ ರಚನೆಗೆ ಕಾನೂನು ರಚಿಸಿ, ಅದರ ಅಡಿ 76 ದೇವಾಲಯಗಳ ಟ್ರಸ್ಟ್‌ಗಳನ್ನು ವಿಲೀನ ಮಾಡುವ ಮಹತ್ವದ ನಿರ್ಧಾರವನ್ನು ತ್ರಿವೇಂದ್ರ ಸಿಂಗ್ ಕೈಗೊಂಡಿದ್ದು. ದೇವಾಲಯಗಳ ಟ್ರಸ್ಟ್‌ಗಳ ಅಧಿಕಾರ ಕಸಿದುಕೊಳ್ಳುವ ಈ ನಿರ್ಧಾರದ ವಿರುದ್ಧ, ಟ್ರಸ್ಟ್‌ಗಳು ಭಾರಿ ಆಕ್ಷೇಪ ವ್ಯಕ್ತಪಡಿಸಿದ್ದವು. ನಿರ್ಧಾರವನ್ನು ವಾಪಸ್ ತೆಗೆದುಕೊಳ್ಳದಿದ್ದರೆ ಚುನಾವಣೆಯಲ್ಲಿ ಬಿಜೆಪಿಯನ್ನು ಸೋಲಿಸುವುದಾಗಿ ಈ ಟ್ರಸ್ಟ್‌ಗಳು ಬೆದರಿಕೆ ಹಾಕಿದ್ದವು.

ತ್ರಿವೇಂದ್ರ ಸಿಂಗ್ ವಿರುದ್ಧ ಈ ಎಲ್ಲಾ ಅಂಶಗಳು ಒಟ್ಟಾದ ಸಂದರ್ಭದಲ್ಲೇ, ಬಿಜೆಪಿ ಕೇಂದ್ರ ನಾಯಕರು ಅವರ ರಾಜೀನಾಮೆಯನ್ನು ಕೇಳಿದರು. ರಾಜ್ಯದ ವಿಧಾನಸಭಾ ಚುನಾವಣೆಗೆ ಇನ್ನು ಒಂದು ವರ್ಷವಷ್ಟೇ ಬಾಕಿ ಇದೆ. ಪಕ್ಷದ ಕುಸಿದಿರುವ ಜನಪ್ರಿಯತೆಯನ್ನು ಅಷ್ಟರಲ್ಲಿ ಮರುಸ್ಥಾಪಿಸಲು ಈ ನಿರ್ಧಾರ ತೆಗೆದುಕೊಳ್ಳಲಾಗಿದೆ ಎಂದು ಪಕ್ಷದ ವರಿಷ್ಠರು ಹೇಳಿದ್ದರು. 2021ರ ಮಾರ್ಚ್ ಎರಡನೇ ವಾರದಲ್ಲಿ ತ್ರಿವೇಂದ್ರ ಸಿಂಗ್ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು. ಸಂಸದ ತೀರಥ್ ಸಿಂಗ್ ರಾವತ್ ಅವರನ್ನು ಬಿಜೆಪಿ ಮುಖ್ಯಮಂತ್ರಿಯಾಗಿ ಆಯ್ಕೆ ಮಾಡಿತು.

ಅಧಿಕಾರಕ್ಕೆ ಬಂದ ಕೆಲವೇ ದಿನಗಳಲ್ಲಿ, ಚಾರ್‌ಧಾಮ್ ಮಂದಿರ ನಿರ್ವಹಣಾ ಮಂಡಳಿಯನ್ನು ರದ್ದುಮಾಡುವುದಾಗಿ ತೀರಥ್ ಸಿಂಗ್ ಘೋಷಿಸಿದ್ದರು. ಆದರೆ ಕೇಂದ್ರದ ನಾಯಕರ ಬೆಂಬಲ ಇಲ್ಲದ ಕಾರಣ ಆ ಘೋಷಣೆಯನ್ನು ಜಾರಿಗೆ ತರಲು ತೀರಥ್ ಅವರಿಗೆ ಸಾಧ್ಯವಾಗಲಿಲ್ಲ. ಅದು ಅವರ ವಿರುದ್ಧ ದೇವಾಲಯಗಳ ಟ್ರಸ್ಟ್‌ಗಳ ಅಸಮಾಧಾನವನ್ನು ಹೆಚ್ಚಿಸಿತು. ಅಲ್ಲದೆ, ಕೋವಿಡ್ ಎರಡನೇ ಅಲೆಯ ಮಧ್ಯೆಯೇ ಕುಂಭಮೇಳ ನಡೆಯಲು ಅವರು ಅವಕಾಶ ನೀಡಿದ್ದರು. ಕೋವಿಡ್ ನಿಯಂತ್ರಣ ಕುರಿತು ಅವರು ನೀಡಿದ ಹೇಳಿಕೆಗಳು ಭಾರಿ ವಿವಾದಕ್ಕೆ ಕಾರಣವಾಗಿದ್ದವು. ಜೀನ್ಸ್ ಧರಿಸುವ ಹೆಣ್ಣುಮಕ್ಕಳ ಬಗ್ಗೆ ಅವರ ಹೇಳಿಕೆಗೆ ರಾಷ್ಟ್ರವ್ಯಾಪಿ ಆಕ್ಷೇಪ ವ್ಯಕ್ತವಾಗಿತ್ತು. ಸ್ವತಃ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಅವರು, ಮಾತು ನಿಲ್ಲಿಸಿ ಕೆಲಸ ಮಾಡಿ ಎಂದು ತೀರಥ್ ಸಿಂಗ್ ಅವರಿಗೆ ಎಚ್ಚರಿಕೆ ನೀಡಿದ್ದರು. ಕೇಂದ್ರ ನಾಯಕರ ಸೂಚನೆಗಳಿಗೆ ವ್ಯತಿರಿಕ್ತವಾಗಿಯೇ ತೀರಥ್ ಸಿಂಗ್ ನಡೆದುಕೊಂಡರು. ಕೊನೆಗೆ ಜುಲೈನಲ್ಲಿ ಅವರನ್ನು ಅಧಿಕಾರದಿಂದ ಕೆಳಗೆ ಇಳಿಸಲಾಯಿತು.

ಕೋವಿಡ್ ನಿರ್ವಹಣೆಯಲ್ಲಿ ವಿಫಲರಾಗಿದ್ದಾರೆ ಎಂದು ಕಾರಣ ನೀಡಿ ಅವರ ರಾಜೀನಾಮೆ ಪಡೆಯಲಾಯಿತು. ಆದರೆ, ಪಕ್ಷದ ವರಿಷ್ಠರ ಸೂಚನೆಗಳಿಗೆ ವಿರುದ್ಧವಾಗಿ ನಡೆದುಕೊಂಡಿದ್ದರಿಂದಲೇ ಅವರ ರಾಜೀನಾಮೆ ಪಡೆಯಲಾಯಿತು ಎಂದು ಪಕ್ಷದ ಹಲವು ನಾಯಕರು ಹೇಳಿದ್ದಾರೆ. ಚುನಾವಣೆ ಎದುರಿಸಬೇಕಿರುವ ದಿನಗಳಲ್ಲಿ ಪಕ್ಷದ ವರಿಷ್ಠರ ಸೂಚನೆಯನ್ನು ಪಾಲಿಸುವ ಮತ್ತು ವಿವಾದ ಸೃಷ್ಟಿಸದ ನಾಯಕನನ್ನು ಮುಖ್ಯಮಂತ್ರಿ ಮಾಡಲಾಯಿತು ಎಂದು ವಿಶ್ಲೇಷಿಸಲಾಗಿದೆ.


ತೀರಥ್ ಸಿಂಗ್ ರಾವತ್ | ಉತ್ತರಾಖಂಡದ ಈಗಿನ ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ

ಪರ್ಯಾಯ ಲಿಂಗಾಯತ ನಾಯಕ

ಕರ್ನಾಟಕ ವಿಧಾನಸಭೆಗೆ ಚುನಾವಣೆ ಹತ್ತಿರವಾಗಿರುವ ಹೊತ್ತಿನಲ್ಲಿಯೇ ನಾಯಕತ್ವ ಬದಲಾವಣೆ ಮಾಡಲಾಗಿದೆ. ಲಿಂಗಾಯತ ಸಮುದಾಯದ 'ಪ್ರಶ್ನಾತೀತ ನಾಯಕ' ಎನಿಸಿಕೊಂಡಿರುವ ಬಿ.ಎಸ್. ಯಡಿಯೂರಪ್ಪ ಅವರ ಸ್ಥಾನಕ್ಕೆ ಅದೇ ಸಮುದಾಯದ ಬಸವರಾಜ ಬೊಮ್ಮಾಯಿ ಅವರನ್ನು ತರಲಾಗಿದೆ.


2024ರ ಲೋಕಸಭೆ ಚುನಾವಣೆಯನ್ನು ದೃಷ್ಟಿಯಲ್ಲಿಟ್ಟುಕೊಂಡಿದ್ದ ನರೇಂದ್ರ ಮೋದಿ–ಅಮಿತ್ ಶಾ ಜೋಡಿಗೆ 'ದಕ್ಷಿಣದ ಹೆಬ್ಬಾಗಿಲು' ಕರ್ನಾಟಕದಲ್ಲಿ ಬಿಜೆಪಿ ಸರ್ಕಾರ ಇರಬೇಕು ಎಂಬ ಆಕಾಂಕ್ಷೆ ಇದ್ದದ್ದು ಸಹಜ. ಹಾಗಾಗಿಯೇ ಜೆಡಿಎಸ್–ಕಾಂಗ್ರೆಸ್ ಮೈತ್ರಿ ಸರ್ಕಾರವನ್ನು ಕೆಡಹುವ 'ಆಪರೇಷನ್ ಕಮಲ'ಕ್ಕೆ ಅವರು ಬೆಂಬಲ ಕೊಟ್ಟರು. ಆದರೆ, ಯಡಿಯೂರಪ್ಪನವರೇ ಮೇಲೆ ಬಿದ್ದು ಸರ್ಕಾರ ಕೆಡವಿದರೂ ಸರ್ಕಾರದ ಚುಕ್ಕಾಣಿಯನ್ನು ಅವರ ಕೈಗಿಡಲು ವರಿಷ್ಠರಿಗೆ ಸಮ್ಮತಿ ಇರಲಿಲ್ಲ. ಹಾಗಾಗಿಯೇ, ಮುಖ್ಯಮಂತ್ರಿ ಪದಗ್ರಹಣಕ್ಕೆ ಸುಲಭದಲ್ಲಿ ಒಪ್ಪಿಕೊಳ್ಳಲಿಲ್ಲ. ಸಂಪುಟ ವಿಸ್ತರಣೆಗೆ ಒಂದು ತಿಂಗಳು ಸತಾಯಿಸಿದರು.


ಯಡಿಯೂರಪ್ಪ ಅವರಿಗೆ ಅನಿವಾರ್ಯವಾಗಿ ಕೊಟ್ಟ ಅಧಿಕಾರವನ್ನು ಅನಾಯಾಸವಾಗಿ ಕಿತ್ತುಕೊಂಡಿದ್ದು ಈಗ ಇತಿಹಾಸ. ಯಡಿಯೂರಪ್ಪ ಅವರು ಅಧಿಕಾರಕ್ಕೇರಿ ಒಂದೇ ವರ್ಷದೊಳಗೆ ನಾಯಕತ್ವ ಬದಲಾಯಿಸಬೇಕು ಎಂಬ ಇರಾದೆ ಬಿಜೆಪಿ ವರಿಷ್ಠರಿಗೆ ಇತ್ತು. ಆದರೆ, ಕೊರೊನಾ ಬಂದಿದ್ದರಿಂದ ಯಡಿಯೂರಪ್ಪ ಮತ್ತೊಂದು ವರ್ಷ ಅಧಿಕಾರ ಅನುಭವಿಸಿದರು.

ಯಡಿಯೂರಪ್ಪ ಅವರ ವಯಸ್ಸು ಮತ್ತು ಅವರ ಮಗ ಬಿ.ವೈ. ವಿಜಯೇಂದ್ರ ಆಡಳಿತದಲ್ಲಿ ಹಸ್ತಕ್ಷೇಪ ಮಾಡುತ್ತಿದ್ದಾರೆ ಎಂಬ ಆರೋಪ ಪದಚ್ಯುತಿಗೆ ಮುಖ್ಯ ಕಾರಣಗಳಾಗಿದ್ದವು. ಯಡಿಯೂರಪ್ಪ ನೇತೃತ್ವದಲ್ಲಿ ಮುಂದಿನ ಚುನಾವಣೆ ಗೆಲ್ಲುವುದು ಸಾಧ್ಯವೇ ಎಂಬ ಅನುಮಾನವೂ ಬಿಜೆಪಿ ವರಿಷ್ಠರಿಗೆ ಇತ್ತು ಎನ್ನಲಾಗಿದೆ.

ಯಡಿಯೂರಪ್ಪನವರನ್ನು ಇಳಿಸಿ, ಆ ಸ್ಥಾನಕ್ಕೆ ಬೇರೆ ಸಮುದಾಯದವರನ್ನು ತಂದು ಕೂರಿಸಿದರೆ, ಲಿಂಗಾಯತರ ವಿರೋಧವನ್ನು ಕಟ್ಟಿಕೊಂಡು ಮುಂದಿನ ಚುನಾವಣೆಯಲ್ಲಿ ಮಕಾಡೆ ಮಲಗಬೇಕಾಗುತ್ತದೆ ಎಂಬ ಭಯದ ಕಾರಣಕ್ಕೆ ಲಿಂಗಾಯತರನ್ನೇ ಆ ಸ್ಥಾನಕ್ಕೆ ಕೂರಿಸುವ ತಂತ್ರ ಹೆಣೆಯಲಾಯಿತು. ಹೀಗಾಗಿಯೇ ಬಸವರಾಜ ಬೊಮ್ಮಾಯಿ ಅವರಿಗೆ ಮುಖ್ಯಮಂತ್ರಿ ಸ್ಥಾನ ಒಲಿಯಿತು. ಯಡಿಯೂರಪ್ಪ ಅವರಿಗೂ ಬೊಮ್ಮಾಯಿ ಆಪ್ತರಾಗಿದ್ದರು. ಬೊಮ್ಮಾಯಿ ಮುಖ್ಯಮಂತ್ರಿಯಾದರೆ ಯಡಿಯೂರಪ್ಪ ಅವರು ತಕ್ಷಣವೇ ಯಾವುದೇ ತಕರಾರು ತೆಗೆಯುವುದಿಲ್ಲ ಎಂಬ ಲೆಕ್ಕಾಚಾರವೂ ಅವರ ಆಯ್ಕೆಯ ಹಿಂದೆ ಇತ್ತು.

ಸಿದ್ದರಾಮಯ್ಯ ಅವರಂತಹ ಪ್ರಖರ ನಾಯಕರ ಪ್ರಭಾವಳಿಯನ್ನು ಹಿಮ್ಮೆಟ್ಟಿಸಿ, ಬಿಜೆಪಿಗೆ ಮತ್ತೊಂದಿಷ್ಟು ಕಾಲ ನೆಲೆ ಒದಗಿಸಲು ಉಗ್ರ ಹಿಂದುತ್ವಕ್ಕಿಂತ ಮೃದು ಹಿಂದುತ್ವ ಅಥವಾ ಉದಾರವಾದಿ ನಿಲುವೇ ಉತ್ತಮ. ಅಂತಹ ನಿಲುವಿನ ಮುಖ್ಯಮಂತ್ರಿಯನ್ನು ಕರ್ನಾಟಕ ಒಪ್ಪಿಕೊಂಡು ಬೆಂಬಲಿಸೀತು ಎಂಬ ಬಿಜೆಪಿ ವರಿಷ್ಠರ ಲೆಕ್ಕಾಚಾರವೂ ಈ ಬದಲಾವಣೆಯ ಹಿಂದೆ ಢಾಳಾಗಿ ಕಾಣಿಸುತ್ತಿದೆ.


ಬಸವರಾಜ ಬೊಮ್ಮಾಯಿ


ಬಿ.ಎಸ್. ಯಡಿಯೂರಪ್ಪ

ಭವಾನಿಪುರ ಚುನಾವಣೆ
ಎದುರಾಳಿಗಳೇ ಇಲ್ಲ ಮಮತಾಗೆ

ಕೋಲ್ಕತ್ತ (ಪಿಟಿಐ): ಪಶ್ಚಿಮ ಬಂಗಾಳದ ಭವಾನಿಪುರ ವಿಧಾನಸಭಾ ಕ್ಷೇತ್ರದ ಉಪಚುನಾವಣೆಯು ಏಕಪಕ್ಷೀಯವಾಗುವ ಸಾಧ್ಯತೆ ಅತ್ಯಧಿಕವಾಗಿದೆ. ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ವಿರುದ್ಧ ಬಿಜೆಪಿ ಹೊಸಬರನ್ನು ಕಣಕ್ಕೆ ಇಳಿಸಿದ್ದರೆ, ಕಾಂಗ್ರೆಸ್ ಸ್ಪರ್ಧೆಯಿಂದ ದೂರ ಉಳಿದಿದೆ. ಶ್ರೀಜಿಬ್ ಬಿಶ್ವಾಸ್ ಅವರನ್ನು ಸಿಪಿಎಂ ಕಣಕ್ಕೆ ಇಳಿಸಿದೆ.

ಟಿಎಂಸಿ ಹೊರತುಪಡಿಸಿ ಬೇರೆ ಯಾವ ಪಕ್ಷವೂ ಈ ಉಪ ಚುನಾವಣೆಯನ್ನು ಗೆಲ್ಲುವ ವಿಶ್ವಾಸದಲ್ಲಿ ಇಲ್ಲ, ಗೆಲ್ಲುವ ಇಚ್ಛೆಯನ್ನೂ ಹೊಂದಿಲ್ಲ. ಮಮತಾ ಬ್ಯಾನರ್ಜಿ ಅವರಿಗೆ ಇದು ಪೈಪೋಟಿಯೇ ಇಲ್ಲದ ಸ್ಪರ್ಧೆಯಾಗಲಿದೆ ಎಂದು ತಜ್ಞರು ವಿಶ್ಲೇಷಿಸಿದ್ದಾರೆ.

ನಂದಿಗ್ರಾಮ ವಿಧಾನಸಭಾ ಕ್ಷೇತ್ರದಲ್ಲಿ ಬಿಜೆಪಿಯ ಸುವೇಂದು ಅಧಿಕಾರಿ ವಿರುದ್ಧ ಸೋತಿದ್ದ ಮಮತಾ ಬ್ಯಾನರ್ಜಿ ಅವರು, ನವೆಂಬರ್ 5ರ ಒಳಗೆ ವಿಧಾನಸಭೆಗೆ ಆಯ್ಕೆಯಾಗಬೇಕಿದೆ. ಮಮತಾ ಅವರು ಸ್ಪರ್ಧಿಸಲು ಅವಕಾಶ ಮಾಡಿಕೊಡುವ ಸಲುವಾಗಿ ಭವಾನಿಪುರ ಶಾಸಕ ಸೋವನ್‌ದೇವ್ ಚಟ್ಟೋಪಾಧ್ಯಾಯ ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು.


ಮಮತಾ ಬ್ಯಾನರ್ಜಿ


ಪ್ರಿಯಾಂಕಾ ತಿಬ್ರೆವಾಲ್

ಮಮತಾ ಬ್ಯಾನರ್ಜಿ ಅವರೇ ಇಲ್ಲಿ ಗೆಲ್ಲಲಿದ್ದಾರೆ ಎಂದು ಟಿಎಂಸಿ ನಾಯಕರು ಮತ್ತು ಕಾರ್ಯಕರ್ತರು ಹುಮ್ಮಸ್ಸಿನಲ್ಲಿದ್ದಾರೆ. 'ಇಲ್ಲಿ ದೀದಿ ಅವರೇ ಗೆಲ್ಲುತ್ತಾರೆ. ಆದರೆ ಈ ಗೆಲುವಿನ ಅಂತರ ದಾಖಲೆಮಟ್ಟದ್ದಾಗಿರಬೇಕು ಎಂಬುದು ನಮ್ಮ ಗುರಿ ಹೀಗಾಗಿ ಕ್ಷೇತ್ರದ ಪ್ರತಿ ಮನೆಗೂ ಭೇಟಿ ನೀಡಿ, ಮತ ಕೇಳುತ್ತಿದ್ದೇವೆ' ಎಂದು ಟಿಎಂಸಿ ಶಾಸಕರು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಭವಾನಿಪುರ ಕ್ಷೇತ್ರದಲ್ಲಿ ಏಳು ವಾರ್ಡ್‌ಗಳಿವೆ. ಅವುಗಳಲ್ಲಿ ಐದು ವಾರ್ಡ್‌ಗಳಲ್ಲಿ ಟಿಎಂಸಿ ಪ್ರಾಬಲ್ಯವಿದೆ. ಮಮತಾ ಬ್ಯಾನರ್ಜಿ ಅವರ ಸ್ಪರ್ಧೆಯನ್ನು ಇಲ್ಲಿನ ಮತದಾರರೇ ಸಂಭ್ರಮಿಸುತ್ತಿದ್ದಾರೆ. ಪಕ್ಷದ ಕಾರ್ಯಕರ್ತರು ಮಾತ್ರವಲ್ಲದೆ ಮತದಾರರು ಸಹ, ಭವಾನಿಪುರಕ್ಕೆ ಅವಳ ಮಗಳು ಹಿಂತಿರುಗಿದ್ದಾಳೆ ಎಂದು ಘೋಷಣೆ ಕೂಗುತ್ತಿದ್ದಾರೆ.

ಆರಂಭದಲ್ಲಿ ಕಾಂಗ್ರೆಸ್ ಈ ಉಪಚುನಾವಣೆಯಲ್ಲಿ ತನ್ನ ಅಭ್ಯರ್ಥಿಯನ್ನು ಕಣಕ್ಕೆ ಇಳಿಸಲು ನಿರ್ಧರಿಸಿತ್ತು. ಆದರೆ ಕೊನೆಯ ಗಳಿಗೆಯಲ್ಲಿ ಮಮತಾ ಬ್ಯಾನರ್ಜಿ ಅವರ ವಿರುದ್ಧ ಅಭ್ಯರ್ಥಿಯನ್ನು ಕಣಕ್ಕೆ ಇಳಿಸದೇ ಇರಲು ನಿರ್ಧರಿಸಿತು.

ಮತ ಉಳಿಸಿಕೊಳ್ಳುವತ್ತ ಬಿಜೆಪಿ ಚಿತ್ತ

ಬಿಜೆಪಿ ಅಭ್ಯರ್ಥಿ, ವೃತ್ತಿಯಲ್ಲಿ ವಕೀಲರಾದ ಪ್ರಿಯಾಂಕಾ ಅವರು ಮಮತಾ ಬ್ಯಾನರ್ಜಿ ಮತ್ತು ಅವರ ಸರ್ಕಾರದ ವಿರುದ್ಧ ಕಲ್ಕತ್ತಾ ಹೈಕೋರ್ಟ್‌ನಲ್ಲಿ ಸರಣಿ ಪಿಐಎಲ್‌ಗಳನ್ನು ಸಲ್ಲಿಸುವ ಮೂಲಕ ಜನಪ್ರಿಯತೆ ಪಡೆದುಕೊಂಡಿದ್ದರು. ಈ ಕಾರಣದಿಂದಲೇ 2021ರ ವಿಧಾನಸಭಾ ಚುನಾವಣೆಗೂ ಮುನ್ನ ಬಿಜೆಪಿ ಅವರನ್ನು ಪಕ್ಷಕ್ಕೆ ಸೇರಿಸಿಕೊಂಡಿತ್ತು.

ಆ ಚುನಾವಣೆಯಲ್ಲಿ ಪ್ರಿಯಾಂಕಾ ಸಹ ಸ್ಪರ್ಧಿಸಿದ್ದರು. ಆದರೆ ಭಾರಿ ಅಂತರದಿಂದ ಸೋತಿದ್ದರು. ಪ್ರಿಯಾಂಕಾ ಅವರು ತಮ್ಮ ನಾಮಪತ್ರವನ್ನು ಈಗಾಗಲೇ ಸಲ್ಲಿಸಿದ್ದಾರೆ. ಮಮತಾ ಬ್ಯಾನರ್ಜಿ ವಿರುದ್ಧ ಗೆಲ್ಲುವ ವಿಶ್ವಾಸವನ್ನೂ ವ್ಯಕ್ತಪಡಿಸಿದ್ದಾರೆ. ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ದಿಲೀಪ್ ಘೋಷ್ ಅವರು ಪ್ರಿಯಾಂಕಾ ಪರವಾಗಿ ಪ್ರಚಾರ ನಡೆಸಿದ್ದಾರೆ.

ಆದರೆ ಈ ಸ್ಪರ್ಧೆಯಲ್ಲಿ ಪಕ್ಷಕ್ಕೆ ಗೆಲ್ಲುವ ವಿಶ್ವಾಸವಿಲ್ಲ. ಕಳೆದ ಚುನಾವಣೆಯಲ್ಲಿ ಬಿಜೆಪಿ ಶೇ 30ರಷ್ಟು ಮತಗಳನ್ನು ಪಡೆದುಕೊಂಡಿತ್ತು. ಅಷ್ಟು ಮತಗಳನ್ನು ಈ ಉಪಚುನಾವಣೆಯಲ್ಲಿ ಉಳಿಸಿಕೊಳ್ಳುವುದರತ್ತ ಪಕ್ಷವು ಗಮನ ಹರಿಸುತ್ತಿದೆ ಎಂದು ಪಕ್ಷದ ನಾಯಕರೊಬ್ಬರು ಹೇಳಿದ್ದಾರೆ.

ಪಿವಿ ಫ್ಯಾಕ್ಟ್ ಚೆಕ್


ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ
9606038256

50 ವರ್ಷ ತುಂಬಿದ ಸರ್ಕಾರಿ ನೌಕರರಿಗೆ ಕಡ್ಡಾಯ ನಿವೃತ್ತಿ ಘೋಷಿಸಿ ಉತ್ತರ ಪ್ರದೇಶ ಸರ್ಕಾರವು ಆದೇಶಿಸಿದೆ ಎಂಬ ಸುದ್ದಿ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಈ ಸಂಬಂಧ ಎಲ್ಲ ಇಲಾಖೆಗಳಿಗೆ ಸುತ್ತೋಲೆ ಕಳುಹಿಸಲಾಗಿದೆ ಎಂದು ವರದಿಯಾಗಿದೆ. 'ಪಿಂಚಣಿ ಇಲ್ಲದ ಉದ್ಯೋಗಿ 50ನೇ ವಯಸ್ಸಿನಲ್ಲಿ ನಿವೃತ್ತರಾದರೆ, ಪಿಂಚಣಿ ಹೊಂದಿರುವ ಸಂಸದರು, ಶಾಸಕರು ಎಷ್ಟು ವರ್ಷಗಳಲ್ಲಿ ನಿವೃತ್ತರಾಗುತ್ತಾರೆ' ಎಂದು ಫೇಸ್‌ಬುಕ್ ಬಳಕೆದಾರರೊಬ್ಬರು ಪ್ರಶ್ನಿಸಿದ್ದಾರೆ.



50ನೇ ವರ್ಷಕ್ಕೆ ನಿವೃತ್ತಿ ಎಂಬುದು ದಾರಿ ತಪ್ಪಿಸುವ ಸುದ್ದಿ ಎಂದು ಲಾಜಿಕಲ್ ಇಂಡಿಯನ್ ವೆಬ್‌ಸೈಟ್ ಸ್ಪಷ್ಟಪಡಿಸಿದೆ. ಭ್ರಷ್ಟಾಚಾರದ ಆರೋಪವಿರುವ 50 ವರ್ಷ ತುಂಬಿದ ಪೊಲೀಸರನ್ನು ಗುರುತಿಸಿ, ಅವರಿಗೆ ಕಡ್ಡಾಯ ನಿವೃತ್ತಿ ನೀಡುವ ಸಂಬಂಧ ಸರ್ಕಾರ ಆದೇಶ ಹೊರಡಿಸಿದೆ. ಇದು ಎಲ್ಲ ನೌಕರರಿಗೂ ಅನ್ವಯವಾಗುವುದಿಲ್ಲ ಎಂದು ಸರ್ಕಾರದ ಸುತ್ತೋಲೆ ಸ್ಪಷ್ಟಪಡಿಸಿದೆ.

ಗುಂಡಣ್ಣ



ದಿನ ಭವಿಷ್ಯ

ಮಂಗಳವಾರ ಸೆಪ್ಟೆಂಬರ್ 14, 2021

ಶ್ರೀಪ್ಲವ ನಾಮ ಸಂವತ್ಸರ ದಕ್ಷಿಣಾಯಣ ವರ್ಷ ಋತು ಭಾದ್ರಪದ ಮಾಸ ಶುಕ್ಲ ಪಕ್ಷ ಮಳೆ ನಕ್ಷತ್ರ ಉತ್ತರ ಫಲ್ಗುಣಿ ಅಷ್ಟಮಿ ಗಂ. 21-14 (ಹ. 2-44) ಮಂಗಳವಾರ ನಿತ್ಯ ನಕ್ಷತ್ರ ಜ್ಯೇಷ್ಠ ಗಂ. 8-37 (ಬೆ. 9-41) ಪ್ರೀತಿ ನಾಮ ಯೋಗ ಗ. 8-7 ಬವ ಕರಣ ಗಂ. 21-14 ವಿಷಾಭಾವಃ ಅಮೃತ ಗಂ 49-44: ರಾಹುಕಾಲ: ಮ. ಗಂ. 3-00 ರಿಂದ 4-30 ಗುಳಿಕ ಕಾಲ ಮ. ಗಂ 12-00 ರಿಂದ 1-30 ಯಮಗಂಡ ಕಾಲ ಬೆ. ಗಂ 9-00 ರಿಂದ 10-30: ಸೂರ್ಯೋದಯ: 6-12 ಸೂರ್ಯಾಸ್ತ: 6-21 ಅದೃಷ್ಟ ಸಂಖ್ಯೆ 1, 8

ಮೇಷ: ದಿನದ ಮಟ್ಟಿಗೆ ಎಲ್ಲ ವಿಧಗಳಲ್ಲೂ ಕಷ್ಟನಷ್ಟ ಅನುಭವಿಸುವ ಸಾಧ್ಯತೆ ಇದ್ದು ಜಾಗರೂಕರಾಗಿರುವುದು ಉತ್ತಮ. ಅಪಾಯಕಾರಿ ಕೆಲಸ ಮತ್ತು ವಾಹನಗಳಿಂದ ದೂರವಿರುವುದು ಶ್ರೇಯಸ್ಕರ.

ವೃಷಭ: ಪಿತ್ರಾರ್ಜಿತ ಆಸ್ತಿಯು ನಿಮ್ಮ ಪಾಲಿಗೆ ಬಂದೊದಗಲಿದೆ. ಹಿರಿಯರ ಆಶೀರ್ವಾದದಿಂದಾಗಿ ಆದಾಯದ ಮೂಲಗಳು ಗೋಚರವಾಗಲಿವೆ. ಕುಟುಂಬವರ್ಗದವರಿಂದ ಸ್ಥಾನಮಾನಗಳು ಲಭ್ಯ. ಮಿತ್ರರಿಂದ ಪ್ರಶಂಸೆ.

ಮಿಥುನ: ಭೂವ್ಯವಹಾರದಲ್ಲಿ ಅಧಿಕ ಲಾಭ. ರಾಜಕೀಯ ರಂಗದಲ್ಲಿರುವವರಿಗೆ ಉನ್ನತ ಹುದ್ದೆ ಪ್ರಾಪ್ತವಾಗುವ ಸಾಧ್ಯತೆ. ನೀಡಿದ ಸಾಲಗಳು ಮರುಪಾವತಿಯಾಗುವವು. ವಿದ್ಯಾರ್ಥಿಗಳು ಯಶಸ್ಸಿನ ಉತ್ತುಂಗಕ್ಕೇರುವ ಸಾಧ್ಯತೆ.

ಕರ್ಕಾಟಕ: ಚೋರ ಭಯ. ಬೆಲೆಬಾಳುವ ವಸ್ತುಗಳ ಬಗ್ಗೆ ಸೂಕ್ತ ರಕ್ಷಣೆ ಮಾಡಿಕೊಳ್ಳಿ. ಮಿತ್ರರೊಂದಿಗೆ ಮನಸ್ತಾಪ ಶಮನವಾಗುವ ಸಾಧ್ಯತೆ. ಸಂಗಾತಿಯಿಂದ ವಿಶೇಷ ಕೊಡುಗೆ ಪ್ರಾಪ್ತಿ.

ಸಿಂಹ: ಭೂ ವಿವಾದದಲ್ಲಿ ಸಿಕ್ಕಿಹಾಕಿಕೊಳ್ಳುವ ಸಾಧ್ಯತೆ. ಅತಿಯಾದ ಕಾರ್ಯ ಒತ್ತಡದಿಂದಾಗಿ ಗೊಂದಲಮಯ ಪರಿಸ್ಥಿತಿ. ಸಕಾಲಿಕ ಚಿಂತನೆಯಿಂದಾಗಿ ಮಾನಸಿಕ ಶಾಂತಿ. ಸಂಗಾತಿಯಿಂದ ಸಿಹಿ ಸುದ್ದಿ. ವಿದ್ಯಾರ್ಥಿಗಳಿಗೆ ಸವಾಲು.

ಕನ್ಯಾ: ಸ್ವಯಂ ಉದ್ಯೋಗಿಗಳಿಗೆ ಉತ್ತಮ ಆದಾಯ. ಮೋಸ ಹೋಗುವ ಸಾಧ್ಯತೆ. ಸ್ನೇಹಿತ ವರ್ಗದವರಿಂದ ಸಂತಸದ ಸುದ್ದಿ. ಉದ್ಯೋಗದಲ್ಲಿ ಬದಲಾವಣೆಗಳು ಸಂಭವಿಸಬಹುದು

ತುಲಾ: ಸಂದುನೋವು, ಬೆನ್ನುನೋವಿನಿಂದ ಬಳಲುವ ಸಾಧ್ಯತೆ. ಹಿರಿಯರ ಮಾತುಗಳಿಗೆ ಮನ್ನಣೆ ನೀಡಿ ಬರಲಿರುವ ಅವಘಡವನ್ನು ತಪ್ಪಿಸಿಕೊಳ್ಳಿ. ದೇವತಾರಾಧನೆಯಿಂದ ಯಶಸ್ಸು.

ವೃಶ್ಚಿಕ: ನಿಮ್ಮ ಎಲ್ಲ ಕೆಲಸ ಕಾರ್ಯಗಳು ಸುಗಮವಾಗಿ ಕೈಗೂಡಲಿವೆ. ವಿದ್ಯಾರ್ಥಿಗಳ ಉನ್ನತ ವ್ಯಾಸಂಗದ ದಾರಿ ಸುಗಮವಾಗಲಿದೆ. ವಿವಾಹಾಕಾಂಕ್ಷಿಗಳಿಗೆ ಕಂಕಣ ಭಾಗ್ಯ ಕೂಡಿಬರುವ ಸಾಧ್ಯತೆ.

ಧನು: ಸ್ತ್ರೀ ವರ್ಗದವರಿಗೆ ಅತ್ಯಂತ ಸಂತೋಷಕರ ವಾತಾವರಣ ಮೂಡಲಿದೆ. ಮದುವೆ, ಮುಂಜಿ ಸಮಾರಂಭಗಳಲ್ಲಿ ಭಾಗಿಯಾಗುವಿರಿ. ಬಂಧು–ಬಾಂಧವರ ಸಮಾಗಮ ಸಾಧ್ಯತೆ. ನವ ಚೈತನ್ಯ ಧುಮ್ಮಿಕ್ಕಲಿದೆ.

ಮಕರ: ಹಿಂದಿನ ತಾಪತ್ರಯಗಳೆಲ್ಲವೂ ನಿವಾರಣೆಯಾಗಿ ನಿರಾಳತೆ. ವಿದ್ಯಾರ್ಥಿಗಳಿಗೆ ಯಶಸ್ಸಿನ ದಿನ. ದಿನಸಿ ವ್ಯಾಪಾರಿಗಳಿಗೆ ಸ್ವಲ್ಪ ಮಟ್ಟಿನ ನಷ್ಟ. ವಕೀಲ ವೃತ್ತಿಯಲ್ಲಿರುವವರಿಗೆ ಆರ್ಥಿಕಾಭಿವೃದ್ಧಿ. ವಾಹನ ಯೋಗ.

ಕುಂಭ: ಕೋರ್ಟ್, ಕಚೇರಿ ವ್ಯವಹಾರಗಳಲ್ಲಿ ಉತ್ತಮ ಫಲಿತಾಂಶ. ಹೊಸ ಮನೆ, ಜಮೀನು ಪ್ರಾಪ್ತವಾಗುವ ಯೋಗ. ಸಾಂಸಾರಿಕ ಸುಖ ಅನುಭವಿಸಲಿದ್ದೀರಿ. ಕೃಷಿ ಬದುಕಿನವರಿಗೆ ಸ್ವಲ್ಪ ಮಟ್ಟಿನ ಬಿಡುವು. ದೂರ ಪ್ರಯಾಣ ಸಾಧ್ಯತೆ.

ಮೀನ: ಸ್ಥಿರಾಸ್ತಿ ಪ್ರಾಪ್ತವಾಗುವ ಸಾಧ್ಯತೆಯಿದ್ದು, ಭೂ ಖರೀದಿಗೆ ಯೋಗ್ಯ ದಿನ. ವಿದೇಶ ಪ್ರಯಾಣದ ಕನಸು ಗರಿಗೆದರುವ ಸಾಧ್ಯತೆ. ಹೊಸ ಮನೆ, ಸಂತಾನ ಭಾಗ್ಯ ಮುಂತಾದವುಗಳು ದೊರಕಿ ಸಂತಸದ ವಾತಾವರಣ.

ನಿಮ್ಮ ಜನ್ಮದಿನ 14-ಸೆಪ್ಟೆಂಬರ್ ಇಂದು ಅತ್ಯಂತ ಶುಭದಾಯಕ. ತಾಂತ್ರಿಕ ಕೌಶಲವನ್ನು ಬೇಡುವ ಉದ್ಯಮದಲ್ಲಿ ಉತ್ತಮ ಭವಿಷ್ಯ. ಆಕರ್ಷಕ ಮಾತುಗಳಿಂದ ಇತರರನ್ನು ಕಟ್ಟಿಹಾಕುವ ಚಾಕಚಕ್ಯತೆಯಿಂದಾಗಿ ಮಧ್ಯವರ್ತಿ ವೃತ್ತಿಯಲ್ಲಿ ಯಶಸ್ಸು. ಬಹುಮುಖ ಪ್ರತಿಭೆಯನ್ನು ಹೊಂದಿದವರಾದ್ದರಿಂದ ಒಂದೇ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸಲಾರಿರಿ.

ಬೆರಗಿನ ಬೆಳಕು
ಗುರುರಾಜ ಕರಜಗಿ



ಬಂದೀಖಾನೆಯಲ್ಲಿದ್ದು ಮುಕ್ತಿ

ಜಗದ ಬಂದೀಗ್ರಹದಿ ಬಿಗಿಯುತಿರೆ ವಿಧಿ ನಿನ್ನ |
ನಿಗಮ ಸತ್ಕಲೆ ಕಾವ್ಯಗಳ ಗವಾಕ್ಷಗಳಿಂ ||
ಗಗನದೊಳನಂತದರ್ಶನದೆ ಮುಕ್ತಿಯನೊಂದು|
ನಗುನಗಿಸಿ ಲೋಕವನು – ಮಂಕುತಿಮ್ಮ || 460 ||

ಪದ-ಅರ್ಥ: ಬಂದೀಗ್ರಹ = ಸೆರೆಮನೆ, ನಿಗಮ = ವೇದಗಳು, ಸತ್ಕಲೆ = ಒಳ್ಳೆಯ ಕಲೆ, ಗವಾಕ್ಷಗಳಿಂ = ಗವಾಕ್ಷ(ಕಿಟಕಿ) + ಗಳಿಂ(ಗಳಿಂದ), ಗಗನದೊಳನಂತದರ್ಶನದೆ = ಗಗನದೊಳ್ + ಅನಂತ + ದರ್ಶನದೆ, ಮುಕ್ತಿಯನೊಂದು = ಮುಕ್ತಿಯನು + ಹೊಂದು.

ವಾಚ್ಯಾರ್ಥ: ವಿಧಿ ನಿನ್ನನ್ನು ಜಗವೆಂಬ ಬಂದೀಖಾನೆಯಲ್ಲಿ ಬಿಗಿದಾಗ, ನಿಗಮ, ಒಳ್ಳೆಯ ಕಲೆಗಳು ಮತ್ತು ಕಾವ್ಯಗಳೆಂಬ ಮೂರು ಕಿಟಕಿಗಳಿಂದ, ಗಗನದ ಅನಂತದರ್ಶನವನ್ನು ಪಡೆದು ಲೋಕದಲ್ಲಿ ನಕ್ಕು, ನಗಿಸಿ, ಮುಕ್ತಿಯನ್ನು ಹೊಂದು.

ವಿವರಣೆ: ಒಂದು ಪುಟ್ಟ ಸೂಫೀ ಕಥೆ. ಇಬ್ಬರನ್ನು ಜೈಲಿನಲ್ಲಿ ಐದು ವರ್ಷ ಕೂಡಿ ಹಾಕಿದ್ದರು. ಮರುದಿನ ಅವರ ಬಿಡುಗಡೆ. ಹಿಂದಿನ ದಿನ ರಾತ್ರಿ ಒಬ್ಬ ಮತ್ತೊಬ್ಬನಿಗೆ ಹೇಳಿದ, 'ನಾಳೆ ನಮ್ಮ ಬಿಡುಗಡೆಯಾಗುತ್ತದೆ. ಜಗತ್ತು ಹೊರಗಡೆ ಹೇಗಿದೆ ನೋಡಬೇಕು'. ಒಬ್ಬ ಇನ್ನೊಬ್ಬನ ಬೆನ್ನ ಮೇಲೇರಿ ನಿಂತು ಕಿಟಕಿಯಲ್ಲಿ ಹೊರಗೆ ನೋಡಿದ. 'ಆಹಾ, ಎಷ್ಟು ಸುಂದರವಾಗಿದೆ ಜಗತ್ತು. ಏನು ವೃಕ್ಷಗಳು, ಚಂದ್ರ, ತಾರೆಗಳು' ಎಂದು ಉದ್ಗರಿಸಿದ. ನಂತರ ಮತ್ತೊಬ್ಬ ಈತನ ಬೆನ್ನ ಮೇಲೆ ಹತ್ತಿ ನಿಂತು ಹೊರಗಡೆ ನೋಡಿದ. ಆತ ಕೆಳಗೆ ನೋಡಿದ. ಸಂಜೆ ಮಳೆಯಾಗಿದೆ. ರಸ್ತೆಯಲ್ಲಿ ರೊಜ್ಜು ರೊಜ್ಜಾಗಿದೆ. 'ಛೇ, ಪ್ರಪಂಚ ಏನು ಕೊಳಕಾಗಿದೆ! ಎಲ್ಲಿ ನೋಡಿದಲ್ಲಿ ಅಲ್ಲಿ ರಾಡಿ, ಕಸ' ಎಂದ. ಮತ್ತೊಬ್ಬ ನುಡಿದ, 'ನಾವು ಏನನ್ನು ನೋಡುತ್ತೇವೋ, ಪ್ರಪಂಚ ಹಾಗಿರುತ್ತದೆ' ಎಂದ. ದೃಷ್ಟಿಯಂತೆ ಸೃಷ್ಟಿ.


ನಾವು ಹಾಗೆಯೇ ಪ್ರಪಂಚ ಎನ್ನುವ ಕಾರಾಗೃಹದಲ್ಲಿ ಬಂದಿಯಾಗಿದ್ದೇವೆ. ಪ್ರಪಂಚ ನಿಜವಾಗಿ ಕಾರಾಗೃಹವಲ್ಲ. ನಾನು, ನನ್ನದು ಎಂಬ ಸ್ವಾರ್ಥದಲ್ಲಿ ಜಗತ್ತನ್ನು ಚಿಕ್ಕದನ್ನಾಗಿ ಮಾಡಿಕೊಂಡು ಬಿಟ್ಟಿದ್ದೇವೆ. ರವೀಂದ್ರನಾಥ್ ಠಾಕೂರರು ಹೇಳುತ್ತಾರೆ, 'ಒಬ್ಬ ಮನುಷ್ಯ ನಾನು ಅತ್ಯಂತ ವಿಶೇಷ ಮನುಷ್ಯ, ತಾನು ಉಳಿದವರೊಡನೆ ಸೇರಬಾರದು ಎಂದುಕೊಂಡು ತನ್ನ ಸುತ್ತ ಕೋಟೆಯನ್ನು ಕಟ್ಟಲಾರಂಭಿಸಿದ. ಬರೀ ತಾನು ಮತ್ತು ತನಗೆ ಸೇರಿದ್ದು ಮಾತ್ರ ತನ್ನೊಡನಿರಬೇಕೆಂದು ಯೋಜಿಸಿ ಕೋಟೆ ಕಟ್ಟುತ್ತ ಬಂದ. ಕೊನೆಗೆ ಕೋಟೆ ಮುಗಿದಾಗ ಆತನಿಗೆ ತಿಳಿದದ್ದು, ತನ್ನ ಕೋಟೆಯಲ್ಲಿ ತಾನೊಬ್ಬನೇ ಬಂದಿಯಾಗಿದ್ದೇನೆ'. ಹೀಗೆ ನಾವು ಮಾಡಿಕೊಂಡ ಬಂದಿಖಾನೆಗೆ ಮೇಲೆ ಮೂರು ಕಿಟಕಿಗಳಿವೆಯಂತೆ. ಒಂದು ವೇದ. ವೇದವೆಂದರೆ ಜ್ಞಾನ, ಅರಿವು. ಮತ್ತೊಂದು ಕಿಟಕಿ ಸತ್ಕಲೆ. ಸತ್ಕಲೆಗಳೆಂದರೆ ಒಳ್ಳೆಯ ಕಲೆಗಳು. ಅವು ನೃತ್ಯ, ಚಿತ್ರಕಲೆ, ಶಿಲ್ಪಕಲೆ, ನಾಟಕ, ಕುಶಲಕಲೆ ಯಾವುದಾದರೂ ಆಗಬಹುದು. ಮೂರನೆಯ ಕಿಟಕಿ ಕಾವ್ಯ. ಕಾವ್ಯದೊಂದಿಗೆ ಸಂಗೀತವೂ ಸೇರಬಹುದು. ಈ ಮೂರು ಕಿಟಕಿಗಳಿಂದ ಜೈಲಿನಲ್ಲಿದ್ದ ಕೈದಿಗೆ ಆಗಸದ (ಪ್ರಪಂಚದ) ಅನಂತ ದರ್ಶನವಾಗುತ್ತದೆ. ಈ ಕಿಟಕಿಗಳ ಮೂಲಕ ಬಂದ, ಜ್ಞಾನ, ಕಲೆ ಮತ್ತು ಕಾವ್ಯಗಳು ವ್ಯಕ್ತಿಯ ಬದುಕನ್ನು ಅರಳಿಸುತ್ತವೆ. ಬದುಕನ್ನು ಅರಳಿಸಿಕೊಂಡು ಸಮೃದ್ಧವಾಗಿ ಬೆಳೆದ ವ್ಯಕ್ತಿ ತನಗೂ, ತನ್ನ ಸುತ್ತಮುತ್ತಲಿನ ಜನರಿಗೂ ಸಂತೋಷ ಕೊಡುತ್ತಾನೆ/ಳೆ. ಹೀಗೆ ಸರ್ವಜನ ಮಾನ್ಯನಾಗಿ, ಪ್ರಿಯನಾದ ವ್ಯಕ್ತಿ ಮುಕ್ತನಾಗುತ್ತಾನೆ.

ಅದನ್ನೇ ಕಗ್ಗ ತಿಳಿಸುತ್ತದೆ. ಜ್ಞಾನ, ಕಲೆ ಮತ್ತು ಕಾವ್ಯಗಳಿಂದ ಪ್ರಪಂಚದ ಅನಂತ ದರ್ಶನವನ್ನು ಪಡೆದ ವ್ಯಕ್ತಿ, ಬಂದೀಖಾನೆಯಲ್ಲಿದ್ದೂ ಮುಕ್ತಿಯನ್ನು ಪಡೆಯುತ್ತಾನೆ.

ಪದಬಂಧ 4718
– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಜರಿಯದೇ ವಹಿಸಿಕೊಂಡಿರುವ ಹೊಣೆಗಾರಿಕೆ (4)
3.ಜಲ ತರುವಾಗಿನ ತೊಡಕು! (3)
4.ವೇದೋಕ್ತ ವಿಧಿಗಳನ್ನು ಮಾಡಿಸುವವನು (4)
6.ಒಲುಮೆಯಿಂದ ಮಾಡಿದ ಒತ್ತಾಯ (3)
8.ನಿರಾಕಾರಣದಲ್ಲಿರುವ ಉದ್ದೇಶ (3)
9.ಬೆಂದಕ್ಕಿ ಕಾಳು (3)
10.ಹಡಗಿನ ಮುಖ್ಯಾಧಿಕಾರಿ (3)
12.ಸರ ಧರಿಸಿ ಮಾಡಿದ ವ್ಯಾಯಾಮ (4)
14.ಕತ್ತರಿಸುವ ಸಾಧನ (3)
15.ಸೂಕ್ಷ್ಮವಾದ ಎಳೆಯಿದು (4)

ಮೇಲಿಂದ ಕೆಳಕ್ಕೆ
1.ಜಟಿಲತೆಯಿಂದ ಸಂಗ್ರಹಿಸಿದ ನೀರು (2)
2.ಪುರಿಯೊಳಗಡಗಿದ ಶತ್ರು ಕಾಣುತ್ತಿರುವನೇ? (2)
3.ಹಡಗು ಇಲ್ಲಿದೆ (3)
5.ತಾರುಣ್ಯವನ್ನು ಹೊಂದಿದವನು (3)
7.ಮಡಿಕೆಗಳನ್ನೊಳಗೊಂಡಿರುವ ಮಸ್ತಿಷ್ಕ (3)
8.ಆಯಾ ಕಾಲಕ್ಕೆ ತಕ್ಕುದಾದ್ದು (3)
9.ಸಡಿಲವಾದುದನ್ನು ಹೀಗೆನ್ನಿ (3)
11.ನರಿಯಲ್ಲಿ ಉತ್ತಮ ಜಾತಿಯ ಜೇನುತುಪ್ಪ ಸಿಕ್ಕೀತೆ? (3)
13. ಮೂಗಿನ ಆಭರಣ ಉಲ್ಟಾ ಆಗಿದೆ (2)
14.ಮುಖ್ಯ ಬೆಳೆಯ ನಡುವೆ ಬೆಳೆಯುವ ಹುಲ್ಲು (2)



4717ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಕರ್ಣಧಾರ 2.ಮಹಿಷ 4.ಸುದಾಮ 6.ಉಯಿಲು 7.ವಿರಹತಾಪ 10.ಸಾರಣಿ 11.ಧಿಮಾಕು 13.ನಕಾರ 14.ಪರಭಾರೆ
ಮೇಲಿಂದ ಕೆಳಕ್ಕೆ: 1.ಕನಸು 2.ಮಡಿಲು 3.ಷರಬತ್ತು 5.ಮನವಿ 6.ಉದಾಹರಣೆ 8.ಪರಿಧಿ 9.ಪ್ರಹಸನ 10.ಸಾವಿರ 12.ಕುದುರೆ

ಸುಡೊಕು 5104

	7			6			5	
2					5		6	1
		1	2			4		9
		2					4	
4					6			
	1		3		2		7	
	2			1		8		
1			8					4
	8			3	7		1	2

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5103 ಸುಡೊಕು

7	9	2	5	3	1	4	6	8
4	1	5	6	8	7	3	2	9
6	8	3	4	9	2	1	5	7
5	3	4	7	1	9	6	8	2
1	2	6	8	5	4	7	9	3
8	7	9	2	6	3	5	4	1
9	4	7	3	2	5	8	1	6
3	6	1	9	4	8	2	7	5
2	5	8	1	7	6	9	3	4


100 ಗ್ರಾಮಗಳಲ್ಲಿ ಜಲಶಕ್ತಿ ಸಚಿವಾಲಯದಿಂದ ಪ್ರಾಯೋಗಿಕ ಯೋಜನೆ

ನೀರು ಪೂರೈಕೆ ಮೇಲ್ವಿಚಾರಣೆ: ಸೆನ್ಸರ್ ವ್ಯವಸ್ಥೆ

ಪ್ರಜಾವಾಣಿ ವಾರ್ತೆ

ನವದೆಹಲಿ: ದೇಶದ 100 ಗ್ರಾಮಗಳಲ್ಲಿ ನಲ್ಲಿ ನೀರಿನ ಬಳಕೆಯ ಮಾದರಿಗಳನ್ನು ಅರಿಯುವ ನಿಟ್ಟಿನಲ್ಲಿ ಮೇಲ್ವಿಚಾರಣೆ ನಡೆಸಲು ಸೆನ್ಸರ್ ಆಧಾರಿತ ವ್ಯವಸ್ಥೆಯೊಂದನ್ನು ಕೇಂದ್ರ ಜಲಶಕ್ತಿ ಸಚಿವಾಲಯವು ರೂಪಿಸಿದೆ.

ಪ್ರಾಯೋಗಿಕ ಹಂತದಲ್ಲಿನ ಈ ವ್ಯವಸ್ಥೆಯಲ್ಲಿ ಅಂತರ್ಜಾಲ ಆಧರಿತ (ಐಒಟಿ) ಸೆನ್ಸರ್‌ಗಳು ಮತ್ತು ಫ್ಲೋ ಮೀಟರ್‌ಗಳನ್ನು ಓವರ್ ಹೆಡ್ ನೀರಿನ ಟ್ಯಾಂಕುಗಳಲ್ಲಿ ಅಳವಡಿಸಲಾಗುವುದು. ಈ ವ್ಯವಸ್ಥೆಯು ಗ್ರಾಮೀಣ ಪ್ರದೇಶಗಳಲ್ಲಿನ ಮನೆಗಳಲ್ಲಿನ ನೀರಿನ ಪೂರೈಕೆಯನ್ನು



ಮೇಲ್ವಿಚಾರಣೆ ಮಾಡುವುದಲ್ಲದೆ, ನೀರಿನ ಬಳಕೆಯ ಮಾದರಿಗಳನ್ನು ಅರ್ಥಮಾಡಿಕೊಳ್ಳಲು ನೆರವಾಗಲಿದೆ. ಈ ವ್ಯವಸ್ಥೆಯಿಂದ ಪ್ರತಿ ಮನೆಗೂ ಸರಬರಾಜು ಮಾಡುವ ನೀರಿನ ಬೆಲೆಯನ್ನು ನಿರ್ಧರಿಸುವ ಗುರಿಯನ್ನೂ ಹೊಂದಿದೆ.

'ಕರ್ನಾಟಕ, ಆಂಧ್ರಪ್ರದೇಶ, ಮಹಾರಾಷ್ಟ್ರ, ಹರಿಯಾಣ, ಗುಜರಾತ್, ಮಣಿಪುರ, ರಾಜಸ್ಥಾನ, ಉತ್ತರಪ್ರದೇಶ ಮತ್ತು ಲಡಾಖ್‌ನಲ್ಲಿನ 11 ಕೇಂದ್ರಗಳಲ್ಲಿ ಸಚಿವಾಲಯವು ಈಗಾಗಲೇ ಈ ವ್ಯವಸ್ಥೆಯನ್ನು ಪ್ರಾಯೋಗಿಕವಾಗಿ ಸ್ಥಾಪಿಸಿದೆ. ಗ್ರಾಹಕರಿಗೆ ಹೊರೆಯಾಗದಂತೆ ಕೈಗೆಟುಕುವ ದರದಲ್ಲಿ ನೀರು ಪೂರೈಸಲು ಸರಿಯಾದ ದತ್ತಾಂಶವನ್ನು (ಡೇಟಾ) ಅರಿಯಲು ಕೇಂದ್ರ ಸರ್ಕಾರವು ಉತ್ಸುಕವಾಗಿದೆ' ಎಂದು ಜಲಶಕ್ತಿ ಸಚಿವಾಲಯದ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

2021ರ ಡಿಸೆಂಬರ್‌ನೊಳಗೆ ಫ್ಲೋರೈಡ್‌ಯುಕ್ತ ನೀರು ಮತ್ತು ಆರ್ಸೆನಿಕ್ ಮಾಲಿನ್ಯ ಹೆಚ್ಚಿರುವ ಪ್ರದೇಶಗಳಲ್ಲಿ ಸಮುದಾಯ ನೀರು ಶುದ್ಧೀಕರಣ ಘಟಕಗಳ ಸ್ಥಾಪನೆಯನ್ನು ಪೂರ್ಣಗೊಳಿಸುವಂತೆ ಜಲಶಕ್ತಿ ಸಚಿವಾಲಯವು ರಾಜ್ಯಗಳಿಗೆ ಸೂಚನೆ ನೀಡಿದೆ.

ನೀರಿನ ಗುಣಮಟ್ಟದ ಮೇಲೆ ಕಣ್ಗಾವಲಿರಿಸಲು ಹಾಗೂ ಈ ನಿಟ್ಟಿನಲ್ಲಿ ಸ್ಥಳೀಯ ಸಮುದಾಯವನ್ನು ಸಬಲೀಕರಣಗೊಳಿಸಲು ರಾಜ್ಯಗಳು ಪ್ರತಿ ಹಳ್ಳಿಯಲ್ಲಿ ಐವರು ಮಹಿಳೆಯರಿಗೆ ತರಬೇತಿ ನೀಡಿವೆ. ಈ ಮಹಿಳೆಯರು ನೀರಿನ ಗುಣಮಟ್ಟ ಪರೀಕ್ಷಿಸಲು ಮತ್ತು ಆನ್‌ಲೈನ್‌ನಲ್ಲಿ ಅಪ್‌ಲೋಡ್ ಮಾಡಲು ತರಬೇತಿ ಪಡೆದಿದ್ದು, ಗ್ರಾಮ ಪಂಚಾಯಿತಿಗಳು ಪೂರೈಸುವ ಸರಳವಾದ ಕಿಟ್‌ನಲ್ಲಿ ನೀರಿನ ಗುಣಮಟ್ಟದ ಪರೀಕ್ಷೆಯನ್ನು ಮಾಡುತ್ತಾರೆ.

ನೀರಿನ ಗುಣಮಟ್ಟದ ನಿಯಮಿತ ತಪಾಸಣೆಯಿಂದ ನೀರಿನಿಂದ ಬರಬಹುದಾದ ಕಾಯಿಲೆಗಳನ್ನು ತಡೆಗಟ್ಟಬಹುದು. ಕುಡಿಯುವ ನೀರಿನ ಎಲ್ಲ ಮೂಲಗಳನ್ನು ವರ್ಷಕ್ಕೊಮ್ಮೆ ರಾಸಾಯನಿಕ ಮಾಲಿನ್ಯ ಮತ್ತು ಬ್ಯಾಕ್ಟೀರಿಯಾ ಪರೀಕ್ಷೆಯನ್ನು ವರ್ಷಕ್ಕೆ ಎರಡು ಬಾರಿ ಮಾಡಬೇಕು ಎಂದೂ ಸಚಿವಾಲಯವು ರಾಜ್ಯಗಳಿಗೆ ಸಲಹೆ ನೀಡಿದೆ.

2024ರ ವೇಳೆಗೆ ದೇಶದ ಪ್ರತಿ ಮನೆಮನೆಗೂ ಕುಡಿಯುವ ನೀರಿನ ಸಂಪರ್ಕ ಕಲ್ಪಿಸುವ ನಿಟ್ಟಿನಲ್ಲಿ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರವು 2019ರ ಆಗಸ್ಟ್ 15ರಂದು ಜಲಜೀವನ ಮಿಷನ್‌ಗೆ ಚಾಲನೆ ನೀಡಿದೆ.

ತಮಿಳು, ದೇವರ ಭಾಷೆ: ಮದ್ರಾಸ್ ಹೈಕೋರ್ಟ್

ಚೆನ್ನೈ: 'ತಮಿಳು ಭಾಷೆಯನ್ನು ದೇವರ ಭಾಷೆ' ಎಂದು ಕರೆದಿರುವ ಮದ್ರಾಸ್ ಹೈಕೋರ್ಟ್, ದೇಶದಾದ್ಯಂತ ದೇವಸ್ಥಾನಗಳ ಪ್ರತಿಷ್ಠಾಪನೆಯನ್ನು ಕವಿ ಅರುಣಗಿರಿನಾಥರ್, ಆಳ್ವಾರ್ ಮತ್ತು ನಾಯನ್ಮಾರ್‌ಗಳಂತಹ ಸಂತರು ರಚಿಸಿದ ತಮಿಳು ಸ್ತೋತ್ರಗಳೊಂದಿಗೆ ನೆರವೇರಿಸಬೇಕು' ಎಂದು ಹೇಳಿದೆ.

ಸಂತ ಅಮರಾವತಿ ಆತರಂಗರೆ ಕರೂರರ ಅವರ ಹಾಡು ಮತ್ತು ಶೈವ ಮಂತ್ರಗಳೊಂದಿಗೆ (ಸ್ತೋತ್ರಗಳು) ಕರೂರ್ ಜಿಲ್ಲೆಯ ದೇವಸ್ಥಾನದ ಪ್ರತಿಷ್ಠಾಪನೆಯನ್ನು (ಕುಂಭಾಭಿಷೇಕ) ನೆರವೇರಿಸುವಂತೆ ಆಯುಕ್ತರು, ಹಿಂದೂ ಧಾರ್ಮಿಕ ಮತ್ತು ದತ್ತಿ ಸೇರಿದಂತೆ ಸರ್ಕಾರಿ ಅಧಿಕಾರಿಗಳಿಗೆ ನಿರ್ದೇಶನ ನೀಡಬೇಕೆಂದು ಕೋರಿ ಅರ್ಜಿ ಸಲ್ಲಿಸಲಾಗಿತ್ತು.

ಇತ್ತೀಚೆಗೆ ಈ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎನ್. ಕಿರುಬಾಕರನ್ (ಈಗ ನಿವೃತ್ತರಾಗಿದ್ದಾರೆ) ಮತ್ತು ನ್ಯಾಯಮೂರ್ತಿ ಬಿ.ಪುಗಲೇಂಧಿ ಅವರನ್ನೊಳಗೊಂಡ ಪೀಠವು, 'ಕೇವಲ ಒಂದು ದೇವಸ್ಥಾನ ಮಾತ್ರವಲ್ಲದೇ ದೇಶದ ಇತರ ದೇವಸ್ಥಾನಗಳಲ್ಲೂ ತಮಿಳು ಸ್ತೋತ್ರಗಳನ್ನು ಪಠಿಸಬೇಕು. ನಮ್ಮ ದೇಶದಲ್ಲಿ ಕೇವಲ ಸಂಸ್ಕೃತ ದೇವರ ಭಾಷೆ ಎಂದು ನಂಬುವಂತೆ ಮಾಡಲಾಗಿದೆ' ಎಂದು ಹೇಳಿದೆ.

'ವಿವಿಧ ದೇಶ ಮತ್ತು ಧರ್ಮಗಳಲ್ಲಿ ಹಲವು ರೀತಿಯ ನಂಬಿಕೆಗಳು ಅಸ್ತಿತ್ವದಲ್ಲಿ ಇದ್ದವು. ಸಂಸ್ಕೃತಿ ಮತ್ತು ಧರ್ಮಕ್ಕೆ ಅನುಗುಣವಾಗಿ ಆರಾಧನಾ ಸ್ಥಳಗಳು ಕೂಡ ಬದಲಾಗುತ್ತವೆ. ಆ ಸ್ಥಳಗಳಲ್ಲಿ ಸ್ಥಳೀಯ ಭಾಷೆಯನ್ನು ಮಾತ್ರ ಸ್ವರ್ಗೀಯ ಸೇವೆಗಾಗಿ ಬಳಸಲಾಗುತ್ತದೆ. ಆದರೆ ನಮ್ಮ ದೇಶದಲ್ಲಿ ಕೇವಲ ಸಂಸ್ಕೃತ ಭಾಷೆ ಎಂದು ನಿರ್ಧರಿಸಲಾಗಿದ್ದು, ಬೇರೆ ಭಾಷೆ ಇದಕ್ಕೆ ಸಮಾನವಲ್ಲ ಎಂಬ ರೀತಿಯಲ್ಲಿ ಬಿಂಬಿಸಲಾಗಿದೆ' ಎಂದು ಪೀಠ ತಿಳಿಸಿದೆ. 'ಸಂಸ್ಕೃತ ಆಗಾಧ ಪ್ರಾಚೀನ ಸಾಹಿತ್ಯವನ್ನು ಹೊಂದಿರುವ ಭಾಷೆ ಎಂಬುದರಲ್ಲಿ ಯಾವುದೇ ಸಂದೇಹಗಳಿಲ್ಲ. ಆದರೆ ನಮ್ಮ ದೇಶದಲ್ಲಿ ಕೇವಲ ಸಂಸ್ಕೃತ ಭಾಷೆಯಲ್ಲಿ ವೇದಗಳನ್ನು ಪಠಿಸಿದರೆ ಮಾತ್ರ ದೇವರು ಭಕ್ತರ ಪ್ರಾರ್ಥನೆಗಳನ್ನು ಆಲಿಸುತ್ತಾರೆ ಎಂಬ ರೀತಿಯಲ್ಲಿ ಬಿಂಬಿಸಲಾಗಿದೆ' ಎಂದು ಪೀಠ ಹೇಳಿದೆ.

ಕಟ್ಟಡ ಕುಸಿದು ಇಬ್ಬರು ಮಕ್ಕಳ ಸಾವು



ದೆಹಲಿಯ ಸಬ್ಜಿ ಮಂಡಿ ಪ್ರದೇಶದಲ್ಲಿ ಕಟ್ಟಡ ಕುಸಿತ ಸಂಭವಿಸಿದ್ದು, ರಕ್ಷಣಾ ಕಾರ್ಯದಲ್ಲಿ ನಿರತರಾಗಿರುವ ಎನ್‌ಡಿಆರ್‌ಎಫ್ ಮತ್ತು ಪೊಲೀಸ್ ಸಿಬ್ಬಂದಿ –ಪಿಟಿಐ ಚಿತ್ರ

ನವದೆಹಲಿ: ಉತ್ತರ ದೆಹಲಿಯ ಸಬ್ಜಿ ಮಂಡಿ ಪ್ರದೇಶದಲ್ಲಿ ನಾಲ್ಕು ಅಂತಸ್ತಿನ ಕಟ್ಟಡವೊಂದು ಕುಸಿದು ಅಣ್ಣ- ತಮ್ಮ ಮೃತಪಟ್ಟಿದ್ದಾರೆ.

ದುರಂತದಲ್ಲಿ ತೀವ್ರವಾಗಿ ಗಾಯಗೊಂಡಿದ್ದ 7 ಮತ್ತು 12 ವರ್ಷದ ಮಕ್ಕಳನ್ನು ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ ಆಸ್ಪತ್ರೆಯಲ್ಲಿಯೇ ಮೃತಪಟ್ಟಿದ್ದಾರೆ. ಈ ಮಕ್ಕಳು ತಾಯಿಯ ಜೊತೆಗೆ ರಸ್ತೆಯಲ್ಲಿ ನಡೆದು ಹೋಗುತ್ತಿದ್ದಾಗ ಕಟ್ಟಡ ಕುಸಿದು, ಅವಶೇಷಗಳಡಿ ಸಿಲುಕಿಕೊಂಡಿದ್ದರು.

ಅವಶೇಷಗಳಡಿ ಸಿಲುಕಿದ್ದ 72 ವರ್ಷದ ವೃದ್ಧರೊಬ್ಬರನ್ನು ರಕ್ಷಿಸಲಾಗಿದ್ದು, ಆಸ್ಪತ್ರೆಗೆ ಸಾಗಿಸಲಾಗಿದೆ. ಅವರ ತಲೆಗೆ ಪೆಟ್ಟು ಬಿದ್ದಿದೆ. ಇನ್ನು ಮೂರರಿಂದ ನಾಲ್ಕು ಮಂದಿ ಅವಶೇಷಗಳಡಿ ಸಿಲುಕಿರುವ ಶಂಕೆಯಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಕಟ್ಟಡದ ಬಳಿಯೇ ನಿಲ್ಲಿಸಿದ್ದ ಹಲವು ಕಾರುಗಳು ಹಾನಿಗೊಂಡಿವೆ. ಎಂಸಿಡಿ ಮತ್ತು ಎನ್‌ಆರ್‌ಡಿಎಫ್ ತಂಡ ರಕ್ಷಣಾ ಕಾರ್ಯಾಚರಣೆ ನಡೆಸಿತು.

ತಮಿಳುನಾಡಿನಲ್ಲಿ ನೀಟ್ ರದ್ದು: ಮಸೂದೆಗೆ ಅಸ್ತು

ಚೆನ್ನೈ (ಪಿಟಿಐ): ನೀಟ್‘ನಿಂದ ಶಾಶ್ವತವಾಗಿ ವಿನಾಯಿತಿ ಕೋರಿ ಹಾಗೂ 12ನೇ ತರಗತಿ ಅಂಕಗಳನ್ನು ಆಧರಿಸಿ ವೈದ್ಯಕೀಯ ಕೋರ್ಸ್‌ಗಳಿಗೆ ಪ್ರವೇಶ ಕಲ್ಪಿಸುವ ಮಸೂದೆಯನ್ನು ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅವರು ಸೋಮವಾರ ವಿಧಾನಸಭೆಯಲ್ಲಿ ಮಂಡಿಸಿದರು. ಧ್ವನಿಮತದಿಂದ ಮಸೂದೆ ಅಂಗೀಕಾರವಾಯಿತು.

ನೀಟ್‘ ಪರೀಕ್ಷೆಯ ಭಯದಿಂದ ಭಾನುವಾರ ವಿದ್ಯಾರ್ಥಿಯೊಬ್ಬ ಆತ್ಮಹತ್ಯೆ ಮಾಡಿಕೊಂಡ ಘಟನೆ ಸದನದಲ್ಲಿ ಪ್ರತಿಧ್ವನಿಸುತ್ತಿದ್ದಂತೆಯೇ ಮುಖ್ಯಮಂತ್ರಿ ಅವರು ಈ ಮಸೂದೆ ಮಂಡಿಸಿದರು.



ಎಂ.ಕೆ. ಸ್ಟಾಲಿನ್

‘ಡಿಎಂಕೆ ಪಕ್ಷ, ‘ನೀಟ್‘ ಪರೀಕ್ಷೆಯನ್ನು ರದ್ದುಗೊಳಿಸುವುದಾಗಿ ಭರವಸೆ ನೀಡಿತ್ತು. ಇದರಿಂದಾಗಿ ಅನೇಕ ವಿದ್ಯಾರ್ಥಿಗಳು ಪರೀಕ್ಷೆಗೆ ಸಿದ್ಧಗೊಂಡಿರಲಿಲ್ಲ‘ ಎಂದು ಪಳನಿಸ್ವಾಮಿ ಆರೋಪಿಸಿದರು. ಮೃತರ ಕುಟುಂಬಕ್ಕೆ ನಗದು ಪರಿಹಾರ ನೀಡುವ ಜತೆಗೆ, ಸದಸ್ಯರೊಬ್ಬರಿಗೆ ಕೆಲಸ ಕೊಡಬೇಕೆಂದು ಒತ್ತಾಯಿಸಿದರು. ನಂತರ ಕಪ್ಪು ಪಟ್ಟಿ ಧರಿಸಿ ಸದನಕ್ಕೆ ಬಂದಿದ್ದ ವಿರೋಧ ಪಕ್ಷದ ಸದಸ್ಯರು ಪಳನಿಸ್ವಾಮಿ ನೇತೃತ್ವದಲ್ಲಿ ಸಭಾತ್ಯಾಗ ಮಾಡಿದರು.

ವಿರೋಧ ಪಕ್ಷದವರ ಆರೋಪಕ್ಕೆ ಪ್ರತಿಕ್ರಿಯಿಸಿದ ಮುಖ್ಯಮಂತ್ರಿ ಸ್ಟಾಲಿನ್, ‘ಜಯಲಲಿತಾ ಅವರು ಮುಖ್ಯಮಂತ್ರಿಯಾಗಿದ್ದಾಗ ನೀಟ್ ಪರೀಕ್ಷೆ ನಡೆದಿರಲಿಲ್ಲ. ಆದರೆ, ಅವರದೇ ಪಕ್ಷದ ಕೆ.ಪಳನಿಸ್ವಾಮಿ ಮುಖ್ಯಮಂತ್ರಿಯಾಗಿದ್ದಾಗ ತಮಿಳುನಾಡಿನಲ್ಲಿ ಮೊದಲ ಬಾರಿಗೆ ‘ನೀಟ್‘ ಪರೀಕ್ಷೆ ನಡೆದಿತ್ತು. ನೀಟ್ ಪರೀಕ್ಷೆ ವಿಷಯವಾಗಿ ಸಾಯುವಂತಹ ದುಡುಕಿನ ನಿರ್ಧಾರ ತೆಗೆದುಕೊಂಡ ವಿದ್ಯಾರ್ಥಿ ಧನುಷ್ ಎರಡು ಬಾರಿ ಪರೀಕ್ಷೆಯಲ್ಲಿ ಫೇಲ್ ಆದಾಗಲೂ ತಮಿಳುನಾಡಿನಲ್ಲಿ ಎಐಎಡಿಎಂಕೆ ಸರ್ಕಾರವೇ ಅಧಿಕಾರದಲ್ಲಿತ್ತು‘ ಎಂದು ತಿರುಗೇಟು ನೀಡಿದರು.

ಗದ್ದಲದ ನಡುವೆಯೇ ಸ್ಟಾಲಿನ್ ಅವರು, ‘ನೀಟ್‘ ತೆಗೆದು ಹಾಕುವ ಮಸೂದೆಯನ್ನು ಮಂಡಿಸಿದರು. ಸಾಮಾಜಿಕ ನ್ಯಾಯಕ್ಕಾಗಿ ಈ ಮಸೂದೆಯನ್ನು ಎಲ್ಲರೂ ಬೆಂಬಲಿಸುವಂತೆ ಮನವಿ ಮಾಡಿದರು. ಈ ಉಪಕ್ರಮವು ಹಿಂದಿನ ಎಐಎಡಿಎಂಕೆ ಆಡಳಿತದ ಅವಧಿಯಲ್ಲಿ ಕೈಗೊಂಡ ಕ್ರಮಕ್ಕಿಂತ ಭಿನ್ನವಾಗಿದೆ‘ ಎಂದು ಹೇಳಿದರು.

ಈ ಮಸೂದೆಯು ಪಿಯುಸಿ ಅಥವಾ ತತ್ಸಮಾನ ಅರ್ಹತಾ ಪರೀಕ್ಷೆಗಳ ಆಧಾರದಲ್ಲೇ ವಿದ್ಯಾರ್ಥಿಗಳಿಗೆ ವೈದ್ಯಕೀಯ ಕೋರ್ಸ್‌ಗಳ ಪ್ರವೇಶಕ್ಕೆ ಅವಕಾಶ ಕಲ್ಪಿಸುತ್ತದೆ ಹಾಗೂ ಮುಖ್ಯವಾಗಿ ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಸಾಮಾಜಿಕ ನ್ಯಾಯ ಒದಗಿಸಲಿದೆ ಎಂದು ಸರ್ಕಾರ ಹೇಳಿದೆ. ಅಂತಿಮವಾಗಿ ಎಐಎಡಿಎಂಕೆ ಮತ್ತು ಅದರ ಮಿತ್ರ ಪಕ್ಷ ಪಿಎಂಕೆ, ಕಾಂಗ್ರೆಸ್ ಮಸೂದೆಯನ್ನು ಬೆಂಬಲಿಸಿತು. ಬಿಜೆಪಿ ಸದಸ್ಯರು ಸರ್ಕಾರದ ಕ್ರಮ ವಿರೋಧಿಸಿ ಸಭಾತ್ಯಾಗ ಮಾಡಿದರು .

ರಮೇಶ್ ಕುಮಾರ್ ಪ್ರತಿಕ್ರಿಯೆ ಕೇಳಿದ ಸುಪ್ರೀಂ ಕೋರ್ಟ್

ವೆಂಕಟಶಿವಾರೆಡ್ಡಿ ವಿರುದ್ಧದ ಮಾನಹಾನಿ ಮೊಕದ್ದಮೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕ ವಿಧಾನಸಭೆಯ ಮಾಜಿ ಸ್ಪೀಕರ್ ಕೆ.ಆರ್. ರಮೇಶ್ ಕುಮಾರ್ ಅವರಿಗೆ ಸುಪ್ರೀಂ ಕೋರ್ಟ್, ಮಾನನಷ್ಟ ಮೊಕದ್ದಮೆ ಒಂದಕ್ಕೆ ಸಂಬಂಧಿಸಿದಂತೆ ಸೋಮವಾರ ನೋಟಿಸ್ ಜಾರಿ ಮಾಡಿದೆ.

ತಮ್ಮವಿರುದ್ಧಹೂಡಲಾದಮಾನ ನಷ್ಟ ಮೊಕದ್ದಮೆಗೆ ಸಂಬಂಧಿಸಿ ಕರ್ನಾಟಕ ಹೈಕೋರ್ಟ್ ನೀಡಿದ್ದ ತೀರ್ಪು ಪ್ರಶ್ನಿಸಿ ಮಾಜಿ ಶಾಸಕ ಜೆ.ಕೆ. ವೆಂಕಟಶಿವಾರೆಡ್ಡಿ ಅವರು ಸುಪ್ರೀಂಗೆ ಮೇಲ್ಮನವಿ ಸಲ್ಲಿಸಿದ್ದರು.

ಈ ಅರ್ಜಿಗೆ ಸಂಬಂಧಿಸಿದಂತೆ, 4 ವಾರಗಳ ಒಳಗಾಗಿ ಪ್ರತಿಕ್ರಿಯೆ ನೀಡುವಂತೆ ನ್ಯಾಯಮೂರ್ತಿಗಳಾದ ಇಂದಿರಾ ಬ್ಯಾನರ್ಜಿ, ಜೆ.ಕೆ.ಮಹೇಶ್ವರಿ ಅವರ ನ್ಯಾಯಪೀಠವು ರಮೇಶ್ ಕುಮಾರ್ ಅವರಿಗೆ ಸೂಚಿಸಿತು.

2019ರ ಡಿ. 20ರಂದು ವಿಧಾನ ಸೌಧದಲ್ಲಿ ಸುದ್ದಿಗೋಷ್ಠಿ ನಡೆಸಿದ್ದ ಜೆ.ಕೆ. ವೆಂಕಟಶಿವಾರೆಡ್ಡಿ, ರಮೇಶ್ ಕುಮಾರ್ ವಿರುದ್ಧ ಮಾನಹಾನಿಕರವಾದ ಹೇಳಿಕೆಗಳನ್ನು ನೀಡಿದ್ದರು ಎನ್ನಲಾಗಿತ್ತು. ಅಲ್ಲದೇ ರಮೇಶ್ ಕುಮಾರ್ ಅವರು ಆರೋಗ್ಯ ಸಚಿವರಾಗಿದ್ದಾಗ, ಅರಣ್ಯ ಹಾಗೂ ಸರ್ಕಾರಕ್ಕೆ ಸೇರಿದ 120 ಎಕರೆ ಭೂಮಿಯನ್ನು ಒತ್ತುವರಿ ಮಾಡಿಕೊಂಡಿದ್ದು, ಮಹಾಲೇಖಪಾಲರ ವರದಿ ಪ್ರಕಾರ ಇದರಿಂದ ಸರ್ಕಾರಕ್ಕೆ ₹533.22 ಕೋಟಿ ನಷ್ಟವಾಗಿದೆ ಎಂದು ಆರೋಪಿಸಿದ್ದರು.

ವೆಂಕಟಶಿವಾರೆಡ್ಡಿ ವಿರುದ್ಧ ರಮೇಶ್ ಕುಮಾರ್ ಮಾನನಷ್ಟ ಮೊಕದ್ದಮೆ ದಾಖಲಿಸಿದ್ದರು.

ರಮೇಶ್ ಕುಮಾರ್ ವಿರುದ್ಧ ಶ್ರೀನಿವಾಸಪುರ ನ್ಯಾಯಾಲಯದಲ್ಲಿ ದಾಖಲಾದ ಸುಲಿಗೆ, ಬೆದರಿಕೆ ಆರೋಪಗಳನ್ನು ಕೈಬಿಟ್ಟು, ತಮ್ಮ ವಿರುದ್ಧ ರಮೇಶ್ ಕುಮಾರ್ ಹೂಡಿದ ಮಾನನಷ್ಟ ಮೊಕದ್ದಮೆ ಪ್ರಕರಣದ ವಿಚಾರಣೆಯನ್ನು ಮಾತ್ರ ಮುಂದುವರಿಸಿ ಹೈಕೋರ್ಟ್ ನೀಡಿದ ತೀರ್ಪಿನ ಸಿಂಧುತ್ವವನ್ನು ಅರ್ಜಿದಾರರ ಪರ ವಕೀಲ ಸಂಜಯ್ ಎಂ. ನುಲಿ ಪ್ರಶ್ನಿಸಿದ್ದಾರೆ.

ಶ್ರೀನಿವಾಸಪುರ ಶಾಸಕ ರಮೇಶ್ ಕುಮಾರ್ ಅವರ ರಾಜಕೀಯ ಪ್ರತಿಸ್ಪರ್ಧಿಯಾಗಿರುವ ಅರ್ಜಿದಾರ ವೆಂಕಟಶಿವಾರೆಡ್ಡಿ, ‘ರಮೇಶ್‌ಕುಮಾರ್ ವಿರುದ್ಧ ಮಾನಹಾನಿಕರ ಹೇಳಿಕೆ ನೀಡಿದ್ದಕ್ಕೆ ಯಾವುದೇ ದಾಖಲೆ ಇಲ್ಲ’ ಎಂದು ವಾದಿಸಿದ್ದಾರೆ.

ತಮ್ಮ ಆರೋಪವು ಸತ್ಯವಾಗಿದ್ದು, ಸಾರ್ವಜನಿಕ ಹಿತಾಸಕ್ತಿಯಿಂದ ಕೂಡಿದೆ. ಹಾಗಾಗಿ, ಮಾನನಷ್ಟ ಮೊಕದ್ದಮೆ ಹೂಡುವುದರಿಂದ ಅದಕ್ಕೆ ವಿನಾಯಿತಿ ಇದೆ ಎಂದು ವೆಂಕಟಶಿವಾರೆಡ್ಡಿ ಪ್ರತಿಪಾದಿಸಿದ್ದಾರೆ.

‘ಕೋಲಾರ ಅರಣ್ಯ ವಲಯದ ಡಿಸಿಎಫ್ 2006 ಜುಲೈ 15ರಂದು ಹೊರಡಿಸಿದ ಆದೇಶದ ಪ್ರಕಾರ, ರಮೇಶ್ ಕುಮಾರ್ ಅವರು ಅರಣ್ಯ ಭೂಮಿ ಒತ್ತುವರಿ ಮಾಡಿಕೊಂಡಿದ್ದಾಗಿ ಶ್ರೀನಿವಾಸಪುರ ವಲಯದ ಅರಣ್ಯ ಅಪರಾಧ ಪ್ರಕರಣ ಸಂಖ್ಯೆ 59/2006-07 ಹೇಳುತ್ತದೆ. ಹೀಗಾಗಿ, ಅರ್ಜಿದಾರರ ಹೇಳಿಕೆಗಳಲ್ಲಿ ಯಾವುದೇ ಸುಳ್ಳು ಇಲ್ಲ’ ಎಂದು ಅರ್ಜಿಯಲ್ಲಿ ಹೇಳಲಾಗಿದೆ.

ಬಿಹಾರದ ಕೋರ್ಟ್‌ನಲ್ಲಿ ದೂರು

‘ಅಬ್ಬಾ ಜಾನ್’ ಪ್ರಯೋಗ: ಯೋಗಿ ಹೇಳಿಕೆಗೆ ಟೀಕೆ

ಲಖನೌ: ಮುಸ್ಲಿಂ ಸಮುದಾಯ ಹಾಗೂ ಸಮಾಜವಾದಿ ಪಕ್ಷವನ್ನು (ಎಸ್‌ಪಿ) ಉದ್ದೇಶಿಸಿ ‘ಅಬ್ಬಾ ಜಾನ್ ಎಂದು ಕರೆಯಲಾಗುವ ಈ ಜನರು’ ಎಂದು ವಾಗ್ದಾಳಿ ನಡೆಸಿದ್ದ ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರ ವಿರುದ್ಧ ರಾಜಕೀಯ ಪಕ್ಷಗಳು ಟೀಕೆ ವ್ಯಕ್ತಪಡಿಸಿವೆ.



ಕುಶಿನಗರದಲ್ಲಿ ಭಾನುವಾರ ಕಾರ್ಯಕ್ರಮವೊಂದರಲ್ಲಿ ಮಾತನಾಡಿದ್ದ ಆದಿತ್ಯನಾಥ್ ಅವರು, ‘2017ಕ್ಕಿಂತ ಮೊದಲು ಜನರು ಈಗಿನಂತೆ ಪಡಿತರ ಪಡೆಯುತ್ತಿರಲಿಲ್ಲ. ಆಗ ‘ಅಬ್ಬಾ ಜಾನ್’ ಎಂದು ಕರೆಯಲಾಗುತ್ತಿದ್ದ ಜನರು ಈ ಪಡಿತರವನ್ನು ಜೀರ್ಣಿಸಿಕೊಳ್ಳುತ್ತಿದ್ದರು’ ಎಂದಿದ್ದರು.

‘ಕುಶಿನಗರದ ಪಡಿತರ ಧಾನ್ಯವು ಆಗ ನೇಪಾಳ ಮತ್ತು ಬಾಂಗ್ಲಾದೇಶಕ್ಕೆ ರವಾನೆಯಾಗುತ್ತಿತ್ತು. ಇವತ್ತು ಯಾರಾದರೂ ಬಡಜನರ ಪಡಿತರವನ್ನು ಕಬಳಿಸಿದರೆ ಅಂಥವರನ್ನು ಜೈಲಿಗೆ ಕಳುಹಿಸಲಾಗುತ್ತದೆ’ ಎಂದಿದ್ದರು.

ಕೋರ್ಟ್‌ಗೆ ದೂರು

ಮುಜಾಫರ್‌ಪುರ (ಬಿಹಾರ): ‘ಅಬ್ಬಾ ಜಾನ್’ ಪದ ಪ್ರಯೋಗಿಸಿರುವ ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರ ವಿರುದ್ಧ ಸೋಮವಾರ ಬಿಹಾರದ ನ್ಯಾಯಾಲಯಕ್ಕೆ ದೂರು ಸಲ್ಲಿಸಲಾಗಿದೆ.

ಸಾಮಾಜಿಕ ಕಾರ್ಯಕರ್ತೆ ತಮನ್ನಾ ಹಶ್ಮಿ ಎಂಬುವರು ಈ ಅರ್ಜಿ ಸಲ್ಲಿಸಿದ್ದು, ‘ಆದಿತ್ಯನಾಥ್ ಅವರು ಈ ಪದ ಬಳಸುವ ಮೂಲಕ ಮುಸ್ಲಿಂ ಸಮುದಾಯವನ್ನು ಅವಮಾನಿಸಿದ್ದಾರೆ’ ಎಂದು ಆರೋಪಿಸಿದ್ದಾರೆ.

ಉರ್ದುವಿನಲ್ಲಿ ತಂದೆಯನ್ನು ‘ಅಬ್ಬಾ ಜಾನ್’ ಎಂದು ಕರೆಯಲಾಗುತ್ತದೆ.ಆದಿತ್ಯನಾಥ್ ಅವರ ‘ಅಬ್ಬಾ ಜಾನ್’ ಎಂಬ ಪದ ಪ್ರಯೋಗಕ್ಕೆ ನ್ಯಾಷನಲ್ ಕಾನ್ಫರೆನ್ಸ್‌ನ ಉಪಾಧ್ಯಕ್ಷ ಒಮರ್ ಅಬ್ದುಲ್ಲಾ ಟ್ವಿಟರ್‌ನಲ್ಲಿಟೀಕಿಸಿದ್ದರು.

ಅಮೆರಿಕದಲ್ಲೇ ನೆಲೆ: ಸಾವಿರಾರು ಭಾರತೀಯ ಐ.ಟಿ ಉದ್ಯೋಗಿಗಳಿಗೆ ನೆರವು

ಗ್ರೀನ್ ಕಾರ್ಡ್ ಉಳ್ಳವರಿಗೆ ಸಮನ್ವಯ ಪ್ಯಾಕೇಜ್?

ವಾಷಿಂಗ್ಟನ್ (ಪಿಟಿಐ): ಅಮೆರಿಕ ಸಂಸತ್ತಿನಲ್ಲಿ ಮಂಡಿಸಲಾದ ಮಸೂದೆಗೆ ಅಂಗೀಕಾರ ದೊರೆತು ಕಾಯ್ದೆಯಾದರೆ ಅಲ್ಲಿ ಕಾನೂನು ಪ್ರಕಾರ ಶಾಶ್ವತವಾಗಿ ನೆಲೆಸುವ, ಸದ್ಯ ಗ್ರೀನ್ ಕಾರ್ಡ್ ಹೊಂದಿರುವ ಅಸಂಖ್ಯ ಜನರ ಕನಸು ನನಸಾಗಲಿದೆ.

ಗ್ರೀನ್‌ಕಾರ್ಡ್ ಪಡೆದು ವರ್ಷಗಳಿಂದ ನೆಲೆಸಿರುವ ಉದ್ಯೋಗಿಗಳಲ್ಲಿ ಗಮನಾರ್ಹ ಸಂಖ್ಯೆಯ ಭಾರತೀಯರಿದ್ದಾರೆ. ನಿಗದಿತ ಶುಲ್ಕ ಪಾವತಿಸಿ ಶಾಶ್ವತವಾಗಿ ನೆಲೆಸಲು ಅವಕಾಶ ಕಲ್ಪಿಸುವ ಸಮನ್ವಯ ಪ್ಯಾಕೇಜ್ ಅನ್ನು ಉದ್ದೇಶಿತ ಮಸೂದೆ ಒಳಗೊಂಡಿದೆ.

ಇದು ಕಾಯ್ದೆಯಾಗಿ



ಜಾರಿಯಾದರೆ ಸದ್ಯ ಗ್ರೀನ್ ಕಾರ್ಡ್ ಆಧಾರದಲ್ಲಿ ನೆಲೆಯೂರಿರುವ ಸಾವಿರಾರು ಭಾರತೀಯ ಐ.ಟಿ ಉದ್ಯೋಗಿಗಳಿಗೆ ನೆರವಾಗಲಿದೆ.

ಶಾಶ್ವತ ನಿವಾಸಿ ಕಾರ್ಡ್ ಎನ್ನಲಾಗುವ ಗ್ರೀನ್ ಕಾರ್ಡ್, ವಲಸಿಗ ವ್ಯಕ್ತಿಗೆ ಅಮೆರಿಕದಲ್ಲಿ ಶಾಶ್ವತವಾಗಿ ನೆಲೆಸುವ ಹಕ್ಕು ಒದಗಿಸಲಿದೆ. ಸಂಸತ್ತಿನ ನ್ಯಾಯಾಂಗ ಸಮಿತಿ ಪ್ರಕಾರ, ಎರಡು ವರ್ಷಕ್ಕೂ ಹೆಚ್ಚು ಅವಧಿಯಿಂದ ನೆಲೆಸಿರುವ ಉದ್ಯೋಗ ಆಧರಿತ ವಲಸಿಗ ಅಭ್ಯರ್ಥಿಯು 5 ಸಾವಿರ ಡಾಲರ್ ಶುಲ್ಕ (ಸುಮಾರು ₹ 3.68 ಲಕ್ಷ) ಪಾವತಿಸುವ ಮೂಲಕ ಅನಿಯಮಿತ ಅವಧಿಗೆ ಶಾಶ್ವತವಾಗಿ ನೆಲೆಸುವ ಹಕ್ಕು ಪಡೆಯಲು ಅವಕಾಶ ಕಲ್ಪಿಸಲಾಗುತ್ತದೆ.

ಇಬಿ–5 ವರ್ಗದ (ವಲಸಿಗ ಹೂಡಿಕೆದಾರ) ಅರ್ಜಿದಾರರಿಗೆ ಈ ಶುಲ್ಕದ ಮೊತ್ತ 50 ಸಾವಿರ ಡಾಲರ್ (ಸುಮಾರು ₹36.88 ಲಕ್ಷ) ಆಗಿರುತ್ತದೆ. ಅಮೆರಿಕ ನಾಗರಿಕ ಪ್ರಾಯೋಜಿಸುವ ಕುಟುಂಬ ಆಧರಿತ ವಲಸಿಗ ಅರ್ಜಿದಾರರಿಗೆ, ಗ್ರೀನ್ ಕಾರ್ಡ್ ಪಡೆಯಲು ಪಾವತಿಸಬೇಕಾದ ಶುಲ್ಕ 2500 ಡಾಲರ್‌ಗಳು (ಸುಮಾರು ₹ 1.84 ಲಕ್ಷ) ಎಂದು ಫೋರ್ಬ್ಸ್ ನಿಯತಕಾಲಿಕವು ವರದಿ ಮಾಡಿದೆ.


ನಿಗದಿತ ಅವಧಿ ಎರಡು ವರ್ಷವನ್ನು ಮೀರದಿರುವ ಆದರೆ, ಅಮೆರಿಕದಲ್ಲಿ ಅವರ ಉಪಸ್ಥಿತಿಯು ಅಗತ್ಯ ಎನ್ನಲಾದ ವ್ಯಕ್ತಿಗೆ ಶುಲ್ಕ 1500 ಡಾಲರ್ (ಸುಮಾರು ₹ 1.10 ಲಕ್ಷ) ಆಗಿರುತ್ತದೆ ಎಂದು ಸಮಿತಿಯು ತಿಳಿಸಿದೆ. ಸಂಸ್ಕರಣಾ ಶುಲ್ಕ ಹೊರತುಪಡಿಸಿ ಈ ಶುಲ್ಕವನ್ನು ಅರ್ಜಿದಾರರು ಪಾವತಿಸಬೇಕಾಗುತ್ತದೆ.

ಎಎಪಿ ಮುಖಂಡ ಪಂಕಜ್‌ಗೆ ನೋಟಿಸ್

ನವದೆಹಲಿ: ಹಣ ಅಕ್ರಮ ವರ್ಗಾವಣೆ ಪ್ರಕರಣ ಸಂಬಂಧ ಆಮ್ ಅದ್ಮಿ ಪಕ್ಷದ (ಎಎಪಿ) ರಾಷ್ಟ್ರೀಯ ಕಾರ್ಯದರ್ಶಿ ಪಂಕಜ್ ಗುಪ್ತಾ ಅವರಿಗೆ ಜಾರಿ ನಿರ್ದೇಶನಾಲಯ (ಇ.ಡಿ) ನೋಟಿಸ್ ಜಾರಿ ಮಾಡಿದೆ. ಎಎಪಿ ಇದನ್ನು ‘ಬಿಜೆಪಿಯ ಮುಂಚೂಣಿ ಸಂಘಟನೆಯಿಂದ ಬಂದ ‘ಪ್ರೇಮಪತ್ರ’ ಎಂದು ಬಣ್ಣಿಸಿದೆ.

ಚುನಾವಣೆಯಲ್ಲಿ ಸೋಲಿಸಲು ವಿಫಲವಾದಬಿಜೆಪಿ,ಇಂತಹಕ್ರಮದಿಂದವ್ಯಕ್ತಿತ್ವಕ್ಕೆ ಕುಂದು ತರುತ್ತಿದೆ ಎಂದು ಎಎಪಿ ಆರೋಪಿಸಿದೆ. ಅಲ್ಲದೆ, ‘ಮುಂದಿನ ವರ್ಷ ಚುನಾವಣೆ ನಡೆಯುವ ಪಂಜಾಬ್, ಉತ್ತರಾಖಂಡ, ಉತ್ತರಪ್ರದೇಶದಲ್ಲಿ ಎಎಪಿ ಜನಪ್ರಿಯತೆಯು ಬಿಜೆಪಿಯನ್ನು ಕುಗ್ಗಿಸಿರುವುದಕ್ಕೆ ಇದು ನಿದರ್ಶನ’ ಎಂದು ಹೇಳಿದೆ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,369
ಇಂದಿನ ಅಂತ್ಯ	17,355
▼	14
ದಿನದ ಕನಿಷ್ಠ	17,269

ವಿನಿಮಯ ದರ

$ ಡಾಲರ್	73.68
£ ಪೌಂಡ್	101.84
€ ಯುರೊ	86.87
¥ ಯೆನ್ (100ಕ್ಕೆ)	67

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100 ಮೊಟ್ಟೆಗೆ	₹445
12 ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹447

ಎನ್‌ಸಿಎಲ್‌ಎಟಿ: ಹಂಗಾಮಿ ಅಧ್ಯಕ್ಷರ ನೇಮಕ

ನವದೆಹಲಿ (ಪಿಟಿಐ): ರಾಷ್ಟ್ರೀಯ ಕಂಪನಿ ಕಾನೂನು ಮೇಲ್ಮನವಿ ನ್ಯಾಯಮಂಡಳಿಯ (ಎನ್‌ಸಿಎಲ್‌ಎಟಿ) ಹಂಗಾಮಿ ಅಧ್ಯಕ್ಷರನ್ನಾಗಿ ನ್ಯಾಯಮೂರ್ತಿ ಎಂ. ವೇಣುಗೋಪಾಲ್ ಅವರನ್ನು ನೇಮಕ ಮಾಡಲಾಗಿದೆ. ನ್ಯಾಯಮಂಡಳಿಗೆ ಪೂರ್ಣಾವಧಿ ಅಧ್ಯಕ್ಷರು ಇಲ್ಲದೆ ಒಂದೂವರೆ ವರ್ಷ ಸಂದಿದೆ.

ಎನ್‌ಸಿಎಲ್‌ಎಟಿಗೆ ಹಂಗಾಮಿ ಅಧ್ಯಕ್ಷರನ್ನು ನೇಮಕ ಮಾಡಿರುವುದು ಇದು ಸತತ ಮೂರನೆಯ ಬಾರಿ. 2020ರ ಮಾರ್ಚ್ 14ರಂದು ನ್ಯಾಯಮೂರ್ತಿ ಎಸ್.ಜೆ. ಮುಖೋಪಾಧ್ಯಾಯ ಅವರು ಅಧ್ಯಕ್ಷ ಸ್ಥಾನದಿಂದ ನಿವೃತ್ತ ಆದ ನಂತರದಲ್ಲಿ ನ್ಯಾಯಮಂಡಳಿಯು ಪೂರ್ಣಾವಧಿ ಅಧ್ಯಕ್ಷರನ್ನು ಕಂಡಿಲ್ಲ.

ಅರೆ ನ್ಯಾಯಾಂಗದ ಅಧಿಕಾರ ಹೊಂದಿರುವ ನ್ಯಾಯಮಂಡಳಿಗಳಿಗೆ ಅಧಿಕಾರಿಗಳನ್ನು ನೇಮಕ ಮಾಡದೆ ಇರುವ ಮೂಲಕ ಕೇಂದ್ರವು, ನ್ಯಾಯಮಂಡಳಿಗಳನ್ನು ದುರ್ಬಲಗೊಳಿಸುತ್ತಿದೆ ಎಂದು ಸುಪ್ರೀಂ ಕೋರ್ಟ್ ಕಳೆದ ವಾರ ಕಳವಳ ವ್ಯಕ್ತಪಡಿಸಿತ್ತು.

ನ್ಯಾಯಮೂರ್ತಿ ವೇಣುಗೋಪಾಲ್ ಅವರನ್ನು ಸೆಪ್ಟೆಂಬರ್ 11ರಿಂದ ಜಾರಿಗೆ ಬರುವಂತೆ ನ್ಯಾಯಮಂಡಳಿಯ ಹಂಗಾಮಿ ಅಧ್ಯಕ್ಷರನ್ನಾಗಿ ನೇಮಿಸಲಾಗಿದೆ. ಅವರು ಮದ್ರಾಸ್ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ.

ಖಾದ್ಯ ತೈಲ ಮುಂಬೈ



(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1560 (1565)
ಸೋಯಾ (ರಿಫೈನ್ಡ್)	₹1360(1370)
ಸೂರ್ಯಕಾಂತಿ(ರಿಫೈನ್ಡ್)	₹1400(1415)
ಪಾಮೋಲಿನ್	₹1225 (1220)

ಆಹಾರ ವಸ್ತುಗಳ ಬೆಲೆ ಕಡಿಮೆಯಾದ ಪರಿಣಾಮ

ತುಸು ತಗ್ಗಿದ ಚಿಲ್ಲರೆ ಹಣದುಬ್ಬರ

ನವದೆಹಲಿ (ಪಿಟಿಐ): ಆಹಾರ ವಸ್ತುಗಳ ಬೆಲೆ ತಗ್ಗಿದ ಕಾರಣದಿಂದಾಗಿ ಚಿಲ್ಲರೆ ಹಣದುಬ್ಬರ ಪ್ರಮಾಣವು ಆಗಸ್ಟ್ ತಿಂಗಳಿನಲ್ಲಿ ಶೇಕಡ 5.3ಕ್ಕೆ ಇಳಿಕೆ ಕಂಡಿದೆ. ಗ್ರಾಹಕ ಬೆಲೆ ಸೂಚ್ಯಂಕ (ಸಿಪಿಐ) ಆಧಾರಿತ ಚಿಲ್ಲರೆ ಹಣದುಬ್ಬರ ಪ್ರಮಾಣವು ಜುಲೈನಲ್ಲಿ ಶೇ 5.59ರಷ್ಟು ಇತ್ತು.

ಹಿಂದಿನ ವರ್ಷದ ಆಗಸ್ಟ್‌ನಲ್ಲಿ ಇದು ಶೇ 6.69ರ ಮಟ್ಟದಲ್ಲಿತ್ತು. ರಾಷ್ಟ್ರೀಯ ಸಾಂಖ್ಯಿಕ ಕಚೇರಿ (ಎನ್‌ಎಸ್‌ಒ) ಬಿಡುಗಡೆ ಮಾಡಿರುವ ಅಂಕಿ-



ಅಂಶಗಳ ಪ್ರಕಾರ, ಆಗಸ್ಟ್‌ನಲ್ಲಿ ಆಹಾರ ವಸ್ತುಗಳ ಹಣದುಬ್ಬರ ಪ್ರಮಾಣವು ಶೇ 3.11ರಷ್ಟು ಇತ್ತು. ಇದು ಜುಲೈನಲ್ಲಿ ಶೇ 3.96 ಆಗಿತ್ತು.

ಆಗಸ್ಟ್‌ನಲ್ಲಿ ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಪ್ರಮುಖ ಬಡ್ಡಿ ದರಗಳಲ್ಲಿ ಯಾವುದೇ ಬದಲಾವಣೆ ಮಾಡದಿರಲು ತೀರ್ಮಾನಿಸಿತ್ತು. ಆರ್‌ಬಿಐ ಬಡ್ಡಿ ದರದ ವಿಚಾರದಲ್ಲಿ ತೀರ್ಮಾನ ಕೈಗೊಳ್ಳುವಾಗ ಸಿಪಿಐ ಮೇಲೆ ಗಮನ ನೀಡುತ್ತದೆ.

2021-22ರಲ್ಲಿ ಹಣದುಬ್ಬರ ಪ್ರಮಾಣವು ಶೇ 5.7ರಷ್ಟು ಇರುತ್ತದೆ ಎಂದು ಆರ್‌ಬಿಐ ಅಂದಾಜು ಮಾಡಿದೆ.

ಷೇರುಪೇಟೆ ವಹಿವಾಟು ಇಳಿಕೆ

ಮುಂಬೈ (ಪಿಟಿಐ): ದೇಶದ ಷೇರುಪೇಟೆಗಳು ಸೋಮವಾರದ ವಹಿವಾಟನ್ನು ನಕಾರಾತ್ಮಕವಾಗಿ ಅಂತ್ಯಗೊಳಿಸಿವೆ.

ಕಡಿಮೆ ಬೆಲೆಯ ಸ್ಮಾರ್ಟ್‌ಫೋನ್ ಬಿಡುಗಡೆಯನ್ನು ಜಿಯೊ ಕಂಪನಿಯು ದೀಪಾವಳಿಗೆ ಮುಂದೂಡಿರುವುದರಿಂದ ರಿಲಯನ್ಸ್ ಇಂಡಸ್ಟ್ರೀಸ್‌ನ ಷೇರುಗಳು ಮಾರಾಟದ ಒತ್ತಡಕ್ಕೆ ಒಳಗಾದವು. ಇದು ಸೂಚ್ಯಂಕಗಳ ಇಳಿಕೆಗೆ ಕಾರಣವಾಯಿತು ಎಂದು ತಜ್ಞರು ಹೇಳಿದ್ದಾರೆ.

ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ 127 ಅಂಶ ಇಳಿಕೆ ಕಂಡು, 58,177 ಅಂಶಗಳಲ್ಲಿ ವಹಿವಾಟು ಅಂತ್ಯಗೊಂಡಿದೆ. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 14 ಅಂಶ ಇಳಿಕೆಯಾಗಿ 17,355ಕ್ಕೆ ತಲುಪಿತು.

ರೂಪಾಯಿ ಇಳಿಕೆ: ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯವು 18 ಪೈಸೆ ಇಳಿಕೆ ಕಂಡಿದ್ದು ಒಂದು ಡಾಲರ್‌ಗೆ ₹ 73.68ರಂತೆ ವಿನಿಮಯಗೊಂಡಿತು.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	600-650
ನಡುಗೋಲು	700-750
ರಾಶಿ	800-850
ರಾಶಿ ಉತ್ತಮ	900-950
ಜರಡಿ	1000-1050
ಹೆರಕಿದ್ದು	1200-1300
ಹಸಿರು ಸಾಧಾರಣ	800-850
ಹಸಿರು ಉತ್ತಮ	1000-1050
ಹಸಿರು ಅತಿ ಉತ್ತಮ	1300-1400
ಕಾಳು ಮೆಣಸು	390
ಅಡಿಕೆ	
ಬಂಟ್ವಾಳ	
ಕೋಕ	10000-22500
ಹೊಸತು	22500-48000
ಹಳತು	42500-50500
ಚಿತ್ರದುರ್ಗ	
ಅಪಿ	54229-54669
ಬೆಟ್ಟೆ	39619-40099
ಕೆಂಪುಗೋಟು	33109-33510
ರಾಶಿ	53739-54189
ಕುಮಟ	
ಚಿಪ್ಪು	35189-39019
ಕೋಕ	23099-37089
ಫ್ಯಾಕ್ಟರಿ	16869-23469
ಹಳೆಚಾಲಿ	40191-44169
ಹೊಸಚಾಲಿ	43169-45719
ಪುತ್ತೂರು	
ಕೋಕ	10500-26000
ಹೊಸತು	33500-48000
ಶಿರಸಿ	
ಬೆಟ್ಟೆ	34199-50199
ಬಿಳಿಗೋಟು	32011-40199
ಚಾಲಿ	41369-45558
ರಾಶಿ	45709-51499
ಯಲ್ಲಾಪುರ	
ಬಿಳಿಗೋಟು	36109-38666
ಚಾಲಿ	41486-43899
ಕೋಕ	28061-35318
ಕೆಂಪುಗೋಟು	32062-35018
ರಾಶಿ	48089-51969
ತಟ್ಟಿಬೆಟ್ಟೆ	41690-47619
ಶಿವಮೊಗ್ಗ ಎಪಿಎಂಸಿ	
ಬೆಟ್ಟೆ	46519-55809
ರಾಶಿ	48869-55039
ಸರಕು	46166-75200
ಗೊರಬಲು	17009-43569
ನ್ಯೂ ವೆರೈಟಿ	45199-55039
ಸಾಗರ	
ಬಿಳಿಗೋಟು	29099-38499
ಕೋಕ	15690-40001
ಚಾಲಿ	41899-45199
ಕೆಂಪುಗೋಟು	30600-40670
ರಾಶಿ	35889-55499
ಸಿಪ್ಪೆಗೋಟು	23499-25452
ರಾಮನಗರ ರೇಷ್ಮೆ ಧಾರಣೆ	
ಮಿಶ್ರತಳಿ (ಸಿ.ಬಿ)	221-469
ದ್ವಿತಳಿ (ಬಿ.ವಿ)	254-512

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	13850	---	12900	--- ಸೆಂಟ್ಸ್
ಎಸಿ	6300	---	5150	
ಆರ್‌ಪಿ	6150	---	6150	ಲಂಡನ್
ಆರ್‌ಸಿ	3535	---	3600	--- ಡಾಲರ್ಸ್

ಮುಂಬೈ ಧಾರಣೆ

ಶೇಂಗಾ

13-9-2021

ಜಾವಾ 70/80(ಹೊಸ)	10300-10350
ಜಾವಾ 80/90(ಹೊಸ)	9500-9550
ದಪ್ಪ ಮಧ್ಯಪ್ರದೇಶ(ಹೊಸ)	10250-10300
ದಪ್ಪ ಗುಜರಾತ್(ಹೊಸ)	9400-9500

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1570 (1575)
ಒಂದು ವಾರದ ಡೆಲಿವರಿ	1565 (1570)
ಸೋಯಾ ಕಚ್ಚಾ	1315 (1330)
ಪಾಮ್ ವಾರದ ಡೆಲಿವರಿ	1223 (1218)
ಸೂರ್ಯಕಾಂತಿ ಎಣ್ಣೆ ಕಚ್ಚಾ	1330 (1355)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10 ಗ್ರಾಂ
46,850 (46,770)
ಬೆಳ್ಳಿ ಕೆ.ಜಿ 62,775 (63,300)

ಆವರಣದಲ್ಲಿ ಶನಿವಾರದ ಧಾರಣೆ

ದೆಹಲಿ–ಮುಂಬೈ ಮಾರ್ಗದಲ್ಲಿ ಮೊದಲ ಸಂಚಾರ: ಜಲನ್ ಕಲ್‌ರಾಕ್

ಜೆಟ್ ಏರ್‌ವೇಸ್ ಸೇವೆ 2022ರಲ್ಲಿ ಪುನರಾರಂಭ

ನವದೆಹಲಿ (ಪಿಟಿಐ): ಜೆಟ್ ಏರ್‌ವೇಸ್ ವಿಮಾನಯಾನ ಕಂಪನಿಯು 2022ರ ಮೊದಲ ತ್ರೈಮಾಸಿಕದಲ್ಲಿ ದೇಶಿ ಕಾರ್ಯಾಚರಣೆಯನ್ನು ಪುನರಾರಂಭಿಸಲಿದೆ. ಮೂರು ಅಥವಾ ನಾಲ್ಕನೇ ತ್ರೈಮಾಸಿಕದ ವೇಳೆಗೆ ಅಂತರರಾಷ್ಟ್ರೀಯ ಯಾನ ನಡೆಸಲಿದೆ ಎಂದು ಕಂಪನಿಯ ಪುನಶ್ಚೇತನಕ್ಕೆ ಮುಂದಾಗಿರುವ ಜಲನ್ ಕಲ್‌ರಾಕ್ ಒಕ್ಕೂಟವು ಸೋಮವಾರ ಹೇಳಿದೆ.

ಜೆಟ್ ಏರ್‌ವೇಸ್‌ನ ಮೊದಲ ವಿಮಾನವು ದೆಹಲಿ-ಮುಂಬೈ ಮಾರ್ಗದಲ್ಲಿ ಸಂಚಾರ ಆರಂಭಿಸಲಿದೆ. ಸಂಸ್ಥೆಯ ಮುಖ್ಯ ಕಚೇರಿಯು ಮುಂಬೈ ಬದಲಿಗೆ ದೆಹಲಿಯಲ್ಲಿ ಇರಲಿದೆ ಎಂದು ಅದು ತಿಳಿಸಿದೆ.

ಆರ್ಥಿಕವಾಗಿ ದಿವಾಳಿ ಆಗಿರುವ ಜೆಟ್ ಏರ್‌ವೇಸ್ ಕಂಪನಿಯ ಪುನಶ್ಚೇತನಕ್ಕೆ ಜಲನ್ ಕಲ್‌ರಾಕ್ ಒಕ್ಕೂಟ ಸಲ್ಲಿಸಿದ್ದ ಪ್ರಸ್ತಾವನೆಗೆ ರಾಷ್ಟ್ರೀಯ ಕಂಪನಿ ಕಾನೂನು ನ್ಯಾಯಮಂಡಳಿ (ಎನ್‌ಸಿಎಲ್‌ಟಿ) ಜೂನ್‌ನಲ್ಲಿ ಒಪ್ಪಿಗೆ ನೀಡಿತ್ತು.



ಮುಖ್ಯಾಂಶಗಳು

- 2019ರಲ್ಲಿ ಕಾರ್ಯಾಚರಣೆ ಸ್ಥಗಿತಗೊಳಿಸಿದ್ದ ಕಂಪನಿ
- ಮೂರು ವರ್ಷಗಳಲ್ಲಿ 50ಕ್ಕೂ ಹೆಚ್ಚು ವಿಮಾನ ಹೊಂದುವ ಯೋಜನೆ
- 150ಕ್ಕೂ ಹೆಚ್ಚು ಪೂರ್ಣಾವಧಿ ಸಿಬ್ಬಂದಿ ನೇಮಕ

‘2022 ಮೊದಲ ತ್ರೈಮಾಸಿಕದಲ್ಲಿ ದೇಶಿ ಕಾರ್ಯಾಚರಣೆ ಹಾಗೂ ಮೂರು ಅಥವಾ ನಾಲ್ಕನೇ ತ್ರೈಮಾಸಿಕದ ವೇಳೆಗೆ ಅಂತರರಾಷ್ಟ್ರೀಯ ಕಾರ್ಯಾಚರಣೆಯನ್ನು ಆರಂಭಿಸಲು ಜೆಟ್ ಏರ್‌ವೇಸ್ 2.0 ಉದ್ದೇಶಿಸಿದೆ’ ಎಂದು ಒಕ್ಕೂಟದ ಪ್ರಮುಖ ಸದಸ್ಯ ಆಗಿರುವ ಮುರಾರಿಲಾಲ್ ಜಲನ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

‘ಮೂರು ವರ್ಷಗಳಲ್ಲಿ 50ಕ್ಕೂ ಹೆಚ್ಚು ಹಾಗೂ ಐದು ವರ್ಷಗಳಲ್ಲಿ 100ಕ್ಕೂ ಹೆಚ್ಚಿನ ವಿಮಾನಗಳನ್ನು ಹೊಂದುವುದು ನಮ್ಮ ಯೋಜನೆಯಾಗಿದೆ. ಇದು ಒಕ್ಕೂಟದ ಅಲ್ಪಾವಧಿ ಮತ್ತು ದೀರ್ಘಾವಧಿಯ ವ್ಯಾಪಾರ ಯೋಜನೆಗೆ ಹೆಚ್ಚು ಹೊಂದಿಕೊಳ್ಳುತ್ತದೆ’ ಎಂದೂ ಅವರು ಹೇಳಿದ್ದಾರೆ.

‘ಎರಡು ವರ್ಷಗಳಿಗಿಂತ ಹೆಚ್ಚು ಕಾಲ ಸೇವೆ ಸ್ಥಗಿತಗೊಳಿಸಿದ್ದ ಕಂಪನಿಯು ವಿಮಾನಯಾನ ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ಪುನಶ್ಚೇತನಗೊಳ್ಳುತ್ತಿದೆ ಮತ್ತು ಈ ಐತಿಹಾಸಿಕ ಪ್ರಯಾಣದ ಭಾಗವಾಗುವುದನ್ನು ನಾವು ಎದುರು ನೋಡುತ್ತಿದ್ದೇವೆ’ ಎಂದು ಅವರು ಹೇಳಿದ್ದಾರೆ. ಆರ್ಥಿಕ ಮುಗ್ಗಟ್ಟಿನಿಂದಾಗಿ ಕಂಪನಿಯು 2019ರ ಏಪ್ರಿಲ್‌ನಲ್ಲಿ ಸೇವೆ ಸ್ಥಗಿತಗೊಳಿಸಿತ್ತು.

ಕಂಪನಿಯು ಈಗಾಗಲೇ 150ಕ್ಕೂ ಹೆಚ್ಚು ಪೂರ್ಣಾವಧಿ ಸಿಬ್ಬಂದಿಯನ್ನು ನೇಮಿಸಿಕೊಂಡಿದೆ. 2021-22ನೇ ಹಣಕಾಸು ವರ್ಷದಲ್ಲಿ ಸಾವಿರಕ್ಕೂ ಅಧಿಕ ಸಿಬ್ಬಂದಿಯನ್ನು ನೇಮಿಸಿಕೊಳ್ಳಲಾಗುವುದು ಎಂದು ಕ್ಯಾಪ್ಟನ್ ಸುಧೀರ್ ಗೌರ್ ಅವರು ತಿಳಿಸಿದ್ದಾರೆ.

ಷೇರು ಮೌಲ್ಯ ಶೇ 4.98 ರಷ್ಟು ಹೆಚ್ಚಳ

ಜೆಟ್ ಏರ್‌ವೇಸ್ ಕಾರ್ಯಾಚರಣೆ ಪುನರಾರಂಭ ಆಗಲಿರುವ ಸುದ್ದಿಯಿಂದಾಗಿ ಕಂಪನಿಯ ಷೇರುಗಳ ಮೌಲ್ಯವು ಸೋಮವಾರದ ವಹಿವಾಟಿನಲ್ಲಿ ಗರಿಷ್ಠ ಶೇಕಡ 4.98ರಷ್ಟು ಏರಿಕೆ ಕಂಡಿತು. ಬಿಎಸ್‌ಇನಲ್ಲಿ ಪ್ರತಿ ಷೇರಿನ ಬೆಲೆ ಶೇ 4.97ರಷ್ಟು ಹೆಚ್ಚಾಗಿ ಒಂದು ಷೇರಿನ ಬೆಲೆ ₹ 83.50ಕ್ಕೆ ತಲುಪಿತು. ಎನ್‌ಎಸ್‌ಇನಲ್ಲಿ ಶೇ 4.98ರಷ್ಟು ಹೆಚ್ಚಾಗಿ ₹ 84.40ಕ್ಕೆ ತಲುಪಿತು.

ಪಿ.ಎಫ್‌ಗೆ ಆಧಾರ್: ನಿರ್ದಿಷ್ಟ ಕೈಗಾರಿಕೆಗಳಿಗೆ ಡಿ. 31ರವರೆಗೆ ಅವಕಾಶ

ನವದೆಹಲಿ (ಪಿಟಿಐ): ಪಿ.ಎಫ್. ಖಾತೆಗೆ ಆಧಾರ್ ಸಂಖ್ಯೆ ಜೋಡಣೆ ಕಡ್ಡಾಯಗೊಳಿಸುವ ಯೋಜನೆಯನ್ನು ಕಾರ್ಮಿಕರ ಭವಿಷ್ಯ ನಿಧಿ ಸಂಘಟನೆಯು (ಇಪಿಎಫ್‌ಒ) ಬೀಡಿ ಕಾರ್ಖಾನೆ, ಕಟ್ಟಡ ಮತ್ತು ನಿರ್ಮಾಣ, ತೋಟಗಾರಿಕಾ ಉದ್ಯಮಗಳ ಕಾರ್ಮಿಕರಿಗೆ ಡಿಸೆಂಬರ್ 31ರವರೆಗೆ ಮುಂದೂಡಿದೆ.

ಇದರಿಂದಾಗಿ ಕೆಲವು ಉದ್ಯೋಗದಾತರಿಗೆ ತಮ್ಮ ಉದ್ಯೋಗಿಗಳ ಆಧಾರ್ ಸಂಖ್ಯೆಯನ್ನು ಪಿ.ಎಫ್. ಖಾತೆಗೆ ಜೋಡಿಸಲು ಹೆಚ್ಚಿನ ಕಾಲಾವಕಾಶ ಸಿಕ್ಕಿದೆ. ಈಶಾನ್ಯ ರಾಜ್ಯಗಳಲ್ಲಿನ ಉದ್ಯೋಗದಾತರಿಗೆ ಕೂಡ ಆಧಾರ್ ಜೋಡಣೆಗೆ ಡಿಸೆಂಬರ್ 31ರವರೆಗೆ ಅವಧಿ ವಿಸ್ತರಿಸಲಾಗಿದೆ.

ಈ ಹಿಂದೆ ಸಂಘಟನೆಯು ಎಲ್ಲಾ ಚಂದಾದಾರರಿಗೂ ಪಿ.ಎಫ್ ಖಾತೆಗೆ ಆಧಾರ್ ಜೋಡಣೆ ಕಡ್ಡಾಯ ಮಾಡುವುದನ್ನು ಸೆ. 1ರವರೆಗೆ ವಿಸ್ತರಿಸಿತ್ತು. ಇದೀಗ ಎರಡನೇ ಬಾರಿಗೆ ಕೆಲವು ಪ್ರದೇಶಗಳು ಮತ್ತು ನಿರ್ದಿಷ್ಟ ಕೈಗಾರಿಕೆಗಳಿಗೆ ಗಡುವು ವಿಸ್ತರಣೆ ಮಾಡಿದೆ.

‘ದೇಗುಲ ರಕ್ಷಣೆಗೆ ಸಿ.ಎಂ ಭರವಸೆ’

ಪ್ರಜಾವಾಣಿ ವಾರ್ತೆ

ಮೈಸೂರು: ‘ದೇಗುಲ ರಕ್ಷಣೆಗೆ ಸೂಕ್ತ ಕ್ರಮ ಕೈಗೊಂಡು ಶೀಘ್ರದಲ್ಲೇ ಆದೇಶ ಹೊರಡಿಸಲಾಗುವುದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭರವಸೆ ನೀಡಿದ್ದಾರೆ’ ಎಂದು ಸಂಸದ ಪ್ರತಾಪಸಿಂಹ ತಿಳಿಸಿದರು.

‘ಮುಖ್ಯಮಂತ್ರಿಯೇ ಕರೆ ಮಾಡಿ ದೇಗುಲದ ಕುರಿತು ಮಾತನಾಡಿದರು. ಸಮಸ್ಯೆ ಇಲ್ಲದಿದ್ದರೂ ಏಕಾಏಕಿ ಉಚ್ಚಗಣಿ ದೇಗುಲ ತೆರವುಗೊಳಿಸಿದ ನಂಜನಗೂಡು ತಹಶೀಲ್ದಾರ್ ವಿರುದ್ಧ ಕ್ರಮಕ್ಕೆ ಮನವಿ ಮಾಡಿದ್ದೇನೆ. ಜಿಲ್ಲಾಡಳಿತಕ್ಕೂ ಸೂಚಿಸಲು ಕೇಳಿಕೊಂಡಿದ್ದು, ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ. ಸುಪ್ರೀಂ ಕೋರ್ಟ್ ಆದೇಶವನ್ನು ಮತ್ತೊಮ್ಮೆ ಪರಿಶೀಲಿಸಿ ಅಧಿಕಾರಿಗಳಿಗೆ ಸೂಚನೆ ನೀಡುವುದಾಗಿ ಹೇಳಿದ್ದಾರೆ’ ಎಂದು ಸೋಮವಾರ ಇಲ್ಲಿ ಪತ್ರಿಕಾಗೋಷ್ಠಿಯಲ್ಲಿ ಹೇಳಿದರು.

‘ದೇಗುಲ ಒಡೆಯಬೇಕೆಂದು ಸುಪ್ರೀಂ ಕೋರ್ಟ್ ಆದೇಶದಲ್ಲಿ ಎಲ್ಲೂ ಹೇಳಿಲ್ಲ. 2009ಕ್ಕಿಂತ ಮೊದಲು ನಿರ್ಮಾಣವಾಗಿರುವ ಧಾರ್ಮಿಕ



ಪ್ರತಾಪಸಿಂಹ

ಕಟ್ಟಡಕ್ಕೆ ಸಂಬಂಧಿಸಿದಂತೆ ಪ್ರತಿ ಪ್ರಕರಣವನ್ನು ಪ್ರತ್ಯೇಕವಾಗಿ ಪರಾಮರ್ಶಿಸಿ ಸರಿಯಾದ ಕ್ರಮ ಕೈಗೊಳ್ಳಬೇಕೆಂದು ನಿರ್ದೇಶಿಸಿದೆ. ಸಾಧ್ಯವಾದರೆ ದೇಗುಲ ಉಳಿಸಿಕೊಳ್ಳಬೇಕು, ಇಲ್ಲದಿದ್ದರೆ ಸ್ಥಳಾಂತರ ಮಾಡಬೇಕು. ಆದರೆ, ಅಧಿಕಾರಿಗಳು ದಾರಿ ತಪ್ಪಿಸುತ್ತಿದ್ದಾರೆ. ಈ ವಿಚಾರವನ್ನೂ ಮುಖ್ಯಮಂತ್ರಿ ಗಮನಕ್ಕೆ ತಂದಿದ್ದೇನೆ. ಇನ್ನುಮುಂದೆ ಅಧಿಕಾರಿಗಳು ದೇಗುಲ ತೆರವು ಮಾಡಲು ಪ್ರಯತ್ನಿಸಬಾರದು’ ಎಂದರು.

‘ಸಾರ್ವಜನಿಕರಿಗೆ ಸಮಸ್ಯೆಯೊಡ್ಡದ, ಉದ್ಯಾನಗಳಲ್ಲಿರುವ ದೇಗುಲಗಳನ್ನು ಸಕ್ರಮಗೊಳಿಸಬೇಕು. ಪರಾಮರ್ಶೆ ಮಾಡಿ ಹೊಸದಾಗಿ ಪಟ್ಟಿ ತಯಾರಿಸಿ ಹೈಕೋರ್ಟ್ ಹಾಗೂ ಸುಪ್ರೀಂ ಕೋರ್ಟ್‌ಗೆ ಸಲ್ಲಿಸಬೇಕು. ವಕ್ಫ್ ಮಂಡಳಿ ಮಾದರಿಯಲ್ಲಿ ಹಿಂದೂ ದೇವಾಲಯ ರಕ್ಷಣೆಗೂ ಒಂದು ಪ್ರತ್ಯೇಕ ವ್ಯವಸ್ಥೆ ಮಾಡಬೇಕು’ ಎಂದು ಮನವಿ ಮಾಡಿದರು.

‘2009ರ ನಂತರ ಸಾರ್ವಜನಿಕ ಸ್ಥಳಗಳಲ್ಲಿ ದೇಗುಲ, ಚರ್ಚ್, ಮಸೀದಿ ನಿರ್ಮಿಸುವಂತಿಲ್ಲ. ಆದರೆ, ಮೈಸೂರಿನ ಕ್ಯಾತಮಾರನಹಳ್ಳಿಯ ವಸತಿ ಪ್ರದೇಶದಲ್ಲಿ ಮಸೀದಿ ಅನಧಿಕೃತವಾಗಿ ತಲೆ ಎತ್ತಿದ್ದು ಹಲವಾರು ಸಮಸ್ಯೆಗೆ ಕಾರಣವಾಗಿದೆ. ಅದು ಕೋರ್ಟ್ ಆದೇಶದ ಉಲ್ಲಂಘನೆ ಅಲ್ಲವೇ’ ಎಂದು ಪ್ರಶ್ನಿಸಿದರು.


ಬಿಜೆಪಿ ಕೈವಾಡ: ‘ದೇಗುಲ ಧ್ವಂಸದ ಹಿಂದೆ ಬಿಜೆಪಿ ಕೈವಾಡವಿದೆ. ಹಿಂದೂಗಳ ಭಾವನೆ ಕೆರಳಿಸಿ ಕೋಮುಗಲಭೆಗೆ ಸಂಸದ ಪ್ರತಾಪಸಿಂಹ ಹುನ್ನಾರ ನಡೆಸಿದ್ದಾರೆ. ಮುಸ್ಲಿಂ ಹೆಣ್ಣು ಮಕ್ಕಳನ್ನು ಹೀಯಾಳಿಸಿದ್ದಾರೆ’ ಎಂದು ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ ಆರೋಪಿಸಿದರು.

ಸಿದ್ದರಾಮಯ್ಯ ಟೀಕೆ: ನಂಜನಗೂಡಿನಲ್ಲಿ ದೇವಸ್ಥಾನ ನೆಲಸಮ ಮಾಡುವ ಮುನ್ನ ಭಕ್ತರಿಗೆ ಮಾಹಿತಿ ನೀಡಬೇಕಿತ್ತು. ದೇವಸ್ಥಾನ ನಿರ್ಮಾಣಕ್ಕೆ ಪರ್ಯಾಯ ಜಾಗವನ್ನಾದರೂ ಕೊಡಬೇಕಿತ್ತು. ಎಂದು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದ್ದಾರೆ.

‘ಪಂದ್ಯ ಮುಂದೂಡಿಕೆಗೂ ಐಪಿಎಲ್‌ಗೂ ಸಂಬಂಧವಿಲ್ಲ’

ನವದೆಹಲಿ (ಎಎಫ್‌ಪಿ): ಮ್ಯಾಂಚೆಸ್ಟರ್‌ನಲ್ಲಿ ನಡೆಯಬೇಕಾಗಿದ್ದ ಇಂಗ್ಲೆಂಡ್ ಎದುರಿನ ಕೊನೆಯ ಟೆಸ್ಟ್ ಪಂದ್ಯದಲ್ಲಿ ಆಡುವುದಿಲ್ಲ ಎಂದು ಆಟಗಾರರು ಹೇಳಲು ಕೋವಿಡ್ ಆತಂಕವೇ ಕಾರಣ ಎಂದು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ ಅಧ್ಯಕ್ಷ ಸೌರವ್ ಗಂಗೂಲಿ ಹೇಳಿದ್ದಾರೆ. ಪಂದ್ಯ ಮುಂದೂಡಿದ ವಿಷಯದಲ್ಲಿ ಆಟಗಾರರನ್ನು ದೂರುವುದು ಸರಿಯಲ್ಲ ಎಂದು ಅವರು ಸೋಮವಾರ ಅಭಿಪ್ರಾಯಪಟ್ಟಿದ್ದಾರೆ.

5 ಪಂದ್ಯಗಳ ಸರಣಿಯಲ್ಲಿ ಭಾರತ 2-1ರಲ್ಲಿ ಮುನ್ನಡೆ ಗಳಿಸಿದೆ. ಹೀಗಾಗಿ ನಿರ್ಣಾಯಕ ಕೊನೆಯ ಪಂದ್ಯ ಇಂಗ್ಲೆಂಡ್‌ಗೆ ಮಹತ್ವದ್ದಾಗಿತ್ತು. ಆದರೆ ಭಾರತ ತಂಡದ ಕೋಚ್ ಮತ್ತು ಇತರ ಸಿಬ್ಬಂದಿಯಲ್ಲಿ ಕೋವಿಡ್ ಸೋಂಕು ಕಾಣಿಸಿಕೊಂಡ ಕಾರಣ ಪಂದ್ಯವನ್ನು ಮುಂದೂಡಲಾಗಿತ್ತು.



ಸೌರವ್ ಗಂಗೂಲಿ

‘ಸೋಂಕಿತರ ಜೊತೆ ಸಂಪರ್ಕ ಹೊಂದಿರುವ ಸಾಧ್ಯತೆ ಇರುವುದರಿಂದ ಆಟಗಾರರು ಆತಂಕಪಟ್ಟಿದ್ದರು. ಇದು ಸಹಜ. ಹೆದರುತ್ತ ಬಯೊಬಬಲ್‌ನಲ್ಲಿ ಕಾಲ ಕಳೆಯುವುದು ಕಷ್ಟ ಸಾಧ್ಯ. ಆದ್ದರಿಂದ ಆಟಗಾರರ ಭಾವನೆಗಳನ್ನು ಅರ್ಥ ಮಾಡಿಕೊಳ್ಳಬೇಕು’ ಎಂದು ಕೋಲ್ಕತ್ತದ ದಿನಪತ್ರಿಕೆ ‘ಟೆಲಿಗ್ರಾಫ್’ಗೆ ನೀಡಿದ ಸಂದರ್ಶನದಲ್ಲಿ ಗಂಗೂಲಿ ಹೇಳಿದ್ದಾರೆ.

‘ಪಂದ್ಯ ಮುಂದೂಡಿಕೆಯಿಂದ ಇಂಗ್ಲೆಂಡ್ ಮತ್ತು ವೇಲ್ಸ್ ಕ್ರಿಕೆಟ್ ಮಂಡಳಿಗೆ ಆರ್ಥಿಕ ನಷ್ಟ ಆಗಿದೆ ನಿಜ. ಮುಂದಿನ ದಿನಗಳಲ್ಲಿ ಎಲ್ಲವೂ ಸರಿಹೋಗುತ್ತದೆ ಎಂಬ ನಿರೀಕ್ಷೆ ಇದೆ’ ಎಂದ ಗಂಗೂಲಿ ಇದೇ 22ರಂದು ಲಂಡನ್‌ಗೆ ಪ್ರಯಾಣಿಸುವುದಾಗಿ ವಿವರಿಸಿದರು.

ಕೋಚ್ ರವಿಶಾಸ್ತ್ರಿ ಮತ್ತು ಸಿಬ್ಬಂದಿಯಲ್ಲಿ ಕೋವಿಡ್ ಕಾಣಿಸಿಕೊಂಡ ನಂತರ ಭಾರತ ಪಾಳಯದಲ್ಲಿ ಆತಂಕ ಉಂಟಾಗಿತ್ತು. ಇದೇ 19ರಂದು ಯುಎಇಯಲ್ಲಿ ಐಪಿಎಲ್ ಟೂರ್ನಿಯ ಎರಡನೇ ಲೆಗ್ ಆರಂಭವಾಗಲಿದೆ. ಈ ಟೂರ್ನಿಯನ್ನು ಸುಸೂತ್ರವಾಗಿ ನಡೆಸಿಕೊಂಡು ಹೋಗುವುದಕ್ಕಾಗಿ ಪಂದ್ಯ ಮುಂದೂಡಲು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ ಆಸಕ್ತಿ ವಹಿಸಿತ್ತು ಎಂಬ ಆರೋಪ ಕೇಳಿಬಂದಿತ್ತು. ಆದರೆ ಇದರಲ್ಲಿ ವಾಸ್ತವಾಂಶ ಇಲ್ಲ ಎಂದು ಗಂಗೂಲಿ ಹೇಳಿದ್ದಾರೆ.

ಮುಂದೂಡಿದ ಪಂದ್ಯವನ್ನು ಮುಂದಿನ ವರ್ಷ ಇಂಗ್ಲೆಂಡ್‌ನಲ್ಲಿ ಆಡಲು ಭಾರತ ಒಪ್ಪಿಕೊಂಡಿದೆ ಎಂದು ಹೇಳಲಾಗುತ್ತಿದೆ.

ಐಎಸ್‌ಎಲ್ ಟೂರ್ನಿಗೆ ನ.19ರಂದು ಚಾಲನೆ

ಇಂಡಿಯನ್ ಸೂಪರ್ ಲೀಗ್: ಬೆಂಗಳೂರು ಎಫ್‌ಸಿಗೆ ಎರಡು ಡಬಲ್ ಹೆಡರ್ ಪಂದ್ಯಗಳು

ಮುಂಬೈ (ಪಿಟಿಐ): ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಫುಟ್‌ಬಾಲ್ ಟೂರ್ನಿಯ ಎಂಟನೇ ಆವೃತ್ತಿಯ ಪಂದ್ಯಗಳು ನವೆಂಬರ್ 19ರಂದು ಆರಂಭವಾಗಲಿವೆ. ಎಲ್ಲ ಪಂದ್ಯಗಳು ಗೋವಾದ ಮೂರು ಕ್ರೀಡಾಂಗಣಗಳಲ್ಲಿ ನಡೆಯಲಿವೆ. ಈ ಬಾರಿ ಇದೇ ಮೊದಲು ವಾರಾಂತ್ಯದಲ್ಲಿ ಡಬಲ್ ಹೆಡರ್ ನಡೆಯಲಿದೆ. ಎರಡನೇ ಪಂದ್ಯ ರಾತ್ರಿ 9.30ಕ್ಕೆ ನಡೆಯಲಿದೆ.

ಉದ್ಘಾಟನಾ ಪಂದ್ಯದಲ್ಲಿ ಎಟಿಕೆ ಮೋಹನ್ ಬಾಗನ್ ಮತ್ತು ಕೇರಳ ಬ್ಲಾಸ್ಟರ್ಸ್ ತಂಡಗಳು ಸೆಣಸಲಿದ್ದು ಮೊದಲ ಕೋಲ್ಕತ್ತ ಡರ್ಬಿ (ಎಸ್‌ಸಿ ಈಸ್ಟ್ ಬೆಂಗಾಲ್-ಎಟಿಕೆ ಮೋಹನ್ ಬಾಗನ್) ನವೆಂಬರ್ 27ರಂದು ವಾಸ್ಕೊದ ತಿಲಕ್ ಮೈದಾನ್ ಕ್ರೀಡಾಂಗಣದಲ್ಲಿ ನಡೆಯಲಿದೆ.

ಟೂರ್ನಿಯ ವೇಳಾಪಟ್ಟಿಯನ್ನು ಆಯೋಜಕರು ಸೋಮವಾರ ಬಿಡುಗಡೆ ಮಾಡಿದ್ದು ಹಾಲಿ ಚಾಂಪಿಯನ್ ಮುಂಬೈ ಸಿಟಿ ಎಫ್‌ಸಿ ತನ್ನ ಮೊದಲ ಪಂದ್ಯದಲ್ಲಿ ಆತಿಥೇಯ ಎಫ್‌ಸಿ ಗೋವಾವನ್ನು ಎದುರಿಸಲಿದೆ. ಈಸ್ಟ್ ಬೆಂಗಾಲ್ ಎಫ್‌ಸಿ ತನ್ನ ಮೊದಲ ಪಂದ್ಯವನ್ನು ನವೆಂಬರ್ 21ರಂದು ಜೆಮ್ಶೆಡ್‌ಪುರ ಎಫ್‌ಸಿ ಎದುರು ಆಡಲಿದೆ.



ಕಳೆದ ಬಾರಿ ಫತೋರ್ಡ ಕ್ರೀಡಾಂಗಣದಲ್ಲಿ ನಡೆದ ಪಂದ್ಯವೊಂದರ ನೋಟ – ಐಎಸ್‌ಎಲ್ ಮೀಡಿಯಾ ಚಿತ್ರ

2021-22ರ ಋತುವಿನ ಲೀಗ್‌ನಲ್ಲಿ ಒಟ್ಟು 115 ಪಂದ್ಯಗಳು ಇರುತ್ತವೆ. ಈ ಪೈಕಿ ಮೊದಲ 11 ಸುತ್ತುಗಳ ವೇಳಾಪಟ್ಟಿಯನ್ನು ಮಾತ್ರ ಈಗ ಬಿಡುಗಡೆ ಮಾಡಲಾಗಿದೆ. ಇದು ಜನವರಿ ಒಂಬತ್ತರಂದು ಕೊನೆಗೊಳ್ಳಲಿದೆ. ಪ್ರತಿದಿನದ ಪಂದ್ಯಗಳು ಸಂಜೆ 7.30ಕ್ಕೆ ಆರಂಭವಾಗಲಿವೆ.

ಬೆಂಗಳೂರು ಎಫ್‌ಸಿ ತಂಡದ ಪಂದ್ಯಗಳು

ದಿನಾಂಕ	ಎದುರಾಳಿ	ಸ್ಥಳ	ಸಮಯ
ನ.20	ಎನ್‌ಇಯು	ಬ್ಯಾಂಬೊಲಿಮ್	7.30
ನ.24	ಒಎಫ್‌ಸಿ	ವಾಸ್ಕೊ	
ನ.28	ಕೆಬಿಎಫ್‌ಸಿ	ಬ್ಯಾಂಬೊಲಿಮ್	
ಡಿ.4	ಮುಂಬೈ	ಬ್ಯಾಂಬೊಲಿಮ್	9.30
ಡಿ.8	ಎಚ್‌ಎಫ್‌ಸಿ	ಬ್ಯಾಂಬೊಲಿಮ್	7.30
ಡಿ.11	ಗೋವಾ	ಬ್ಯಾಂಬೊಲಿಮ್	9.30
ಡಿ.16	ಎಟಿಕೆಎಂಬಿ	ಬ್ಯಾಂಬೊಲಿಮ್	7.30
ಡಿ.20	ಜೆಎಫ್‌ಸಿ	ಬ್ಯಾಂಬೊಲಿಮ್	
ಡಿ.30	ಸಿಎಫ್‌ಸಿ	ವಾಸ್ಕೊ	
ಜ.4	ಎಸ್‌ಸಿಇಬಿ	ಬ್ಯಾಂಬೊಲಿಮ್	

ಶೂಟರ್ ನಮನ್‌ವೀರ್ ನಿಗೂಢ ಸಾವು

ಚಂಡೀಗಢ (ಪಿಟಿಐ): ಅಂತರರಾಷ್ಟ್ರೀಯ ಮಟ್ಟದ ಸ್ಪರ್ಧೆಗಳಲ್ಲಿ ಪಾಲ್ಗೊಂಡಿದ್ದ ಶೂಟರ್ ನಮನ್‌ವೀರ್ ಸಿಂಗ್ ಬ್ರಾರ್ ಅವರು ಮೊಹಾಲಿಯಲ್ಲಿರುವ ತಮ್ಮ ಮನೆಯಲ್ಲಿ ಸೋಮವಾರ ನಿಗೂಢವಾಗಿ ಸಾವಿಗೀಡಾಗಿದ್ದಾರೆ. 28 ವರ್ಷದ ನಮನ್‌ವೀರ್ ದೇಹದಲ್ಲಿ ಗುಂಡು ತಾಗಿದ ಗಾಯ ಇದೆ ಎಂದು ಮೊಹಾಲಿಯ ಉಪ ಪೊಲೀಸ್ ಆಯುಕ್ತ ಗುರುಶೇರ್ ಸಿಂಗ್ ಸಂಧು ತಿಳಿಸಿದ್ದಾರೆ.

ನಮನ್‌ವೀರ್ ಆತ್ಮಹತ್ಯೆ ಮಾಡಿಕೊಂಡಿರುವ ಸಾಧ್ಯತೆ ಇದ್ದು ಆಕಸ್ಮಿಕವಾಗಿ ಗುಂಡು ತಾಗಿ ಸಾವಿಗೀಡಾಗಿದ್ದಾರೆಯೇ ಎಂಬುದರ ಕುರಿತು ತನಿಖೆ ನಡೆಯುತ್ತಿದೆ. ಮರಣೋತ್ತರ ಪರೀಕ್ಷೆಯ ವರದಿ ಬಂದ ಮೇಲೆ ಹೆಚ್ಚಿನ ಮಾಹಿತಿ ಲಭ್ಯವಾಗಲಿದೆ ಎಂದು ಸಂಧು ತಿಳಿಸಿದ್ದಾರೆ.

ದಕ್ಷಿಣ ಕೊರಿಯಾದಲ್ಲಿ ನಡೆದಿದ್ದ ವಿಶ್ವವಿದ್ಯಾಲಯಗಳ ವಿಶ್ವಮಟ್ಟದ ಸ್ಪರ್ಧೆಯಲ್ಲಿ ನಮನ್‌ವೀರ್ ಕಂಚು ಗೆದ್ದಿದ್ದರು.

ಈ ವರ್ಷದ ಮಾರ್ಚ್‌ನಲ್ಲಿ ನವದೆಹಲಿಯಲ್ಲಿ ನಡೆದಿದ್ದ ಐಎಸ್‌ಎಸ್‌ಎಫ್ ವಿಶ್ವಕಪ್ ಟೂರ್ನಿಯಲ್ಲಿ ಕನಿಷ್ಠ ಅರ್ಹತಾ ಸ್ಕೋರ್ ವಿಭಾಗದಲ್ಲಿ ಸ್ಪರ್ಧಿಸಿದ್ದರು.

ಕ್ರಿಕೆಟ್: ರಾಜ್ಯ ತಂಡದಲ್ಲಿ ರಾಹುಲ್, ಮಯಂಕ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆ.ಎಲ್.ರಾಹುಲ್, ಮಯಂಕ್ ಅಗರವಾಲ್ ಮತ್ತು ದೇವದತ್ತ ಪಡಿಕ್ಕಲ್ ಅವರು ಸೈಯದ್ ಮುಷ್ತಾಕ್ ಅಲಿ ಹಾಗೂ ವಿಜಯ್ ಹಜಾರೆ ಟ್ರೋಫಿಗಾಗಿ ಆಯ್ಕೆ ಮಾಡಿರುವ ರಾಜ್ಯದ ಸಂಭಾವ್ಯ ಆಟಗಾರರ ಪಟ್ಟಿಯಲ್ಲಿ ಸ್ಥಾನ ಗಳಿಸಿದ್ದಾರೆ. ಒಟ್ಟು 35 ಆಟಗಾರರ ಪಟ್ಟಿಯನ್ನು ರಾಜ್ಯ ಕ್ರಿಕೆಟ್ ಸಂಸ್ಥೆ ಸೋಮವಾರ ಬಿಡುಗಡೆ ಮಾಡಿದೆ.

ರಾಹುಲ್, ಮಯಂಕ್ ಮತ್ತು ದೇವದತ್ತ ಕ್ರಮವಾಗಿ ಬೆಂಗಳೂರು ಯುನೈಟೆಡ್ ಕ್ರಿಕೆಟ್ ಕ್ಲಬ್, ಜವಾನ್ಸ್ ಕ್ರಿಕೆಟ್ ಕ್ಲಬ್ ಮತ್ತು ಕೇಂಬ್ರಿಜ್ ಕ್ರಿಕೆಟ್ ಕ್ಲಬ್‌ಗಳನ್ನು ಪ್ರತಿನಿಧಿಸುತ್ತಿದ್ದಾರೆ. ಜವಾನ್ಸ್ ಕ್ರಿಕೆಟ್ ಕ್ಲಬ್‌ನ ಮನೀಷ್ ಪಾಂಡೆ, ವಲ್ಚರ್ಸ್ ಕ್ರಿಕೆಟ್ ಕ್ಲಬ್‌ನ ಅಭಿಮನ್ಯು ಮಿಥುನ್, ಅನಿರುದ್ಧ ಜೋಶಿ, ಕರುಣ್ ನಾಯರ್, ಜೆ.ಸುಚಿತ್, ಪ್ರವೀಣ್ ದುಬೆ, ರೋನಿತ್ ಮೋರೆ, ಸ್ವಸ್ತಿಕ್ ಯೂನಿಯನ್‌ನ ಆರ್. ಸಮರ್ಥ್, ಕೆ.ಗೌತಮ್, ಶ್ರೇಯಸ್ ಗೋಪಾಲ್, ಮಾಡರ್ನ್ ಸಿಸಿಯ ಮೊಹಮ್ಮದ್ ಆಕಿಬ್, ಬೆಂಗಳೂರು ಯುನೈಟೆಡ್‌ನ ರೋಹನ್ ಕದಂ, ಮೌಂಟ್ ಜಾಯ್ ಕ್ಲಬ್‌ನ ಪ್ರಸಿದ್ಧ ಕೃಷ್ಣ ಕೂಡ ಆಯ್ಕೆಯಾಗಿದ್ದಾರೆ.



ಮಯಂಕ್ ಅಗರವಾಲ್ (ಎಡ) ಮತ್ತು ಕೆ.ಎಲ್‌ರಾಹುಲ್ –ಪ್ರಜಾವಾಣಿ ಚಿತ್ರ

ಪಟ್ಟಿಯಲ್ಲಿರುವ ಇತರ ಆಟಗಾರರು: ರೋಹನ್ ಪಾಟೀಲ್, ಮನೋಜ್ ಭಾಂಡಗೆ, ಕುಶಾಲ್ ವಾಧ್ವಾನಿ (ಸರ್ ಸೈಯದ್), ಅಭಿನವ್ ಮನೋಹರ್ (ಬೆಂಗಳೂರು ಯುನೈಟೆಡ್), ಕೆ.ವಿ. ಸಿದ್ಧಾರ್ಥ್, ಪ್ರತೀಕ್ ಜೈನ್ (ಸ್ವಸ್ತಿಕ್ ಯೂನಿಯನ್), ಕೆ.ಸಿ.ಕಾರ್ಯಪ್ಪ (ಜವಾಹರ್), ಶ್ರೀಜಿತ್ ಕೆ.ಎಲ್, ದರ್ಶನ್ ಎಂ.ಬಿ, ವಿಕೆಟ್ ಕೀಪರ್ ಬಿ.ಆರ್.ಶರತ್ (ವಲ್ಚರ್ಸ್‌ನ), ಆದಿತ್ಯ ಸೋಮಣ್ಣ (ಮೌಂಟ್ ಜಾಯ್), ವಿದ್ಯಾಧರ ಪಾಟೀಲ, ವಿಕೆಟ್ ಕೀಪರ್ ಶರತ್ ಶ್ರೀನಿವಾಸ್ (ಬೆಂಗಳೂರು ಯುನೈಟೆಡ್), ನಿಹಾಲ್ ಉಳ್ಳಾಲ್, ನಿಶ್ಚಿತ್ ರಾವ್ (ರಾಜಾಜಿನಗರ ಕ್ರಿಕೆಟರ್ಸ್), ಶುಭಾಂಗ್ ಹೆಗ್ಡೆ (ಕೇಂಬ್ರಿಜ್), ವೈಶಾಖ್ ವಿಜಯಕುಮಾರ್, ಅನೀಶ್ ಕೆ.ವಿ (ಸೋಷಿಯಲ್ ಕ್ರಿಕೆಟರ್ಸ್).

ಕೋಚ್: ಯರೇಗೌಡ, ಬೌಲಿಂಗ್ ಕೋಚ್: ಎಸ್.ಅರವಿಂದ್, ಫೀಲ್ಡಿಂಗ್ ಕೋಚ್: ದೀಪಕ್ ಚೌಗುಲೆ.

ಫುಟ್‌ಬಾಲ್ ಆಟಗಾರ ಭಬನಿ ರಾಯ್ ನಿಧನ

ನವದೆಹಲಿ (ಪಿಟಿಐ): ಭಾರತ ಫುಟ್‌ಬಾಲ್ ತಂಡದ ಮಾಜಿ ಆಟಗಾರ ಮತ್ತು ಮೋಹನ್ ಬಾಗನ್ ತಂಡದ ದಿಗ್ಗಜ ಭಬನಿ ರಾಯ್ (75) ಸೋಮವಾರ ಕೋಲ್ಕತ್ತದಲ್ಲಿ ನಿಧನರಾದರು. ಕೆಲಕಾಲದಿಂದ ಅನಾರೋಗ್ಯಪೀಡಿತರಾಗಿದ್ದ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿತ್ತು.

ಅವರು ಮೂರು ಪಂದ್ಯಗಳಲ್ಲಿ ದೇಶವನ್ನು ಪ್ರತಿನಿಧಿಸಿದ್ದಾರೆ.

‘ಭಾರತ–ಪಾಕಿಸ್ತಾನ ನಡುವೆ ಕ್ರಿಕೆಟ್ ಸದ್ಯಕ್ಕಿಲ್ಲ’

ಲಾಹೋರ್ (ಪಿಟಿಐ): ಭಾರತ ಮತ್ತು ಪಾಕಿಸ್ತಾನ ತಂಡಗಳ ನಡುವೆ ದ್ವಿಪಕ್ಷೀಯ ಕ್ರಿಕೆಟ್ ಟೂರ್ನಿ ಆಯೋಜಿಸುವುದು ಸದ್ಯಕ್ಕೆ ಸಾಧ್ಯವಿಲ್ಲ. ಈ ಕುರಿತು ಅವಸರದ ನಿರ್ಧಾರ ತೆಗೆದುಕೊಳ್ಳುವುದಿಲ್ಲ ಎಂದು ಪಾಕಿಸ್ತಾನ ಕ್ರಿಕೆಟ್ ಮಂಡಳಿಯ (ಪಿಸಿಬಿ) ನೂತನ ಅಧ್ಯಕ್ಷ ರಮೀಜ್ ರಾಜಾ ಹೇಳಿದ್ದಾರೆ. ಈ ಹಂತದಲ್ಲಿ ದೇಶಿ ಕ್ರಿಕೆಟ್‌ನತ್ತ ಮಾತ್ರ ಗಮನಹರಿಸುವುದಾಗಿ ಅವರು ತಿಳಿಸಿದ್ದಾರೆ.

59 ವರ್ಷದ ರಮೀಜ್ ಅವರು ಪಿಸಿಬಿ ಅಧ್ಯಕ್ಷ ಹುದ್ದೆಗೆ ಸರ್ವಾನುಮತದಿಂದ ಆಯ್ಕೆಯಾಗಿದ್ದು, ಸೋಮವಾರ ಅಧಿಕಾರ ಸ್ವೀಕರಿಸಿದರು.

‘ಭಾರತ- ಪಾಕಿಸ್ತಾನ ತಂಡಗಳ ನಡುವಣ ಕ್ರಿಕೆಟ್ ಪುನರಾರಂಭ ಸದ್ಯಕ್ಕೆ ಸಾಧ್ಯವಿಲ್ಲ. ಏಕೆಂದರೆ ರಾಜಕೀಯದ ನಡುವೆ ಕ್ರಿಕೆಟ್ ನಲುಗಿದೆ’ ಎಂದು ಸುದ್ದಿಗೋಷ್ಠಿಯೊಂದರಲ್ಲಿ ಅವರು ತಿಳಿಸಿದ್ದಾರೆ.

ಪಾಕ್ ಕೋಚಿಂಗ್ ತಂಡಕ್ಕೆ ಹೇಡನ್, ಫಿಲಾಂಡರ್: ಆಸ್ಟ್ರೇಲಿಯಾದ ಮಾಜಿ ಬ್ಯಾಟ್ಸ್‌ಮನ್ ಮ್ಯಾಥ್ಯು ಹೇಡನ್ ಮತ್ತು ದಕ್ಷಿಣ ಆಫ್ರಿಕಾದ ಮಾಜಿ ವೇಗಿ ವೆರ್ನಾನ್ ಫಿಲಾಂಡರ್, ಟಿ20 ವಿಶ್ವಕಪ್ ಟೂರ್ನಿಗಾಗಿ ಪಾಕ್ ತಂಡದ ಕೋಚಿಂಗ್ ಸಿಬ್ಬಂದಿಯಾಗಿ ನೇಮಕಗೊಂಡಿದ್ದಾರೆ. ಅವರ ನಿರ್ದಿಷ್ಟ ಹುದ್ದೆಯನ್ನು ಬಹಿರಂಗಪಡಿಸಿಲ್ಲ.

ಅಮೆರಿಕ ಓಪನ್ ಟೆನಿಸ್ ಟೂರ್ನಿ: ದಾಖಲೆಯ ಹೊಸ್ತಿಲಿನಲ್ಲಿ ಎಡವಿದ ನೊವಾಕ್ ಜೊಕೊವಿಚ್

ಮೆಡ್ವೆಡೆವ್‌ಗೆ ಚೊಚ್ಚಲ ಗ್ರ್ಯಾನ್‌ಸ್ಲಾಂ ಖುಷಿ

ನ್ಯೂಯಾರ್ಕ್ (ರಾಯಿಟರ್ಸ್): ಒಂದು ಸೆಟ್ ಮಾತ್ರ ಬಿಟ್ಟುಕೊಟ್ಟು ಪ್ರಶಸ್ತಿ ಸುತ್ತು ಪ್ರವೇಶಿಸಿದ್ದ ರಷ್ಯಾದ ಡ್ಯಾನಿಯಲ್ ಮೆಡ್ವೆಡೆವ್ ಅಂತಿಮ ಹಣಾಹಣಿಯಲ್ಲಿ ನೋವು ನುಂಗಿ ಆಟದ ಮೇಲೆ ನಿಯಂತ್ರಣ ಸಾಧಿಸಿದರು. ಈ ಮೂಲಕ ಅಮೆರಿಕ ಓಪನ್ ಟೆನಿಸ್ ಟೂರ್ನಿಯ ಚಾಂಪಿಯನ್ ಪಟ್ಟಕ್ಕೇರಿದರು.


ಭಾನುವಾರ ರಾತ್ರಿ ನಡೆದ ಫೈನಲ್ ಹಣಾಹಣಿಯಲ್ಲಿ 6-4, 6-4, 6-4ರಲ್ಲಿ ಗೆದ್ದ ಡ್ಯಾನಿಯಲ್ ಮೆಡ್ವೆಡೆವ್ ವರ್ಷದ ಎಲ್ಲ ಗ್ರ್ಯಾನ್‌ಸ್ಲಾಂ ಪ್ರಶಸ್ತಿಗಳನ್ನು ಗೆಲ್ಲುವ ಸರ್ಬಿಯಾದ ನೊವಾಕ್ ಜೊಕೊವಿಚ್ ಅವರ ಕನಸು ಭಗ್ನಗೊಳಿಸಿದರು. ಆಸ್ಟ್ರೇಲಿಯಾ ಓಪನ್, ಫ್ರೆಂಚ್ ಓಪನ್ ಮತ್ತು ವಿಂಬಲ್ಡನ್ ಪ್ರಶಸ್ತಿಗಳನ್ನು ಗೆದ್ದುಕೊಂಡಿದ್ದ ಜೊಕೊವಿಚ್ ಒಲಿಂಪಿಕ್ಸ್‌ನಲ್ಲಿ ಪದಕ ಗಳಿಸಿ 'ಗೋಲ್ಡನ್ ಗ್ರ್ಯಾನ್‌ಸ್ಲಾಂ' ಸಾಧನೆ ಮಾಡುವ ಕನಸು ಕಂಡಿದ್ದರು. ಅದು ಭಗ್ನಗೊಂಡಿತ್ತು. ಇದೀಗ ಗ್ರ್ಯಾನ್‌ಸ್ಲಾಂ ಕ್ಲೀನ್ ಸ್ವೀಪ್ ಆಸೆಯೂ ಕಮರಿ ಹೋಗಿದೆ.

2019ರ ಅಮೆರಿಕ ಓಪನ್ ಮತ್ತು ಈ ಬಾರಿಯ ಆಸ್ಟ್ರೇಲಿಯಾ ಓಪನ್ ಟೂರ್ನಿಯ ಫೈನಲ್ ಪ್ರವೇಶಿಸಿದ್ದ ಮೆಡ್ವೆಡೆವ್ ಪ್ರಶಸ್ತಿ ಹಂತದಲ್ಲಿ ಮುಗ್ಗರಿಸಿದ್ದರು. ಆದರೆ ಭಾನುವಾರದ ಫೈನಲ್‌ನಲ್ಲಿ ಅತ್ಯಮೋಘ ಆಟವಾಡಿ ಜೊಕೊವಿಚ್ ಅವರನ್ನು ಕಂಗೆಡಿಸಿದರು.

ಪಂದ್ಯದ ಸಂದರ್ಭದಲ್ಲಿ ಅನುಭವಿಸಿದ ನೋವು ಮತ್ತು ಒತ್ತಡವನ್ನು ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಹಂಚಿಕೊಂಡರು.

'ಮೊದಲ ಸೆಟ್‌ನಲ್ಲಿ 5–2ರ ಮುನ್ನಡೆಯಲ್ಲಿದ್ದಾಗ ಇನ್ನೇನು ಸೆಟ್ ಗೆದ್ದೇ ಬಿಟ್ಟೆ ಎಂದುಕೊಂಡಿದ್ದೆ. ಆದರೆ 5–3ರ ಹಿನ್ನಡೆ ಅನುಭವಿಸಿದಾಗ ಆತಂಕ ಕಾಡಿತು. ಇದೇ ಸಂದರ್ಭದಲ್ಲಿ ಕಾಲುಗಳಲ್ಲಿ ನೋವು ಕಾಣಿಸಿಕೊಂಡಿತ್ತು. ಪಾಯಿಂಟ್ಸ್ 4–5 ಆದಾಗ ಎಡಗಾಲು ಬಳಲಿತ್ತು. ಆಗ ನಡೆದಾಡುವುದಕ್ಕೂ ಕಷ್ಟವಾಗುತ್ತಿತ್ತು. ಮುಖ ಒರೆಸಿಕೊಳ್ಳಲು ಟವೆಲ್ ಬಳಿ ಹೋದ ವಿಡಿಯೋವನ್ನು ನೋಡಿದರೆ ಎಲ್ಲರಿಗೂ ಇದು ಮನದಟ್ಟಾಗಬಹುದು' ಎಂದು ಮೆಡ್ವೆಡೆವ್ ವಿವರಿಸಿದರು.

ಮೆಡ್ವೆಡೆವ್ ಈ ಬಾರಿ ಆರಂಭದಿಂದಲೇ ಉತ್ತಮ ಆಟ ಪ್ರದರ್ಶಿಸಿದ್ದರು. ಮೊದಲ ನಾಲ್ಕು ಸುತ್ತುಗಳ ಪ್ರತಿ ಪಂದ್ಯವನ್ನು ಎರಡು ತಾಸುಗಳ ಒಳಗೆ ಮುಗಿಸಿದ್ದರು. ಈ ಜೈತ್ರಯಾತ್ರೆಯು ಮೊದಲ ಗ್ರ್ಯಾನ್‌ಸ್ಲಾಂ ಪ್ರಶಸ್ತಿಗೆ ಮುತ್ತಿಕ್ಕುವತ್ತ ಅವರನ್ನು ಮುನ್ನಡೆಸಿತು. ಹಿಂದಿನ ಬಾರಿ ಅಮೆರಿಕ ಓಪನ್‌ನ ಫೈನಲ್‌ಲ್ಲಿ ಸ್ಪೇನ್‌ನ ರಫೆಲ್ ನಡಾಲ್ ಎದುರು ಐದು ಸೆಟ್‌ಗಳ ವರೆಗೆ ಕಾದಾಡಿ ಸೋತಿದ್ದರು. ಆಸ್ಟ್ರೇಲಿಯಾ ಓಪನ್ ಫೈನಲ್‌ನಲ್ಲಿ ಜೊಕೊವಿಚ್‌ಗೆ ನೇರ ಸೆಟ್‌ಗಳಿಂದ ಮಣಿದಿದ್ದರು.



ಡ್ಯಾನಿಯಲ್ ಮೆಡ್ವೆಡೆವ್ ಆಟದ ಶೈಲಿ –ಎಎಫ್‌ಪಿ ಚಿತ್ರ


ಸೋಲಿನ ನಿರಾಸೆಯಲ್ಲಿ ನೊವಾಕ್ ಜೊಕೊವಿಚ್ –ಎಎಫ್‌ಪಿ ಚಿತ್ರ

ಪಂದ್ಯದಲ್ಲಿ ಸೋತರೂ ನನ್ನ ಹೃದಯ ತುಂಬಿ ಬಂದಿದೆ. ಪ್ರೇಕ್ಷಕರ ಪ್ರೀತಿ ಮತ್ತು ಅಭಿಮಾನವನ್ನು ಕಂಡು ಜಗತ್ತಿನ ಅತ್ಯಂತ ಖುಷಿಯ ವ್ಯಕ್ತಿ ನಾನೇನೋ ಅನಿಸುತ್ತಿದೆ.

ನೊವಾಕ್ ಜೊಕೊವಿಚ್ ಸರ್ಬಿಯಾದ ಆಟಗಾರ

ದಾಖಲೆಯ ಹೊಸ್ತಿಲಿನಲ್ಲಿದ್ದ ಆಟಗಾರನ ಎದುರು ಗೆದ್ದು ಮೊದಲ ಬಾರಿ ಗ್ರ್ಯಾನ್‌ಸ್ಲಾಂ ಚಾಂಪಿಯನ್ ಆಗಿದ್ದು ಖುಷಿ ಇಮ್ಮಡಿಗೊಳಿಸಿದೆ. ಈ ಜಯ ಇನ್ನಷ್ಟು ಸಾಧನೆಗೆ ನೆರವಾಗಲಿದೆ.

ಡ್ಯಾನಿಯಲ್ ಮೆಡ್ವೆಡೆವ್ ಪ್ರಶಸ್ತಿ ವಿಜೇತ ಆಟಗಾರ

ಪಂದ್ಯದ ವಿವರಗಳು

ಮೆಡ್ವೆಡೆವ್		ಜೊಕೊವಿಚ್
16	ಏಸ್‌ಗಳು	6
9	ಡಬಲ್ ಫಾಲ್ಟ್	3
99	ಗೆದ್ದ ಪಾಯಿಂಟ್ಸ್	83
18	ಗೆದ್ದ ಗೇಮ್ಸ್	12
5	ಸತತ ಗೆದ್ದ ಗರಿಷ್ಠ ಗೇಮ್	3
7	ಸತತ ಗೆದ್ದ ಗರಿಷ್ಠ ಪಾಯಿಂಟ್ಸ್	7
6/12	ನೆಟ್ ಪಾಯಿಂಟ್ಸ್	31/47
4/8	ಬ್ರೇಕ್ ಪಾಯಿಂಟ್ಸ್	1/6

ಪ್ರಮುಖ ಅಂಶಗಳು

- ವರ್ಷದ ಎಲ್ಲ ಗ್ರ್ಯಾನ್‌ಸ್ಲಾಂ ಪ್ರಶಸ್ತಿ ಗೆಲ್ಲುವ ಅವಕಾಶ ಕಳೆದುಕೊಂಡ ಜೊಕೊವಿಚ್. ಅಮೆರಿಕದ ಡಾನ್ ಬಜ್ 1938ರಲ್ಲಿ ಮತ್ತು ಆಸ್ಟ್ರೇಲಿಯಾದ ರಾಡ್ ಲೇವರ್ 1962ರಲ್ಲಿ ಕ್ಲೀನ್‌ಸ್ವೀಪ್ ಸಾಧನೆ ಮಾಡಿದ್ದರು.
- ಅತಿಹೆಚ್ಚು ಗ್ರ್ಯಾನ್ ಸ್ಲಾಂ ಪ್ರಶಸ್ತಿ ಗೆದ್ದ ಆಟಗಾರ ಎಂಬ ದಾಖಲೆಯ ಅವಕಾಶವನ್ನೂ ಜೊಕೊವಿಚ್ ಕಳೆದುಕೊಂಡರು. ಸದ್ಯ ರೋಜರ್ ಫೆಡರರ್ ಮತ್ತು ರಫೆಲ್ ನಡಾಲ್ ಜೊತೆ ಜೊಕೊವಿಚ್ 20 ಪ್ರಶಸ್ತಿಗಳ ದಾಖಲೆ ಹಂಚಿಕೊಂಡಿದ್ದಾರೆ.
- ಗ್ರ್ಯಾನ್‌ಸ್ಲಾಂ ಕ್ಲೀನ್ ಸ್ವೀಪ್ ಹಾದಿಯ ಕೊನೆಯಲ್ಲಿ ಮುಗ್ಗರಿಸಿದ ಮೂರನೇ ಆಟಗಾರ ಜೊಕೊವಿಚ್. ಆಸ್ಟ್ರೇಲಿಯಾದ ಜಾಕ್ ಕ್ರಾಫರ್ಡ್ 1933ರಲ್ಲಿ ಮತ್ತು ಲ್ಯೂ ಹಾಡ್ 1956ರಲ್ಲಿ ಅವಕಾಶ ಕಳೆದುಕೊಂಡಿದ್ದರು.
- ಗ್ರ್ಯಾನ್‌ಸ್ಲಾಂ ಪ್ರಶಸ್ತಿ ಗೆದ್ದ ರಷ್ಯಾದ ಮೂರನೇ ಆಟಗಾರ ಮೆಡ್ವೆಡೆವ್. 1996ರ ಫ್ರೆಂಚ್ ಓಪನ್ ಮತ್ತು 1999ರ ಆಸ್ಟ್ರೇಲಿಯನ್ ಓಪನ್ ಟೂರ್ನಿಯಲ್ಲಿ ಎವ್ಜಿನಿ ಕಫೆಲ್ನಿಕೊವ್ ಚಾಂಪಿಯನ್ ಆಗಿದ್ದರೆ 2000ನೇ ಇಸವಿಯ ಅಮೆರಿಕ ಓಪನ್ ಮತ್ತು 2005ರ ಆಸ್ಟ್ರೇಲಿಯನ್ ಓಪನ್ ಟೂರ್ನಿಯಲ್ಲಿ ಮರಾಟ್ ಸಫಿನ್ ಪ್ರಶಸ್ತಿ ಗೆದ್ದಿದ್ದರು.

ಜಾವೆಲಿನ್ ಥ್ರೊ ಕೋಚ್ ಹಾನ್ ಒಪ್ಪಂದ ಅಂತ್ಯ

ಜೈಪುರ (ಪಿಟಿಐ): ಜಾವೆಲಿನ್ ಥ್ರೊ ರಾಷ್ಟ್ರೀಯ ಕೋಚ್ ಯುವೆ ಹಾನ್ ಅವರೊಂದಿಗಿನ ಒಪ್ಪಂದವನ್ನು ಕೊನೆಗೊಳಿಸಲಾಗಿದೆ ಎಂದು ಭಾರತ ಅಥ್ಲೆಟಿಕ್ಸ್ ಫೆಡರೇಷನ್ (ಎಎಫ್‌ಐ) ಸೋಮವಾರ ಹೇಳಿದೆ.

ಜರ್ಮನಿಯ ಹಾನ್ ಅವರು ಕಾರ್ಯವೈಖರಿ ನಮಗೆ ತೃಪ್ತಿ ತಂದಿಲ್ಲ ಎಂದಿರುವ ಫೆಡರೇಷನ್, ಇಬ್ಬರು ವಿದೇಶಿ ತರಬೇತುದಾರರನ್ನು ಶೀಘ್ರವೇ ನೇಮಿಸಿಕೊಳ್ಳಲಾಗುವುದು ಎಂದು ತಿಳಿಸಿದೆ.

ಮಹಿಳೆ ನಗ್ನಗೊಳಿಸಿ ಹಲ್ಲೆ: ಆರೋಪಿಗಳ ಬಂಧನ

ಪ್ರಜಾವಾಣಿ ವಾರ್ತೆ

ಯಾದಗಿರಿ: ಮಹಿಳೆಯನ್ನು ನಗ್ನಗೊಳಿಸಿ ಹಲ್ಲೆ ಮಾಡಿದ ಕೃತ್ಯ ಜಿಲ್ಲೆಯ ಶಹಾಪುರ ನಗರದ ಹೊರವಲಯದಲ್ಲಿ ನಡೆದಿದ್ದು, ಈಗ ವಿಡಿಯೊ ವೈರಲ್ ಆಗಿದೆ. ಪ್ರಕರಣಕ್ಕೆ ಸಂಬಂಧಿಸಿದಂತೆ ನಾಲ್ವರು ಆರೋಪಿಗಳನ್ನು ಶಹಾಪುರ ಪೊಲೀಸರು ಬಂಧಿಸಿದ್ದಾರೆ.

'ಆಟೊರಿಕ್ಷಾ ಚಾಲಕ ನಿಂಗರಾಜ್ ಭೀಮರಾಯ ಬೇವಿನಹಳ್ಳಿ (24), ಪೆಟ್ರೋಲ್ ಪಂಪ್ ನೌಕರ ಅಯ್ಯಪ್ಪ ಸಂಗಪ್ಪ ನಾಟೇಕಾರ್ (23), ಪಾನ್ ಶಾಪ್‌ನ ಭೀಮಾಶಂಕರ್ ಮಲ್ಲಯ್ಯ (28) ಮತ್ತು ಎಗ್ ರೈಸ್ ಬಂಡಿಯಲ್ಲಿ ಕೆಲಸ ಮಾಡುವ ಶರಣು ಮಹಾದೇವಪ್ಪ ನಾಯಕೋಡಿ (22) ಬಂಧಿತರು. ನಾಲ್ವರೂ ಶಹಾಪುರ ನಿವಾಸಿಗಳು. ಅವರ ವಿರುದ್ಧ ಅತ್ಯಾಚಾರ, ಅಪಹರಣ, ಜಾತಿ ನಿಂದನೆ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

'ಘಟನೆ ಬಗ್ಗೆ ನಿಖರ ಮಾಹಿತಿ ಲಭ್ಯವಿಲ್ಲ. ಇದು ಒಂದೂವರೆ ವರ್ಷದ ಹಿಂದಿನ ವಿಡಿಯೊ ಎಂದು ಆರೋಪಿಗಳು ಹೇಳಿದರೆ, ಒಂದು ವರ್ಷದ ಹಿಂದಿನ ವಿಡಿಯೊ ಎಂದು ಮಹಿಳೆ ಹೇಳಿಕೆ ನೀಡಿದ್ದಾರೆ. ಆರೋಪಿಗಳು ಮತ್ತು ಸಂತ್ರಸ್ತೆ ಒಂದೊಂದು ಬಾರಿ ಒಂದೊಂದು ರೀತಿಯ ಹೇಳಿಕೆ ನೀಡುತ್ತಿದ್ದಾರೆ. ಈ ಬಗ್ಗೆ ಆರೋಪಿಗಳ ಕರೆ ವಿವರ ಪಡೆದು, ಮಾಹಿತಿ ಕಲೆ ಹಾಕಲಾಗುತ್ತಿದೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿ.ಬಿ.ವೇದಮೂರ್ತಿ ತಿಳಿಸಿದ್ದಾರೆ.

'ಈ ಸಂಬಂಧ ಪೊಲೀಸ್ ಅಧಿಕಾರಿಗಳ ಮೂರು ತಂಡಗಳನ್ನು ರಚಿಸಲಾಗಿದ್ದು, ಶೇ 50ರಷ್ಟು ತನಿಖೆ ಮುಗಿದಿದೆ. ಮಹಿಳೆಯನ್ನು ವಿಚಾರಣೆಗೆ ಒಳಪಡಿಸಿದ ಬಳಿಕ ಕಲಬುರ್ಗಿಯ ರಾಜ್ಯ ಮಹಿಳಾ ವಸತಿ ನಿಲಯಕ್ಕೆ ಕಳುಹಿಸಲಾಗುವುದು' ಎಂದು ಹೇಳಿದ್ದಾರೆ.

ಏನಿದು ಘಟನೆ: ವಿಡಿಯೊದಲ್ಲಿ ಯುವಕರು ಮಹಿಳೆಯನ್ನು ಥಳಿಸಿದ ದೃಶ್ಯಗಳಿವೆ. ಒಬ್ಬಾತ ಮಹಿಳೆಯನ್ನು ಹಿಡಿದಿದ್ದು, ಮತ್ತೊಬ್ಬ ಕಟ್ಟಿಗೆಯಿಂದ ಹೊಡೆಯುತ್ತಾನೆ. ನಂತರ ಮೊಬೈಲ್ ಟಾರ್ಚ್ ಹಾಕಿ ಬೆದರಿಸಿ, ಮೊಬೈಲ್‌ನಲ್ಲಿ ಫೋಟೊ ತೋರಿಸಿ 'ಇದು ನಿನ್ನದೇ ಅಲ್ಲವಾ' ಎಂದು ಕೇಳುತ್ತಾರೆ. 'ಯಾಕೆ ಹೊಡೆಯುತ್ತೀರಿ ಸರ್? ಹೊಡೆಯಬೇಡಿ. ಕಾಲಿಗೆ ಬೀಳುತ್ತೇನೆ ಅಣ್ಣಾ ಹೊಡೆಯಬೇಡಿ' ಎಂದು ಮಹಿಳೆ ಅಂಗಲಾಚುವ ದೃಶ್ಯಗಳಿವೆ. 'ಪತಿ ಮಹಾರಾಷ್ಟ್ರದಲ್ಲಿ ಇದ್ದಾರೆ. ಯಪ್ಪಾ, ಸಾಯಿಸಿ ಬಿಡಿ' ಎಂದು ಮಹಿಳೆ ಕೋರುತ್ತಾರೆ. ನಂತರ ಯುವಕರು 'ಮತ್ತೆ ಇಂಥ ಕೆಲಸ ಮಾಡಬಾರದು. ಕೆಲವರಿಂದ ಹಣ ತೆಗೆದುಕೊಂಡಿದ್ದಿ' ಎಂದು ಹೇಳಿದ್ದು ಸೆರೆಯಾಗಿದೆ.

ಜಿಲ್ಲಾಧಿಕಾರಿ ಭೇಟಿ: ಪ್ರಕರಣಕ್ಕೆ ಸಂಬಂಧಿಸಿದಂತೆ ಜಿಲ್ಲಾಧಿಕಾರಿ ಡಾ.ರಾಗಪ್ರಿಯಾ ಆರ್. ಅವರು ಸಂತ್ರಸ್ತೆಯನ್ನು ಭೇಟಿಯಾಗಿ, ಸಾಂತ್ವನ ಹೇಳಿದರು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಕಲ್ಯಾಣ ಇಲಾಖೆಯಿಂದ ಸ್ಥೈರ್ಯ ನಿಧಿಯಡಿ ₹ 25 ಸಾವಿರ ಸಹಾಯಧನ ಮತ್ತು ಸಮಾಜ ಕಲ್ಯಾಣ ಇಲಾಖೆಯಿಂದ ದೌರ್ಜನ್ಯ ತಡೆ ಕಾಯ್ದೆಯಡಿ ₹50 ಸಾವಿರ ಪರಿಹಾರ ಧನವನ್ನು ಸಂತ್ರಸ್ತೆಗೆ ಜಿಲ್ಲಾಧಿಕಾರಿ ನೀಡಿದರು.

ಓಲಾ: ಮಹಿಳೆಯರದ್ದೇ ಆಧಿಪತ್ಯ

ನವದೆಹಲಿ (ಪಿಟಿಐ): ಓಲಾ ಕಂಪನಿಯ ವಿದ್ಯುತ್ ಚಾಲಿತ ಸ್ಕೂಟರ್ ಕಾರ್ಖಾನೆಯನ್ನು ಮಹಿಳೆಯರೇ ಸಂಪೂರ್ಣವಾಗಿ ಮುನ್ನಡೆಸಲಿದ್ದಾರೆ. ಕಾರ್ಖಾನೆಯು ಪೂರ್ಣ ಪ್ರಮಾಣದಲ್ಲಿ ಕೆಲಸ ಆರಂಭಿಸಿದಾಗ ಹತ್ತು ಸಾವಿರಕ್ಕಿಂತ ಹೆಚ್ಚಿನ ಸಂಖ್ಯೆಯ ಮಹಿಳೆಯರಿಗೆ ಉದ್ಯೋಗ ನೀಡಲಿದೆ. ಓಲಾ ಕಂಪನಿಯ ಸಹ ಸಂಸ್ಥಾಪಕ ಭವೀಶ್ ಅಗರ್ವಾಲ್ ಅವರು ಈ ವಿಷಯ ತಿಳಿಸಿದ್ದಾರೆ.

'ಆತ್ಮನಿರ್ಭರ ಭಾರತಕ್ಕೆ ಆತ್ಮನಿರ್ಭರ ಮಹಿಳೆಯರ ಅಗತ್ಯವಿದೆ! ಓಲಾ ಕಾರ್ಖಾನೆಯನ್ನು ಮಹಿಳೆಯರೇ ಸಂಪೂರ್ಣವಾಗಿ ಮುನ್ನಡೆಸಲಿದ್ದಾರೆ ಎಂಬುದನ್ನು ಹೇಳಲು ಹೆಮ್ಮೆಯಾಗುತ್ತಿದೆ! ಇದು ಮಹಿಳೆಯರೇ ನಡೆಸುವ, ಜಗತ್ತಿನ ಅತಿದೊಡ್ಡ ಕಾರ್ಖಾನೆ ಆಗಿರಲಿದೆ' ಎಂದು ಅಗರ್ವಾಲ್ ಅವರು ಸೋಮವಾರ ಹೇಳಿದ್ದಾರೆ.

ಅಗರ್ವಾಲ್ ಅವರು ತಮ್ಮ ಕಂಪನಿಯ ಕಾರ್ಖಾನೆಯಲ್ಲಿ ಕೆಲಸ ಮಾಡಲು ನೇಮಕ ಮಾಡಿಕೊಂಡಿರುವ ಮೊದಲ ಬ್ಯಾಚ್‌ನ ಮಹಿಳೆಯರು ಇರುವ ದೃಶ್ಯವೊಂದನ್ನು ಕೂಡ ಸಾಮಾಜಿಕ ಜಾಲತಾಣಗಳ ಮೂಲಕ ಹಂಚಿಕೊಂಡಿದ್ದಾರೆ. ಆಟೊಮೊಬೈಲ್ ಉತ್ಪಾದನೆಯಲ್ಲಿ ತೊಡಗಿಸಿಕೊಂಡಿರುವ, ಮಹಿಳೆಯರು ಮಾತ್ರ ಕೆಲಸ ಮಾಡುವ ಜಗತ್ತಿನ ಏಕೈಕ ಕಾರ್ಖಾನೆ ಇದು ಎಂಬ ಮಾತನ್ನು ಅವರು ಬ್ಲಾಗ್ ಬರಹವೊಂದರಲ್ಲಿ ಹೇಳಿದ್ದಾರೆ.

ಕೆಲಸಗಾರರ ತಂಡವು ಎಲ್ಲರನ್ನೂ ಒಳಗೊಳ್ಳುವಂಥದ್ದಾಗಿರಬೇಕು, ಮಹಿಳೆಯರಿಗೆ ಆರ್ಥಿಕ ಅವಕಾಶಗಳು ಸಿಗಬೇಕು ಎಂಬ ಉದ್ದೇಶದಿಂದ ಓಲಾ ತೆಗೆದುಕೊಳ್ಳುತ್ತಿರುವ ಹಲವು ಕ್ರಮಗಳ ಸಾಲಿನಲ್ಲಿ ಇದು ಮೊದಲನೆಯದು ಎಂದು ಅವರು ಹೇಳಿದ್ದಾರೆ. ಕೆಲಸಗಾರರಿಗೆ ಕೌಶಲ ನೀಡಲು ಓಲಾ ಕಂಪನಿಯು ಗಮನಾರ್ಹ ಪ್ರಮಾಣದಲ್ಲಿ ಹೂಡಿಕೆ ಮಾಡಿದೆ. ಕಾರ್ಖಾನೆಯಲ್ಲಿ ತಯಾರಾಗುವ ಪ್ರತಿ ವಾಹನಕ್ಕೂ ಅವರೇ ಜವಾಬ್ದಾರರು ಎಂದು ಅಗರ್ವಾಲ್ ತಿಳಿಸಿದ್ದಾರೆ.

ಮಹಿಳೆಯರನ್ನು ಆರ್ಥಿಕ ಅವಕಾಶಗಳ ಮೂಲಕ ಸಶಕ್ತರನ್ನಾಗಿಸುವುದರಿಂದ ಅವರಿಗೆ ಮಾತ್ರವೇ ಒಳ್ಳೆಯದಾಗುವುದಿಲ್ಲ. ಅವರ ಕುಟುಂಬಕ್ಕೆ ಹಾಗೂ ಇಡೀ ಸಮುದಾಯಕ್ಕೆ ಒಳಿತಾಗುತ್ತದೆ ಎಂದು ವಿವರಿಸಿದ್ದಾರೆ.

ಭಾರತದ ಉತ್ಪಾದನಾ ವಲಯದ ಕಾರ್ಮಿಕರ ಪೈಕಿ ಮಹಿಳೆಯರ ಪ್ರಮಾಣವು ಶೇಕಡ 12ರಷ್ಟು ಮಾತ್ರ. ದೇಶವು ತಯಾರಿಕಾ ವಲಯದ ಪ್ರಮುಖ ರಾಷ್ಟ್ರವಾಗಬೇಕು ಎಂದಾದರೆ ಮಹಿಳೆಯರಿಗೆ ತರಬೇತಿ ನೀಡುವುದನ್ನು, ಅವರಿಗೆ ಉದ್ಯೋಗ ಸೃಷ್ಟಿಸುವುದನ್ನು ಆದ್ಯತೆಯ ಕೆಲಸವಾಗಿ ಮಾಡಬೇಕು ಎಂದೂ ಹೇಳಿದ್ದಾರೆ.

ಕಾರ್ಮಿಕರಾಗಿ ಕೆಲಸ ಮಾಡುವಲ್ಲಿ ಮಹಿಳೆಯರಿಗೆ ಸಮಾನ ಅವಕಾಶ ಕಲ್ಪಿಸಿದರೆ ಭಾರತದ ಜಿಡಿಪಿ ಶೇಕಡ 27ರಷ್ಟು ಹೆಚ್ಚಳ ಕಾಣಬಹುದು ಎಂಬುದನ್ನು ಅಧ್ಯಯನಗಳು ಹೇಳಿವೆ

ಭವೀಶ್ ಅಗರ್ವಾಲ್ ಓಲಾ ಸಹ ಸಂಸ್ಥಾಪಕ

ಫುಟ್‌ಸಾಲ್: ಥಾಂಕೋಸ್, ಸೂಪರ್ ಸ್ಟ್ರೈಕರ್ಸ್ ಜಯಭೇರಿ

ಬೆಂಗಳೂರು: ಮೊದಲ ದಿನ ಅಮೋಘ ಆಟವಾಡಿದ ಥಾಂಕೋಸ್ ಸ್ಟೂಡೆಂಟ್ಸ್ ಯೂನಿಯನ್ ತಂಡ ರಾಜ್ಯ ಫುಟ್‌ಬಾಲ್ ಸಂಸ್ಥೆ ಆಯೋಜಿಸಿರುವ 'ಫುಟ್‌ಸಾಲ್' ಲೀಗ್‌ನ ಎರಡನೇ ದಿನವಾದ ಸೋಮವಾರವೂ ಗೆಲುವಿನ ಓಟ ಮುಂದುವರಿಸಿತು.

ಪಡುಕೋಣೆ–ದ್ರಾವಿಡ್ ಸೆಂಟರ್ ಫಾರ್ ಸ್ಪೋರ್ಟ್ಸ್ ಎಕ್ಸಲೆನ್ಸ್‌ನಲ್ಲಿ ನಡೆಯುತ್ತಿರುವ ಲೀಗ್‌ನ 'ಎ' ಗುಂಪಿನ ಮೂರನೇ ಸುತ್ತಿನ ಪಂದ್ಯದಲ್ಲಿ ಥಾಂಕೋಸ್ 11–2ರಲ್ಲಿ ಫ್ರಾನ್ಸಿಸ್ ಕ್ಸೇವಿಯರ್ ಎಫ್‌ಸಿ ತಂಡವನ್ನು ಮಣಿಸಿತು. 'ಬಿ' ಗುಂಪಿನ ಹಣಾಹಣಿಯಲ್ಲಿ ಸೂಪರ್ ಸ್ಟ್ರೈಕರ್ಸ್ ಕೂಡ ಭರ್ಜರಿ ಗೆಲುವು ದಾಖಲಿಸಿತು. ಈ ತಂಡ ಬೆಳಗಾಂ ಯುನೈಟೆಡ್ ತಂಡವನ್ನು 11–4ರಲ್ಲಿ ಸೋಲಿಸಿತು.

ಥಾಂಕೋಸ್ ಪರ ಅಕ್ಷಯ್ 4, ಪ್ರಶಾಂತ್ ಮತ್ತು ನಂದಾ ಅವರು ತಲಾ 2, ಕಾರ್ತಿಕ್, ಶಿವಾ ಮತ್ತು ಮಾರ್ಕ್ ತಲಾ ಒಂದೊಂದು ಗೋಲು ಗಳಿಸಿದರು. ಸೂಪರ್ ಸ್ಟ್ರೈಕರ್ಸ್ ಪರ ಅರವಿಂದ 3, ಯೋಗಿತ್ ಮತ್ತು ಉದಯ್ ತಲಾ 2, ನಿಖಿಲ್, ಶರತ್, ಸೂರ್ಯ ಮತ್ತು ವಿಜಯ್ ತಲಾ ಒಂದು ಗೋಲು ಗಳಿಸಿದರು. ಬೆಳಗಾಂ ಯುನೈಟೆಡ್‌ಗಾಗಿ ಅಭಿಷೇಕ್, ಕೌಸ್ತುಭ್, ಶ್ರೀನಂದ ಮತ್ತು ತೇಜಸ್ ತಲಾ ಒಂದೊಂದು ಗೋಲು ಗಳಿಸಿದರು.

'ಎ' ಗುಂಪಿನ ಮತ್ತೊಂದು ಪಂದ್ಯದಲ್ಲಿ ಇಂಡಿಯನ್ ಫುಟ್‌ಬಾಲ್ ಫ್ಯಾಕ್ಟರಿ 7–4ರಲ್ಲಿ ಎಮೆಂಟ್ ಎಫ್‌ಸಿಯನ್ನು ಸೋಲಿಸಿತು. ಇಂಡಿಯನ್ ಫುಟ್‌ಬಾಲ್ ಫ್ಯಾಕ್ಟರಿ ಪರ ಸ್ಟೀಫನ್ 3, ರಾಜ್‌ಕಿರಣ್ 2, ಸುನಿಲ್ ಹಾಗೂ ನಿಕ್ಕಿ ತಲಾ ಒಂದೊಂದು ಗೋಲು ಗಳಿಸಿದರೆ ಎಮೆಂಟ್‌ಗಾಗಿ ವಂಶ್ 2, ಅಭಿ ಮತ್ತು ಖಲೀಲ್ ತಲಾ ಒಂದೊಂದು ಗೋಲು ಗಳಿಸಿದರು.

ರೆಬೆಲ್ಸ್ ಎಫ್‌ಸಿ 5–2ರಲ್ಲಿ ಬೀಟಾ ಸ್ಪೋರ್ಟ್ಸ್ ಕ್ಲಬ್ ತಂಡವನ್ನು ಮಣಿಸಿತು. ರೆಬೆಲ್ಸ್ ಪರ ಅಭಿಸಿತು 2, ದಿನೇಶ್, ಸಿಸಿಲೊ ಮತ್ತು ಮುಹಮ್ಮದ್ ತಲಾ ಒಂದೊಂದು ಗೋಲು ಗಳಿಸಿದರು. ಬೀಟಾ ತಂಡಕ್ಕಾಗಿ ವಾಲ್ಟರ್ ಮತ್ತು ಮುಹೀಬ್ ತಲಾ ಒಂದೊಂದು ಗೋಲು ಗಳಿಸಿದರು.


ಗಜ ಪಯಣ

ಮೈಸೂರು ದಸರಾ ಜಂಬೂಸವಾರಿಯಲ್ಲಿ ಪಾಲ್ಗೊಳ್ಳಲು ಸೋಮವಾರ ಪಯಣ ಆರಂಭಿಸಿದ ಆನೆಗಳನ್ನು ನಾಗರಹೊಳೆ ಅಭಯಾರಣ್ಯ ವಲಯದ ವೀರನಹೊಸಹಳ್ಳಿ ಗೇಟ್ ಬಳಿ ಬೀಳ್ಕೊಡಲಾಯಿತು

ಟಿಟಿ: ಪ್ರಶಸ್ತಿ ಗೆದ್ದ ಅಭಿನವ್, ಪರ್ಣವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉತ್ತಮ ಸಾಮರ್ಥ್ಯ ತೋರಿದ ಅಭಿನವ್ ಕೆ. ಮೂರ್ತಿ ಹಾಗೂ ಪರ್ಣವಿ ಅವರು ರಾಜ್ಯ ರ್‍ಯಾಂಕಿಂಗ್ ಟೇಬಲ್ ಟೆನಿಸ್ ಟೂರ್ನಿಯ ಕ್ರಮವಾಗಿ ಸಬ್‌ಜೂನಿಯರ್ ಬಾಲಕರ ಮತ್ತು ಬಾಲಕಿಯರ ವಿಭಾಗಗಳಲ್ಲಿ ಪ್ರಶಸ್ತಿ ಗೆದ್ದುಕೊಂಡರು.

ಮಲ್ಲೇಶ್ವರಂ ಸಂಸ್ಥೆಯ ಕ್ರೀಡಾಂಗಣದಲ್ಲಿ ಸೋಮವಾರ ನಡೆದ ಬಾಲಕರ ಪ್ರಶಸ್ತಿ ಸುತ್ತಿನ ಪಂದ್ಯದಲ್ಲಿ ಅಭಿನವ್ 11-7,13-11, 11-2ರಿಂದ ಆಯುಷ್ ಕೆ. ಅವರನ್ನು ಮಣಿಸಿದರು.

ಸೆಮಿಫೈನಲ್‌ನಲ್ಲಿ ಅಭಿನವ್ 15–13, 11–13, 14–12, 13–11ರಿಂದ ವರುಣ್ ಬಿ. ಕಶ್ಯಪ್ ಅವರನ್ನು ಸೋಲಿಸಿದ್ದರು.

ಬಾಲಕಿಯರ ವಿಭಾಗದ ಫೈನಲ್‌ನಲ್ಲಿ ಆರಂಭದ ಹಿನ್ನಡೆಯಿಂದ ಚೇತರಿಸಿಕೊಂಡ ಪರ್ಣವಿ 6–11, 7–11, 12–10, 11–6, 11–7ರಿಂದ ಸಾನ್ವಿ ವಿಶಾಲ್ ಮಾಂಡೇಕರ್ ಎದುರು ಜಯಿಸಿದರು.

ನಾಲ್ಕರ ಘಟ್ಟದ ಹಣಾಹಣಿಯಲ್ಲಿ ಪರ್ಣವಿ ಅವರಿಗೆ ಶ್ರೇಯಾ ಕಿರಣ್ ಎದುರು 8–11, 11–7, 8–11, 11–6, 11–5ರಿಂದ ಜಯ ಒಲಿದಿತ್ತು.


ಪ್ರಶಸ್ತಿಗಳೊಂದಿಗೆ ಕೀರ್ತನ್ ವಿಶ್ವಾಸ್ ಮತ್ತು ಸೃಷ್ಟಿ ಕಿರಣ್

ಸೃಷ್ಟಿ, ಕೀರ್ತನ್‌ಗೆ ಪ್ರಶಸ್ತಿ


ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೀರ್ತನ್ ವಿಶ್ವಾಸ್ ಹಾಗೂ ಸೃಷ್ಟಿ ಕಿರಣ್ ಅವರು ಎಫ್‌ಎಸ್‌ಎ ಎಐಟಿಎ 10 ವರ್ಷದೊಳಗಿನವರ ಟೆನಿಸ್ ಟೂರ್ನಿಯಲ್ಲಿ ಕ್ರಮವಾಗಿ ಬಾಲಕ ಮತ್ತು ಬಾಲಕಿಯರ ವಿಭಾಗಗಳಲ್ಲಿ ಸೋಮವಾರ ಪ್ರಶಸ್ತಿ ಜಯಿಸಿದರು.

ರಾಜ್ಯ ಲಾನ್ ಟೆನಿಸ್ ಸಂಸ್ಥೆ (ಕೆಎಸ್‌ಎಲ್‌ಟಿಎ) ಆಶ್ರಯದಲ್ಲಿ ನಡೆದ ಟೂರ್ನಿಯ ಬಾಲಕರ ಫೈನಲ್‌ನಲ್ಲಿ ಕೀರ್ತನ್ 4-3 (3), 4-3 (1) ರಿಂದ ಯಶ್ ಕುಮಾರ್ ಅವರನ್ನು ಮಣಿಸಿದರು. ಬಾಲಕಿಯರ ವಿಭಾಗದ ಪ್ರಶಸ್ತಿ ಸುತ್ತಿನ ಹಣಾಹಣಿಯಲ್ಲಿ ಸೃಷ್ಟಿ 4-0, 4-3 (7-5)ರಿಂದ ಉನ್ನತಿ ಮುರಳೀಧರ್ ಎದುರು ಗೆದ್ದರು.

ಡೆಲ್ಲಿ ಕ್ಯಾಪಿಟಲ್ಸ್‌ಗೆ ದ್ವಾರ್ಶಿಸ್

ದುಬೈ (ಪಿಟಿಐ): ಆಸ್ಟ್ರೇಲಿಯಾದ ವೇಗದ ಬೌಲರ್ ಬೆನ್ ದ್ವಾರ್ಶಿಸ್ ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಕ್ರಿಕೆಟ್ ಟೂರ್ನಿಯಲ್ಲಿ ಆಡುವ ಡೆಲ್ಲಿ ಕ್ಯಾಪಿಟಲ್ಸ್ ತಂಡಕ್ಕೆ ಆಯ್ಕೆಯಾಗಿದ್ದಾರೆ. ಕ್ರಿಸ್ ವೋಕ್ಸ್ ಬದಲಿಗೆ ಅವರನ್ನು ಸೇರಿಸಿಕೊಳ್ಳಲಾಗಿದೆ ಎಂದು ಕ್ಯಾಪಿಟಲ್ಸ್ ಫ್ರಾಂಚೈಸ್ ತಿಳಿಸಿದೆ. ದ್ವಾರ್ಶಿಸ್ ಎಡಗೈ ಬೌಲರ್ ಆಗಿದ್ದು ಲಿಸ್ಟ್ 'ಎ' ಮತ್ತು ದೇಶಿ ಟಿ20 ಪಂದ್ಯಗಳಲ್ಲಿ ಅಮೋಘ ಸಾಧನೆ ಮಾಡಿದ್ದಾರೆ.


ಬೆನ್ ದ್ವಾರ್ಶಿಸ್

